UNIVERSAL LIBRARY

OU_198219

UNIVERSAL LIBRARY

OUP—391 29-4-72—10,000.

OSMANIA UNIVERSITY LIBRARY

Call No. K 83.1/L84B Accession No. K 5389

Author

Title

This book should be returned on or before the date last marked belo

ಜಾಕ್ ಲಂಡನ್

ಬಾಳ ನಿಯಮ

ಅನುವಾದ :

ಡಿ. ವಿ. ರಾಘವೇಂದ್ರ

ಭಾರತೀ ಪ್ರಕಾಶನ
ಕೃಷ್ಣಮೂರ್ತಿಪುರಂ :: ಮೈಸೂರು

ಮೊದಲ ಮುದ್ರಣ : ೧೯೫೭

Kannada translation of *Best Short Stort Stories of Jack London* by Jack London. Originally published by Garden City Books, New York. Copyright, 1919 by Charmian K. London.

ಬೆಲೆ ರೂ. ೧.೫೦

ಮುದ್ರಕರು :
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
ಮೈಸೂರು.

ವಿಷಯಾನುಕ್ರಮ

೧. ಬಾಳ ನಿಯಮ ....

೨. ಮುಖ ಭಂಗ ....

೩. ತುಂಡು ಮಾಂಸ .... .

೪. ಮುದುಕರ ಮಂಡಲಿ .... .

೫. ಬಾಳ ಪ್ರೇಮ .... .

೬. ಹಿಂಬಾಲಕನಿಗೆ .... .

೭. ಮೆಕ್ಸಿಕನ್ .... .

೮. ಮೋಹದ ಬಲೆಯಲ್ಲಿ .... .

ಬಾಳ ನಿಯಮ

ಮುದುಕ ಕಾಸ್‌ಕೂಶ್ ಅತಿಯಾಶೆಯಿಂದ ಕಿವಿಗೊಟ್ಟು ಆಲಿಸಿದ. ಆತನ ದೃಷ್ಟಿ ಮಬ್ಬಾಗಿ ಬಹಳ ಕಾಲವಾಗಿದ್ದರೂ, ಕಿವಿಗಳು ಇನ್ನೂ ಚುರುಕಾಗಿದ್ದುವು. ನೆರಿಗಟ್ಟಿ ಸುಕ್ಕಾಗಿದ್ದ ಹಣೆಯ ಹಿಂದೆ ಇದ್ದ ಆತನ ಬುದ್ಧಿಶಕ್ತಿ ಇನ್ನೂ ಸತ್ವಪೂರ್ಣವಾಗಿತ್ತು. ಎಷ್ಟು ಸಣ್ಣ ಸದ್ದಾದರೂ ಅದರಲ್ಲಿ ನಾಟುತಿತ್ತು; ಆದರೆ ಅದು ಪ್ರಾಪಂಚಿಕ ವಿಷಯಗಳಿಂದ ವಿಮುಖವಾಗಿತ್ತು.

ಅಗೋ, ಅವಳೇ ಸಿತ್‌ಕಮತೋಹ; ಹಿಡಿಶಾಪಹಾಕುವವಳಂತೆ ಚೀರುತ್ತಾ ನಾಯಿಗಳನ್ನು ಒಂದೇ ಸಮನೆ ಬಡಿಯುತ್ತಾ ಸಜ್ಜುಗೊಳಿಸುತ್ತಿದ್ದಾಳೆ. ಅವಳು ಮುದುಕನ ಮೊಮ್ಮಗಳು. ಹಿಮಪ್ರದೇಶದಲ್ಲಿ ಯಾವ ಸಹಾಯವೂ ಇಲ್ಲದೆ ಹತಾಶನಾಗಿದ್ದ ಅಜ್ಜನ ಬಗ್ಗೆ ಯೋಚಿಸುವುದಕ್ಕೂ ಅವಳಿಗೆ ಸಮಯವಿರಲಿಲ್ಲ. ಶಿಬಿರವನ್ನು ಕೀಳಬೇಕಾಗಿತ್ತು. ಬಹುದೂರದ ಪ್ರಯಾಣಕ್ಕೆ ಕಾಲ ಹೆಚ್ಚಿರಲಿಲ್ಲ. ಮುಂದಿನ ಜೀವನದ ಕಾರ್ಯಕ್ರಮ ಅವಳನ್ನು ಸೆಳೆಯುತ್ತಿತ್ತು. ಅವಳನ್ನು ಆಹ್ವಾನಿಸುತ್ತಿದ್ದುದು ಜೀವನ, ಸಾವಲ್ಲ. ಮುದುಕನಾದರೋ ಸಾವಿನ ಹತ್ತಿರ ಸರಿಯುತ್ತಿದ್ದನು.

ಯೋಚನೆಯಿಂದ ಮುದುಕನಿಗೆ ಫಕ್ಕನೆ ಗಾಬರಿಯಾಯಿತು. ಜಡವಾಗಿದ್ದ ಕೈಯನ್ನು ಮುಂದೆ ಚಾಚಿದನು. ನಡುಗುತ್ತಿದ್ದಂತೆಯೇ ಪಕ್ಕದಲ್ಲಿದ್ದ ಸೌದೆಯ ರಾಶಿಯ ಮೇಲೆ ಕೈಯಾಡಿಸಿದನು. ಪಕ್ಕದಲ್ಲಿದ್ದ ಸೌದೆ ಅವನಿಗೆ ಸ್ವಲ್ಪ ಸಮಾಧಾನ ತಂದಿತು. ಮತ್ತೆ ತನ್ನ ಕೈಗಳನ್ನು ಹಳೆಯದಾಗಿದ್ದ ದುಪಟಿಯಲ್ಲಿ ಮುಚ್ಚಿಕೊಂಡು ಆಲಿಸುತ್ತಾ ಕುಳಿತನು.

ನಾಯಕನ ನೆಲೆ ಮುರಿದಂತಾಗಿ, ಮುಂದೆ ಸಾಗಿಸುವ ಏರ್ಪಾಟನ್ನು ಚರ್ಮದ ಚಟಪಟ ಶಬ್ದದಿಂದಲೇ ತಿಳಿಯಬಹುದಾಗಿತ್ತು. ಮುದುಕನ ಮಗನೇ ತಂಡದ ನಾಯಕನು. ಅವನೂ ಬಲಿಷ್ಠ, ನಿಸ್ಸೀಮ ಬೇಟೆಗಾರ. ಹೆಂಗಸರು ಸಾಮಾನು ಸಾಗಿಸಲು ಒದ್ದಾಡುತ್ತಿದ್ದಾಗ, ನಾಯಕನು ಅವರನ್ನು ಚಡಪಡಿಸುತ್ತಿದ್ದ ಕೂಗು ಕೇಳಿಬರುತ್ತಿತ್ತು. ವೃದ್ಧ ಕಾಸ್‌ಕೂಶ್ ಕಿವಿ ನಿಮಿರಿಸಿ ಆಲಿಸಿದನು....ಹೌದು; ಇದೇ ಕಡೆಯ ಸಲ ಮಗನ ಧ್ವನಿಯನ್ನು ಕೇಳುವುದು. ಆಗಲೇ ಗೀಹ್, ಟಸ್ಕೆನ್ ಬಂಡಿಗಳು ಹೊರಟವು! ಮತ್ತೆ ಏಳು, ಎಂಟು, ಒಂಬತ್ತು; ಕೊನೆಯದು ಮಾತ್ರ ಇನ್ನೂ ನಿಂತಿದೆ. ಅಲ್ಲಿ! ಸಾಮಾನು

ಗಳನ್ನು ತುಂಬುತ್ತಿರುವಾಗ ಬೇಟೆಗಾರರು ಗೊಣಗುತ್ತಿದ್ದಾರೆ. ಆ ಸದ್ದು ತನಗೆ ಕೇಳಿಸುತ್ತಿದೆ. ಮಗುವೊಂದು ಬಿಕ್ಕಿ ಅಳುತ್ತಿದೆ. ತಾಯಿ ಮೆಲುದನಿಯಲ್ಲಿ ಸಮಾಧಾನ ಮಾಡುತ್ತಿದ್ದಾಳೆ. ಅಷ್ಟೇನೂ ದೃಢಕಾಯವಲ್ಲದ, ಪೀಡಿಸುತ್ತಿರುವ ಆ ಚಿಕ್ಕ ಮಗು ಕೂ-ಟೀ ಇರಬೇಕು. ಅದು ಬೇಗನೆ ಸಾಯುವ ಸ್ಥಿತಿಯಲ್ಲಿದೆ. ಸತ್ತರೇನಂತೆ? ಹೆಪ್ಪುಗಟ್ಟಿದ ಜೌಗುಪ್ರದೇಶದಲ್ಲೇ ಗೋರಿಮಾಡಿ ದೇಹ ತೋಳಗಳಿಗೆ ಸಿಗದಂತೆ ಕಲ್ಲು ಹೇರಬಹುದು. ಅಷ್ಟೇ ಜನ ಮಾಡುವ ಕೆಲಸ. ಆದರೇನಂತೆ? ಕೆಲವು ವರ್ಷಗಳಲ್ಲೇ, ಈಗ ಹೊಟ್ಟೆ ತುಂಬಿರುವವರು ಹಸಿದವರಾಗಿ ಅಲೆಯದೆ ಇರುತ್ತಾರೆಯೇ? ಕಡೆಗಂತೂ ಸದಾ ಹಸಿದಿರುವ ಮತ್ತು ಹಸಿವಿನ ಪರಮಾವಧಿಯನ್ನು ಮುಟ್ಟಿರುವ ಮೃತ್ಯು ಕಾದೇ ಇರುತ್ತದೆ.

ಏನಿರಬಹುದು? ಹೌದು; ಜನ ಸ್ಲೆಜ್ ಗಾಡಿಗಳನ್ನು ಓಡಿಸುತ್ತಿದ್ದಾರೆ.

ಸಾರಥಿ ಕಡಿವಾಣವನ್ನು ಬಿಗಿದೆಳೆಯುತಿದ್ದಾನೆ.. .ಮುಂದೆ ಅಂಥ ಶಬ್ದ ಕೇಳುವ ಸಂಭವ ಇಲ್ಲದುದರಿಂದ, ಮುದುಕ ಗಮನವಿಟ್ಟು ಆಲಿಸಿದನು.... ನಾಯಿಗಳು ಹಲ್ಲು ಕಿರಿಯುತ್ತ ಗುರ್ರೆನ್ನುತಿದ್ದವು. ಮತ್ತೆ ಕುಂಯ್‌ಗುಟ್ಟುವ ಅಳುವಿನ ರಾಗ. ಅವುಗಳಿಗೆ ಕೆಲಸವೆಂದರೆ ಸಂಚಾರವೆಂದರೆ ಅಷ್ಟು ದ್ವೇಷ! ಒಂದೊಂದಾಗಿಯೂ ನಿಧಾನವಾಗಿಯೂ ಬಂಡಿಗಳು ನಿಶ್ಶಬ್ದ ಪ್ರಪಂಚದೆಡೆ ನಡೆದವು. ತನ್ನ ಜೀವನದಿಂದ ಅವು ಬೇರೆಯಾದವು. ಈಗ ಕೊನೆಯ ಮನೋವೇಧಕ ಘಳಿಗೆಯನ್ನು ಏಕಾಂತದಲ್ಲಿ ಕಳೆಯಬೇಕಾಗಿದೆ. ಇಲ್ಲ; ಪಾದರಕ್ಷೆಯೊಂದು ಮಂಜಿನ ನೆಲವನ್ನು ತುಳಿಯುತ್ತಿದೆ. ಅಲ್ಲವೇ?....ಮನುಷ್ಯನೊಬ್ಬ ಹತ್ತಿರ ಬಂದು ನಿಂತನು. ಅವನು ನಿಧಾನವಾಗಿ ಮುದುಕನ ತಲೆಯಮೇಲೆ ಕೈಯಿಟ್ಟು ನೇವರಿಸಿದನು....ತನ್ನ ಮಗ ಎಷ್ಟು ಒಳ್ಳೆಯವನಾಗಿದ್ದಾನೆ! ತನಗೆ ತಿಳಿದಂತೆ, ಗುಂಪನ್ನು ಬಿಟ್ಟು ವೃದ್ಧ ತಂದೆಗಾಗಿ ನಿಂತ ಮಕ್ಕಳು ವಿರಳ. ತನಗೆ ದೊರೆತಂಥ ಸುಯೋಗ ಹಿಂದಿನವರಿಗಿಲ್ಲ.

ಮುದುಕನ ವಿಚಾರಶಕ್ತಿ ಭೂತಕಾಲದ ನೆನಪನ್ನು ತಂಮಕೊಳ್ಳುತ್ತಿತ್ತು. ಮಗನ ಧ್ವನಿಯನ್ನು ಕೇಳಿ ಮುದುಕ ಎಚ್ಚತ್ತನು.

"ನೀನು ಚೆನ್ನಾಗಿದ್ದೀಯಾ?"

"ಹೂಂ; ಚೆನ್ನಾಗಿದ್ದೇನೆ" ಎಂದು ಮುದುಕ ಉತ್ತರಕೊಟ್ಟನು.

"ಕಟ್ಟಿಗೆಯು ನಿನ್ನ ಬಳಿಯಿದೆ. ಬೆಂಕಿ ಚೆನ್ನಾಗಿ ಉರಿಯುತ್ತದೆ. ಮುಂಜಾನೆ ಮಬ್ಬಾಗಿದೆ, ಚಳಿ ಪ್ರಾರಂಭವಾಗಿದೆ. ಸ್ವಲ್ಪ ಹೊತ್ತಿನಲ್ಲೇ ಮಂಜು ಬೀಳುವ ಸಂಭವವುಂಟು....ಹೌದು; ಈಗಲೂ ಬೀಳುತ್ತಿದೆ."

"ನಿಜ; ಈಗಲೂ ಮಂಜು ಬೀಳುತ್ತಿದೆ" ಎಂದನು ಕಾಸ್‌ಕೂಶ್.

ಮಗ ಹೇಳಿದನು—"ಗುಂಪು ಆತುರದಿಂದ ಹೊರಟಿತು. ಅವರ ಸಾಮಾನಿನ ಹೊರೆ ವಿಪರೀತವಾಗಿದೆ. ಎಲ್ಲರೂ ಹಸಿವಿನಿಂದ ಕಂಗೆಟ್ಟಿದ್ದಾರೆ. ದಾರಿ ಬಹಳ ದೂರವಾದುದರಿಂದ ಅವರು ವೇಗವಾಗಿ ನಡೆಯುತ್ತಿದ್ದಾರೆ. ನಾನು ಈಗ ಹೊರಡುತ್ತೇನೆ. ಬರಲೇ?"

"ಒಳ್ಳೆಯದು; ನನ್ನ ಸ್ಥಿತಿಯಂತೂ ಗೊತ್ತಿದೆ. ಕಡೆಯ ವರ್ಷದ ಹಣ್ಣೆಲೆಯಂತೆ ಕೊಂಬೆಗೆ ಸ್ವಲ್ಪದರಲ್ಲಿ ಅಂಟಿಕೊಂಡಿದ್ದೇನೆ. ಮೊದಲ ಉಸಿರಿನ ಗಾಳಿಗೇ ಬೀಳುವವನಿದ್ದೇನೆ. ನನ್ನ ಧ್ವನಿಯೋ ಮುದುಕಿಯ ಧ್ವನಿಯಂತಿದೆ. ಕಣ್ಣುಗಳಿಗೆ ದಾರಿಯು ಕಾಣದಾಗಿದೆ. ಕಾಲುಗಳು ಭಾರದಿಂದ ಕುಸಿಯುತ್ತಿವೆ. ನಾನು ಬಹಳ ಬಳಲಿದ್ದೇನೆ. ಒಳ್ಳೇದು ಹೋಗಿ ಬಾ."

ಮುದುಕ ತೃಪ್ತಿಯಿಂದ ತಲೆತಗ್ಗಿಸಿ ಕುಳಿತನು. ಹಿಮದ ದಾರಿಯಲ್ಲಿ ಹೆಜ್ಜೆಯ ಸಪ್ಪಳ ಕ್ರಮೇಣ ದೂರ ದೂರವಾಗಿ ಕೇಳಿಸಿತು. ಇನ್ನು ತನ್ನ ಮಗನನ್ನು ಕರೆಯಲು ಅಸಾಧ್ಯವೆಂದು ತಿಳಿಯುವ ತನಕ ಕಾಸ್‌ಕೂಶ್ ಹಾಗೆಯೆ ತಲೆತಗ್ಗಿಸಿದ್ದನು. ಆಮೇಲೆ ಅತ್ಯಾತುರದಿಂದ ಕಟ್ಟಿಗೆಯ ಕಡೆ ಕೈ ಚಾಚಿದನು. ಆ ಕಟ್ಟಿಗೆಯ ಹೊರೆಯೊಂದೇ ತನಗೂ, ತನಗಾಗಿ ಬಾಯಿತೆರೆದು ಕುಳಿತಿರುವ ನಿತ್ಯತೆಗೂ ಮಧ್ಯೆ ನಿಂತಹಾಗಿತ್ತು....ಹೌದು; ತನ್ನ ಜೀವನವು ಒಂದು ಹಿಡಿ ಕಟ್ಟಿಗೆಯ ಪ್ರಮಾಣಕ್ಕೆ ಸರಿಹೊಂದುತ್ತದೆ. ಬೆಂಕಿ ಒಂದೊಂದು ತುಂಡುಗಳನ್ನು ಆವರಿಸುತ್ತ ಬರುವಂತೆ, ಸಾವು ಕೂಡ ತನ್ನನ್ನು ನಿಧಾನವಾಗಿ ಅಪ್ಪಳಿಸುತ್ತದೆ. ಕೊನೆಯ ತುಂಡು ಉರಿದು ಬೂದಿಯಾದಾಗ, ಹಿಮ ನುಗ್ಗುತ್ತದೆ, ಅಲ್ಲಿಗೆ ಜೀವನದ ಅಂತ್ಯ. ಸಾವಿನ ಜಯ. ಅಂದರೆ ಮೊದಲು ತನ್ನ ಕಾಲು, ಆಮೇಲೆ ಕೈಗಳು; ಒಂದು ಕಡೆಯಿಂದ ಜಡತ್ವ ಚೇತನವನ್ನು ನುಂಗುತ್ತಾ ದೇಹಾದ್ಯಂತ ಪಸರಿಸುತ್ತದೆ. ತಲೆ ಮೊಣಕಾಲ ಮೇಲೆ ಬಿದ್ದಾಗ ಸಂಪೂರ್ಣ ವಿರಾಮ. ಪ್ರತಿಯೊಬ್ಬರೂ ಸಾಯಲೇಬೇಕಿರುವಾಗ ಇದಕ್ಕಿಂತಲೂ ಸುಲಭ ಸಾಧ್ಯ ಯಾವುದಿದೆ?

ಅವನೇನೂ ಗೊಣಗುಟ್ಟಲಿಲ್ಲ. ಬಾಳ ನಿಯಮಕ್ಕೆ ತಲೆಬಾಗಲೇಬೇಕಲ್ಲವೇ! ಪ್ರಕೃತಿಯ ಮಡಿಲಲ್ಲಿ ಹುಟ್ಟಿ, ಪ್ರಕೃತಿಗಾಗಿಯೆ ಬೆಳೆದವನಿಗೆ ಅದರ ನಿಯಮ ಹೊಸದಲ್ಲ. ಆ ನಿಸರ್ಗ ನಿಯಮ ಎಲ್ಲಕ್ಕೂ ಅನ್ವಯವಾಗುವುದು. ಅದು ವ್ಯಕ್ತಿಯ ಹಿತವನ್ನು ಗಮನಿಸುವುದಿಲ್ಲ. ವ್ಯಕ್ತಿ ಒಂದು ಸಲಕರಣೆ ಮಾತ್ರ. ಅದರ ಆಸಕ್ತಿಯಿರುವುದು ಸಮಷ್ಟಿಯಲ್ಲಿ; ಅಂದರೆ

ವಿವಿಧ ಗುಂಪುಗಳ ಸೃಷ್ಟಿಯಲ್ಲಿ....ಇಂಥ ಆಳವಾದ ಭಾವನೆ ವೃದ್ಧ ಕಾನ್‌ಕೂಶನ ಸಾಮಾನ್ಯ ಬುದ್ಧಿಗೆ ಸಿಲುಕಿದ್ದು ತುಂಬ ಸಾಧನೆಯ ಫಲವೇ ಸರಿ. ಆದ್ದ ರಿಂದಲೇ ತಕ್ಷಣ ಗ್ರಹಿಸಲು ಶಕ್ಯವಾಯಿತು....ನಿಯಮದ ಸೂತ್ರವನ್ನು ಎಲ್ಲೆಡೆ ಯಲ್ಲೂ ಕಾಣಬಹುದು. ಸಸ್ಯದ ಬೆಳವಣಿಗೆ, ಕಣ್ಣುಕುಕ್ಕುವಂತೆ ಹಸಿರು ಬಣ್ಣ ತಾಳುವ ಮೊಗ್ಗು, ಕಡೆಗೆ ಹಳದಿಯಾಗಿ ಬೀಳುವ ಎಲೆ—ಈ ಸಾಮಾನ್ಯ ಚರಿತ್ರೆಯಲ್ಲೇ ಬಾಳಿನ ನಿಯಮವಿದೆ. ಆದರೆ ಪ್ರತಿ ವ್ಯಕ್ತಿಗೂ ನಿಸರ್ಗದತ್ತ ವಾದಕರ್ತವ್ಯವೊಂದಿದೆ. ಅದನ್ನು ನೆರವೇರಿಸಲಿ, ಬಿಡಲಿ, ಮನುಷ್ಯ ಸಾಯುವು ದಂತು ಖಂಡಿತ. ಒಟ್ಟಿನಲ್ಲಿ ನಿಸರ್ಗ ನಿಯಮ ಯಾರನ್ನೂ ಲಕ್ಷ್ಯಕ್ಕೇ ತೆಗೆದು ಕೊಂಡಿಲ್ಲ. ಏಕೆಂದರೆ ವಿಧೇಯರಾದವರು ಬೇಕಾದಷ್ಟು ಮಂದಿಯಿದ್ದಾರೆ. ಇದರ ವ್ಯಾಪ್ತಿ ಎಲ್ಲಿಯ ತನಕ ಹೋಗಿದೆಯೆಂದರೆ—ವಿಧೇಯನಾದವನ ಸ್ಥಾನ ಗೌಣವಾಗಿ, 'ವಿಧೇಯತೆ' ಎಂಬ ಶಕ್ತಿಯೇ ಜಗತ್ತಿನ ಸೂತ್ರವನ್ನು ಹಿಡಿಯ ಬಲ್ಲ ಜೀವಾಳವಾಗಿದೆ. ತಾನು ಚಿಕ್ಕವನಾಗಿದ್ದಾಗ ವೃದ್ಧರನ್ನು ಹೇಗೆ ನೋಡಿದ್ದನೋ, ಹಾಗೆಯೇ ಆ ವೃದ್ಧರೂ ಕೂಡ ತಮ್ಮ ಬಾಲ್ಯದಲ್ಲಿ ಹಿಂದಿನವ ರನ್ನು ಕಂಡಿರಲೇಬೇಕು. ಆದ್ದರಿಂದ ಅನೇಕರ ವಿಧೇಯತೆಯಿಂದ ಒಂದು ತಂಡ ಇಲ್ಲಿಯತನಕ ಬದುಕಿದೆ; ಮುಂದೆಯೂ ಬದುಕುತ್ತದೆ. ಆಗಿಹೋದ ವ್ಯಕ್ತಿ ಎಲ್ಲಿ .ಯಾವ ವಿಶ್ರಾಂತಿ ಸ್ಥಳವನ್ನು ಸೇರಿದ? ಎಂಬ ಪ್ರಶ್ನೆಯನ್ನು ಮಾತ್ರ ನಮ್ಮ ಜ್ಞಾಪಕ ಶಕ್ತಿಯಿಂದ ದೂರವಿಡಬೇಕು. ಅವರ ಗಣನೆ ಬೇಡ; ಅವರ ಚರಿತ್ರೆಯನ್ನು ಇತಿಹಾಸದ ಉಪಕಥೆಯೆಂದು ಭಾವಿಸೋಣ. ಬೇಸಿ ಗೆಯ ದಿನಗಳಲ್ಲಿ ತಾನಾಗಿಯೆ ಹೊರಟುಹೋಗುವ ಮೋಡಗಳಂತೆ ಅವರು ಕಣ್ಮರೆಯಾದರು. ಹಾಗೆಯೆ ಪ್ರಾಸಂಗಿಕವಾಗಿ ಬಂದಿರುವ ತಾನು ಕೂಡ ಈ ಜಗತ್ತಿನಿಂದ ಜಾರಿಹೋಗಲೇ ಬೇಕು. ಅದರಿಂದ ನಿಸರ್ಗಕ್ಕೆ ಯಾವ ದುಃಖವೂ ಇಲ್ಲ. ನಿಸರ್ಗದ ಮುಖ ಎರಡು ಬಗೆಯಾಗಿದೆ. ಪೀಳಿಗೆಯ ಬೆಳವಣಿಗೆ ಒಂದಾದರೆ, ವ್ಯಕ್ತಿಗಳು ಸಾಯಲೇಬೇಕೆಂಬ ನಿಯಮ ಮತ್ತೊಂದು. ಒಂದು ಕರ್ತವ್ಯ ಪ್ರಚೋದಕವಾಗಿದ್ದರೆ, ಮತ್ತೊಂದು ಶಾಸನ ರೂಪವಾಗಿದೆ. ಉದಾಹರಣೆಗೆ, ಒಬ್ಬ ಹುಡುಗಿ ಇದ್ದಾಳೆನ್ನಿ. ಅವಳಿಗೆ ವಯಸ್ಸು ಬಂದಂತೆ ಸುಂದರಿಯೂ, ದೃಢಕಾಯಳೂ, ಮೋಹಕ ನೇತ್ರವುಳ್ಳವಳೂ ದಿಟ್ಟತನದಿಂದ ನಡೆಯುವವಳೂ ಆಗುತ್ತಾಳೆ. ಎಲ್ಲರ ಕಣ್ಣನ್ನೂ ಆನಂದಸಾಗರದಲ್ಲಿ ಮುಳುಗಿ ಸುತ್ತಾಳೆ. ಅಷ್ಟು ಮಾತ್ರಕ್ಕೆ ಅವಳ ಜೀವನದ ಕರ್ತವ್ಯ ಮುಗಿಯಿತೇ? ಇಲ್ಲ; ತರುಣಿಯ ವಿವಿಧ ಹಾವಭಾವಗಳು ಎಷ್ಟೋ ಪುರುಷರ ಮನೋರಂಗದಲ್ಲಿ

ಆಂದೋಳನವನ್ನು ಎಬ್ಬಿಸುತ್ತವೆ. ದಿನೇ ದಿನೇ ರೂಪಲಾವಣ್ಯಗಳು ಹೆಚ್ಚಿದಂತೆ, ಕಡೆಗೊಬ್ಬ ಬೇಟೆಗಾರ ಮೋಹಗೊಂಡು ಅವಳನ್ನು ಅಡಿಗೆಗೋ, ಮನೆಯ ಕೆಲಸಕ್ಕೋ ಆಹ್ವಾನಿಸುತ್ತಾನೆ. ಅರ್ಥಾತ್ ಅವಳೇ ಮಕ್ಕಳ ತಾಯಿಯಾಗುತ್ತಾಳೆ. ತಾಯ್ತನ ಹೆಚ್ಚಿದಂತೆ ಅವಳ ದಿವ್ಯನೋಟ ಮಂಕಾಗುತ್ತದೆ. ಹೆಜ್ಜೆ ಹಾಕುವುದೂ ಕಷ್ಟವಾಗುತ್ತದೆ. ಚಿಕ್ಕಮಕ್ಕಳು ಮಾತ್ರ ತಾಯಿಯ ಬಾಡಿಹೋದ ಗಲ್ಲಗಳನ್ನು ಸವರಿ ಆನಂದಪಡುತ್ತಾರೆ. ಆಗ ಅವಳು ಮುದುಕಿಯಂತೆ ಬೆಂಕಿಯ ಪಕ್ಕದಲ್ಲಿ ಕುಳಿತುಬಿಡುತ್ತಾಳೆ. ಇಲ್ಲಿಗೆ ನಿಸರ್ಗದ ಪ್ರಥಮ ಹೊಣೆ ಕರ್ತವ್ಯಪಾಲನೆ—ಮುಗಿಯಿತು. ಸ್ವಲ್ಪ ಕಾಲಾನಂತರ ಕ್ಷಾಮದ ಹೊಡೆತದಿಂದಲೋ, ಅಥವಾ ಬೇಟೆಗಾರರ ದೂರ ಸಂಚಾರದ ನೆವದಿಂದಲೋ ಆಕೆ ಒಬ್ಬಂಟಿಗಳಾಗಿ ಉಳಿಯುತ್ತಾಳೆ. ತನ್ನಂತೆ ಅವಳಿಗೂ ಹಿಮಪ್ರದೇಶದಲ್ಲಿ ಕಟ್ಟಿಗೆಯ ಹೊರೆಯೊಂದು ಸಿಗಬಹುದು. ಅದೇ ನಿಸರ್ಗದ ಎರಡನೆಯ ಶಾಸನ.

ಮುದುಕ ಮತ್ತೊಂದು ಕಟ್ಟಿಗೆಯನ್ನು ನಿಧಾನವಾಗಿ ಬೆಂಕಿಗೆ ಹಾಕಿದನು. ಮತ್ತೆ ಯೋಚಿಸಲಾರಂಭಿಸಿದನು....

ಈ ನಿಸರ್ಗ ನಿಯಮ ಎಲ್ಲ ಕಡೆಗೂ ಅನ್ವಯಿಸುತ್ತದೆ; ಅಲ್ಲವೇ? ಮೊದಲ ಮಂಜಿನ ಧಾಳಿಗೇ ಸೊಳ್ಳೆಗಳು ಆಹುತಿಯಾಗುತ್ತವೆ. ಮರದ ಮೇಲಿನ ಇಣಚಿ ಜಿಗಿದಾಡಿ ಸಾವಿನ ಕಂದರಕ್ಕೆ ಜಾರಿ ಬೀಳುತ್ತದೆ. ಮೊಲಕ್ಕೆ ವಯಸ್ಸಾದಂತೆ ಮೈ ಭಾರವೇ ಜಾಸ್ತಿಯಾಗಿ ಶತ್ರುಗಳನ್ನು ಎದುರಿಸಲು ಅಸಾಧ್ಯವಾಗುತ್ತದೆ; ಮುಖ ಕಂಗೆಟ್ಟು ಕಡೆಗೆ ನಾಯಿಯ ಪಾಲಾಗುವುದರಲ್ಲಿ ಸಂದೇಹವಿಲ್ಲ. ಅಷ್ಟೇಕೆ? ತಾನೇ ತನ್ನ ತಂದೆಗೆ ಚಳಿಗಾಲದಲ್ಲಿ ಕೈಕೊಟ್ಟು ಬರಲಿಲ್ಲವೇ! ಆ ಚಳಿಗಾಲದಲ್ಲಿ ತತ್ತ್ವೋಪದೇಶಮಾಡಲು ಒಬ್ಬ ಮಿಷನರಿಯೂ ಇದ್ದ. ಅವನ ಆಸ್ತಿಯೆಂದರೆ ಪುಸ್ತಕಗಳು ಮತ್ತು ಔಷಧಿಯ ಪೆಟ್ಟಿಗೆ.... ಕಾಸ್‌ಕೂಶ್ ಎಷ್ಟೋ ವೇಳೆ ಆ ಪೆಟ್ಟಿಗೆಯೊಳಗಿದ್ದ ತಿಂಡಿಯ ನೆನಪಿಂದ ತುಟಿ ಸವರಿಕೊಳ್ಳುತ್ತಿದ್ದ. ಈಗ ಅವನ ಬಾಯಲ್ಲಿ ಸವಿ ತರುವ ನೀರಿಲ್ಲ....ಮಿಷನರಿಯ 'ವೇದನ ವಿನಾಶಿನಿ' ಔಷಧ ಚೆನ್ನಾಗಿತ್ತು. ಆದರೆ ಅವನಿಂದ ಹಸಿವೆಂಬ ವೇದನೆ ವಿನಾಶವಾಗದೆ, ಗುಂಪಿನಲ್ಲಿ ಅವನೊಬ್ಬ ಕಂಟಕನಾಗಿದ್ದನು. ಏಕೆಂದರೆ ಗುಂಪಿನವರಿಗೆ ಯಾವ ಆಹಾರವನ್ನೂ ಅವನು ಕೊಡುತ್ತಿರಲಿಲ್ಲ. ತಾನು ಮಾತ್ರ ಬೇಟೆಗಾರರ ಗೊಣಗಾಟ ಲಕ್ಷಿಸದೆ ಪುಷ್ಕಳವಾಗಿ ಹೊಡೆಯುತ್ತಿದ್ದನು. ಕಡೆಗೇನಾಯಿತು? ಆತ ಮೇಯೋ ನದಿಯ ದಂಡೆಯಮೇಲೆ ಸತ್ತು ಅಡಗಿದಾಗ, ಅವನ ಎಲುಬಿನ ಊಟಕ್ಕಾಗಿ ನಾಯಿಗಳು ಕಲ್ಲನ್ನಗೆದು ಬಡಿದಾಡಲಿಲ್ಲವೇ?....

ಕಾಸ್‌ಕೂಶ್ ಮತ್ತೊಂದು ಕಟ್ಟಿಗೆಯನ್ನು ಬೆಂಕಿಗೆ ಹಾಕಿ ಬಹು ಹಿಂದಿನ ದಿನಗಳನ್ನು ನೆನಪಿಗೆ ತಂದುಕೊಳ್ಳಲು ಪ್ರಯಾಸಪಟ್ಟನು....ಹೌದು; ಆಗ ಭಯಂಕರ ಕ್ಷಾಮದ ದಿನಗಳು. ಹಸಿದ ಹೊಟ್ಟೆಯ ವೃದ್ಧರು ಬೆಂಕಿಯ ಸುತ್ತ ಕುಳಿತು ವಿಚಿತ್ರ ಹರಟೆ ಹೊಡೆಯುತ್ತಿದ್ದ ಕಾಲ. ಯುಕಾನ್ ನದಿ ಮೂರು ತಿಂಗಳು ಹೆಪ್ಪುಗಟ್ಟಿದರೆ ಮಾಡುವುದೇನು? ಆ ಬರಗಾಲದಲ್ಲೇ ತನ್ನ ತಾಯಿ ತೀರಿಹೋದದ್ದು. ಬೇಸಗೆಯಲ್ಲಿ ನೀರೇನೋ ಬಂತು. ಆದರೆ ಸಾಮಾನ್ ಮೀನು ಒಂದೂ ಸಿಗಲಿಲ್ಲ. ಹಾಗೆಯೆ ಚಳಿಗಾಲದಲ್ಲಿ ಒಂದು ಪ್ರಾಣಿಯ ಸುಳಿವೂ ಇಲ್ಲ. ನಾಯಿಯಂತೂ ಎಲುಬಿನ ಹಂದರವಾಗಿತ್ತು. ನಿಶಾಚರ ರಾಗಿ ಹೆಂಗಸರು, ಮಕ್ಕಳು, ದೊಡ್ಡವರು ಎಲ್ಲರೂ ನರಳಾಡಿದರು. ನವ ಋತು ವಿನ ಸೂರ್ಯ ಮೂಡಿದಾಗ ನೋಡುವ ಭಾಗ್ಯ ಯಾವ ಜೀವಂತ ವ್ಯಕ್ತಿಗೂ ಇರಲಿಲ್ಲ. ಅದಲ್ಲವೇ ಹೆಸರನ್ನು ಸಾರ್ಥಕ ಪಡಿಸಿದ ಕ್ಷಾಮ!....

ಸುಭಿಕ್ಷದ ಕಾಲವನ್ನೂ ಕಾಸ್‌ಕೂಶ್ ಕಂಡಿದ್ದಾನೆ....ಆಗ ಮಾಂಸ ರಾಶಿಗೆ ಮಿತಿಯೇ ಇರಲಿಲ್ಲವಂತೆ. ನಾಯಿಗಳು ತಿಂದು ತೇಗಿ ಕೊಬ್ಬಿದ್ದವು; ಬೇಟೆಯನ್ನು ಸಂಪೂರ್ಣಗೊಳಿಸದೆ ಹಿಂದಿರುಗಿ ಬರುತಿದ್ದವು. ಹೆಂಗಸರ ಭಾಗ್ಯವಿರಬೇಕು! ಮನೆ ತುಂಬ ಗಂಡು ಮಕ್ಕಳ, ಹೆಣ್ಣು ಮಕ್ಕಳ ಸಂತಾನ ಬೆಳೆಯುತಿತ್ತು. ಬೊಜ್ಜು ಮೈ ಎಲ್ಲರಿಗೂ ಬರುತಿತ್ತು. ಆದ್ದರಿಂದಲೇ ಜನ ಹಿಂದಿನ ಹಗೆಗಳನ್ನು ನೆನೆಸಿಕೊಂಡು, ನದಿಯಾಚೆ ಹೋಗಿ, ತಾವಾಗಿಯೆ ಕಾಲುಕೆರೆದು ಹೋರಾಡುತ್ತಿದ್ದರು. ಚಳಿ ಹೋಗಲಾಡಿಸಲು ಸತ್ತವರ ಉರಿಯೇ ಸಾಕಾಗಿತ್ತು. ಆ ಸುಭಿಕ್ಷದ ಕಾಲದಲ್ಲಿ, ತಾನು ಬಾಲಕನಾಗಿದ್ದಾಗ ನಡೆದ ಒಂದು ಪ್ರಸಂಗ ಜ್ಞಾಪಕವಿದೆ. ಏಕಾಂಗಿಯಾದ ಹಿಮಪಶುವನ್ನು ತೋಳಗಳ ಹಿಂಡು ಹಿಡಿದೆಳೆದಿತ್ತು. ಆ ದೃಶ್ಯವಂತೂ ಆಶ್ಚರ್ಯಕರವಾಗಿತ್ತು. ಆಗ ಜಿಂಗ್-ಹಾ ಕೂಡ ತನ್ನ ಜೊತೆಯಲ್ಲಿದ್ದ—ಹೌದು; ಜಿಂಗ್-ಹಾನ ನೆನಪಾಗುತ್ತೆ. ಮುಂದೆ ಅತ್ಯುತ್ತಮ ಬೇಟೆಗಾರನಾದವನು ಅವನೇ. ಪಾಪ; ಕಡೆಗೆ ಯೂಕಾನ್ ಕೊರಕಲಲ್ಲಿ ಬಿದ್ದು ಸತ್ತನು. ಆದಾದ ಒಂದು ತಿಂಗಳ ಮೇಲೆ ಮರಗಟ್ಟಿದ ದೇಹ ಪತ್ತೆಯಾಯಿತು.—

ಹಿಮಪಶುವಿನ ಮಾತಿಗೆ ಬರೋಣ. ಇಬ್ಬರೂ ಆ ದಿನ ಬೇಟೆಗೆ ಹೊರಟಿದ್ದೆವು, ಒಂದು ಕೊರಕಲಲ್ಲಿ ಹಿಮಪಶುವೊಂದು ಆಗತಾನೆ ದಾಟಿ ಹೋದಂಥ ಹೆಜ್ಜೆ ಗುರುತು ಕಂಡಿತು. ಅದರ ಹಿಂದೆಯೇ ಅನೇಕ ತೋಳ ಗಳೂ ಹೋದಂತೆ ಚಿಹ್ನೆಗಳಿದ್ದವು. ಆ ಸುಳಿವನ್ನು ತಕ್ಷಣ ಗ್ರಹಿಸಿದ

ಜಿಂಗ್-ಹಾ, "ನೋಡು ; ಯಾವುದೋ ವೃದ್ಧ ಹಿಮಪಶುವೊಂದನ್ನು ಗುಂಪಿನಿಂದ ಬೇರ್ಪಡಿಸಿ, ತೋಳಗಳ ಹಿಂಡು ಹಿಂಬಾಲಿಸಿದೆ. ಈ ತೋಳಗಳು ಆ ಪ್ರಾಣಿಯನ್ನು ಎಂದಿಗೂ ಬಿಟ್ಟಿರಲಾರವು." ಎಂದನು. ನಿಜ; ಅವು ರಾತ್ರಿ ಹಗಲೆನ್ನದೆ ಆ ಪ್ರಾಣಿಯನ್ನು ಸುತ್ತುಗಟ್ಟಿ, ಗುರುಗುಟ್ಟುತ್ತಾ, ಮುಖ ಮುರಿಯುವಂತೆ ಘಕ್ಕನೇ ಕಚ್ಚುತ್ತಾ, ಕಡೆಯ ತನಕ ಗಲಾಟೆಯೆಬ್ಬಿಸಿರುವುದರಲ್ಲಿ ಸಂದೇಹವಿಲ್ಲ. ತನಗೂ ಜಿಂಗ್-ಹಾನಿಗೂ ಬೇಟೆಯ ಶೋಕಿ ಹೆಚ್ಚಿತು! ಆ ಪ್ರಾಣಿಯ ಅಂತ್ಯವನ್ನು ನೋಡಲೇಬೇಕು. ಉತ್ಸಾಹದಿಂದ ಅದೇ ದಾರಿಯಲ್ಲಿ ಇಬ್ಬರೂ ಮುಂದುವರಿದೆವು. ಹಿಮಮಾರ್ಗ ವಿಶಾಲವಾಗಿಯೆ ಇತ್ತು. ತನ್ನಂಥ ಅನುಭವವಿಲ್ಲದವನೂ ಕೂಡ ಕಣ್ಣು ಮುಚ್ಚಿ ಹೋಗಬಹುದಾಗಿತ್ತು. ಪ್ರತಿ ಹೆಜ್ಜೆಗೂ ದುರಂತ ನಾಟಕವನ್ನು ನೋಡುವ ಕಾತುರ ಹೆಚ್ಚಾಯಿತು. ಕಡೆಗೆ ಹಿಮಪಶು ಒಂದೆಡೆ ನಿಂತಿರಬಹುದಾದ ಸ್ಥಳವನ್ನು ಪತ್ತೆ ಹಚ್ಚಿದೆವು. ಸುಮಾರು ಮನುಷ್ಯ ದೇಹದ ಮೂರರಷ್ಟು ಮಂಜಿನ ಕಣಗಳು ಎಲ್ಲ ದಿಕ್ಕಿಗೂ ಎಸೆಯಲ್ಪಟ್ಟಿದ್ದವು. ಮಧ್ಯಭಾಗದಲ್ಲಿ ಹೆಚ್ಚಿನ ಹೋರಾಟವಾದಂತೆ ಭಾಸವಾಯಿತು. ಸುತ್ತಲೂ ತೋಳಗಳ ಹೆಜ್ಜೆ ಗುರುತು ಸ್ಪಷ್ಟವಾಗಿರಲಿಲ್ಲ. ಮೃತ್ಯುಕಾಳಗವನ್ನು ಸ್ನೇಹಿತರಿಗೆ ವಹಿಸಿ, ಕೆಲವು ತೋಳಗಳು ಮಂಜಿನ ಹಾಸಿಗೆಯ ಮೇಲೆ ವಿಶ್ರಾಂತಿಪಡೆದಿರಬೇಕು! ಹಿಮದಲ್ಲಿ ಆಗತಾನೆ ಬರೆಯಲ್ಪಟ್ಟಂತೆ ಅವುಗಳ ಪೂರ್ಣಾಕೃತಿಯ ಗುರುತು ಎದ್ದು ಕಾಣುತಿತ್ತು. ಮೋಸಕ್ಕೊಳಗಾದ ಪಶು ವಿಭ್ರಾಂತವಾಗಿ ಹುಚ್ಚು ಮನಸ್ಸಿನ ಬಲದಿಂದ ಒಂದು ತೋಳವನ್ನು ತುಳಿದು ಕೊಂದುಹಾಕಿತ್ತು. ಸಾಕ್ಷಿಯಾಗಿ ಅದರ ಕೆಲವು ಮೂಳೆಗಳು ಸಿಕ್ಕಿದ್ದವು.

ಮುಂದೆ ಎರಡನೆಯ ಸ್ಥಳದಲ್ಲಿ ನಿಂತಾಗ, ಆ ಪ್ರಾಣಿ ಕೆಳಗೆ ಬಿದ್ದರೂ ಮೇಲೆದ್ದು ಭಯಂಕರ ಹೋರಾಟ ನಡೆಸಿ ಜಯಗಳಿಸಿತ್ತು. ತಾನು ಹಿಂದೆ ಹೇಳಿದಂತೆ ಕರ್ತವ್ಯಪಾಲನೆ—ನಿಸರ್ಗ ನಿಯಮದ ಮೊದಲ ಸೂತ್ರ—ಹಿಮಪಶುವಿನಿಂದಾಗಿತ್ತು. ಪೀಳಿಗೆಯ ಬೆಳವಣಿಗೆಯಾಗಿತ್ತು. ಆದರೂ ಜೀವವೆಂಬುದು ಅದಕ್ಕೆ ಅತಿ ಪ್ರಿಯ ವಸ್ತುವಾಗಿತ್ತು. ಕೆಳಗೆ ಬಿದ್ದ ವೃದ್ಧ ಪ್ರಾಣಿ ಮತ್ತೆ ಸ್ವತಂತ್ರವಾಗಲು ಪ್ರಯತ್ನಪಟ್ಟದ್ದು ಆಶ್ಚರ್ಯಜನಕವೆಂದು ಜಿಂಗ್-ಹಾ ಮತ್ತು ಇತರ ಬೇಟೆಗಾರರು ಹೇಳಿದರು. ಸ್ವಲ್ಪ ದೂರದಲ್ಲೇ ಹಿಮಪಶು ದಿಣ್ಣೆಯ ಮೇಲೇರಿ ಹಿಂದಿನಿಂದ ತೋಳಗಳನ್ನು ಕೊರಕಲಲ್ಲಿ ನೂಕಿತ್ತು. ಗುದ್ದಾಟ ಬಲು ಜೋರಾಗಿ ನಡೆದಿರಬೇಕು. ಆದ್ದರಿಂದಲೇ ಮಾರ್ಗ ರಕ್ತ

ಮಯವಾಗಿ ಪಶುವಿನ ಹೆಜ್ಜೆಗುರುತು ಮುಚ್ಚಿಹೋಗಿತ್ತು. ನಿಜ; ಆಗೇಲೆ ಹೋರಾಟದ ಶಬ್ದಗಳು ಕೇಳಿಸಿದವು! ತಾವು ಸೇರುವಷ್ಟರಲ್ಲೇ ಬೊಗಳಾಟದ ಎಲ್ಲೆ ಮೀರಿಹೋಗಿ, ಸಾವಿಗೆ ಸಮೀಪವಾದ ಮಾಂಸದ ಹೋರಾಟ ನಡೆದಿತ್ತು. ತೋಳಗಳು ಪ್ರಾಣಿಯನ್ನು ಸುತ್ತುಗಟ್ಟಿದ ದೃಶ್ಯ ನೋಡಲು ಮರೆಯಿಂದ ಮೆಲ್ಲಗೆ ಹೊರಬಂದೆವು.

ಇಂಥ ಯೌವನದ ಅನೇಕ ಸಾಹಸಗಳು ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿವೆ. ತಂಡದ ಮುಖ್ಯಸ್ಥನಾಗಿ ತಾನು ಮಹತ್ಕಾರ್ಯಗಳನ್ನು ಮಾಡ ಲಿಲ್ಲವೇ? ತನ್ನ ಹೆಸರೆಂದರೆ ಹಗೆಗಳಿಗೆ ಎಲ್ಲಿಲ್ಲದ ಭಯವಿತ್ತು. ಒಂದು ಸಲ ಬಹಿರಂಗವಾಗಿಯೇ ಬಿಳಿಯವನೊಬ್ಬನನ್ನು ಕತ್ತಿಯಿಂದ ತಿವಿದು ಕೊಂದಿ ದ್ದೇನೆ....

ಮುದುಕ ಯೌವನದ ಕನಸು ಕಾಣುತ್ತಿದ್ದಂತೆ, ಬೆಂಕಿ ಆರುತ್ತಾ ಬಂತು. ಹಿಮದ ಗಾಳಿ ಹೆಚ್ಚಿತು. ಮತ್ತೆರಡು ಕಟ್ಟಿಗೆಯನ್ನೊಡ್ಡಿ, ತನ್ನ ಜೀವದ ಹಿಡಿತ ಎಷ್ಟರಮಟ್ಟಿಗೆ ಇನ್ನೂ ನಿಂತಿದೆ! ಎಂದು ಯೋಚಿಸಿದನು....ಸಿತ್-ಕಮ-ತೋಹಾ ಅಜ್ಜನ ಬಗ್ಗೆ ಸ್ವಲ್ಪವಾದರೂ ಗಮನವಿಟ್ಟಿದ್ದರೆ, ಜಾಸ್ತಿ ಕಟ್ಟಿಗೆ ಯನ್ನಿಟ್ಟು ತನ್ನ ಜೀವದ ಘಳಿಗೆಗಳನ್ನು ವಿಸ್ತರಿಸಬಹುದಾಗಿತ್ತು! ಆದರೆ ಅವಳು ಮೊದಲಿನಿಂದಲೂ ಯಾವ ಜವಾಬ್ದಾರಿಯನ್ನೂ ವಹಿಸಿರಲಿಲ್ಲ. ಬೀವರ್-ಜಿಂಗ್-ಹಾನ ಮೊಮ್ಮಗ—ಅವಳ ಮೇಲೆ ಯಾವತ್ತು ದೃಷ್ಟಿ ಬೀರಿ ದನೋ, ಅಂದಿನಿಂದ ಅವಳಿಗೆ ಹಿರಿಯರನ್ನು ಕಂಡರೆ ಲಕ್ಷ್ಯವೇ ಇಲ್ಲ. ಅವಳ ನ್ನೇಕೆ ಬೈಯಬೇಕು? ಹೊಸ ಪ್ರಾಯದಲ್ಲಿ ತಾನು ಕೂಡ ಅವಳಂತೆಯೇ ಪ್ರೇಮಜಾಲದಲ್ಲಿ ಸಿಲುಕಿರಲಿಲ್ಲವೇ?....

ಸ್ವಲ್ಪ ಹೊತ್ತು ಮೌನದಿಂದಿದ್ದು ಮತ್ತೆ ಯೋಚಿಸಿದನು. ಮಗನ ನೆನ ಪಾಯಿತು....ಅವನ ಅಂತಃಕರಣ ಕರಗಿ ನೀರಾಗಿ ತನ್ನನ್ನು ಕರೆದೊಯ್ಯಲು ನಾಯಿಗಳ ಜೊತೆ ಪುನಃ ಬರುವನೋ ಏನೊ! ಸುಭಿಕ್ಷದ ನಾಡಿಗೆ ಬಾ, ತಂಡ ದವರೊಡನೆ ಸೇರಿಕೊ ಎನ್ನದಿರುವನೇ?....

ಸುತ್ತಲೂ ನಿಶ್ಶಬ್ದವಾಗಿರುವಾಗ ಮುದುಕನ ಕಿವಿ ಮಾತ್ರ ಯಾವುದೋ ಸಪ್ಪಳವನ್ನು ಕೇಳಲು ಹಾತೊರೆಯಿತು. ಆದರೆ ಯಾವ ಸದ್ದೂ ಇಲ್ಲ.... ತನ್ನ ಉಸಿರೇ ದೊಡ್ಡದಾಗಿದೆ....ಮೈ ಚಳಿಯಿಂದ ಒಂದೇ ಸಮನೆ ನಡುಗಿತು.... ಹಿಂದೆ ಪರಿಚಯವಿದ್ದಂಥ ಆರ್ತಧ್ವನಿಯೊಂದು ಹತ್ತಿರದಲ್ಲೇ ಕೇಳಿಸಿದಂತಾ ಯಿತು....ಇದೇನು ಕನಸೇ? ಕಣ್ಣು ಕುಕ್ಕುವಂಥ ದೃಶ್ಯ! ಬಿದ್ದು ಓಡುತ್ತಿರುವ

ಅದೇ ಹಿಮಪಶು ; ಹರಿತಾದ ಕೋಡು, ಮುರಿದ ಪಕ್ಕೆ, ರಕ್ತಮಯ ಪಾರ್ಶ್ವ, ಕಿತ್ತಾಟದಲ್ಲಿ ಜಲ್ಲರಿಯಾಡಿದ ಚರ್ಮ ; ಹಿಂದೆ ಉತ್ಸಾಹದಿಂದ ನುಗ್ಗುತ್ತಿರುವ ತೋಳಗಳ ಹಿಂಡು ಶುಭ್ರ ಹಿಮದ ಸುತ್ತಲೂ ನಿಷ್ಕರುಣೆಯ ಕತ್ತಲೆ ಆವರಿಸಿತು.

ಚಳಿಗಾಳಿಯ ಹೊಡೆತದಿಂದ ಮುದುಕನ ಆತ್ಮ ಚೇತರಿಸಿಕೊಂಡು ಹೋರಾಟಕ್ಕೆ ನಿಂತಿತು. ಅವನಿಗೆ ಆಯುಧವಿಲ್ಲವೇ ? ತಕ್ಷಣ ಉರಿಯುತ್ತಿದ್ದ ಕಟ್ಟಿಗೆಯನ್ನೇ ತೆಗೆದನು. ಆ ಕ್ಷಣ ತೋಳವೊಂದು ಹಿಂಜರಿದು ಕೂಗಿತು. ಮನುಷ್ಯನ ಹೆದರಿಕೆಯಿರಬೇಕು. ಆದರೆ ಹಿಂದೆಯೇ ಇದ್ದ ತೋಳಗಳ ಹಿಂಡು ಮುದುಕನ ಸುತ್ತಲೂ ನಿಂತಿತು. ಪಾಪ; ಮುದುಕ ಒಬ್ಬಂಟಿಗನಾಗಿದ್ದರೂ ಹೆದರದೆ ಕೈಬೀಸಿದನು. ತೋಳಗಳ ಕೂಗಾಟ ಹೆಚ್ಚತೊಡಗಿತು. ಅವು ಚೆದರದೆ ಒಂದೇಕಡೆ ಸುತ್ತುಗಟ್ಟಿದವು. ಒಂದೊಂದಾಗಿ ಮುದುಕನ ಮೇಲೆ ಬೀಳಲು ಹವಣಿಸುತ್ತಿದ್ದವು.

"ನಾನೇಕೆ ಇನ್ನೂ ಜೀವ ಹಿಡಿದಿರಬೇಕು ?" ಎನ್ನುತ್ತಾ ಕಾಸ್‌ಕೂಶ್ ಕೈಯಲ್ಲಿದ್ದ ಕೊಳ್ಳಿಯನ್ನು ಬಿಸಾಡಿದನು. ಕೊಳ್ಳಿ ಹಿಮದ ಮೇಲೆ ಬಿದ್ದು ಹಿಸ್ ಎನ್ನುತ್ತಾ ತಣ್ಣಗಾಯಿತು. ವೃದ್ಧ ಹಿಮಪಶುವಿನ ಕಡೆಯ ದೃಶ್ಯ ಕಣ್ಣಿಗೆ ಕಟ್ಟಿದಂತಾಯಿತು. ಅಂತೂ ಕಾಸ್‌ಕೂಶ್ ಭಾರ ಹೊತ್ತ ತಲೆಯನ್ನು ಆಗಲೇ ಜಡವಾಗಿದ್ದ ಕಾಲುಗಳ ಮೇಲೆಸೆದನು. ಅದರಲ್ಲಿ ತಪ್ಪೇನು? ಅದು ಬಾಳ ನಿಯಮ ತಾನೆ ?....

ಮುಖ ಭಂಗ

ಅದೇ ಕೊನೆ. ಮನೋವೇಧಕವೂ, ಭಯಾನಕವೂ ಆದ ದಾರಿಯಲ್ಲಿ ಸುಬೆನ್‌ಕೊವ್ ಬಹುದೂರದ ಪ್ರಯಾಣ ಮಾಡಿ ಮನೆಗೆ ಹಿಂದಿರುಗಿ ಹಾರಿ ಬರುವ ಪಾರಿವಾಳದಂತೆ ಯೂರೋಪಿನ ರಾಜಧಾನಿಗಳ ಕಡೆ ಹೊರಟಿದ್ದನು. ಈಗ ಅವನು ಎಲ್ಲಕ್ಕಿಂತಲೂ ದೂರವಾದ ರಷ್ಯನರಿಗೆ ಸೇರಿದ್ದ ಅಮೇರಿಕದ ಭೂ ಭಾಗದ ಹಿಮದಲ್ಲಿ ಕುಳಿತಿದ್ದನು. ಅವನ ಎರಡು ಕೈಗಳನ್ನೂ ಹೆಡ

ಮುರಿ ಕಟ್ಟಲಾಗಿತ್ತು. ಮುಂದೆ ಬರಲಿರುವ ಕ್ರೂರ ಯಾತನೆಯನ್ನು ಅನುಭವಿಸಲು ಕಾದಿದ್ದನು. ಎದುರಿಗೆ ಭಾರಿ ರಾವುತನೊಬ್ಬನನ್ನು ಮಂಜಿನ ಮೇಲೆ ಕೆಳಮೊಗ ಮಾಡಿ ಮಲಗಿಸಿದ್ದರು; ಆತ ನೋವಿನಿಂದ ನರಳುತ್ತಿದ್ದುದನ್ನು ಸುಬೆನ್‌ಕೊವ್ ಅಚ್ಚರಿಯಿಂದ ನೋಡಿದನು. ಆ ದೈತ್ಯನನ್ನು ಶಿಕ್ಷಿಸಿ ಹೆಂಗಸರಿಗಿಂತ ಕಡೆ ಮಾಡಿದ್ದರು. ಆ ಮನುಷ್ಯನ ರೋದನವೇ, ಆತನ ಬಗ್ಗೆ ನಡೆದ ಪೈಶಾಚಿಕ ಶಿಕ್ಷಾಕ್ರಮ ಅಸಾಮಾನ್ಯವಾಗಿತ್ತೆಂಬುದನ್ನು ವ್ಯಕ್ತಪಡಿಸುತಿತ್ತು.

ಸುಬೆನ್‌ಕೊವ್ ನಡುಗುತ್ತಾ ನೋಡಿದನು. ಆದರೆ ಅವನು ಸಾವಿಗೆ ಹೆದರುವವನಲ್ಲ. ವಾರ್ಸಾದಿಂದ ನ್ಯುಲಾಟೋ ತನಕ ಬೇಸರದ ಹಾದಿಯಲ್ಲಿ ಜೀವವನ್ನು ಹೊತ್ತು ತಂದವನಿಗೆ, ಸಾವು ಎಂದ ಮಾತ್ರಕ್ಕೆ ಕಂಪಿಸುವಂಥ ಸಂಭವವಿಲ್ಲ. ಆದರೆ ಅವನು ನರಕ ಯಾತನೆಯ ಅನುಭವಕ್ಕೆ ವಿರೋಧಿಯಾಗಿದ್ದನು. ಅದು ಆತ್ಮವಿಶ್ವಾಸಕ್ಕೆ ಧಕ್ಕೆಯುಂಟುಮಾಡಿತ್ತು. ನೋವಿನಿಂದುಂಟಾಗುವ ದುಃಖಮಯ ದೃಶ್ಯ ನೋವಿಗಿಂತಲೂ ನಿಂದನೀಯವಾಗಿತ್ತು. ತಾನು ಕೂಡ ಬಿಗ್ ಇವಾನ್ ಮತ್ತು ಇನ್ನೂ ಮುಂಚೆ ಸತ್ತಿರುವ ಮನುಷ್ಯರ ಹಾಗೆ ಯಾಚಿಸಿ, ಪ್ರಾರ್ಥಿಸಿ, ಮೊರೆಯಿಟ್ಟು ಕಷ್ಟಪಡಬೇಕಾಗಬಹುದು ಎಂಬ ಅಂಶವನ್ನು ಸುಬೆನ್‌ಕೋವ್ ತಿಳಿದಿದ್ದನು; ಅಂಥ ಮಾರ್ಗ ಒಳ್ಳೆಯದಲ್ಲ.... ಸರಿಯಾದ ಪರಿಹಾರ ಯಾವುದೆಂದರೆ—ಧೈರ್ಯವಾಗಿ, ಯಾರ ಹಂಗೂ ಇಲ್ಲದೆ, ನಗುನಗುತ್ತಾ ಕಣ್ಮರೆಯಾಗುವುದು!....ಇಲ್ಲದೆ ಶಕ್ತಿ ಕುಗ್ಗಿ, ಮಾಂಸ ಖಂಡಗಳ ಚುಚ್ಚು ನೋವಿನಿಂದ ತಳಮಳಗೊಂಡು, ಕೋತಿಯಂತೆ ಚೀತ್ಕಾರ ಮಾಡುತ್ತಾ, ಕಿರುಗುಟ್ಟುತ್ತಾ ಶುದ್ಧ ಮೃಗದಂತಾಗುವುದು—ಅಬ್ಬಾ, ಅದೇ ಅತ್ಯಂತ ಭೀಷಣವಾದುದು....

ತಪ್ಪಿಸಿಕೊಳ್ಳಲು ಯಾವ ಉಪಾಯವೂ ಇದ್ದಿಲ್ಲ. ಎಂದು ಪೋಲೆಂಡಿನ ಸ್ವಾತಂತ್ರ್ಯದ ದಿವ್ಯ ಕನಸನ್ನು ಕಂಡನೋ, ಅಂದಿನಿಂದ ಅವನು ವಿಧಿಯ ಕೀಲುಗೊಂಬೆಯಾಗಿದ್ದನು. ಮೊದಲಿನಿಂದಲೂ ವಿಧಿಯ ಕೈವಾಡ ನಡೆದಿತ್ತು. ವಾರ್ಸಾ, ಸೇಂಟ್ ಪೀಟರ್ಸ್‌ಬರ್ಗ್, ಸೈಬೀರಿಯದ ಗಣಿಗಳು, ಮತ್ತು ಕಮ್‌ಚಟಕ ಸ್ಥಳಗಳಿಂದ ತುಪ್ಪುಳು ಚರ್ಮಕ್ಕಾಗಿ ಬರುವ ಕಳ್ಳರೊಡನೆ ಅಲ್ಲಾಡುವ ದೋಣಿಗಳಲ್ಲಿ ಈ ತುದಿಗೆ ಅವನನ್ನು ತಂದು ನಿಲ್ಲಿಸಿದೆ. ಅವನಂಥ ಕನಸುಗಾರ, ಕಲಾವಿದ, ಸೂಕ್ಷ್ಮಮತಿಗೆ ಈ ಕೊನೆಗಾಲವೇ? ದೂರದ ಕತ್ತಲ ಪ್ರದೇಶದಲ್ಲಿ, ಅನಾಗರಿಕರ ಮಧ್ಯೆ ಗೋಳಿಡುತ್ತಾ, ಸುಲಭವಾಗಿ ಮನೋವಿಕಾರ ಹೊಂದುತ್ತಾ

ಅವನು ಬಾಳಬೇಕೆಂಬ ವಿಧಿ ನಿಯಮ ಮೊದಲೇ ಆತನಿಗೆ ತಿಳಿಯದಂತೆ ನಿಶ್ಚಿತವಾಗಿತ್ತು.

ಸುಬೆನ್‌ಕೊವ್ ನಿಟ್ಟುಸಿರುಬಿಟ್ಟನು....ತನ್ನ ಮುಂದಿದ್ದ ಬಿಗ್ ಇವಾನ್ ದೈತ್ಯಾಕೃತಿಯವನಾದರೂ ಉಕ್ಕಿನ ಮನುಷ್ಯನಾದರೂ ಎದೆಗಾರನಾಗಿದ್ದಿಲ್ಲ. ಅವನು ಮೊದಲು ರಾವುತನಾಗಿದ್ದು ಕಡಲುಗಳ್ಳನಾಗಿ ಮಾರ್ಪಾಟಾದವನು. ಈಗ ಪಶುಪ್ರಾಯನಾಗಿದ್ದನು. ನರಗಳ ಪ್ರತಿಕ್ರಿಯೆ ಬಹು ಕೆಳಮಟ್ಟದ್ದಾಗಿದ್ದು ಸಾಮಾನ್ಯರಲ್ಲಿ ಉಂಟಾಗುವ ತೀವ್ರ ನೋವು ಆತನಿಗೆ ಕೇವಲ ಕಚಕುಳಿಯಂತಾಗುತಿತ್ತು. ಆದರೂ ಈ ನ್ಯುಲಾಟೋ ಇಂಡಿಯನರನ್ನು ನಂಬಬಹುದು. ಅವರು ಬಿಗ್ ಇವಾನನ ನರವ್ಯೂಹವನ್ನೇ ಭೇದಿಸಿ ಕಂಪಿಸುತ್ತಿದ್ದ ಆತ್ಮದ ಮೂಲವನ್ನು ಹುಡುಕತೊಡಗಿದ್ದರು. ಮನುಷ್ಯನೊಬ್ಬ ಇಷ್ಟು ಯಾತನೆ ಪಡುತ್ತ ಬದುಕಿದ್ದಾನೆಂದರೆ ಊಹಿಸಲಸಾಧ್ಯ. ತನ್ನ ನರ ಕೇಂದ್ರದ ದೃಢತೆಗೆ ತಕ್ಕಂತೆ ಬಿಗ್ ಇವಾನ್ ವರ್ತಿಸಿರಬೇಕು. ಆಗಲೇ ಇತರರಿಗಿಂತ ಎರಡರಷ್ಟು ಹೆಚ್ಚಿನ ಕಾಲಾವಧಿ ಆತನು ಜೀವವನ್ನು ಹಿಡಿದಿದ್ದನು....

ಇನ್ನೂ ಬಹು ಹೊತ್ತು ಈ ನರಳಾಟವನ್ನು ನೋಡಲು ಸಾಧ್ಯವಿಲ್ಲವೆಂದು ಸುಬೆನ್‌ಕೊವ್ ಭಾವಿಸಿದನು—ಇವಾನ್ ಏಕೆ ಸಾಯುವುದಿಲ್ಲ? ಆ ಚೀರಾಟ ನಿಲ್ಲದಿದ್ದರೆ ತಾನು ಹುಚ್ಚನಾಗುತ್ತೇನೆ. ನಿಂತರೆ ತನ್ನ ಸರದಿ ಬರುತ್ತದೆ. ಮೊದಲೇ ಹಲ್ಲು ಕಿರಿಯುತ್ತಾ ಯಕಾಗ ತನಗಾಗಿ ಕಾದಿದ್ದಾನೆ. ಅವನನ್ನು ಒಂದು ವಾರದ ಹಿಂದೆ ಕೋಟೆಯಿಂದ ಹೊರಕ್ಕೆ ತಳ್ಳಿ, ಅವನ ಮುಖಕ್ಕೆ ನಾಯಿಚಾಟಿಯಿಂದ ತಾನೇ ಹೊಡೆದಿದ್ದನು. ಈಗ ಯಕಾಗನೇ ತನ್ನ ವಿಚಾರಣೆಗೆ ನಿಂತಿದ್ದಾನೆ. ನಿಜವಾಗಿಯೂ ಅವನು ಅತ್ಯಂತ ಕಠಿಣವಾದ ಶಿಕ್ಷಾಕ್ರಮವನ್ನು ತನಗಾಗಿ ಕಾದಿರಿಸಿದ್ದಾನೆ. ತನ್ನ ಕೀಲುಗಳನ್ನು ಸಡಿಲಿಸಲಿದ್ದಾನೆ. ಇವಾನ್ ನರಳಾಟವನ್ನು ನೋಡಿದರೆ ಯಕಾಗನ ಶಿಕ್ಷಾಕ್ರಮವೇ ಒಳ್ಳೆಯದಿರಬೇಕು....ಯಕಾಗನಿಗೆ ಶಿರಬಾಗಿ ಇಂಡಿಯನರು ಸಂತೋಷದಿಂದ ಕೈಚಪ್ಪಾಳೆ ತಟ್ಟಿ ನಗುತ್ತಾ ಹಿಂದೆ ಸರಿದು ನಿಂತರು. ಅಪರಾಧ ಮಾಡಿದ ಭಯಂಕರ ವಸ್ತುವನ್ನು ನೋಡಿ ಸುಬೆನ್‌ಕೊವ್ ಕೂಡ ಚಿತ್ತೋದ್ರೇಕದಿಂದ ನಗಲಾರಂಭಿಸಿದನು. ಅದನ್ನು ನೋಡಿ ಇಂಡಿಯನರಿಗೆ ಆಶ್ಚರ್ಯವಾಯಿತು. ಆದರೆ ಅವನು ಮಾತ್ರ ನಗುತ್ತಲೇ ಇದ್ದನು.

ಈ ರೀತಿ ಆಗಬಾರದು—ಎಂದು ತನ್ನನ್ನು ತಾನೇ ಸುಧಾರಿಸಿಕೊಂಡನು. ಸೆಳೆವಿನ ಎಳೆತ ನಿಧಾನವಾಗಿ ಕಡಿಮೆಯಾಗುತ್ತ ಬಂತು. ಬೇರೆ ವಿಷಯಗಳ

ಕಡೆ ಪ್ರಯಾಸದಿಂದ ಯೋಚಿಸತೊಡಗಿದನು. ತನ್ನ ಜೀವನದ ಹಿಂದಿನ ಹಾಳೆಗಳನ್ನು ತಿರುವಿಹಾಕಿ ಸಿಂಹಾವಲೋಕನ ಮಾಡಿದನು—

ತನ್ನ ಹೆತ್ತವರ ನೆನಪಿನೊಡನೆ, ತನಗೆ ಸೇರಿದ್ದ ಚುಕ್ಕೆಗಳ ಸಣ್ಣ ಕುದುರೆಯ ಜ್ಞಾಪಕವೂ ಬಂತು. ಫ್ರೆಂಚ್ ಕಲಿಸಲು ಬರುತ್ತಿದ್ದ ಉಪಾಧ್ಯಾಯರು ತನಗೆ ನೃತ್ಯವನ್ನು ಅಭ್ಯಾಸಮಾಡಿಸಿದ್ದರು. ಅವರಲ್ಲಿದ್ದ ಹಳೆಯ ವಾಲ್‌ಟೇರ್ ಪುಸ್ತಕವನ್ನು ಅವರಿಗೆ ತಿಳಿಯದ ಹಾಗೆ ವಶಪಡಿಸಿಕೊಂಡಿದ್ದನು. ಮತ್ತೊಂದು ಸಾರಿ ಪ್ಯಾರಿಸ್, ಮಂಕು ಕವಿದ ಲಂಡನ್, ಉಲ್ಲಾಸಭರಿತ ವಿಯನ್ನ ಮತ್ತು ರೋಮ್ ದೇಶಗಳನ್ನು ಕಾಣುವಂತೆ ಭಾಸವಾಯಿತು. ತನ್ನಂತೆಯೇ ಕನಸು ಕಂಡ ಉದ್ರಿಕ್ತ ಯುವಕ ತಂಡದ ನೋಟ ಕಣ್ಣಿಗೆ ಕಟ್ಟಿದಂತಿತ್ತು. ಅವರ ಕನಸು ಪೋಲೆಂಡಿನ ಸ್ವಾತಂತ್ರ್ಯ ಮತ್ತು ವಾರ್ಸಾದಲ್ಲಿ ಪೋಲೆಂಡಿನ ರಾಜನಿಗೆ ಪಟ್ಟಾಭಿಷೇಕ. ಆ ಸ್ಫೂರ್ತಿಯಿಂದಲೇ ಈ ದೊಡ್ಡ ಪ್ರಯಾಣ ಆರಂಭವಾದುದು. ನಿಜ; ನಾನು ಎಲ್ಲರಿಗಿಂತಲೂ ಹೆಚ್ಚು ಕಾಲ ಉಳಿದಿದ್ದೇನೆ. ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಇಬ್ಬರು ಮರಣದಂಡನೆಗೆ ಗುರಿಯಾದ ಮೇಲೆ, ಒಬ್ಬೊಬ್ಬರಾಗಿ ಗತಿಸಿದ ವೀರ ಯೋಧರನ್ನು ಎಣಿಕೆ ಮಾಡಬೇಕು. ಒಂದು ಕಡೆ ಒಬ್ಬನು ಜೈಲರಿನಿಂದ ಪ್ರಾಣ ಹೋಗುವ ತನಕ ಏಟು ತಿನ್ನಬೇಕಾಯಿತು. ಮತ್ತೊಂದೆಡೆ ರಕ್ತಮಯವಾದ ದೇಶಭ್ರಷ್ಟರ ಮಾರ್ಗ! ಅಲ್ಲಿ ಎಷ್ಟೋ ತಿಂಗಳ ಕಾಲ ಪ್ರಯಾಣಮಾಡಿದ್ದ ಒಬ್ಬಾತ ಕಡೆಗೆ ರಾವುತರ ಒರಟು ಕೈಗಳಿಗೆ ಸಿಕ್ಕಿ ದಾರಿಯಲ್ಲೇ ಬಿದ್ದುಬಿಟ್ಟನು. ಯಾವಾಗಲೂ ಈ ಮೃಗಸದೃಶವಾದ ಕಾಡುತನ ತಮ್ಮನ್ನು ಬಿಡಲಿಲ್ಲ. ಜ್ವರಪೀಡಿತರಾಗಿ, ಗಣಿಗಳಲ್ಲಿ, ಕಶಾಪ್ರಹಾರದಿಂದ ಎಷ್ಟೋ ಜನ ಪ್ರಾಣಬಿಟ್ಟರು. ತಪ್ಪಿಸಿಕೊಂಡು ಬಂದವರಲ್ಲಿ ಇಬ್ಬರು, ರಷ್ಯಾ ರಾಜ್ಯಕ್ಕೆ ಅಧೀನರಾದ ತುರ್ಕೀ ಜನಾಂಗದವರೊಡನೆ ಯುದ್ಧ ಮಾಡಿ ಸತ್ತರು. ತಾನೊಬ್ಬ ಮಾತ್ರ ಕಳುವು ಕಾಗದಗಳನ್ನೂ, ಹಿಮದಲ್ಲಿ ಪ್ರಯಾಣಿಕರೊಬ್ಬರು ಬಿಟ್ಟುಹೋಗಿದ್ದ ಹಣವನ್ನೂ ಹೊತ್ತು ಕಮ್‌ಚಟಕಾ ಪ್ರದೇಶಕ್ಕೆ ನುಗ್ಗಿಬಂದನು.

ಇದೆಲ್ಲವೂ ಅನಾಗರಿಕತೆಯ ಪರಮಾವಧಿಯಲ್ಲದೆ ಬೇರೆಯಲ್ಲ. ಚಲಚಿತ್ರಗಳಲ್ಲಿ, ನಾಟಕ ರಂಗಗಳಲ್ಲಿ, ನೃತ್ಯಾಲಯಗಳಲ್ಲಿ ತನ್ಮಯವಾಗಿದ್ದ ತನ್ನ ಹೃದಯವನ್ನು ಈ ದುಷ್ಟಶಕ್ತಿಯು ಆವರಿಸಿಬಿಟ್ಟಿತ್ತು. ತನ್ನ ರಕ್ತವನ್ನು ಅರ್ಪಿಸಿ ಜೀವವನ್ನು ಕೊಂಡುಕೊಂಡಿದ್ದನು. ಪ್ರತಿಯೊಬ್ಬರೂ ಕೊಲೆಮಾಡಿದ್ದರು. ತಾನು ಕೂಡ ರಹದಾರಿ ಪಡೆಯಲು ಆ ಪ್ರಯಾಣಿಕನನ್ನು ಕೊಲೆಮಾಡಿದ್ದ.

ತಾನೂ ಒಬ್ಬ ತೂಕದ ವ್ಯಕ್ತಿ ಎನ್ನುವ ಸಮರ್ಥನೆಗಾಗಿ ಒಂದೇ ದಿನದಲ್ಲಿ ಇಬ್ಬರು ರಷ್ಯನ್ ಸಾಹೇಬರೊಡನೆ ದ್ವಂದ್ವ ಯುದ್ಧಮಾಡಿದ್ದ. ಹಾಗೆಯೆ ಫರ್ ಕಳ್ಳರ ಗುಂಪಿನಲ್ಲಿ ಸ್ಥಾನ ಸಂಪಾದಿಸಲು ಪ್ರಯತ್ನಪಟ್ಟು ದೊಡ್ಡ ವಿಜಯವನ್ನೇ ಗಳಿಸಿದ್ದ. ತನ್ನ ಹಿಂದೆ ಸಾವಿರಾರು ಮೈಲಿಗಳ ರಷ್ಯಾ ಮತ್ತು ಸೈಬೀರಿಯದ ಮಾರ್ಗವಿತ್ತು. ಅದೇ ದಾರಿಯಲ್ಲಿ ಹಿಂತಿರುಗಿ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಆದ್ದರಿಂದ ಕಪ್ಪನೆಯ ಹಿಮಮಯ ಬೆರಿಂಗ್ ಸಮುದ್ರವನ್ನು ಹಾದು ಅಲಾಸ್ಕ ತಲುಪುವುದೊಂದೇ ಉಳಿದ ಮುಂದಿನ ಕರ್ತವ್ಯವಾಗಿತ್ತು. ಇದರಿಂದಾಗಿ ಅನಾಗರಿಕತೆಯಿಂದ ಇನ್ನೂ ಹೆಚ್ಚಿನ ಅನಾಗರಿಕತೆಗೆ ಹೋಗಬೇಕಾಗಿತ್ತು. ಫರ್ ಕಳ್ಳರ ಕೀಳುಮಟ್ಟದ ನಾವೆಗಳಲ್ಲಿ, ಆಹಾರ ನೀರಿಲ್ಲದೆ, ಕೊನೆಯಿಲ್ಲದ ಅತಿ ರಭಸದಿಂದಿರುವ ಅಲೆಗಳೊಡನೆ ಹೋರಾಡುತ್ತ ಮನುಷ್ಯರು ಪ್ರಾಣಿಗಳಂತೆಯೆ ಮಾರ್ಪಟ್ಟಿದ್ದರು. ಕಮಚಟಕದ ಪೂರ್ವದಿಕ್ಕಿಗೆ ಮೂರು ಬಾರಿ ಸಮುದ್ರಯಾನ ಮಾಡಿದ್ದ.

ನಾನಾ ಕಷ್ಟ ನೋವುಗಳನ್ನು ಅನುಭವಿಸಿ ಜೀವ ಉಳಿಸಿಕೊಂಡು ಮೂರು ನಾರಿಯೂ ಹಿಂದಿರುಗಿ ಬರಬೇಕಾಯಿತು. ಸಂದಿಗ್ಧ ಸ್ಥಿತಿಯಲ್ಲಿ ಸಿಕ್ಕಿಕೊಂಡೆವು. ಅಂತೂ ತಾನು ಬಂದ ದಾರಿಯಲ್ಲಿ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಸುರಂಗದ ಸಿಡಿಮದ್ದೂ, ಕಶಾ ಪ್ರಹಾರವೂ ಕಾದಿದ್ದವು.

ಕಡೆಗೆ ನಾಲ್ಕನೆಯ ಬಾರಿ ಪೂರ್ವಕ್ಕೆ ಪ್ರಯಾಣಮಾಡಿದ್ದ. ಕೇವಲ ಕಾಲ್ಪನಿಕವೆಂದಿದ್ದ ಸೀಲ್ ದ್ವೀಪಗಳನ್ನು ಮೊಟ್ಟಮೊದಲು ಕಂಡುಹಿಡಿದ ತಂಡದಲ್ಲಿ ತಾನೂ ಇದ್ದ. ಆದರೆ ತಾನು ಹಿಂದಿರುಗಲಿಲ್ಲ. ತುಪ್ಪುಳು ಚರ್ಮದ ಭಾಗ್ಯದಲ್ಲಿ ಪಾಲಾಗಲು ಕಮ್‌ಚಟಕ್ ದ್ವೀಪದಲ್ಲಿ ನಡೆದ ಹುಚ್ಚು ಉಲ್ಲಾಸ ಕೋಲಾಹಲದಲ್ಲಿ ತಾನು ಭಾಗವಹಿಸಿರಲಿಲ್ಲ. ಪುನಃ ವಾಪಸು ಹೋಗಕೂಡದೆಂದು ಪ್ರತಿಜ್ಞೆಮಾಡಿದ್ದ. ತನಗೆ ಪ್ರಿಯವಾದ ಯೂರೋಪಿನ ರಾಜಧಾನಿಗಳನ್ನು ತಲುಪಬೇಕಾದರೆ ಇನ್ನೂ ಮುಂದುವರಿಯಬೇಕೆಂದು ತಿಳಿದಿದ್ದ. ಆದ್ದರಿಂದ ನಾವೆಗಳನ್ನು ಬದಲಾಯಿಸಿ ಕತ್ತಲಿನ ಹೊಸ ರಾಜ್ಯದಲ್ಲಿ ನೆಲೆಸಿದ್ದ. ಸ್ಲಾವ್ ಕುಲದ ಬೇಟೆಗಾರರು, ರಷ್ಯದ ಸಾಹಸಿಗಳು, ಮಂಗೋಲರು, ಟಾರ್ಟಾರರು ಮತ್ತು ಸೈಬೀರಿಯದ ಮೂಲನಿವಾಸಿಗಳು ತನ್ನ ಸ್ನೇಹಿತರಾಗಿದ್ದರು. ಹೊಸ ಪ್ರಪಂಚದ ಅನಾಗರಿಕರೊಡನೆ ಅವರು ರಕ್ತದ ಕಾಲುವೆಯನ್ನೇ ಹರಿಸಿದ್ದರು. ಫರ್ ದಾನ ಮಾಡದ ಎಲ್ಲ ಹಳ್ಳಿಗಳ ಮೇಲೂ ಕಗ್ಗೊಲೆಯನ್ನು ಮಾಡಿದ್ದರು.

ಪುನಃ ಪ್ರತಿಫಲವಾಗಿ ಅವರೇ ಹಡಗು ಕಂಪೆನಿಯವರಿಂದ ಸಾಮೂಹಿಕವಾಗಿ ಸಂಹರಿಸಲ್ಪಟ್ಟಿದ್ದರು. ಉಳಿದವರೆಂದರೆ ನಾನು ಮತ್ತು ಇನ್ನೊಬ್ಬ ಫಿನ್ ಜನಾಂಗದವ. ಹಸಿವಿನ ಮತ್ತು ಏಕಾಂತದ ಚಳಿಗಾಲವನ್ನು ಯಾವ ಸಂಪರ್ಕವೂ ಇಲ್ಲದ ಅಲ್ಯೂಟಿನ್ ದ್ವೀಪಗಳಲ್ಲಿ ಕಳೆದಿದ್ದರು. ವಸಂತಕಾಲದಲ್ಲಿ ಯಾವುದಾದರೂ ಫರ್ ಹಡಗು ತಮ್ಮ ರಕ್ಷಣೆಗೆ ಬರುವ ಸಂಭವ ಸಾವಿರದಲ್ಲಿ ಒಂದರಷ್ಟು ಅದೃಷ್ಟದ ಮೇಲೆ ನಿಂತಿತು.

ಆದರೆ ಸದಾ ಭೀಕರ ಕ್ರೌರ್ಯ ತನ್ನನ್ನು ಸುತ್ತುಗಟ್ಟಿತು. ಹಿಂದಿರುಗದೆ ನಾವೆಯಿಂದ ನಾವೆಗೆ ಸಂಚರಿಸುತ್ತಾ, ಕಡೆಗೆ ದಕ್ಷಿಣ ದಿಕ್ಕಿನಲ್ಲಿ ಶೋಧನೆಗಾಗಿ ಹೊರಟ ಹಡಗನ್ನು ಸೇರಿದ್ದ. ಅಲಾಸ್ಕದ ತೀರದಲ್ಲಿ ಇಳಿಯುತಿದ್ದಂತೆ ಕಾಡು ಮನುಷ್ಯರ ತಂಡದ ಪ್ರತಿಭಟನೆಯನ್ನು ಮಾತ್ರ ಎದುರಿಸಬೇಕಾಗಿತ್ತು. ನಿರುತ್ಸಾಹಜನಕವಾದ ಮತ್ತು ಕಡಿದಾದ ಬಂಡೆಗಳಿಂದ ಆವೃತವಾಗಿದ್ದ ದ್ವೀಪಗಳಲ್ಲಿ ಲಂಗರು ಹಾಕಿ ನಿಲ್ಲಿಸಬೇಕಾದರೆ ಅಲ್ಲೋಲ್ಲ ಕಲ್ಲೋಲ್ಲದ ಯುದ್ಧವನ್ನೇ ಮಾಡಿದಂತಾಗಿತ್ತು. ಎರಡು ರೀತಿಯ ಶತ್ರುಗಳನ್ನು ಎದುರಿಸಬೇಕಾಗಿತ್ತು. ಒಂದು ವಿನಾಶವನ್ನು ಸೂಚಿಸುವಂತೆ ಬೀಸುತ್ತಿದ್ದ ಚಂಡಮಾರುತ, ಎರಡನೆಯದು, ತೋಡು ದೋಣಿಗಳಲ್ಲಿ ಕೂಗಾಡುತ್ತ ಬರುತಿದ್ದ ಕಾಡು ನಿವಾಸಿಗಳು; ಅವರ ಮುಖದ ಮೇಲೆ ಯುದ್ಧಾಸಕ್ತಿಯು ಎದ್ದುಕಾಣುತಿತ್ತು. ಸಮುದ್ರದ ಮೇಲೆ ಓಡಾಡುವವರ ಬಳಿಯಲ್ಲಿ ಸಾಮಾನ್ಯವಾಗಿ ಇರುತಿದ್ದ ಸಿಡಿಮದ್ದಿನ ಕ್ರೂರ ಶಕ್ತಿಯನ್ನು ತಿಳಿಯಲು ಅವರು ಬರುತ್ತಿದ್ದರು. ದಕ್ಷಿಣದ ಕರಾವಳಿಯಲ್ಲೇ ಹೆಚ್ಚು ಕಾಲ ಸಂಚಾರಮಾಡಿ, ಕಡೆಗೆ ಪುರಾತನ ನಾಡೆನಿಸಿದ್ದ ಕ್ಯಾಲಿಫೋರ್ನಿಯಕ್ಕೆ ಬಂದಿದ್ದರು. ಇಲ್ಲಿ ಸ್ಪೈನ್ ಸಾಹಸಿಗಳು ಮೆಕ್ಸಿಕೋಗೆ ಹೋಗಲು ಸುಗಮ ದಾರಿಯನ್ನು ನಿರ್ಮಿಸುತ್ತಿದ್ದಾರೆಂಬ ವದಂತಿಯಿತ್ತು. ಈ ಅಂಶದ ಮೇಲೆ ತಾನು ತುಂಬ ನಂಬಿಕೆಯಿಟ್ಟಿದ್ದ. ಏಕೆಂದರೆ ಅವರೊಡನೆ ತಪ್ಪಿಸಿಕೊಂಡು ಹೊರಟರೆ, ಉಳಿದದ್ದು ಸುಲಭ. ಹೆಚ್ಚು ಕಡಿಮೆ ಒಂದು ಅಥವಾ ಎರಡು ವರ್ಷಗಳಲ್ಲಿ ಮೆಕ್ಸಿಕೋ ತಲಪಬಹುದು; ಅಲ್ಲಿಂದ ಹಡಗನ್ನೇರಿ ಮತ್ತೆ ಯೂರೋಪ್ ಸೇರಬಹುದು. ಆದರೆ ಅವರಿಗೆ ಸ್ಪೇಯ್ನ್ ಸಾಹಸಿಗಳ ಭೇಟಿಯಾಗಲಿಲ್ಲ. ಬದಲಾಗಿ ಹಿಂದಿನಂತೆಯೆ ಅನಾಗರಿಕ ಕ್ರೂರಿಗಳ ಅಭೇದ್ಯ ಕೋಟೆಯನ್ನೆದುರಿಸಬೇಕಾಗಿತ್ತು. ಪ್ರಪಂಚದ ಎಲ್ಲೆಗೆ ತಮ್ಮದೇ ಆದ ಮಿತಿ ಕಲ್ಪಿಸಿದ್ದ ಮತ್ತು ಯುದ್ಧಕ್ಕಾಗಿಯೆ ಹುಟ್ಟಿದಂತಿದ್ದ ಆ ನಿವಾಸಿಗರು ಅವರನ್ನು ದಡದ ಹತ್ತಿರವೇ ಸೇರಿಸಲಿಲ್ಲ. ದೋಣಿ ಚೂರಾಯಿತು. ಎಲ್ಲರೂ

ಸತ್ತರು. ನಾಯಕನು ಶೋಧನೆಯನ್ನು ನಿಲ್ಲಿಸಿ ಉತ್ತರಮುಖವಾಗಿ ಹೊರಟನು.

ವರ್ಷಗಳು ಉರುಳಿದವು. ಮಿಕೆಯೋಲವ್‌ಸ್ಕಿ ಎಂಬ ಹೆಂಗಾಮಿ ಹೊರಕೋಟೆ ನಿರ್ಮಾಣವಾದಾಗ, ತಾನು ಟಿಬೆನ್‌ಕಾಫ್ ಕೈಕೆಳಗೆ ಕೆಲಸ ಮಾಡಿದ್ದ. ಕಸ್ಕೊಕ್ವಿಮ್ ದೇಶದಲ್ಲಿ ಎರಡು ವರ್ಷ ತಳ್ಳಿದ್ದ. ಬೇಸಿಗೆಯಲ್ಲಿ ಕಾಟ್‌ಜಿಬ್ಯೂ ಜಲಸಂಧಿಯ ಮೇಲ್ವಿಚಾರಕನಾಗಿದ್ದ. ಅದೇ ಸಮಯದಲ್ಲಿ ಮೂಲನಿವಾಸಿಗಳು ಸಾಮಾನುಗಳ ವಿನಿಮಯಕ್ಕೆ ಗುಂಪಾಗಿ ಸೇರುತ್ತಿದ್ದರು. ಅಲ್ಲಿ ನಾನಾ ದೇಶಗಳಿಂದ ಬಂದ ವಸ್ತುಗಳಿದ್ದವು; ಸೈಬೀರಿಯದ ಕಲೆಗಳುಳ್ಳ ಜಿಂಕೆಯ ಚರ್ಮ, ಡಯಾಮೆಡಿಸದ ದಂತ, ಆರ್ಟಿಕ್ ತೀರದ ಸೀಲ್ ಸಸ್ತನಿ ಪ್ರಾಣಿಗಳ ಚರ್ಮ, ಆಶ್ಚರ್ಯಕರ ಕಲ್ಲು ದೀಪಗಳು ಮುಂತಾದವು. ಆ ವಸ್ತುಗಳು ಒಂದು ತಂಡದಿಂದ ಮತ್ತೊಂದಕ್ಕೆ ಕೈ ತಪ್ಪಿ, ಯಾವಾಗ ಒಂದೆಡೆ ಸೇರಿತು ಎಂದು ಖಚಿತವಾಗಿ ಹೇಳಲು ಯಾರಿಗೂ ಸಾಧ್ಯವಿರಲಿಲ್ಲ. ಒಂದು ಸಾರಿಯಂತೂ ಇಂಗ್ಲೆಡಿನ ಬೇಟೆಯ ಚಾಕು ಸಿಕ್ಕಿತು! ಭೂಗೋಳ ಅರ್ಥ ಮಾಡಿಕೊಳ್ಳಲು ಇದೇ ಸರಿಯಾದ ಶಾಲೆ ಎಂದು ಸುಬೆನ್‌ಕೋವ್ ಭಾವಿಸಿದ್ದ. ಏಕೆಂದರೆ ಇಲ್ಲಿ ನಾರ್ಟನ್ ತೀರ, ಕಿಂಗ್ ದ್ವೀಪ, ಸೇಂಟ್ ಲಾರೆನ್ಸ್ ದ್ವೀಪ, ಪ್ರಿನ್ಸ್ ಆಫ್ ವೇಲ್ಸ್ ಭೂಶಿರ, ಬ್ಯಾರೋ ಮುಂತಾದ ಕಡೆಗಳಿಂದ ಎಸ್ಕಿಮೋ ಜನರನ್ನು ಭೇಟಿಮಾಡಿದ್ದ. ಬೇರೆಯ ಹೆಸರುಳ್ಳ ಇತರ ಪ್ರದೇಶಗಳನ್ನು ಪ್ರಯಾಣದ ಕಾಲಮಾನದಿಂದ ತಿಳಿಯಬೇಕಾಗಿತ್ತು.

ಈ ವ್ಯಾಪಾರಸ್ಥ ಅನಾಗರಿಕರು ಬಹು ವಿಶಾಲ ಪ್ರದೇಶಗಳನ್ನು ದಾಟಿ ಬರುತ್ತಿರಬೇಕು; ಆದ್ದರಿಂದಲೇ ಅವರು ಒಂದೇ ರೀತಿಯ ಸಾಮಗ್ರಿಗಳನ್ನು ಪುನಃ ಪುನಃ ತರುತಿದ್ದರು. ಅವುಗಳನ್ನು ತಾನು ಜಲೆಯೇರಿಸಿ, ಪುನಲಾಯಿಸಿ ಲಂಚ ಕೊಟ್ಟು ವಶಪಡಿಸಿಕೊಂಡಿದ್ದ. ದೂರದೇಶದ ಆಶ್ಚಯಭರಿತರಾದ ಹೊಸ ತಂಡದವರು ಯಾರಾದರೂ ಬಂದರೆ ಅವರನ್ನು ತನ್ನ ಮುಂತೆ ಹಾಜರು ಪಡಿಸುತ್ತಿದ್ದರು. ಕಾಡು ಮೃಗಗಳು, ಶತ್ರುತಂಡಗಳು, ಒಳಹೊಗಲಾಗದ ಅರಣ್ಯಗಳು, ಅದ್ಭುತ ಪರ್ವತ ಶ್ರೇಣಿಗಳು ಮತ್ತು ಅಸಂಖ್ಯಾತ ಊಹಾತೀತವಾದ ಗಂಡಾಂತರಗಳು ಹೇಳಲ್ಪಡುತ್ತಿದ್ದುವು. ಆದರೆ ಒಂದು ವದಂತಿ ಯಾವಾಗಲೂ ಹೊರಗಿನವರಿಂದ ಕೇಳಿಬಂತು;.... ಪೂರ್ವ ದಿಕ್ಕಿನ ತುದಿಯಲ್ಲಿ ಬಿಳೀ ಮನುಷ್ಯರಿದ್ದಾರೆಂದು. ಅವರ ಕಣ್ಣು ನೀಲಿಯಾಗಿಯೂ, ಕೂದಲು ನುಣುಪಾಗಿಯೂ ಇರುವುದಂತೆ. ಯಾವಾಗಲೂ ತುಪ್ಪುಳು ಚರ್ಮಕ್ಕಾಗಿ

ದೆವ್ವದಂತೆ ಹೇರಾಡುತ್ತಾರಂತೆ ...ಇಷ್ಟಾಗಿ ಯಾರೂ ಅವರನ್ನು ನೋಡಿರಲಿಲ್ಲ. ಬೀದಿಯ ಮಾತು ಮಾತ್ರ ಒಬ್ಬರಿಂದೊಬ್ಬರಿಗೆ ಹರಡಿತ್ತು. ಈ ವಿಚಿತ್ರ ಶಾಲೆಯಲ್ಲಿ ಸತ್ಯಾಂಶವನ್ನು ಅಪರಿಚಿತ ಭಾಷೆಯ ವಾದ ವಿವಾದದ ಮೂಲಕ ತಿಳಿಯಲು ಸಾಧ್ಯವಿರಲಿಲ್ಲ. ಜನರ ಮೆದುಳೋ ವಿಚಾರ ಬೆಳಕಿಲ್ಲದ ಕತ್ತಲಕೋಣೆಯಂತಿತ್ತು. ಅವರ ಮಾತಿನಲ್ಲಿ ನಿಜಾಂಶವೂ ಕಲ್ಪನೆಯೂ ಬೆರೆಸಿಹೋಗಿದ್ದವು. ದೂರವನ್ನು ನಿರ್ಧರಿಸುವ ಪ್ರಮಾಣ 'ನಿದ್ರೆ'; ವ್ಯಕ್ತಿ ದಾರ್ಢ್ಯದ ಮೇಲೆ ಅವಲಂಬಿಸಿರುವ ನಿದ್ರೆಯನ್ನು ಪ್ರಮಾಣವೆಂದು ನಂಬುವುದು ಹೇಗೆ?

ಆದರೂ 'ಪೂರ್ವದಲ್ಲಿ ದೊಡ್ಡ ನದಿಯೊಂದಿದೆ; ಅಲ್ಲೇ ಈ ನೀಲಿ ಕಣ್ಣಿನ ಜನರಿದ್ದಾರೆ. ಆ ನದಿಯೇ ಯೂಕಾನ್.' ಎಂಬ ಪಿಸುಮಾತು ನನಗೆ ಧೈರ್ಯ ತಂದಿತು. ರಷ್ಯನರು ಕ್ವಿಕ್‌ಪಾಕ್ ಎನ್ನುವ ದೊಡ್ಡನದಿ ಮಿಕಿಲೊವಸ್ಕಿ ಕೋಟೆಯ ದಕ್ಷಿಣದಲ್ಲಿ ವಿಲೀನವಾಗುತ್ತದೆಂಬ ಸುದ್ದಿ ಜನಜನಿತವಾಗಿತ್ತು. 'ಆ ಕ್ವಿಕ್‌ಪಾಕ್ ನದಿಯೇ ಯೂಕಾನ್' ಎಂಬ ಪಿಸುಮಾತು ಮೆಲ್ಲಗೆ ಹರಡತೊಡಗಿತು.

ಸುಬೆನ್‌ಕೋವ್ ಮಿಕೆಯೊಲವ್‌ಸ್ಕಿಗೆ ಮರಳಿ ಹೊರಟಿದ್ದ. ಕ್ವಿಕ್‌ಪಾಕ್ ಯಾತ್ರೆಗಾಗಿ ಒಂದು ವರ್ಷ ಕಾಲ ಹಾತೊರೆದಿದ್ದ. ಕಡೆಗೊಬ್ಬ ಸಿಕ್ಕಿದ್ದ. ಆತನೇ ಮೆಲಕಾಫ್ ಎಂಬುವನು. ಮಿಶ್ರಜಾತಿಯವನಾದರೂ ರಷ್ಯನರ ಸಂಪರ್ಕದಿಂದ ಹುಟ್ಟಿದವನು. ಕಮ್‌ಚಟಕಾ ದಾಟಿ ಬಂದಿದ್ದ ಕ್ರೂರರೂ ಹಿಂಸ್ರ ಪುರುಷರೂ ಆದ ತಾಡಾಡಿಗಳ ಗುಂಪಿನ ಮುಖಂಡನಾಗಿದ್ದನು. ತಾನು ಅವನ ಕೈಕೆಳಗೆ ನಾವಿಕರ ಸೇನಾಧಿಕಾರಿಯಾದನು. ಕ್ವಿಕ್‌ಪಾಕ್ ನದೀ ಮುಖಜಭೂಮಿ ಬಹು ವಿಶಾಲವಾಗಿತ್ತು. ಅಲ್ಲಿ ದಿಗ್ಭ್ರಮೆ ಹಿಡಿಸುವಂತಿರುವ ಅನೇಕ ತೊಳಸು ಬಳಸು ಹಾದಿಯಲ್ಲಿ ಪ್ರಯಾಣಮಾಡಿದ್ದರು. ಉತ್ತರ ತೀರದ ಸಣ್ಣ ಬೆಟ್ಟಗಳನ್ನು ಹತ್ತಿದ್ದರು. ತೋಡುದೋಣಿಗಳ ಪಕ್ಕದ ಮೇಲಂಚಿನಲ್ಲಿ ಯುದ್ಧಸಾಮಗ್ರಿಗಳನ್ನು ತುರುಕಿದ್ದರು. ಎರಡರಿಂದ ಹತ್ತುಮೈಲಿಗಳಷ್ಟು ಅಗಲವಿದ್ದ ನದಿಯ ನಾಲೆ ತುಂಬ ಆಳವಾಗಿತ್ತು, ಸುಮಾರು ಐನೂರು ಮೈಲಿಗಳವರೆಗೆ ಅವರು ದೊಡ್ಡ ಪ್ರವಾಹಗಳನ್ನು ದಾಟಿದರು. ಮೆಲಕಾಫ್ ನ್ಯಲಾಟೋ ಪ್ರದೇಶದಲ್ಲಿ ವ್ಯಾಪಾರಕ್ಕಾಗಿ ಕೋಟೆಯೊಂದನ್ನು ಕಟ್ಟಲು ನಿಶ್ಚಯಿಸಿದನು. ಸುಬೆನ್‌ಕೊವ್ ಇನ್ನೂ ಮುಂದೆ ಹೋಗೋಣವೆಂದು ಪ್ರೇರೇಪಿಸಿದನು. ಆದರೆ ಮರುಕ್ಷಣ ನ್ಯಲಾಟೋದಲ್ಲೇ ನಿಲ್ಲಲು ಒಪ್ಪಿಕೊಂಡನು. ಬಹು ದಿನ ಕಾಡುವ ಚಳಿಗಾಲ ಬರುತ್ತಿದ್ದುದರಿಂದ, ಒಂದು ನೆಲೆಯಲ್ಲಿ ನಿಲ್ಲುವುದು ಉತ್ತಮವೆಂದು

ಭಾವಿಸಿದನು. ಬೇಸಿಗೆಯಲ್ಲಿ ಮಂಜು ಕಡಿಮೆಯಾಗುತ್ತದೆ; ಆಗ ಕ್ವಿಕ್‌ಪಾಕ್ ನದಿಯ ಮೇಲೆ ಯಾರಿಗೂ ತಿಳಿಯದಂತೆ ಪ್ರಯಾಣ ಬೆಳೆಸಿ, ಹಡ್ಸನ್ ಕೊಲ್ಲಿಯ ಪಾಳೆಯಗಳಿಗೆ ಸೇರಲು ಪ್ರಯತ್ನಪಡಬಹುದು! ಕ್ವಿಕ್‌ಪಾಕ್ ನದಿಯೇ ಯೂಕಾನ್ ಎಂಬ ಪಿಸುಮಾತನ್ನು ಮೆಲಿಕಾಫ್ ಕೇಳಿರಲಿಲ್ಲ. ತಾನು ಕೂಡ ಅವನಿಗೆ ಹೇಳಲಿಲ್ಲ!

ವ್ಯಾಪಾರದ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದರು. ಬಲಾತ್ಕಾರದಿಂದ ಕೆಲಸಮಾಡಬೇಕಾಯಿತು. ನ್ಯುಲಾಟೋ ಇಂಡಿಯನರ ನಿಟ್ಟುಸಿರನ್ನೂ ನರಳಾಟವನ್ನೂ ಪ್ರತಿಬಿಂಬಿಸುವಂತೆ ಒಂದರಮೇಲೊಂದು ಮರದ ದಿಮ್ಮಿಗಳು ಏರಿಸಲ್ಪಟ್ಟವು. ಕೆಲವೊಮ್ಮೆ ಚಾಟಿಯ ಏಟು ಬೀಳುತಿತ್ತು. ಆ ಕಾರ್ಯವನ್ನು ಕೈಗೊಂಡವರು ಕಡಲುಗಳ್ಳರೇ! ಕೆಲವು ಇಂಡಿಯನರು ಓಡಿಹೋದರು. ಕೈಗೆ ಸಿಕ್ಕಿಬಿದ್ದಾಗ ಅವರ ಕೈಕಾಲುಗಳನ್ನು ಕಟ್ಟಿ ಕೋಟೆಯ ಮುಂದೆ ಬೀಳಿಸುತ್ತಿದ್ದರು. ಹಡಗಿನ ಹಗ್ಗಗಳಿಂದ ಬಂಧಿಸುತ್ತಿದ್ದರು. ಮತ್ತು ಕಶಾ ಪ್ರಹಾರದ ಪ್ರಭಾವವನ್ನು ಚೆನ್ನಾಗಿ ಅನುಭವಿಸುತಿದ್ದರು. ಕೋಟೆಯ ನಿರ್ಮಾಣಕ್ಕಿಂತ ಮುಂಚೆ ಹಿಮ ವಾತಾವರಣ ಕಡಿಮೆಯಾಯಿತು. ಇನ್ನು ತುಪ್ಪುಳು ಚರ್ಮಕ್ಕಾಗಿ ಹೋರಾಡುವ ಕಾಲ. ಇಂಡಿಯನರು ತುಂಬ ಕಾಣಿಕೆಯನ್ನು ನೀಡಬೇಕೆಂದು ಘೋಷಿಸಲಾಯಿತು. ಒದೆತ ಕಶಾಪ್ರಹಾರ ಜೋರಾಗಿ ಮುಂದುವರಿಯಿತು. ಹೆಂಗಸರು ಮಕ್ಕಳು ಫರ್‌ಕಳ್ಳರ ಬಂದಿಗಳಾದರು.

ನಿಜ; ರಕ್ತದಿಂದ ಅಂಕುರಾರ್ಪಣವಾಯಿತು. ಈಗ ಅದರ ಪ್ರತಿಫಲವನ್ನು ಅನುಭವಿಸುವ ಸಮಯ. ವ್ಯಾಪಾರ ಕೋಟೆ ಬಿದ್ದುಹೋಗಿತ್ತು. ಸುಟ್ಟು ಹೋಗುತ್ತಿರುವ ಅದರ ಬೆಳಕಲ್ಲಿ ಅರ್ಧದಷ್ಟು ಫರ್ ಕಳ್ಳರು ಕೊಲೆಗೀಡಾದರು. ಉಳಿದವರು ನರಳಾಟಕ್ಕೆ ಸಿಕ್ಕಿದರು. ಕಡೆಗೆ ಸುಬೆನ್‌ಕೊವ್ ಮಾತ್ರ ಉಳಿದಿದ್ದ. ಅಲ್ಲ; ಹಿಮದಲ್ಲಿ ಬಿದ್ದು ಹಲುಬುತ್ತಿರುವ ಆ ದೈತ್ಯಾಕಾರದ ಬಿಗ್ ಇವಾನ್‌ನನ್ನೂ ಸೇರಿಸಿದರೆ ಇಬ್ಬರು ಉಳಿದ ಹಾಗಾಯಿತು.—

* * * * *

ಯಕಾಗ ತನ್ನ ಕಡೆ ತಿರಸ್ಕಾರಭಾವದಿಂದ ನೋಡಿ ಹಲ್ಲುಕಿರಿಯುತ್ತಿದ್ದಾನೆಂದು ಸುಬೆನ್‌ಕೊಗೆ ತಿಳಿಯಿತು. ಸುಬೆನ್‌ಕೊವ್‌ಗೆ ಯಕಾಗನನ್ನು ಚಾಟಿಯಿಂದ ಹೊಡೆದದ್ದು ಜ್ಞಾಪಕವಾಯಿತು. ಆ ಗುರುತು ಯಕಾಗನ ಮುಖದ ಮೇಲೆ ಇನ್ನೂ ಇದ್ದಿತು. ಅವನು ಯಕಾಗನನ್ನು ಬಯ್ಯುವ ಪ್ರಸಂಗವಿಲ್ಲ. ಆದರೆ ಯಕಾಗ ಆ ಸೇಡನ್ನು ತೀರಿಸಿಕೊಳ್ಳಲು ಯಾವ ಕ್ರಮ ಕೈಗೊಳ್ಳು

ವನೋ ಎಂಬ ಯೋಚನೆ ಬೇಸರ ತರುತ್ತಿತ್ತು.

ಎಲ್ಲರಿಗಿಂತಲೂ ಮುಖ್ಯಸ್ಥನಾಗಿದ್ದ ಮಕಾಮುಕನನ್ನು ಕಂಡು ಕ್ಷಮೆ ಕೇಳಲೇ ಎಂದು ಸುಬೆನ್‌ಕೊವ್ ಯೋಚಿಸಿದನು. ಆದರೆ ಅದು ಪ್ರಯೋಜನ ವಿಲ್ಲವೆಂದು ತನ್ನಲ್ಲಿ ತಾನೇ ತೀರ್ಮಾನಿಸಿದನು. ಹೋಗಲಿ; ಬೇಡಿಗಳನ್ನು ಕಿತ್ತೊಗೆದು ಹೋರಾಡುತ್ತ ಸಾಯೋಣವೆಂದರೆ, ಈ ಪಟ್ಟಿಗಳು ತನಗಿಂತಲೂ ಶಕ್ತಿಯುತವಾಗಿವೆ. ಹೀಗೆಯೆ ಎಣಿಕೆ ಹಾಕುತ್ತ ಸುಬೆನ್‌ಕೊವ್ ಮತ್ತೊಂದು ರೀತಿಯಲ್ಲಿ ಯೋಚಿಸಿದನು! ಮಕಾಮುಕನ ಪತ್ರಕ್ಕೆ ರುಜು ಹಾಕಿದನು. ವಿಲಕ್ಷಣವಾದ ಆ ಜನರ ಭಾಷೆಯನ್ನು ತಿಳಿದ ದ್ವಿಭಾಷಿಯೊಬ್ಬನನ್ನು ಕರೆ ತರಬೇಕೆಂದು ಕೇಳಿಕೊಂಡನು.

"ಓ, ಮಕಾಮುಕ್, ನಾನು ಸಾವಿಗೆ ಗಮನ ಕೊಡುವವನಲ್ಲ. ದೊಡ್ಡ ವ್ಯಕ್ತಿಯಾದ ನನಗೆ ಸಾವೆಂದರೆ ತಿಳಿಗೇಡಿತನದ ಮಾತು. ಸತ್ಯವಾಗಿಯೂ ಸಾಯುವುದಿಲ್ಲ. ಇತರರಂತೆ ನಾನು ಕೇವಲ ಮಾಂಸದ ಮುದ್ದೆಯಲ್ಲ." ಎಂದು ಸುಬೆನ್‌ಕೊವ್ ಎದುರಿಗೆ ನರಳಾಡುತಿದ್ದ ಬಿಗ್ ಇವಾನ್‌ನನ್ನು ತುಚ್ಛೀ ಕರಿಸುವಂತೆ ಕಾಲ್ಬೆರಳಿನಿಂದ ತಿವಿದನು.

"ನಾನು ಸಾಯುವಷ್ಟು ದಡ್ಡನಲ್ಲ. ಇಲ್ಲಿ ನೋಡು, ನನ್ನಲ್ಲಿ ಪ್ರಖ್ಯಾತ ಔಷಧಿಯಿದೆ. ಈ ಔಷಧಿ ನನಗೊಬ್ಬನಿಗೆ ಮಾತ್ರ ಗೊತ್ತು. ನಾನು ಸಾಯದೆ ಇರುವುದರಿಂದ, ಈ ಔಷಧಿಯನ್ನು ನಿನಗೆ ವಿನಿಮಯ ಮಾಡಿಕೊಡುತ್ತೇನೆ."

"ಈ ಔಷಧಿ ಯಾವುದು?" ಎಂದು ಮಕಾಮುಕ್ ಆರ್ಭಟಿಸಿದನು.

"ಇದೊಂದು ಆಶ್ಚರ್ಯಕರವಾದುದು."

ಯಾವುದೋ ಗುಟ್ಟನ್ನು ಬಿಟ್ಟುಕೊಡುವವನಂತೆ ಸುಬೆನ್‌ಕೊವ್ ತನ್ನಲ್ಲಿ ತಾನೇ ಚರ್ಚಿಸತೊಡಗಿದನು.

"ಹೇಳುತ್ತೇನೆ ಕೇಳು. ನನ್ನ ಔಷಧಿಯ ಸ್ವಲ್ಪ ಭಾಗವನ್ನು ಚರ್ಮದ ಮೇಲೆ ತಿಕ್ಕಿದರೆ, ಆ ಚರ್ಮ ಕಲ್ಲಿನಂತೆ ಅಥವಾ ಕಬ್ಬಿಣದಂತೆ ಗಟ್ಟಿಯಾಗು ತ್ತದೆ. ಆಗ ಯಾವ ಶಸ್ತ್ರವೂ ಚರ್ಮವನ್ನು ಸಿಗಿಯಲಾರದು. ದೊಣ್ಣೆಯ ಅತ್ಯಂತ ಜೋರಾದ ಹೊಡೆತವೂ ಯಾವ ಪರಿಣಾಮವನ್ನೂ ಮಾಡಲಾರದು. ಮೂಳೆಯಂತಹ ಚಾಕು ಮಣ್ಣಿನ ಮುದ್ದೆಯಂತಾಗುತ್ತದೆ. ನಿಮ್ಮಿಂದ ನಾವು ಪಡೆದ ಕಬ್ಬಿಣದ ಕತ್ತಿಗಳಿವೆಯಲ್ಲ, ಅವುಗಳಿಂದ ಚುಚ್ಚಿದರೆ ಕತ್ತಿಯ ಬಾಯಿ ಮೊಂಡಾಗುತ್ತದೆ. ಇಂತಹ ಔಷಧಿಯ ಗುಟ್ಟನ್ನು ಹೇಳಿದರೆ ನೀನು ನನಗೆ ಏನನ್ನು ಕೊಡುತ್ತಿ?"

"ನಿನ್ನ ಪ್ರಾಣವನ್ನು ಉಳಿಸುತ್ತೇನೆ." ಎಂದು ಮಕಾಮುಕ್ ದ್ವಿಭಾಷಿಯ ಮೂಲಕ ಉತ್ತರಕೊಟ್ಟನು.

ಸುಬೆನ್‌ಕೊವ್ ತಿರಸ್ಕಾರ ಭಾವದಿಂದ ನಕ್ಕನು.

"ಮತ್ತು ನೀನು ಸಾಯುವತನಕ ನನ್ನ ಮನೆಯಲ್ಲಿ ಸೇವಕನಾಗಿರ ಬೇಕು."

ಪೋಲೆಂಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಸುಬೆನ್‌ಕೊವ್ ಮತ್ತಷ್ಟು ತಿರಸ್ಕಾರದಿಂದ ನಕ್ಕನು.

ಅವನು ಹೇಳಿದನು, "ಮೊದಲು ನನ್ನ ಕೈ ಕಾಲುಗಳ ಕಟ್ಟನ್ನು ಬಿಚ್ಚಿರಿ. ಆಮೇಲೆ ಮಾತನಾಡೋಣ."

ಮುಖಂಡನ ಆಜ್ಞೆಯಂತೆ ಬೇಡಿಗಳು ಸಡಿಲಗೊಂಡವು. ಆಗ ಸುಬೆನ್ ಕೋವ್ ಹೆದರದೆ ಸಿಗರೇಟನ್ನು ಹಚ್ಚಿ ಸೇದತೊಡಗಿದನು.

"ಇದೆಲ್ಲವೂ ಹುಚ್ಚು ಹರಟೆ. ಅಂಥ ಔಷಧಿಯೇ ಇಲ್ಲ; ಇರಲಾರದು. ಕತ್ತರಿಸುವ ಹರಿತವಾದ ಖಡ್ಗದಲ್ಲಿ ಇರುವಷ್ಟು ಶಕ್ತಿ ಯಾವ ಔಷಧಿಯಲ್ಲೂ ಇಲ್ಲ" ಎಂದನು ಮಕಾಮುಕ್.

ಮಕಾಮುಕ್‌ನಂಥ ಮುಖಂಡ ಯಾವುದರಲ್ಲೂ ನಂಬಿಕೆಯಿಲ್ಲದವನು; ಆದರೂ ಅವನ ಮನಸ್ಸು ಡೋಲಾಯಮಾನವಾಗಿತ್ತು. ಫರ್ ಕಳ್ಳರು ಮಾಡುತ್ತಿದ್ದ ಬೇಕಾದಷ್ಟು ಇಂದ್ರಜಾಲ ವಿದ್ಯೆಯನ್ನು ನೋಡಿದ್ದನು. ಆದುದರಿಂದ ಇದೆಲ್ಲವನ್ನೂ ಸಂಪೂರ್ಣ ನಂಬದಿರಲು ಸಾಧ್ಯವಾಗಲಿಲ್ಲ.

"ನಿನ್ನ ಜೀವವನ್ನು ಉಳಿಸುತ್ತೇನೆ. ಮಾತ್ರವಲ್ಲ, ನೀನು ನನ್ನ ಸೇವಕನಾಗಿರಬೇಕೆಂಬ ಶಾಸನವನ್ನೂ ತೆಗೆದುಬಿಡುತ್ತೇನೆ" ಎಂದು ಮಕಾಮುಕ್ ಘೋಷಿಸಿದನು.

"ಇದೊಂದೂ ಸಾಲದು."

ನರಿಯ ಚರ್ಮವನ್ನು ವ್ಯಾಪಾರಮಾಡುವ ರೀತಿಯಲ್ಲಿ ಸುಬೆನ್‌ಕೊವ್ ನಿಧಾನವಾಗಿ ತನ್ನ ನಾಟಕವನ್ನಾಡಿದನು.

"ಮತ್ತೆ ಹೇಳುತ್ತೇನೆ. ನನ್ನ ಔಷಧಿ ಅಸಾಮಾನ್ಯವಾದುದು. ಅದು ಅನೇಕ ವೇಳೆ ನನ್ನ ಜೀವವನ್ನು ಉಳಿಸಿದೆ. ಇರಲಿ. ಈಗ ನನಗೆ ಬೇಕಾದುದು ಇಷ್ಟು; ನಾಯಿಗಳು ಎಳೆದುಕೊಂಡು ಹೋಗುವ ಸ್ಲೆಜ್ ಗಾಡಿಯೊಂದು, ಜೊತೆಗೆ ಆರು ಜನ ಬೇಟೆಗಾರರು ನನ್ನೊಡನೆ ನದಿ ದಾಟಿ ಬರಬೇಕು. ಏಕೆಂದರೆ ಅವರಿಂದ ಮಿಕೆಯೊಲವ್‌ಸ್ಕಿ ಕೋಟೆಯಲ್ಲಿ ನಾನು

ಒಂದು ದಿನದ ಮಟ್ಟಿಗಾದರೂ ಸುರಕ್ಷಿತನಾಗಿ ನಿದ್ರಿಸುತ್ತಿರಬೇಕು...."

ಆದರೆ ಮಕಾಮುಕ್ ಒಪ್ಪದೆ, "ನೀನು ಇಲ್ಲೇ ಇದ್ದುಕೊಂಡು ನಮಗೆಲ್ಲ ಆ ಅದ್ಭುತವಾದ ಇಂದ್ರಜಾಲ ವಿದ್ಯೆಯನ್ನು ಹೇಳಿಕೊಡು" ಎಂದನು.

ಸುಬೆನ್‌ಕೊವ್ ತನ್ನ ಭುಜಗಳನ್ನು ಕುಗ್ಗಿಸುತ್ತಾ ಮೌನವಾಗಿದ್ದನು. ಸಿಗರೇಟು ಹೊಗೆ ಬಿಡುತ್ತಾ, ಬಿಗ್ ಇವಾನನ ಸ್ಥಿತಿ ಎಲ್ಲಿಯ ತನಕ ಬಂದಿರಬಹುದು ಎಂದು ಕುತೂಹಲದಿಂದ ನೋಡಿದನು.

ಮಕಾಮುಕ್ ಇದ್ದಕ್ಕಿದ್ದಂತೆ ಸುಬೆನ್‌ಕೋವಿನ ಕತ್ತಿನ ಕಡೆ ತೋರಿಸುತ್ತಾ, "ಗಾಯದ ಕಲೆ!" ಎಂದು ಕೂಗಿದನು. ನಿಜ; ಅಲ್ಲಿ ನೀಲಿಗಟ್ಟಿದ ಗುರುತು ಎದ್ದು ಕಾಣುತ್ತಿತ್ತು. ಕಮ್‌ಚಟಕದ ಕಾದಾಟದಲ್ಲಿ ಸುಬೆನ್‌ಕೊವ್ ಚಾಕುವಿನಿಂದ ಏಟು ತಿಂದಿದ್ದನು.

ಮಕಾಮುಕ್ ಮತ್ತೆ ಹೇಳಿದನು—"ಔಷಧಿ ಪ್ರಯೋಜನವಿಲ್ಲ. ಔಷಧಿಗಿಂತ ಕತ್ತಿಯ ಹರಿತವಾದ ಧಾರೆಯೇ ಶಕ್ತಿಯುತವಾದುದು."

ಸುಬೆನ್‌ಕೊವ್. ತಕ್ಕ ಸಮರ್ಥನೆ ಕೊಡಬೇಕಾದ ಸಂದಿಗ್ಧ ಪರಿಸ್ಥಿತಿ ಒದಗಿತು.

"ನನ್ನೊಡನೆ ಹೊಡೆದಾಡಿದವನು ಅತ್ಯಂತ ಬಲಶಾಲಿ....ಆತ ನಿನಗಿಂತಲೂ, ನಿಮ್ಮಲ್ಲಿರುವ ಅತಿ ಪ್ರಬಲ ಬೇಟೆಗಾರನಿಗಿಂತಲೂ ಶಕ್ತನಾಗಿದ್ದನು...."

ಪುನಃ ತನ್ನ ಪಾದರಕ್ಷೆಯಿಂದ ಬಿಗ್ ಇವಾನ್‌ನನ್ನು ಮುಟ್ಟಿದನು. ಜ್ಞಾನವಿಲ್ಲದ ಇವಾನನ ಸ್ಥಿತಿಯೋ ಹೇಳತೀರದು. ಅದೊಂದು ಘೋರ ದೃಶ್ಯ. ಆದರೂ ಅಂಗಚ್ಛೇದವಾದ ಶರೀರದಲ್ಲಿ ನರಳಾಡುತಿದ್ದ ಜೀವ ಬಿಟ್ಟು ಹೋಗುವ ಇಷ್ಟವಿಲ್ಲದೆ ಅಂಟಿಕೊಂಡಿತ್ತು.

"ಅದೂ ಅಲ್ಲದೆ ಅಲ್ಲಿ ತಯಾರಿಸಿದ ಔಷಧಿಯಲ್ಲಿ ಹೆಚ್ಚು ಸತ್ವವಿರಲಿಲ್ಲ. ಏಕೆಂದರೆ ಆ ಸ್ಥಳದಲ್ಲಿ ನಮಗೆ ಬೇಕಾಗಿದ್ದ ಬೇರೀ ಜಾತಿಯ ಕಾಯಿಗಳು ಸಿಗುತ್ತಿರಲಿಲ್ಲ. ಇಲ್ಲಾದರೋ ಅವು ಬಹಳವಾಗಿರುವುದನ್ನು ನೋಡಿದ್ದೇನೆ, ಆದ್ದರಿಂದ ಇಲ್ಲಿ ತಯಾರಾಗುವ ಔಷಧಿ ಪ್ರಭಾವಯುತವಾಗುವುದರಲ್ಲಿ ಅನುಮಾನವಿಲ್ಲ."

"ಆಗಲಿ, ನೀನು ನದಿಯ ಬಳಿ ಹೋಗಲು ಅವಕಾಶಕೊಡುತ್ತೇನೆ. ಹಾಗೆಯೆ ಸ್ಲೆಜ್ ಗಾಡಿ ಮತ್ತು ನಾಯಿಗಳು ಜೊತೆಗೆ ಬರುತ್ತವೆ. ಆರು ಜನ ಬೇಟೆಗಾರರು ನಿನ್ನ ರಕ್ಷಣೆಗಾಗಿ ಇರುತ್ತಾರೆ...." ಎಂದು ಮಕಾಮುಕ್ ಅಪ್ಪಣೆ ಕೊಟ್ಟನು.

ತಕ್ಷಣ ಪ್ರತಿಭಟನೆಯನ್ನು ತೋರಿಸುವಂಥ ಪ್ರತ್ಯುತ್ತರ ಹೊರಬಂತು— "ನೀನು ಬಹಳ ನಿಧಾನಿ. ನನ್ನ ಷರತ್ತುಗಳಿಗೆ ತಕ್ಷಣ ಒಪ್ಪದಿದ್ದ ಕಾರಣ, ನೀನು ಔಷಧಿಯ ಬಗ್ಗೆ ಅಪರಾಧವನ್ನು ಮಾಡಿದಂತಾಯಿತು. ಆದುದರಿಂದ ಇನ್ನು ಹೆಚ್ಚಿಗೆ ಕೊಡಬೇಕಾಗುತ್ತದೆ. ನೂರು ಬೀವರ್ ಪ್ರಾಣಿಯ ಚರ್ಮಗಳು" (ಮಕಾಮುಕ್ ಮುಖ ವಿಕಾರ ಮಾಡಿದನು) "ಒಂದು ನೂರು ಪೌಂಡಿನಷ್ಟು ಒಣ ಮೀನುಗಳು" (ಮೀನುಗಳು ಹೆಚ್ಚಾಗಿಯೂ ಅಲ್ಪ ಬೆಲೆಗೂ ಸಿಕ್ಕುತಿದ್ದುದರಿಂದ ಮಕಾಮುಕ್ ಒಪ್ಪಿಗೆ ಸೂಚಿಸುವಂತೆ ತಲೆ ತೂಗಿದನು.)" ಎರಡು ಸ್ಲೆಜ್ ಗಾಡಿಗಳು; ಒಂದು ನನಗೂ, ಇನ್ನೊಂದು ತುಪ್ಪಳು ಚರ್ಮ ಮೀನುಗಳನ್ನು ತುಂಬುವುದಕ್ಕೆ ಬೇಕು. ಮತ್ತೆ ನನ್ನ ಬಂದೂಕವನ್ನು ವಾಪಸು ಕೊಡಬೇಕು. ಇಷ್ಟು ಬೆಲೆಯನ್ನು ನೀನು ಒಪ್ಪದಿದ್ದರೆ, ಸ್ವಲ್ಪ ಹೊತ್ತಿನಲ್ಲೇ ಇನ್ನೂ ಏರುವುದು."

ಯಕಾಗ ಮುಖಂಡನ ಕಿವಿಯಲ್ಲಿ ಗುಟ್ಟಾಗಿ ಏನನ್ನೋ ಹೇಳಿದನು.

"ಆದರೆ ನಿನ್ನದು ನಿಜವಾದ ಔಷಧಿಯೆಂದು ನಾನು ಹೇಗೆ ನಂಬುವುದು?" ಎಂದು ಮಕಾಮುಕ್ ಕೇಳಿದನು.

"ಬಹಳ ಸುಲಭವಾಗಿ ತಿಳಿಯಬಹುದು. ಮೊದಲು ನಾನು ಕಾಡಿಗೆ ಹೋಗಬೇಕು—" ಎಂದನು ಸುಬೆನ್‌ಕೊವ್.

ಪುನಃ ಯಕಾಗ ಮಕಾಮುಕನೊಂದಿಗೆ ಪಿಸುಮಾತನಾಡಿದನು. ಆಗ ಮಕಾಮುಕ್ ಸಂಶಯಗೊಂಡು ಅಸಮ್ಮತಿಯನ್ನು ಸೂಚಿಸಿದನು.

ಸುಬೆನ್‌ಕೊವ್ ಮತ್ತೆ ಪ್ರಾರಂಭಿಸಿದನು–"ನನ್ನೊಡನೆ ಇಪ್ಪತ್ತು ಬೇಟೆಗಾರರನ್ನು ಕಳುಹಿಸಿದರೂ ಚಿಂತೆಯಿಲ್ಲ. ಮುಖ್ಯವಾಗಿ, ಔಷಧಿಗೆ ಬೇಕಾಗುವ ಕಾಯಿಗಳನ್ನೂ ಕಂದಮೂಲಗಳನ್ನೂ ನಾನು ತರಲೇಬೇಕು. ಆಮೇಲೆ ನೀವು ಮಾಡುವ ಏರ್ಪಾಟಿನ ತನಕ ಕಾಯುತ್ತೇನೆ. ಎರಡು ಸ್ಲೆಜ್‌ಗಾಡಿಗಳನ್ನು ತನ್ನಿ. ಅದರ ಮೇಲೆ ಮೀನು, ಬೀವರ್ ಚರ್ಮ, ಬಂದೂಕಗಳನ್ನು ತುಂಬಿರಿ. ನನ್ನೊಡನೆ ಬರುವ ಆರು ಜನ ಬೇಟೆಗಾರರನ್ನು ಸಿದ್ಧಪಡಿಸಿರಿ. ಆಗ ಔಷಧಿಯನ್ನು ಕತ್ತಿನ ಮೇಲೆ ತಿಕ್ಕಿಕೊಳ್ಳುತ್ತೇನೆ. ಮತ್ತೆ ಬಗ್ಗಿ ನನ್ನ ಕತ್ತನ್ನು ಮರದ ಕೊರಡಿನ ಮೇಲೆ ಇಡುತ್ತೇನೆ. ಆ ಸಮಯದಲ್ಲಿ ನಿಮ್ಮಲ್ಲಿರುವ ಅತಿ ಪ್ರಬಲನಾದ ಬೇಟೆಗಾರ ಕೊಡಲಿಯನ್ನು ತೆಗೆದುಕೊಂಡು ನನ್ನ ಕತ್ತಿನ ಮೇಲೆ ಮೂರು ಬಾರಿ ಹೊಡೆಯಲಿ. ಏಕೆ? ನೀನೇ ಮೂರು ಬಾರಿ ಕೊಡಲಿ ಪೆಟ್ಟನ್ನು ಕೊಡಬಹುದು!"

ಮಕಾಮುಕನು ತೆರದ ಬಾಯನ್ನು ಮುಚ್ಚದೆ ನಿಂತಿದ್ದನು. ಫರ್ ಕಳ್ಳರ

ಇತ್ತೀಚಿನ ಆಶ್ಚರ್ಯಕರ ಯಕ್ಷಿಣಿ ವಿದ್ಯೆಯಲ್ಲಿ ಅವನಿಗೆ ಆಸಕ್ತಿ ಹುಟ್ಟಿತು.

"ಮೊದಲು ಗಮನಿಸಬೇಕಾದ ಅಂಶವೊಂದಿದೆ. ಪ್ರತಿ ಪ್ರಹಾರವಾದ ವಾದ ಮೇಲೂ ನಾನು ಹೊಸ ಔಷಧಿಯನ್ನು ಲೇಪಿಸಿಕೊಳ್ಳಬೇಕು. ಕೊಡಲಿ ಭಾರವಾಗಿಯೂ ಹರಿತವಾಗಿಯೂ ಇರುವುದರಿಂದ, ನಾನು ತಪ್ಪಿಬೀಳ ಬಾರದು.'' ಎಂದು ಸೂಕ್ಷ್ಮಮತಿಯಾದ ಪೋಲೆಂಡಿನವನು ಆತುರದಿಂದ ಹೇಳಿದನು.

ಒಪ್ಪಿಗೆಯನ್ನು ಸೂಚಿಸುವ ಅಷ್ಟೇ ಆತುರದಲ್ಲಿ ಮಕಾಮುಕ್ ಕೂಗುತ್ತಾ, "ನಿನ್ನ ಕೇಳಿಕೆಗಳೆಲ್ಲವನ್ನು ಒಪ್ಪಿದ್ದೇನೆ. ಇನ್ನು ನಿನ್ನ ಔಷಧಿ ತಯಾರಿಸಲು ಪ್ರಾರಂಭಿಸು" ಎಂದನು.

ಸುಬೆನ್‌ಕೊವ್ ತನ್ನ ಉತ್ಸಾಹವನ್ನು ಹೊರಗೆ ತೋರ್ಪಡಿಸಲಿಲ್ಲ. ಅವನು ಅತ್ಯಂತ ಅಪಾಯಕರವಾದ ಪಂದ್ಯವನ್ನು ಆಡುತಿದ್ದನು. ಬಿಗಿ ತಪ್ಪ ದಂತೆ ವರ್ತಿಸಬೇಕಾಗಿತ್ತು. ಆದ್ದರಿಂದಲೇ ಸೊಕ್ಕಿನಿಂದ ಮಾತನಾಡಿದನು.

"ನೀನು ತುಂಬ ನಿಧಾನಿ. ನನ್ನ ಔಷಧಿಯ ಘನತೆಗೆ ಕುಂದುಂಟಾ ಯಿತು. ಇದನ್ನು ಸರಿಪಡಿಸಲು ನೀನು ನಿನ್ನ ಮಗಳನ್ನು ನನಗೆ ಒಪ್ಪಿಸ ಬೇಕು" ಎಂದು ಹತ್ತಿರದಲ್ಲಿದ್ದ ಹುಡುಗಿಯ ಕಡೆ ಕೈ ತೋರಿಸಿದನು. ಮಕಾ ಮುಕನ ಮಗಳು ನೋಟಕ್ಕೆ ಹಿತಕರವಲ್ಲದ ಪ್ರಾಣಿಯೇ ಸರಿ. ಅವಳದು ವಕ್ರದೃಷ್ಟಿ. ತೋಳನ ಕೋರೆ ಹಲ್ಲಿನಂತಹ ಒಂದು ಹಲ್ಲು ಎದ್ದು ಕಾಣು ತಿತ್ತು!

ಮಕಾಮುಕನು ಕೋಪಗೊಂಡನು. ಆದರೆ ಸುಬೆನ್‌ಕೊವ್ ಶಾಂತ ನಾಗಿದ್ದನು. ಮತ್ತೊಂದು ಸಿಗರೇಟು ಹಚ್ಚಿದನು.

ಆ ನಿಶ್ಶಬ್ದ ವಾತಾವರಣದಲ್ಲಿ ಮಂಕು ಕವಿದ ನಾರ್ತ್ ಲ್ಯಾಂಡ್ ಅವನ ದೃಷ್ಟಿಯಿಂದ ಮರೆಯಾಯಿತು. ಇನ್ನೊಂದು ಬಾರಿ ತನ್ನ ಹುಟ್ಟಿದ ಸ್ಥಳ ಮತ್ತು ಫ್ರಾನ್ಸ್ ಕಣ್ಮುಂದೆ ನಿಂತಂತಾಯಿತು. ತೋಳನ ದಾಡೆಯುಳ್ಳ ಹುಡುಗಿಯನ್ನು ನೋಡಿದಾಗ ಮತ್ತೊಂದು ಹುಡುಗಿಯ ಜ್ಞಾಪಕವಾಯಿತು. ಆದರೆ ಇವರಿಬ್ಬರಿಗೂ ಯಾವ ಹೋಲಿಕೆಯೂ ಇಲ್ಲ. ತಾನು ಯುವಕನಾಗಿ ಪ್ಯಾರಿಸ್ಸಿಗೆ ಬಂದಿದ್ದಾಗ ಒಬ್ಬಳ ಪರಿಚಯವಾಗಿತ್ತು, ಅವಳು ಗಾಯಕಿಯೂ, ನರ್ತಕಿಯೂ ಅಗಿದ್ದಳು........

"ಹುಡುಗಿಯನ್ನು ಕೇಳುವುದರಲ್ಲಿ ಅರ್ಥವೇನು?" ಎಂದು ಮಕಾ ಮುಕ್ ಕೇಳಿದನು.

"ಅವಳೊಡನೆ ನದಿ ದಾಟಿ ಹೋಗುತ್ತೇನೆ. ನಿನ್ನ ಮಗಳು ನನ್ನ ಉತ್ತಮ ಹೆಂಡತಿಯಾಗಬಲ್ಲಳು. ನನ್ನ ಔಷಧಿಯ ಘನತೆಗೆ ತಕ್ಕಂತೆ ನಿಮ್ಮ ವಂಶದ ಸಂಬಂಧ ಬೆಳೆಸುವುದು ಗೌರವ ತರತಕ್ಕುದು." ಎನ್ನುತ್ತಾ ಹುಡುಗಿಯ ಕಡೆ ಶೋಧಕ ದೃಷ್ಟಿಯನ್ನು ಬೀರಿದನು.

ಪುನಃ ಆ ಗಾಯಕಿ ನರ್ತಕಿಯನ್ನು ನೆನಪಿಗೆ ತಂದುಕೊಂಡನು. ಅವಳು ಹೇಳಿಕೊಟ್ಟ ಹಾಡನ್ನು ಅಸ್ಪಷ್ಟವಾಗಿ ಹಾಡಿದನು. ಯಾರದೋ ಜೀವನದ ಘಟನೆಗಳಂತೆ ತನ್ನ ಹಿಂದಿನ ಉತ್ಸಾಹೀ ಜೀವನವನ್ನು ಪ್ರತ್ಯೇಕಿಸಿ ನೋಡಿದನು.

ಮುಖಂಡನು ಇದ್ದಕ್ಕಿದ್ದಂತೆ ಮೌನವನ್ನು ಭೇದಿಸಿದನು. ಅಂತೆಯೆ ಸುಬೇನ್‌ಕೊವ್ ಎಚ್ಚತ್ತನು.

"ಹೇಳಿದಂತೆಯೆ ಆಗಲಿ; ಹುಡುಗಿ ನಿನ್ನೊಡನೆ ಬರುತ್ತಾಳೆ. ಆದರೆ ಒಂದು ಅಂಶ ತಿಳಿದಿರಲಿ: ಮೂರು ಬಾರಿಯೂ ಕೊಡಲಿಯಿಂದ ನಿನ್ನ ಕತ್ತಿನ ಮೇಲೆ ಹೊಡೆಯುವವನು ನಾನೇ" ಎಂದನು ಮಕಾಮುಕ್.

ಇಲ್ಲದ ಆತಂಕವನ್ನು ವ್ಯಕ್ತಪಡಿಸುತ್ತಾ, "ಆದರೆ ನಾನು ಪ್ರತಿ ಸಾರಿಯೂ ಔಷಧವನ್ನು ಲೇಪಿಸಿಕೊಳ್ಳಬೇಕು...." ಎಂದನು ಸುಬೆನ್‌ಕೊವ್.

"ಪ್ರತಿ ಹೊಡೆತವಾದ ಮೇಲೂ ನೀನು ಔಷಧಿಯನ್ನು ಹಚ್ಚಿಕೊಳ್ಳಬಹುದು. ಇಗೋ, ನೀನು ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳುವ ಬೇಟೆಗಾರರು ಬಂದಿದ್ದಾರೆ. ಇನ್ನು ಕಾಡಿಗೆ ಹೋಗಿ ಔಷಧಿಗೆ ಬೇಕಾದುದನ್ನು ಶೇಖರಿಸು."

ಸುಬೆನ್‌ಕೊವ್ ನಾವಿನ ದವಡೆಯಲ್ಲಿ ಸಿಕ್ಕಿದ್ದರೂ ಧೈರ್ಯವಾಗಿ ವ್ಯವಹರಿಸುವ ರೀತಿಯನ್ನು ನೋಡಿ ಅವನ ಔಷಧಿಯಷ್ಟು ಘನವಾದುದು ಮತ್ತೊಂದಿರಲಾರದೆಂದು ಮಕಾಮುಕನು ಭಾವಿಸಿದನು. ಸುಬೆನ್‌ಕೊವ್‌ನ ಅತಿ ದುರಾಶೆಯ ಬೇಡಿಕೆಗಳು ಮಕಾಮುಕನಿಗೆ ಹಿತವೆನಿಸಿತು. ಅಂತೆಯೆ ಔಷಧಿಯ ಶಕ್ತಿಯ ಬಗ್ಗೆ ವಿಶ್ವಾಸ ಹುಟ್ಟಿತು.

ಸುಬೆನ್‌ಕೌವ್ ತನ್ನ ಪರಿವಾರದೊಡನೆ ಸ್ಪ್ರೂಸ್ ಮರಗಳ ಮಧ್ಯೆ ಮರೆಯಾದನು. ಆಗ ಮಕಾಮುಕನ ಕಿವಿಯಲ್ಲಿ ಯಕಾಗ "ಜೊತೆಗೆ ಇನ್ನೊಂದು ವಿಷಯ; ಔಷಧಿಯ ತಯಾರಿ ತಿಳಿದಮೇಲೆ ನೀನು ಸುಲಭವಾಗಿ ಅವನನ್ನು ತೀರಿಸಬಹುದು!" ಎಂದನು.

ಮಕಾಮುಕ್ ತರ್ಕಿಸಿದನು. "ಅದು ಹೇಗೆ ಸಾಧ್ಯ? ಔಷಧಿ ಅವ

ನಲ್ಲಿರುವಾಗ ನಾನು ಅವನನ್ನು ನಾಶಪಡಿಸುವ ಸಂಭವವಿಲ್ಲ."

ಆದರೆ ಯಕಾಗ ಹೇಳಿದನು—"ಅವನು ಮೈಗೆಲ್ಲ ಔಷಧಿ ಹಚ್ಚಿಕೊಳ್ಳು ವುದಿಲ್ಲ. ಆದ್ದರಿಂದ ಹಚ್ಚಿಕೊಳ್ಳದ ಭಾಗವನ್ನು ಗಮನಿಸಬೇಕು. ಅದು ಕಿವಿಗಳೆಂದೇ ಇಟ್ಟುಕೊಳ್ಳೋಣ. ಇನ್ನೂ ಒಳ್ಳೆಯದಾಯಿತು; ಈಟಿಯೊಂದನ್ನು ಈ ಕಿವಿಯಿಂದ ಆ ಕಿವಿಯ ತನಕ ತೂರಿಸಿಬಿಡಬಹುದು. ಅಥವಾ ಕಣ್ಣುಗಳಿರಬಹುದು. ಏಕೆಂದರೆ ಅಂಥ ಔಷಧಿಯನ್ನು ಕಣ್ಣಿನ ಮೇಲಂತೂ ತಿಕ್ಕಿಕೊಳ್ಳಲಾರ...."

ಮುಖಂಡನು ತಲೆದೂಗಿದನು. "ಯಕಾಗ, ನೀನು ನಿಜವಾಗಿಯೂ ಬುದ್ಧಿವಂತ. ಅವನಲ್ಲಿ ಇನ್ನಾವ ಇಂದ್ರಜಾಲ ವಿದ್ಯೆ ಇಲ್ಲದಿದ್ದ ಪಕ್ಷದಲ್ಲಿ, ನಾವು ಅವನನ್ನು ಖಂಡಿತವಾಗಿಯೂ ತೀರಿಸಿಬಿಡಬಹುದು."

ಸುಬೆನ್‌ಕೊವ್ ಔಷಧಿಗೆ ಬೇಕಾದ ಸಾಮುಗ್ರಿಗಳನ್ನು ಶೇಖರಿಸುವುದರಲ್ಲಿ ಹೆಚ್ಚು ಕಾಲ ವ್ಯಯಮಾಡಲಿಲ್ಲ. ಕೈಗೆ ಯಾವುದು ಸಿಕ್ಕಿತೋ ಅದನ್ನು ಸಂಗ್ರಹಿಸಿದನು. ಸ್ಪ್ರೂಸ್ ಮುಳ್ಳುಗಳು, ವಿಲೋ ಮರದ ತೊಗಟೆ, ಭೂರ್ಜದ ತುಂಡು, ಸ್ವಲ್ಪ ನಳ್ಳಿಗಳು ಮೊದಲಾದುವನ್ನು ಬೇಟೆಗಾರರು ಹಿಮವನ್ನಗೆದು ತೆಗೆಯಬೇಕಾಯಿತು. ಜೊತೆಗೆ ಚಳಿಯ ಹೊಡೆತದಿಂದ ಸುರುಟಿಹೋಗಿದ್ದ ಕೆಲವು ಕಂದ ಮೂಲಗಳನ್ನು ಆಯ್ದು ಸುಬೆನ್‌ಕೌವ್ ಶಿಬಿರದ ಕಡೆ ತಿರುಗಿದನು.

ಸುಬೆನ್‌ಕೊವ್ ತಂದಿದ್ದ ಎಲ್ಲ ರೀತಿಯ ಘಟಕಾಂಶಗಳನ್ನು ಕುದಿಯುವ ನೀರಿನ ಮಡಕೆಗೆ ಸುರಿಯುತ್ತಾ ಬಂದನು. ಮಕಾಮುಕ್ ಮತ್ತು ಯಕಾಗ ಇಬ್ಬರೂ ಅವನ ಹತ್ತಿರ ಬಗ್ಗಿ ನಿಂತು ಸೂಕ್ಷ್ಮವಾಗಿ ನೋಡುತ್ತಿದ್ದರು.

"ಹುಷಾರಾಗಿರಬೇಕು. ಮೊದಲು ನಳ್ಳಿಗಳನ್ನು ಹಾಕಬೇಕು. ಆಮೇಲೆ? ಎರಡನೆಯದಾಗಿ, ಮನುಷ್ಯನ ಬೆರಳು. ಆದ್ದರಿಂದ, ಯಕಾಗ, ನಿನ್ನ ಬೆರಳನ್ನು ಕತ್ತರಿಸಲು ಅವಕಾಶ ಕೊಡು...." ಎಂದನು ಸುಬೆನ್‌ಕೌವ್.

ಆದರೆ ಯಕಾಗ ಕೈಗಳನ್ನು ಹಿಂದಕ್ಕೆಳೆದುಕೊಂಡು ಮುಖ ಗಂಟು ಹಾಕಿದನು.

"ಏನಿಲ್ಲ; ಸಣ್ಣ ಬೆರಳು ಮಾತ್ರ" ಎಂದು ಸುಬೆನ್‌ಕೌವ್ ಮತ್ತೆ ಬೇಡಿಕೊಂಡನು.

"ಯಕಾಗ, ಅವನಿಗೆ ನಿನ್ನ ಬೆರಳನ್ನು ಕೊಡು" ಎಂದು ಮಕಾಮುಕ್ ಅಪ್ಪಣೆಮಾಡಿದನು.

"ಬೇಕಾದಷ್ಟು ಬೆರಳುಗಳು ಸತ್ತಲೂ ಇಲ್ಲವೇ? ಈ ಹಿಮದಲ್ಲಿ ಎಷ್ಟು ಜನರನ್ನು ಸಾಯುವ ತನಕ ಹೊಡೆದು ಬೀಳಿಸಿಲ್ಲ?" ಎಂದು ಯಕಾಗ ಆ ಕಡೆ ಸೂಚಿಸಿದನು.

ಸುಬೆನ್‌ಕೌವ್ ವಿರೋಧಿಸುತ್ತ, "ನನಗೆ ಬೇಕಾದುದು ಜೀವಂತ ವ್ಯಕ್ತಿಯ ಬೆರಳು" ಎಂದನು.

"ಹಾಗಿದ್ದರೆ ಜೀವಂತ ವ್ಯಕ್ತಿಯ ಬೆರಳನ್ನೇ ಒದಗಿಸುತ್ತೇನೆ" ಎನ್ನುತ್ತಾ ಯಕಾಗ ಬಿಗ್ ಇವಾನನ ಬೆರಳನ್ನು ಕತ್ತರಿಸಿದನು; "ಬಿಗ್ ಇವಾನ್ ಇನ್ನೂ ಸತ್ತಿಲ್ಲ. ಅವನದು ಒಳ್ಳೆಯ ಬೆರಳು. ಏಕೆಂದರೆ ಅದು ದಪ್ಪನಾಗಿದೆ.'' ಎಂದು ಇವಾನನ ರಕ್ತಮಯ ದೇಹವನ್ನು ವಿಜಯೋತ್ಸಾಹದಿಂದ ಸುಬೆನ್‌ಕೌವ್‌ನ ಪಾದದ ಮೇಲೆ ಬೀಳುವಂತೆ ಒದ್ದನು.

ಮಡಕೆಯ ಕೆಳಗೆ ಉರಿಯುತ್ತಿದ್ದ ಬೆಂಕಿಗೆ ಆ ಬೆರಳನ್ನು ಎಸೆದು ಸುಬೆನ್‌ಕೊವ್ ಹಾಡಲು ಪ್ರಾರಂಭಿಸಿದನು. ಅದೊಂದು ಫ್ರೆಂಚರ ಪ್ರಣಯ ಗೀತೆ. ಎಲ್ಲವೂ ಒಂದು ಹದಕ್ಕೆ ಬರುತ್ತಿದ್ದಂತೆ, ಅವನು ಗಂಭೀರವಾಗಿ ಹಾಡುತ್ತಿದ್ದನು.

"ನೋಡು, ಈ ರೀತಿ ಹಾಡದಿದ್ದರೆ, ಔಷಧಿ ಸತ್ವಯುತವಾಗುವುದಿಲ್ಲ. ಹಾಡಿನ ಪದಗಳು ಮುಖ್ಯ ಶಕ್ತಿದಾಯಕವಾದುವು....ಸರಿ, ಆಗಲೇ ಸಿದ್ಧವಾಯಿತು.'' ಎಂದು ಸುಬೆನ್‌ಕೌವ್ ವಿವರಿಸಿದನು.

ಮಕಾಮುಕ್, "ಪದಗಳನ್ನು ನಿಧಾನವಾಗಿ ಹೇಳು. ಏಕೆಂದರೆ ನಾನು ಅದನ್ನು ಕಲಿಯಬೇಕು.'' ಎಂದನು.

"ಇಲ್ಲ; ನನ್ನ ಪರೀಕ್ಷೆಯಾಗುವ ತನಕ ಹೇಳುವುದಿಲ್ಲ. ಮೂರು ಬಾರಿಯೂ ನನ್ನ ಕತ್ತನ್ನು ಕತ್ತರಿಸದೆ ಕೊಡಲಿಯು ಹಿಂದಕ್ಕೆ ಹಾರಿದಾಗ, ನಾನು ನಿನಗೆ ಪದಗಳ ಗುಟ್ಟನ್ನು ಹೇಳಿಕೊಡುತ್ತೇನೆ.''

"ಆದರೆ ಇದು ಒಳ್ಳೆಯ ಔಷಧಿಯಲ್ಲದಿದ್ದರೆ?'' ಎಂದು ಮಕಾಮುಕ್ ಕಳವಳಗೊಂಡನು.

ಸುಬೆನ್‌ಕೌವ್ ಕೋಪದಿಂದ ತಿರುಗಿಬಿದ್ದನು.

"ನನ್ನ ಔಷಧಿ ಯಾವತ್ತೂ ಸರಿಯಾದುದು. ಒಂದು ವೇಳೆ ಅತ್ಯುತ್ತಮವಾಗಿಲ್ಲದಿದ್ದರೆ, ಇತರರಂತೆ ನನಗೂ ನೀನು ಶಿಕ್ಷೆ ವಿಧಿಸಬಹುದು; ಇವಾನನಿಗೆ ಮಾಡಿರುವಂತೆ ನನ್ನನ್ನೂ ತುಂಡು ತುಂಡಾಗಿ ಕತ್ತರಿಸಬಹುದು........ ಔಷಧಿ ತಣ್ಣಗಾಗುತ್ತಿದೆ. ಇದರ ಸ್ವಲ್ಪ ಭಾಗವನ್ನು ಕತ್ತಿನ ಮೇಲೆ ಸವರಿ

ಕೊಳ್ಳುತ್ತೇನೆ. ಉಳಿದುದನ್ನು ಆಮೇಲೆ ಉಪಯೋಗಿಸುವುದು."

ಅತಿ ಗಭೀರತೆಯಿಂದ ಫ್ರೆಂಚ್ ಗೀತೆಯನ್ನು ತನ್ನದೇ ಆದ ವಿಶಿಷ್ಟ ಸ್ವರ ದಲ್ಲಿ ಉಚ್ಚರಿಸುತ್ತಾ, ಕತ್ತಿನ ಪೂರ್ತ ಔಷಧಿಯನ್ನು ಹಚ್ಚಿಕೊಂಡನು.

ಮಧ್ಯದಲ್ಲಿ ಇವಾನನ ಆರ್ತ ಸ್ವರ ಸುಬೆನ್‌ಕೌವ್‌ನ ಕೆಲಸಕ್ಕೆ ತಡೆಯುಂಟುಮಾಡಿತು. ಬಿಗ್ ಇವಾನ್ ಮರಣೋನ್ಮುಖನಾಗಿದ್ದರೂ, ಕೊನೆಯ ಘಳಿಗೆಯಲ್ಲಿ ಮಹತ್ತರ ಶಕ್ತಿಯನ್ನು ಚಲಾಯಿಸುತಿದ್ದನು. ಸೆಳೆತದಿಂದ ಅವನು ಹಿಮದಲ್ಲಿ ಹೊರಳಾಡುತಿದ್ದುದನ್ನು ನೋಡಿ ನ್ಯುಲಾಟೋ ನಿವಾಸಿಗಳು ಆಶ್ಚರ್ಯಚಕಿತರಾಗಿ ನಗುತಿದ್ದರು.

ಆ ನೋಟದಿಂದ ಸುಬೆನ್‌ಕೌವ್‌ಗೆ ಬೇಸರವಾಯಿತು. ಆದರೆ ಮನಸ್ಸಿನ ಅಳುಕನ್ನು ತೋರ್ಪಡಿಸದೆ ಕೋಪಗೊಂಡವನಂತೆ ನಟಿಸಿದನು.

"ಈ ರೀತಿ ಇದ್ದರೆ ಸಾಧ್ಯವಿಲ್ಲ. ಅವನನ್ನು ತೀರಿಸಿದ ಮೇಲೆಯೇ, ನನ್ನ ಪರೀಕ್ಷೆ ಪ್ರಾರಂಭವಾಗಬೇಕು. ಯಕಾಗ, ಇವಾನನ ಶಬ್ದವನ್ನು ಸಂಪೂರ್ಣ ನಿಲ್ಲಿಸುವ ಏರ್ಪಾಟು ಮಾಡು" ಎಂದು ಸುಬೆನ್‌ಕೊವ್ ಎಚ್ಚರಿಸಿದನು.

ಇವಾನನ ಸ್ಥಿತಿ ಮುಗಿಯಿತು. ಆಗ ಸುಬೆನ್‌ಕೌವ್ ಮಕಾಮುಕನ ಕಡೆ ನೋಡಿ, "ನೀನು ಜೋರಾಗಿ ಹೊಡೆಯಬೇಕೆಂಬ ಅಂಶವನ್ನು ಜ್ಞಾಪಕ ದಲ್ಲಿಟ್ಟುಕೊ. ಇದು ಮಕ್ಕಳಾಟವಲ್ಲ. ಇಗೋ, ಆ ಕೊಡಲಿಯನ್ನು ತೆಗೆದುಕೊಂಡು ಮರದ ಕೊರಡಿಗೆ ಹೊಡಿ. ಪ್ರಬುದ್ಧ ಮನುಷ್ಯನಂತೆ ನೀನು ಬಡಿಯುವುದನ್ನು ಮೊದಲು ನಾನು ನೋಡಬೇಕು." ಎಂದನು.

ಮಕಾಮುಕನು ಒಪ್ಪಿ ಜೋರಾಗಿ ಒಂದೇ ಗುರಿಯಿಂದ ಎರಡು ಬಾರಿ ಕೊಡಲಿಯನ್ನು ಬೀಸಿದನು. ಮರದ ಕೊರಡಿನ ದೊಡ್ಡ ಭಾಗ ಕತ್ತರಿಸಿ ಹೋಯಿತು.

"ಭೇಷ್...." ಎಂದನು ಸುಬೆನ್‌ಕೌವ್ ಸುತ್ತಲೂ ನೋಡಿದನು. ಕಾಡುತನವೇ ಮೂರ್ತಿವೆತ್ತಂತೆ ಅನಾಗರಿಕ ಮುಖಗಳು ಕಂಡವು. ವಾರ್ಸಾ ದಲ್ಲಿ ಸಾರ್ ಪೋಲೀಸರಿಂದ ದಸ್ತಗಿರಿಯಾದ ದಿನ ನೆನಪಿಗೆ ಬಂತು. ಅಂದಿನಿಂದ ಇಂದಿನವರೆಗೂ ಅವನಿಗೆ ಒಂದೇ ರೀತಿಯ ಬಂಧನದ ಅನುಭವ ವಾಗಿತ್ತು.

"ಮಕಾಮುಕ್, ಕೊಡಲಿಯನ್ನು ತೆಗೆದುಕೊಂಡು ಸರಿಯಾಗಿ ನಿಂತುಕೊ, ನಾನು ಇಲ್ಲಿ ಮಲಗುತ್ತೇನೆ. ಕೈ ಸನ್ನೆ ಮಾಡಿದಾಗ, ದಮ್ಮು

ಕಟ್ಟಿ ಕೊಡಲಿಯಿಂದ ನನ್ನ ಕತ್ತಿಗೆ ಹೊಡಿ. ಆದರೆ ನಿನ್ನ ಹತ್ತಿರ ಯಾರೂ ನಿಂತಿರಕೂಡದು. ಔಷಧಿ ಸತ್ವಯುತವಾಗಿರುವುದರಿಂದ ಕೊಡಲಿ ನನ್ನ ಕತ್ತಿಗೆ ತಾಗಿದ ಕ್ಷಣ ಹಿಂದಕ್ಕೆ ಪುಟವಿಟ್ಟು, ನಿನ್ನ ಕೈ ತಪ್ಪಿಹೋಗಬಹುದು!"

ಎರಡು ಸ್ಲೆಜ್ ಗಾಡಿಗಳನ್ನೂ, ಅವಕ್ಕೆ ಹೂಡಿದ್ದ ನಾಯಿಗಳನ್ನೂ, ಮೇಲಿದ್ದ ಫರ್ ಮತ್ತು ಮೀನುಗಳನ್ನೂ ನೋಡಿದನು. ಬೀವರ್ ಚರ್ಮದ ಮೇಲೆ ತನ್ನ ಬಂದೂಕವಿತ್ತು. ಕಾವಲುಗಾರರಾಗಿ ನೇಮಿತರಾಗಿದ್ದ ಆರು ಬೇಟೆಗಾರರು ಸ್ಲೆಜ್ ಪಕ್ಕದಲ್ಲೇ ನಿಂತಿದ್ದರು.

"ಹುಡುಗಿಯೆಲ್ಲಿ? ಪರೀಕ್ಷೆ ನಡೆಯುವಾಗ ಅವಳು ಗಾಡಿಯ ಮೇಲೆ ನಿಂತಿರಬೇಕು.'' ಎಂದು ಸುಬೇನ್‌ಕೌವ್ ಒತ್ತಾಯಮಾಡಿದನು.

ಎಲ್ಲ ಏರ್ಪಾಟುಗಳು ನಡೆದಮೇಲೆ, ಸುಸ್ತಾಗಿ ಮಲಗುವ ಮಗುವಿನಂತೆ ಸುಬೇನ್‌ಕೌವ್ ಹಿಮದ ಮೇಲೆ ಮೈ ಚಾಚಿದನು. ಮರದ ಕೊರಡೊಂದು ಅವನ ತಲೆಯ ಕೆಳಗಿನ ದಿಂಬಾಗಿತ್ತು. ಬೇಸರದ ವರ್ಷಗಳನ್ನು ನೂಕಿ ಸಾಕಾದವನಿಗೆ ನಿಜವಾಗಿಯೂ ಸುಸ್ತಾಗಿತ್ತು.

"ನಾನು ನಿನ್ನ ಮತ್ತು ನಿನ್ನ ಶಕ್ತಿಯ ಬಗ್ಗೆ ಹಾಸ್ಯಮಾಡುತ್ತೇನೆ, ಮಕಾಮುಕ್. ಆದ್ದರಿಂದ ಹೊಡಿ, ಜೋರಾಗಿ ಹೊಡಿ....!"

ಕೈ ಸನ್ನೆ ಮಾಡಿದನು. ಮರದ ದಿಮ್ಮಿಯನ್ನು ಚದರವಾಗಿ ಕೆತ್ತಬಲ್ಲ ದೊಡ್ಡ ಕೊಡಲಿಯಿಂದ ಮಕಾಮುಕ್ ಬಲವಾಗಿ ಹೊಡೆಯಲು ಸಿದ್ಧನಾದನು. ಮಕಾಮುಕನು ಮೇಲೆತ್ತಿದ್ದ ಒಂದು ಕ್ಷಣ ಆ ಕೊಡಲಿಯು ಹಿಮವಾತಾವರಣ ದಲ್ಲೂ ಹೊಳೆಯಿತು; ಆದರೆ ಕೆಳಗಿಳಿದಂತೆ ಸುಬೇನ್‌ಕೌವ್‌ನ ಕತ್ತಿನೊಡನೆ ಸೇರಿಹೋಯಿತು! ಮಾಂಸ ಮೂಳೆಗಳನ್ನು ದಾಟಿ ಕೆಳಗಿದ್ದ ಮರವನ್ನೂ ಜೋರಾಗಿ ಸೀಳಿತ್ತು; ಇಷ್ಟು ಮಾತ್ರ ಸತ್ಯ....ತಲೆ ಒಂದು ಗಜ ದೂರ ಹಾರಿತು. ಎಲ್ಲಿಂದ? ರಕ್ತ ಚಿಮ್ಮುತ್ತಿರುವ ಮುಂಡದಿಂದ! ಇದನ್ನು ನೋಡಿದ ಅನಾಗರಿಕ ತಂಡ ಆಶ್ಚರ್ಯಗೊಂಡಿತು.

ಭ್ರಮೆಯ ವಾತಾವರಣ; ಎಲ್ಲಿಡೆಯಲ್ಲೂ ಮೌನ. ಅಂಥ ಔಷಧಿ ಇದ್ದಿರಲಾರದೆಂದು ಅವರ ಮನಸ್ಸಿಗೆ ನಿಧಾನವಾಗಿ ಹೊಳೆಯಿತು.

ಫರ್ ಕಳ್ಳ ತಮ್ಮನ್ನು ಮರುಳುಗೊಳಿಸಿದ್ದಾನೆ. ಯಾವ ಕೈದಿಯೂ ಇವನಂತೆ ನರಳಾಟವನ್ನು ತಪ್ಪಿಸಿಕೊಳ್ಳುವ ಉಪಾಯವನ್ನು ಮಾಡಿಲ್ಲ. ಅದಕ್ಕಾಗಿ ಒಂದು ಪಂದ್ಯವನ್ನೇ ಹೂಡಿದನು. ಎಂಥ ಆಟವಾಡಿದನು!

ಇದ್ದಕ್ಕಿದ್ದಂತೆ ನಗೆಯ ಹೊನಲು ಭೋರ್ಗರೆಯಿತು....ಮಕಾಮುಕನು

ಅವಮಾನಿತನಾಗಿ ತಲೆ ತಗ್ಗಿಸಿದನು. ಫರ್ ಕಳ್ಳನಿಂದ ತಾನು ತಿಳಿಗೇಡಿಯಾದೆನು ; ಅಷ್ಟೆ....

ತನ್ನ ಜನಾಂಗದ ಮುಂದೆ 'ಮುಖಭಂಗ' ವಾಯಿತು....

ಮತ್ತೆ ತಂಡದವರು ಜೋರಾಗಿ ನಗುತ್ತಲೇ ಇದ್ದರು. ಮಕಾಮುಕನು ಸಹಿಸಲಾರದೆ ಮರೆಯಲ್ಲಿ ಕದ್ದುಹೋದನು. ಆಜೀವ ಪರ್ಯಂತ ಈ ಅವಮಾನ ಹೋಗಲಾರದೆಂದು ತಿಳಿದನು. ಇನ್ನು ಮುಂದೆ ತಾನು ಮಕಾಮುಕ್ನಲ್ಲ; ಮುಖಭಂಗ ಮಹಾಶಯ! ಮಕಾಮುಕನಂಥ ಮಹಾಮಲ್ಲನಿಗೂ ಮುಖಭಂಗವಾಯಿತು....

ವಸಂತ ಕಾಲದಲ್ಲಿ ಸಾಮನ್ ಮೀನಿಗಾಗಿಯೂ ಅಥವಾ ಬೇಸಗೆಯಲ್ಲಿ ವ್ಯಾಪಾರಕ್ಕಾಗಿಯೂ ತಂಡದವರು ಒಟ್ಟಿಗೆ ಸೇರುತಿದ್ದರು. ಶಿಬಿರಾಗ್ನಿಯ ಸುತ್ತ ಕುಳಿತು ಹರಟೆಹೊಡೆಯುವಾಗ ಫರ್ ಕಳ್ಳನ ಕಥೆ ಕೇಳಿಬರುತಿತ್ತು. ಅವನು 'ಮುಖಭಂಗ ಮಹಾಶಯನ' ಕೈಯಲ್ಲಿ ಒಂದೇ ಏಟಿಗೆ ಶಾಂತಿಯುತವಾಗಿ ಸತ್ತ ಪ್ರಸಂಗವನ್ನು ಸ್ವಾರಸ್ಯವಾಗಿ ವಿವರಿಸುತಿದ್ದರು.

ಕಥೆಯ ಓಟವನ್ನು ನಿಲ್ಲಿಸಿ ಯಾವನೋ ಒಬ್ಬ ಸೊಗಸುಗಾರ ಯುವಕ ಕೇಳುತಿದ್ದನು: "ಆ ಮುಖಭಂಗ ಮಹಾಶಯನಾರು?" ಅದಕ್ಕೆ ಉತ್ತರ: "ಫರ್ ಕಳ್ಳನ ತಲೆಯನ್ನು ಕತ್ತರಿಸುವುದಕ್ಕಿಂತ ಮುಂಚೆ ಮಕಾಮುಕನಾಗಿದ್ದವನೇ, ಮುಂದೆ 'ಮುಖಭಂಗ ಮಹಾಶಯ' ನಾದವನು."

ತುಂಡು ಮಾಂಸ

ಟಾಮ್ ಕಿಂಗ್ ಕೊನೆಯ ರೊಟ್ಟಿಯ ಚೂರನ್ನು ಅಗಿದನು. ಹಿಟ್ಟು ಮಾಂಸದ ಕಡೆಯ ಕಣವನ್ನೂ ಬಿಡದೆ ತಟ್ಟೆಯನ್ನು ನೆಕ್ಕಿದನು. ನಿಧಾನವಾಗಿ ಯೋಚಿಸುತ್ತ ಜೀರ್ಣಿಸಿಕೊಂಡನು. ಮೇಜು ಬಿಟ್ಟು ಎದ್ದಾಗ, ತಾನು ನಿಜವಾಗಿಯೂ ಹಸಿದಿದ್ದೇನೆಂಬ ಅರಿವಾಯಿತು. ಮತ್ತೆ ಆ ಭಾವನೆ ಅವನನ್ನು ಪೀಡಿಸಹತ್ತಿತು. ಅದರೂ ತಾನೊಬ್ಬನೇ ತಿಂದಿರುವುದು. ಇಬ್ಬರು ಮಕ್ಕಳನ್ನೂ ಬೇರೆಯ ಕೊಠಡಿಯಲ್ಲಿ ಮಲಗಿಸಲಾಗಿತ್ತು; ನಿದ್ರೆಯಲ್ಲಾದರೂ ಅವರಿಗೆ ಹಸಿವಿನ ಬಾಧೆ ಮರೆಯುವಂತೆ ಏರ್ಪಾಟು ಮಾಡಲಾಗಿತ್ತು. ಅವನ ಹೆಂಡತಿ

ಏನೂ ಮುಟ್ಟಿರಲಿಲ್ಲ. ಕಳವಳದಿಂದ ಗಂಡನನ್ನೇ ನೋಡುತ್ತ ನಿಶ್ಯಬ್ದವಾಗಿ ಕುಳಿತಿದ್ದಳು. ತೆಳ್ಳನೆಯ ಬಾಡಿಹೋಗಿದ್ದ ಹೆಂಗಸು ; ಕಾರ್ಮಿಕವರ್ಗದಿಂದ ಬಂದವಳು. ಆದರೂ ಒಂದು ಕಾಲದಲ್ಲಿ ಇದ್ದ ಸೌಂದರ್ಯದ ಛಾಯೆ ಇನ್ನೂ ಮುಖದಲ್ಲಿತ್ತು. ತೊಟ್ಟಿಯ ಆ ಕಡೆ ವಾಸಿಸುತಿದ್ದ ನೆರೆಯವರಿಂದ ಹಿಟ್ಟನ್ನು ಸಾಲ ತಂದಿದ್ದಳು. ಉಳಿದಿದ್ದ ಎರಡು ಅರ್ಧ ಪೆನ್ನಿಗಳು ರೊಟ್ಟಿಗಾಗಿ ಖರ್ಚಾಗಿತ್ತು.

ಟಾಮ್‌ಕಿಂಗ್ ಶಿಥಿಲವಾದ ಕುರ್ಚಿಯ ಮೇಲೆ ಕಿಟಕಿಯ ಹತ್ತಿರ ಕುಳಿತಿದ್ದನು. ಅವನ ದೇಹಭಾರಕ್ಕೆ ಕುರ್ಚಿಯ ಕಾಲು ಜಗ್ಗುತಿತ್ತು. ಯಾಂತ್ರಿಕವಾಗಿ ಬಾಯಿಗೆ ಪೈಪ್ ಇಟ್ಟುಕೊಂಡನು. ಆದರೆ ಜೇಬಿಗೆ ಕೈ ಹಾಕಿದಾಗ ಹೊಗೆಸೊಪ್ಪು ಇರಲಿಲ್ಲ. ಮುಖ ಗಂಟಾಯಿತು. ಮರೆವಿಗಾಗಿ ತನ್ನನ್ನು ತಾನೆ ಬೈದುಕೊಂಡನು. ಪೈಪನ್ನು ಆ ಕಡೆ ತೆಗೆದಿಟ್ಟನು. ಅವನು ಬಹು ನಿಧಾನವಾಗಿ ಚಲಿಸುತಿದ್ದನು. ಮಾಂಸಖಂಡಗಳ ಭಾರದಿಂದಲೇ ಕುಸಿದವನಂತೆ ಎಡವುತಿದ್ದನು. ದೇಹವೇನೊ ಗಟ್ಟಿಮುಟ್ಟಾಗಿತ್ತು ; ಮನಸ್ಸಿಗೆ ಏನೂ ನಾಟದವನಂತೆ ನೋಡುತಿದ್ದನು. ಕಡುಬಡವನಾಗಿದ್ದರೂ ದೃಢಕಾಯನೂ ತೇಜೋವಂತನೂ ಆಗಿದ್ದನು. ಅವನ ದೊರಗು ಬಟ್ಟೆ ಹಳೆಯದಾಗಿ ಸಿಕ್ಕಾಪಟ್ಟೆ ಜೋತುಬಿದ್ದಿತ್ತು. ಹಳೆಯ ಶೂಗೆ ದಪ್ಪನೆಯ ಹೊಸಚರ್ಮ ಹೊಡೆಸಿದ್ದನು; ಈಗ ಅದೇ ಭಾರವಾಗಿತ್ತು. ಅಗ್ಗವಾಗಿ ಎರಡು ಶಿಲಿಂಗಿಗೆ ಸಿಕ್ಕಿದ್ದ ಹತ್ತಿಯ ಅಂಗಿಯನ್ನು ಧರಿಸಿದ್ದನು. ಆಗಲೇ ಕಾಲರಿನ ಹೊಲಿಗೆ ಬಿಟ್ಟು ಹೋಗಿತ್ತು. ಬಟ್ಟೆಯ ಮೇಲೆ ಅಳಿಸಲಾಗದ ಬಣ್ಣದ ಕಲೆಗಳಿದ್ದುವು.

ಆದರೆ ಟಾಂಕಿಂಗನ ಮುಖ ಮಾತ್ರ ತನ್ನ ಹಿಂದಿನ ಸ್ಥಿತಿಯನ್ನು ಸಾರುವಂತಿತ್ತು. ಮುಷ್ಟಿಕಾಳಗದಲ್ಲಿ ಭಾಗವಹಿಸುವವನ ಆದರ್ಶಯುತ ಮುಖ ತೇಜಸ್ಸು ಅವನಲ್ಲಿತ್ತು. ನಿಜ; ಟಾಂಕಿಂಗ್ ಮಲ್ಲಯುದ್ಧ ಮಾಡುತ್ತಾ ಎಷ್ಟೋ ವರ್ಷಗಳಕಾಲ ಜೀವಿಸಿದ್ದನು. ಅವನೊಬ್ಬ ಕಾದಾಟದ ಮೃಗ. ಅದಕ್ಕೆ ತಕ್ಕಂತೆ ಎಲ್ಲ ಅಂಶಗಳನ್ನೂ ಬೆಳೆಸಿಕೊಂಡಿದ್ದನು. ನಯವಾಗಿ ಕ್ಷೌರಮಾಡಿಕೊಂಡಿದ್ದರಿಂದ ಆ ಲಕ್ಷಣಗಳು ಕಾಣುತಿದ್ದವು. ಎಷ್ಟಾದರೂ ಅವು ಇಳಿಮುಖವಾಗುತ್ತಿದ್ದ ಚಿಹ್ನೆಗಳು. ತುಟಿ ವಿಕಾರವಾಗಿತ್ತು. ಬಾಯಿಯಂತೂ ಮುಖದಲ್ಲಿನ ಸೀಳುಗಾಯದಂತಿತ್ತು. ದವಡೆಯು ಅಸಹ್ಯವಾಗಿತ್ತು. ಪೊದೆಗೂದಲಿನ ವಕ್ರರೇಖೆಯ ಹುಬ್ಬಿನ ಕೆಳಗೆ, ಕಣ್ಣುಗಳು ಯಾವುದನ್ನೂ ಸೂಚಿಸದೆ ನಿಧಾನವಾಗಿ ರೆಪ್ಪೆಬಡಿಯುತಿದ್ದುವು. ಕಣ್ಣುಗಳು ತೂಕಡಿಸುತಿದ್ದರೂ ಸಿಂಹ

ಸದೃಶವಾಗಿದ್ದುವು. ಉಬ್ಬಿದ ಮುಂದೆಲೆಯ ಹಿಂದೆ ಕೂದಲು ದಟ್ಟವಾಗಿ ಬೆಳೆದಿತ್ತು. ಎರಡು ಬಾರಿ ನುಜ್ಜುಗುಜ್ಜಾಗಿದ್ದ ಮೂಗು ಲೆಕ್ಕವಿಲ್ಲದ ಹೊಡೆತ ಗಳಿಂದ ವಿವಿಧ ರೂಪಗಳನ್ನು ತಾಳಿತ್ತು. ಕಿವಿ ಕಾಲಿಫ್ಲವರಿನಂತೆ ಉಬ್ಬಿ ಕೊಂಡಿತ್ತು. ಗಡ್ಡ ಬೋಳಿಸಿದ್ದರೂ ಪುನಃ ಚಿಗುರಿ, ಮುಖದ ಮೇಲೆ ಕಪ್ಪು ನೀಲಿಯ ಛಾಯೆಯು ತೋರುತಿತ್ತು.

ಒಟ್ಟಿನಲ್ಲಿ, ಕತ್ತಲ ಅಥವಾ ಏಕಾಂತ ಸ್ಥಳಗಳಲ್ಲಿ ಅವನ ಮುಖ ನೋಡಿ ದರೆ ಹೆದರಿಕೆಯಾಗುತಿತ್ತು. ಆದರೂ ಟಾಂಕಿಂಗ್ ಕೊಲೆಪಾತಕಿಯಲ್ಲ. ಎಂದೂ ಅಪರಾಧವನ್ನು ಮಾಡಿದವನೇ ಅಲ್ಲ. ಮಲ್ಲಯುದ್ಧರಂಗದ ಹೊರಗೆ ತೊಂದರೆಪಡಿಸಿ ಯಾರಲ್ಲೂ ಜಗಳವಾಡಿಲ್ಲ. ಅವನು ಮುಷ್ಟಿಕಾಳಗವನ್ನು ಜೀವನದ ವೃತ್ತಿಯಾಗಿ ಅವಲಂಬಿಸಿದ್ದನು. ಕಾದಾಟದ ಬಿರುಸು, ಪ್ರದರ್ಶನ ಗಳಿಗೆ ಮಾತ್ರ ಮೀಸಲಾಗಿತ್ತು. ಯುವಕನಾಗಿದ್ದಾಗ ಬೇಕಾದಷ್ಟು ಹಣ ಸಂಪಾದಿಸಿದ್ದನು. ಆಗಲಂತೂ ತನ್ನ ಹಿರಿಮೆಗಾಗಿಯೇ ಮುಕ್ತಹಸ್ತನಾಗಿ ಖರ್ಚುಮಾಡುತಿದ್ದನು. ಅವನು ಯಾರ ಮೇಲೂ ದ್ವೇಷ ಸಾಧಿಸಿದವನಲ್ಲ. ಅಂತೆಯೆ ದ್ವೇಷಿಗಳು ಅತ್ಯಲ್ಪ. ಹೊಡೆದಾಡುವುದೊಂದೇ ಅವನ ಉದ್ಯಮ ವಾಗಿತ್ತು. ರಂಗದಲ್ಲಿ ಗಾಯಗೊಳಿಸುವುದು, ಅಥವಾ ಅಂಗಹೀನಗೊಳಿಸುವುದು ಸಾಮಾನ್ಯವಾಗಿತ್ತು. ಅದರಲ್ಲಿ ದ್ವೇಷೋದ್ರೇಕವಿರಲಿಲ್ಲ. ಒಬ್ಬನನ್ನು ಮತ್ತೊಬ್ಬ ಹೊಡೆದು ಬಿನಾಡುವುದನ್ನು ನೋಡಲು, ಜನ ದುಡ್ಡುಕೊಟ್ಟು ಸೇರುತಿದ್ದರು. ಗೆದ್ದವನು ಹಣದ ಚೀಲವನ್ನು ಒಯ್ಯುತಿದ್ದನು. ಟಾಂಕಿಂಗ್ ಇಪ್ಪತ್ತು ವರ್ಷದ ಹಿಂದೆ ಗೌಜರ್‌ನನ್ನು ಎದುರಿಸಿದ್ದನು—ನ್ಯೂಕ್ಯಾಸಲ್ ಪಂದ್ಯದಲ್ಲಿ ಗೌಜರ್‌ನ ಹಲ್ಲುಮುರಿದು ನಾಲ್ಕು ತಿಂಗಳ ಹಿಂದೆ ಸರಿಯಾಗಿದ್ದ ವಿಷಯ, ಟಾಂಕಿಂಗ್ ತಿಳಿದಿದ್ದನು. ಆ ಹಲ್ಲಿಗೇ ಗಮನವಿಟ್ಟು ಒಂಬತ್ತನೇ ರೌಂಡಿನಲ್ಲಿ ಮತ್ತೆ ಮುರಿದನು. ಹಾಗೆ ಮಾಡಿದ್ದು ಪಂದ್ಯದ ಹಣಗಳಿಸುವುದಕ್ಕೇ ಹೊರತು, ಗೌಜರ್ ಮೇಲಿನ ದ್ವೇಷದಿಂದಲ್ಲ. ಅದು ಇಬ್ಬರೂ ತಿಳಿದು ಆಡಿದ ಕಾದಾಟ.

ಟಾಂಕಿಂಗ್ ಮಿತಭಾಷಿಯಾಗಿದ್ದನು. ವ್ಯಾಕುಲಿತನಾಗಿ ತನ್ನ ಕೈಗಳನ್ನೇ ನೋಡಿಕೊಳ್ಳುತ್ತ ಕಿಟಕಿಯ ಹತ್ತಿರ ಕುಳಿತಿದ್ದನು. ಕೈಗಳಲ್ಲಿ ರಕ್ತನಾಳಗಳು ಉಬ್ಬಿದ್ದುವು. ಗೆಣ್ಣುಗಳು ಜಜ್ಜಿಹೋಗಿ ವಿಕಾರಗೊಂಡಿದ್ದುವು. ಅದರಿಂದಲೇ ಅವು ಯಾವುದಕ್ಕೆ ಸಾಧನವಾಗಿತ್ತೆಂದು ತಿಳಿಯಬಹುದಾಗಿತ್ತು. ಅವುಗಳ ಮಹತ್ವವನ್ನೂ ತಿಳಿದಿದ್ದನು. ತನ್ನ ಹೃದಯ ಹೆಚ್ಚು ರಕ್ತವನ್ನು ಅಭಿಧಮನಿ ಗಳ ಮೂಲಕ ಜೋರಾದ ಒತ್ತಡದಲ್ಲಿ ಚೆಲ್ಲಿತ್ತು. ಇನ್ನುಮೇಲೆ ಆ ರೀತಿ ಆಗದು.

ರಕ್ತಚಲನೆಯು ಒತ್ತಡ ಕೊನೆ ಮುಟ್ಟಿತ್ತು. ಅದರೊಡನೆ ತನ್ನ ಸಹನ ಶೀಲವೂ ಹೋಗಿತ್ತು. ಈಗ ಅವನಿಗೆ ಬೇಗನೆ ಆಯಾಸವಾಗುತ್ತದೆ. ಹಿಂದೆ ಇಪ್ಪತ್ತು ರೌಂಡುಗಳ ರಭಸದ ಹೋರಾಟ ಸುಲಭವಾಗಿತ್ತು. ಇಕ್ಕುಳದ ಮಧ್ಯದಲ್ಲಿ ಸಿಕ್ಕಿಕೊಂಡಂತೆ, ಎಚ್ಚರಿಕೆಯ ಗಂಟೆಯನ್ನೂ ಲೆಕ್ಕಿಸದೆ, ಮತ್ತೆ ಮತ್ತೆ ಕಾಳಗಕ್ಕೆ ತೊಡಗುತಿದ್ದನು. ಒಂದರಮೇಲೊಂದು ಭಯಂಕರ ಆಟ ನಡೆಸಿದ್ದನು. ತಾನು ಒಮ್ಮೆ ಹಿಮ್ಮೆಟ್ಟಿದರೆ, ಎದುರಾಳಿಯನ್ನು ಅದೇ ಜಿದ್ದಿನಿಂದ ಸಿಗಿದು ಹಗ್ಗದ ಮೇಲೆ ಬೀಳುವಂತೆ ಮಾಡುತಿದ್ದನು. ಒದೆತಗಳು ಮುಯ್ಯಿಗೆ ಮುಯ್ಯಿ ತೀರಿಸುತಿದ್ದವು. ಕಡೆಯ ಇಪ್ಪತ್ತನೆ ರೌಂಡಿನಲ್ಲಂತೂ ಜನರ ಕುತೂಹಲ ಹೇಳತೀರದು. ಅಷ್ಟೇ ಕುತೂಹಲದಿಂದ ತನ್ನ ರಕ್ತವೂ ಚಲಿಸುತಿತ್ತು. ಆ ಸಮಯದಲ್ಲಿ ಉಬ್ಬುತ್ತಿದ್ದ ರಕ್ತನಾಳಗಳು ಮತ್ತೆ ಇಳಿಯುತಿದ್ದುವು. ಆದರೂ ತಿಳಿಯದ ಹಾಗೆ ಸ್ವಲ್ಪ ಸ್ವಲ್ಪವಾಗಿ ವಿಕಾರಹೊಂದುತಿತ್ತು. 'ಬೆನ್ನಿ ಜೋನ್ಸ್'ನ ತಲೆಯ ಮೇಲೆ ಮೊದಲ ಗೆಣ್ಣಿನಿಂದ ಹೊಡೆದಾಗ, ತಾನು ಯುವಕನಾಗಿದ್ದನು. ಕೈಗಳು ಶಕ್ತಿಯುತವಾಗಿದ್ದುವು. ಬೆನ್ನಿ ಜೋನ್ಸ್ ಎಂಬುವನೇ ಮುಂದೆ 'ವೆಲ್ಸ್ ಟೆರರ್' ಎಂದು ಪ್ರಸಿದ್ಧನಾದವನು.

ಹಸಿವಿನ ಬಾಧೆ ಮತ್ತೆ ಮರುಕಳಿಸಿತು.

"ಬ್ಲಿಮಿ, ಮಾಂಸದ ಚೂರೂ ಇಲ್ಲವೇ!" ಎಂದು ಕೂಗುತ್ತ ಮುಷ್ಟಿ ಬಿಗಿಹಿಡಿದನು. ಒಳಗಿದ್ದ ಮಾತನ್ನು ತಡೆಯಲು ಸಾಧ್ಯವಾಗಲಿಲ್ಲ.

ತಪ್ಪು ಒಪ್ಪಿಕೊಳ್ಳುವವಳಂತೆ ಅವನ ಹೆಂಡತಿ ಹೇಳಿದಳು. "ಬರ್ಕ್ ನಾಲೇ ಇಬ್ಬರನ್ನೂ ಕೇಳಿಯಾಯಿತು."

"ಅವರು ಕೊಡಲಿಲ್ಲವೇ?" ಎಂದು ಟಾಮ್‌ಕಿಂಗ್ ಒತ್ತಾಯಪಡಿಸಿದನು.

"ಅರ್ಧಪೆನ್ನಿಯಷ್ಟೂ ಇಲ್ಲವಂತೆ. ಬರ್ಕ್ ಹೇಳಿದ—" ಅವಳು ತಡವರಿಸಿದಳು.

"ಹೇಳು! ಇನ್ನೇನು ಹೇಳಿದ?"

"ಹಿಂದಿನಂತೆ, ಇವತ್ತು ರಾತ್ರಿ ನೀನು ಸ್ಯಾಂಡಲ್‌ನನ್ನು ಹೇಗೆ ಮಾರಿಸಬಲ್ಲೆ ಎಂದು ಯೋಚಿಸುತಿದ್ದಾನೆ...."

ಟಾಮ್‌ಕಿಂಗ್ ಏನೋ ಗೊಣಗುತ್ತಾ ಯಾವ ಉತ್ತರವನ್ನೂ ಕೊಡಲಿಲ್ಲ. ತಲೆಯ ತುಂಬ ಹಿಂದಿನ ಯೋಚನೆ ಆವರಿಸಿತ್ತು. ತನ್ನ ಚಿಕ್ಕ ವಯಸ್ಸಿನಲ್ಲಿ ಟೆರಿಯರ್ ಜಾತಿಯ ಗೂಳಿನಾಯಿಗಳನ್ನು ಸಾಕಿರಲಿಲ್ಲವೇ? ಅದ

ಕ್ಕಂತೂ ಕೊನೆಯಿಲ್ಲದಂತೆ ಮಾಂಸವನ್ನು ತಾನೇ ತುರುಕುತಿದ್ದನು. ಆಗಿನ ಕಾಲದಲ್ಲಿ ಬರ್ಕ್ ಇದ್ದಿದ್ದರೆ, ಬೇಕಾದಷ್ಟು ಮಾಂಸದ ತುಂಡುಗಳನ್ನು ತನಗೆ ಸಾಲವನ್ನಾಗಿ ಕೊಡುತಿದ್ದನು! ಆದರೆ ಕಾಲ ಬದಲಾಯಿಸಿದೆ. ಟಾಮ್ ಕಿಂಗ್ ಮುದುಕನಾಗುತಿದ್ದಾನೆ. ಎರಡನೆ ದರ್ಜೆಯ ಕ್ಲಬ್ಬುಗಳಲ್ಲಿ ಹೋರಾಡುವ ಮುದುಕರು, ವ್ಯಾಪಾರಸ್ಥರಿಂದ ಹೆಚ್ಚು ಹಣ ಸಂಪಾದಿಸುವ ನಿರೀಕ್ಷೆಯನ್ನು ಊಹಿಸುವುದೂ ಅಸಾಧ್ಯ.

ಬೆಳಿಗ್ಗೆ ಎದ್ದಾಗಿನಿಂದಲೂ ಮಾಂಸದ ತುಣಿಕಿಗಾಗಿ ಹಂಬಲಿಸುತಿದ್ದನು. ಇನ್ನೂ ಅದು ಕಡಿಮೆಯಾಗಿಲ್ಲ. ಅಂದಿನ ಹೋರಾಟಕ್ಕೆ ಸಾಕಷ್ಟು ಅಭ್ಯಾಸವಿಲ್ಲವೆಂಬ ಅಂಶ ಅವನಿಗೆ ತಿಳಿದಿತ್ತು. ಆಗ ಆಸ್ಟ್ರೇಲಿಯದಲ್ಲಿ ಮಳೆಯಿಲ್ಲದ ನೀರಸ ವಾತಾವರಣ, ಬರಗಾಲ ಬಂದಿತ್ತು. ಜವಾಬ್ದಾರಿಯಿಲ್ಲದ ಕೆಲಸಗಳು ಸಿಗುವುದು ಕಷ್ಟವಾಗಿತ್ತು. ಮುಷ್ಟಿಯುದ್ಧ ಮಾಡಲು ಸರಿಯಾದ ಜೊತೆಗಾರನಿರಲಿಲ್ಲ. ಆಹಾರವಂತೂ ಹೊಲಸು. ಅಲ್ಲದೆ ಸಾಕಷ್ಟು ಸಿಗುತ್ತಿರಲಿಲ್ಲ. ಆಗಾಗ ನೌಕಾದಳದಲ್ಲಿ ಕೆಲ ದಿನಗಳ ಮಟ್ಟಿಗೆ ಕೆಲಸ ಸಿಗುತಿತ್ತು. ಬೆಳಗಿನ ಜಾವ ಓಡಿ ಕಾಲು ಸರಿಪಡಿಸಿಕೊಳ್ಳುತಿದ್ದನು. ಆದರೆ ಜೊತೆಗಾರರಿಲ್ಲದ ಅಭ್ಯಾಸ ಕಷ್ಟವಾಗಿ ತೋರುತ್ತದೆ. ಅದರಲ್ಲೂ, ಆಹಾರಕ್ಕಾಗಿ ಕಾದಿರುವ ಹೆಂಡತಿ ಮತ್ತು ಇಬ್ಬರು ಮಕ್ಕಳಿದ್ದರೆ ಹೇಳತೀರದು. ಸ್ಯಾಂಡಲ್‌ನ ಜೋಡಿಯಾದ್ದರಿಂದ, ಟಾಮ್ ಕಿಂಗ್‌ಗೆ ವ್ಯಾಪಾರಸ್ಥರು ಸ್ವಲ್ಪ ಮಟ್ಟಿಗೆ ಸಾಲದ ಸೌಲಭ್ಯ ಒದಗಿಸಿದ್ದರು. ಗೆಯಟಿ ಕ್ಲಬ್ಬಿನ ಕಾರ್ಯದರ್ಶಿ ಮೂರು ಪೌಂಡುಗಳನ್ನು ಮುಂಗಡವಾಗಿಯೆ ಕೊಟ್ಟಿದ್ದನು. ಹೇಗಾದರೂ ಅದು ಸೋತವನಿಗೆ ದೊರಕುವ ಹಣ. ಅದಕ್ಕಿಂತ ಹೆಚ್ಚು ಕೊಡಲು ಅವನು ಹಿಂಜರಿದನು. ಆಗಾಗ ಟಾಮ್‌ಕಿಂಗ್ ತನ್ನ ವೃದ್ಧ ಜೊತೆಗಾರರಿಂದ ಹೇಗಾದರೂ ಮಾಡಿ ಕೆಲವು ಷಿಲಿಂಗುಗಳ ಸಾಲವನ್ನಾದರೂ ತೆಗೆದುಕೊಳ್ಳುತಿದ್ದನು. ಆ ನೀರಸ ವರ್ಷದಲ್ಲಿ ಎಲ್ಲರಿಗೂ ಕಷ್ಟವಾಗಿತ್ತು; ಇಲ್ಲದಿದ್ದರೆ ಅವನಿಗೆ ಸ್ವಲ್ಪ ಮಟ್ಟಿಗೆ ಹೆಚ್ಚು ಸಾಲ ದೊರಕುತಿತ್ತು.....ಮುಚ್ಚುಮರೆಯಿಲ್ಲದೆ ಒಂದು ಮಾತಿನಲ್ಲಿ ಹೇಳುವುದಾದರೆ, ಅವನ ಅಭ್ಯಾಸ ನಿಜವಾಗಿಯೂ ತೃಪ್ತಿಕರವಾಗಿರಲಿಲ್ಲ. ಅವನಿಗೆ ತೊಂದರೆಯಿಲ್ಲದಂತೆ ಮಾಡಿ, ಒಳ್ಳೆಯ ಆಹಾರ ಕೊಟ್ಟಿದ್ದರೆ ಚೆನ್ನಾಗಿತ್ತು. ಅದೂ ಅಲ್ಲದೆ ನಲುವತ್ತು ವರ್ಷದ ಮನುಷ್ಯ ಇಪ್ಪತ್ತರ ಹುಡುಗನಂತೆ ತಕ್ಷಣ ಸಹಜ ಸ್ಥಿತಿಗೆ ಬರಲು ಸಾಧ್ಯವಿಲ್ಲ.

"ಏಷ್ಟು ಗಂಟೆ, ಲಿಸಿ?" ಎಂದು **ಟಾಂಕಿಂಗ್ ಕೇಳಿದನು.**

ಆತನ ಹೆಂಡತಿ ತೊಟ್ಟಿಯಾಚೆ ಹೋಗಿಬಂದು, "ಎಂಟು ಗಂಟೆಗೆ ಹದಿನೈದು ನಿಮಿಷಗಳಿವೆ...." ಎಂದಳು.

"ಕೆಲವೇ ನಿಮಿಷಗಳಲ್ಲಿ ಮೊದಲ ಸುತ್ತು ಪ್ರಾರಂಭವಾಗುತ್ತದೆ. ಅದೇನೋ ಕೇವಲ ವ್ಯಾಯಾಮದ ಪ್ರದರ್ಶನ. ಆಮೇಲೆ ಡೀಲರ್ ವೇಲ್ಸ್ ಮತ್ತು ಗ್ರಿಡ್ಲಿ ಇವರ ಮಧ್ಯೆ ಮುಷ್ಟಿಯುದ್ಧಕ್ಕೆ ಪೂರ್ವಭಾವಿಯಾಗಿ ಆತ್ಮ ರಕ್ಷಣೆಯ ನಾಲ್ಕು ವರಿಸೆಗಳು. ಮತ್ತು ಸ್ಟಾರ್‌ಲೈಟ್ ಯಾವನೋ ಒಬ್ಬ ನಾವಿಕನೊಡನೆ ಹತ್ತು ರೌಂಡಿನ ಬಿರುಸಿನ ಆಟ ಆಡುತ್ತಾನೆ. ನಾನು ಒಂದು ಘಂಟೆಗಿಂತಲೂ ಹೆಚ್ಚುಕಾಲ ಇರಬೇಕಾಗುತ್ತದೆ .."

ಹತ್ತು ನಿಮಿಷಗಳು ನಿಶ್ಶಬ್ದವಾಗಿದ್ದನು. ಆಮೇಲೆ ಎದ್ದು, "ಲಿಸಿ, ಸತ್ಯವನ್ನು ಹೇಳುವುದಾದರೆ, ನನಗೆ ಸರಿಯಾದ ಅಭ್ಯಾಸ ದೊರಕಿಲ್ಲ...." ಎಂದನು.

ಹ್ಯಾಟನ್ನು ಹುಡುಕಿ ತೆಗೆದುಕೊಂಡು ಬಾಗಿಲ ಹತ್ತಿರ ಹೊರಟನು. ತಾನಾಗಿಯೆ ಅವಳನ್ನು ಚುಂಬಿಸಲಿಲ್ಲ. ಹಿಂದಿನಿಂದಲೂ ಹೊರಕ್ಕೆ ಹೋಗುತಿದ್ದಾಗ ಆ ಪದ್ಧತಿಯಿರಲಿಲ್ಲ. ಆದರೆ ಈ ರಾತ್ರಿ ಲಿಸಿ ತಾನಾಗಿಯೆ ಕೈ ಬೀಸಿ ಗಂಡನ ಮುಖವನ್ನು ಹತ್ತಿರ ಸೆಳೆದುಕೊಂಡಳು. ಆಜಾನುಬಾಹುವಿನ ಎದುರು ತಾನು ಅತಿ ನಣ್ಣದವಳಂತೆ ಕಂಡಳು.

"ನಿನಗೆ ಒಳ್ಳೆಯದಾಗಲಿ. ಟಾಮ್. ಅವನನ್ನು ನೀನು ಗೆಲ್ಲುತ್ತೀಯೆ" ಎಂದಳು.

"ಹೌದು ; ನಾನು ಹಾಗೆಯೇ ಮಾಡುತ್ತೇನೆ" ಎಂದು ಟಾಮ್ ಒಪ್ಪಿಗೆಯನ್ನು ಸೂಚಿಸಿದನು.

ಆನಂದಾತಿರೇಕದಿಂದ ಆಕೆಯನ್ನು ನೋಡಿ ನಕ್ಕನು. ಹೆಂಡತಿಯ ಬಾಹುಬಂಧನದಲ್ಲಿದ್ದರೂ, ತನ್ನ ದೃಷ್ಟಿಯನ್ನು ಮಾತ್ರ ಶೂನ್ಯ ಕೊಠಡಿಯ ಕಡೆ ಹೊರಳಿಸಿದನು. ಅದೊಂದೇ ಅವನಿಗೆ ಪ್ರಪಂಚದಲ್ಲಿದ್ದ ವಸ್ತು; ಬಾಡಿಗೆಯನ್ನು ಮಾತ್ರ ಬಹು ದಿನಗಳಿಂದ ಕೊಟ್ಟಿರಲಿಲ್ಲ. ಉಳಿದ ಹತ್ತಿರದ ಜೀವಿಗಳೆಂದರೆ ತನ್ನ ಹೆಂಡತಿ ಮತ್ತು ಚಿಕ್ಕ ಮಕ್ಕಳು. ಆ ರಾತ್ರಿ ಎಲ್ಲವನ್ನೂ ಬಿಟ್ಟು ಹೆಂಡತಿ ಮಕ್ಕಳಿಗೆ ಮಾಂಸ ತರಲು ಹೊರಡಬೇಕಿತ್ತು. ಅವನು ನವೀನ ಕಾಲದ ಕೆಲಸಗಾರನಂತೆ ಯಂತ್ರದ ಬಳಿ ನಿಂತು ಸಂಪಾದನೆ ಮಾಡುವಂತಿಲ್ಲ. ಅವನ ಮಾರ್ಗ ಹಳೆಯದು; ಹಾಗೆಯೇ ಅನಾಗರಿಕವಾದುದು. ಒಟ್ಟಿನಲ್ಲಿ ಪ್ರಾಣಿಯಂತೆ ಹೊಡೆದಾಡಿ ಮಾಂಸದ ಸಂಪಾದನೆ ಮಾಡಬೇಕು!

"ನಾನು ಗೆದ್ದರೆ, ಮೂವತ್ತು ಪೌಂಡು ಹಣ–ಆಗ ಸಾಲವನ್ನೆಲ್ಲ ತೀರಿಸ ಬಹುದು. ತಕ್ಕಮಟ್ಟಿಗೆ ಉಳಿಸಲೂಬಹುದು. ನಾನು ಸೋತರೆ, ನನಗೆ ಏನೂ ಸಿಗುವುದಿಲ್ಲ. ಟ್ರಾಮಿನಲ್ಲಿ ಮನೆಗೆ ಬರಲು ಒಂದು ಪೆನ್ನಿಯೂ ಇರುವು ದಿಲ್ಲ. ಏಕೆಂದರೆ ಸೋಲಿನ ಹಣವನ್ನು ಕಾರ್ಯದರ್ಶಿ ಆಗಲೇ ಸಾಲವಾಗಿ ಕೊಟ್ಟಿದ್ದಾನೆ....ವೃದ್ಧ ಹೆಂಗಸೇ, ನಮಸ್ಕಾರ....ಗೆಲುವಾದರೆ ನೇರವಾಗಿ ಮನೆಗೇ ಬರುತ್ತೇನೆ...." ಎಂದು ಬೇಸರದ ಧ್ವನಿಯಲ್ಲಿ ಹೇಳಿ, ಟಾಮ್‌ಕಿಂಗ್ ಹೊರಡಲು ಸಿದ್ಧನಾದನು.

ಕೊಠಡಿಯಲ್ಲೇ ನಿಂತು, ಅವನ ಹೆಂಡತಿ ಹೇಳಿದಳು: "ನಾನು ಕಾಯು ತಿರುತ್ತೇನೆ ..."

*　　*　　*　　*　　*

ಗಯೆಟಿಗೆ ಸೇರಬೇಕಾದರೆ ಸಂಪೂರ್ಣ ಎರಡು ಮೈಲಿಯನ್ನು ನಡೆಯ ಬೇಕು. ಅದೇ ಹಾದಿಯಲ್ಲಿ ಟಾಮ್‌ಕಿಂಗ್ ನಡೆಯುತಿದ್ದನು. ತನ್ನ ಉತ್ಕರ್ಷದ ದಿನಗಳನ್ನು ನೆನೆಸಿಕೊಂಡನು—ಒಂದು ಕಾಲದಲ್ಲಿ ತಾನು ನ್ಯೂ ಸೌತ್ ವೇಲ್ಸಿನ 'ಹೆವಿ ವೈಟ್ ಛಾಂಪಿಯನ್,' ಆಗ ಕ್ಯಾಬ್ ಬಂಡಿಯಲ್ಲೇ ಆಟದ ಸ್ಥಳಗಳಿಗೆ ಪ್ರಯಾಣ ಮಾಡುತಿದ್ದನು. ತನ್ನ ಕಡೆಯ, ಭಾರಿ ಆಸಾಮಿ ಗಳಲ್ಲಿ ಯಾರಾದರೂ ಖರ್ಚು ವಹಿಸಿಕೊಳ್ಳಲು ಸಿದ್ಧರಾಗಿ, ತನ್ನೊಡನೆ ಕುಳಿತು ಬರುತಿದ್ದರು....ಈಗ ಬ್ರಿಟನ್ನಿನ ಬರ್ನ್ಸ್, ಅಮೆರಿಕದ ಜ್ಯಾಕ್ ಜಾನ್‌ಸನ್ ಮುಂತಾದ ಸಾಮಾನ್ಯರು ಕಾರಿನಲ್ಲಿ ಓಡಾಡುತ್ತಿದ್ದಾರೆ. ತಾನು ಮಾತ್ರ ನಡೆಯುತಿದ್ದೇನೆ! ಪಂದ್ಯದಲ್ಲಿ ಭಾಗವಹಿಸಲು ಎರಡು ಮೈಲಿ ದೂರ ನಡೆದು ಬರುವುದು ಒಳ್ಳೆಯ ಪೂರ್ವ ಸಿದ್ಧತೆಯಲ್ಲ. ಅದು ಎಲ್ಲರಿಗೂ ಗೊತ್ತಿದೆ. ಆದರೇನು ಮಾಡುವುದು? ಮುದುಕರ ಪ್ರಪಂಚ ಹಾಗೆಯೆ. ಈಗ ತಾನು ಯಾವ ಕೆಲಸವನ್ನೂ ಮಾಡುವಂತಿಲ್ಲ. ನೌಕಾ ದಳವೊಂದಿದೆ; ಮುರಿದ ಮೂಗು, ಉಬ್ಬಿದ ಕಿವಿಗಳನ್ನು ನೋಡಿದರೆ ಅಲ್ಲೂ ಅವಕಾಶವಿಲ್ಲ. ಯಾವುದಾದರೂ ವ್ಯಾಪಾರವನ್ನು ಹಿಡಿದಿದ್ದರೆ ಚೆನ್ನಾಗಿತ್ತು. ಇಷ್ಟು ಹೊತ್ತಿಗೆ ಉತ್ತಮ ಸ್ಥಿತಿ ಯಲ್ಲಿ ಇರಬಹುದಾಗಿತ್ತು. ಹಿಂದೆ ಯಾರೂ ತನಗೆ ಆ ಸಲಹೆ ಕೊಟ್ಟಿರಲಿಲ್ಲ. ಒಂದು ವೇಳೆ ಹೇಳಿದ್ದರೂ ಕಿವಿಗೊಡುತ್ತಿರಲಿಲ್ಲ ಎಂಬ ಅಂಶ ತನ್ನ ಸ್ವಭಾವ ದಲ್ಲೇ ಅಡಗಿತ್ತು; ಏಕೆಂದರೆ ತಾನು ನಡೆಸುತ್ತಿದ್ದ ವೃತ್ತಿ ಅಷ್ಟು ಸುಲಭ ವಾಗಿತ್ತು....ಬೇಕಾದಷ್ಟು ಹಣ; ತೀವ್ರ ಉತ್ಸಾಹದ ಆಟಗಳು; ಮಧ್ಯೆ ಮಧ್ಯೆ ವಿಶ್ರಾಂತಿ ಇಲ್ಲವೆ ಹೆಮ್ಮೆಯ ಅಲೆದಾಟ. ಉತ್ಸಾಹಿ ಹೊಗಳುಭಟ್ಟರಂತೂ

ಮನಸ್ಸು ಬಿಗಿಹಿಡಿಯಲಾರದೆ ಬೆನ್ನು ತಟ್ಟುತ್ತಿದ್ದರು ಅಥವಾ ಕೈಕುಲುಕು ತಿದ್ದರು. ಐದು ನಿಮಿಷವಾದರೂ ತನ್ನ ಜೊತೆ ಮಾತನಾಡುವ ಸುಯೋಗ ಕ್ಕಾಗಿ ಸೀಟುಗಾರರು ತಮ್ಮ ಖರ್ಚಿನಲ್ಲಿ ತನಗೆ ಮದ್ಯ ಕೊಡಿಸುತ್ತಿದ್ದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಹರ್ಷಘೋಷದ ಪ್ರೇಕ್ಷಕರು ಮಿಂಚಿನಂಥ ಕೊನೆಯ ಪಟ್ಟನ್ನು ನೋಡಿ ಗಗನ ಭೇದಿಸುವಂತೆ ಕೂಗುತ್ತಿದ್ದ ಕಾಲ; ಈ ಮಧ್ಯೆ ರೆಫರಿ ಜೋರಾಗಿ, "ಟಾಮ್ ಕಿಂಗ್ ಗೆದ್ದನು, ಕಿಂಗಿಗೆ ಜಯ." ಎಂದು ತೀರ್ಪು ಹೇಳುತ್ತಿದ್ದನು. ಮಾರನೆಯ ದಿನ ಎಲ್ಲ ಪತ್ರಿಕೆಗಳ ಕ್ರೀಡಾ ವಿಭಾಗ ದಲ್ಲೂ ತನ್ನ ಹೆಸರು ಮೆರೆಯುತ್ತಿತ್ತು....

ಅಂಥ ಕಾಲವೆಲ್ಲಿ ಬರಬೇಕು? ಆದರೆ ತನಗೆ ಈಗ ಅರ್ಥವಾಗಿದೆ. ನಿಧಾನವಾಗಿ ಯೋಚಿಸಿದರೆ ವಿಜಯದ ಗುಟ್ಟು ತಿಳಿಯದೆ ಇಲ್ಲ. ತಾನು ಅನೇಕ ಮುದುಕರನ್ನು ಸೋಲಿಸಿದ್ದುಂಟು. ಆಗ ಟಾಮ್ ಕಿಂಗ್ ಉದಯೋ ನ್ಮುಖ ಯುವಕನಾಗಿದ್ದನು; ಎದುರಾಳಿಗಳಾದರೋ ಇಳಿಮುಖಗೊಂಡಿದ್ದ ವಯೋವೃದ್ಧರು. ಹೀಗಿರುವಲ್ಲಿ ಆಟ ಸುಲಭವಾಗಿತ್ತೆಂದರೆ ಆಶ್ಚರ್ಯವಿಲ್ಲ. ಎಷ್ಟೋ ಕಾದಾಟಗಳಲ್ಲಿ ರಕ್ತ ಬಸಿದಿದ್ದ ವೃದ್ಧರು ಸುಸ್ತಾಗಿ ಬೇಗನೆ ಕೆಳಕ್ಕೆ ಬೀಳುತ್ತಿದ್ದರು....

'ರಷ್ ಕಟರ್ಸ್ ಬೇ' ನಲ್ಲಿ ನಡೆದ ಪಂದ್ಯ ಜ್ಞಾಪಕವಿದೆ. ಅಲ್ಲಿ ಅವನು ಮುದುಕನಾಗಿದ್ದ 'ಸ್ಟೌಷರ್ ಬಿಲ್'ನನ್ನು ಹದಿನೆಂಟನೆ ರೌಂಡಿನಲ್ಲಿ ಸೋಲಿ ಸಿದ್ದನು. ಆಗ ಮುದುಕ ಬಿಲ್ ಡ್ರೆಸಿಂಗ್ ರೂಮಿನಲ್ಲಿ ಎಳೆಯ ಮಗುವಿ ನಂತೆ ಅತ್ತುಬಿಟ್ಟನು! ಈಗ ಊಹಿಸಬಹುದು; ಬಿಲ್ ಆ ದಿನವೇ ತುಂಡು ಮಾಂಸಕ್ಕಾಗಿ ಹಸಿದಿದ್ದನೋ ಏನೊ. ಬಹು ದಿನದ ಮನೆಯ ಬಾಡಿಗೆ ಕೊಟ್ಟಿರಲಿಲ್ಲವೆಂದು ಕಾಣುತ್ತೆ. ತನ್ನಂತೆಯೇ ಅವನಿಗೂ ಹೆಂಡತಿ ಮಕ್ಕಳು ಇದ್ದಿರಬಹುದು. ಬಿಲ್ ರಂಗಕ್ಕೆ ಇಳಿದನು; ಆದರೆ ನಂಬಲೂ ಅಸಾಧ್ಯ ವಾದ ಏಟು ಬಿತ್ತು. ಇಪ್ಪತ್ತು ವರ್ಷದ ಹಿಂದೆ ತಾನು ಕೇವಲ ಸುಲಭವಾಗಿ ಬರುವ ಹಣಕ್ಕೂ ಕೀರ್ತಿಗೂ ಹೊಡೆದಾಟ ನಡೆಸಿದ್ದು; ಆದರೆ ಸ್ಟೌಷರ್ ಬಿಲ್ ಹಣದ ಬೆಲೆಯರಿತು ತನಗಿಂತಲೂ ಜೋರಾಗಿ ಪಂದ್ಯವಾಡಿದ್ದನು. ಆದ್ದ ರಿಂದ ಡ್ರೆಸಿಂಗ್ ರೂಮಿನಲ್ಲಿ ಬಿಲ್ ಅತ್ತನೆಂದರೆ ಏನೂ ಆಶ್ಚರ್ಯವಿಲ್ಲ....

ನಿಜ; ಪ್ರಾರಂಭದಲ್ಲಿ ಮನುಷ್ಯನೊಬ್ಬ ಇಷ್ಟೇ ಕಾದಾಟಗಳನ್ನು ನಡೆಸ ಬಲ್ಲ ಎಂದು ಹೇಳಬಹುದು. ಅದು ಪಂದ್ಯದ ನಿಷ್ಠುರ ನಿಯಮ. ಒಬ್ಬ ಜೋರಾದ ನೂರು ಪಂದ್ಯಗಳನ್ನು ಆಡಿದ್ದರೆ, ಇನ್ನೊಬ್ಬ ಇಪ್ಪತ್ತರಲ್ಲೇ ಕೊನೆ

ಗೊಂಡಿರಬಹುದು; ಆ ನಿರ್ದಿಷ್ಟ ಸಂಖ್ಯೆ ಆಯಾ ಮನುಷ್ಯನ ದೇಹ ಸೌಷ್ಟವದ ಮೇಲೆ ನಿಂತಿದೆ. ಅಷ್ಟು ಸಂಖ್ಯೆ ಮುಗಿದ ಮೇಲೆ ಅವನ ಯೋಗ್ಯತೆಯೂ ಮುಗಿಯಿತು. ಹಾಗೆ ನೋಡಿದರೂ, ತನಗೆ ಇತರರಿಗಿಂತ ಹೆಚ್ಚು ಸಂಖ್ಯೆ ಸಲ್ಲುತ್ತದೆ. ಅದೂ ಅಲ್ಲದೆ ತಾನು ಆಡಿರುವ ಪಂದ್ಯಗಳು ಸಾಮಾನ್ಯವಾದುವಲ್ಲ; ಹೃದಯ ಒಡೆಯುವಂಥಾದ್ದು; ರಕ್ತದ ಒತ್ತಡದಿಂದ ಯೌವನದ ಮೃದು ಚರ್ಮ ಗಂಟು ಗಂಟಾಗಿ, ಪುನಃ ಹಿಂದಿನ ಸ್ಥಿತಿಗೆ ಬರಲು ಅಸಾಧ್ಯವಾಯಿತು; ತುಂಬಾ ಸಾಧನೆಯಿಂದ ಮೆದುಳು ಬೇಸರಗೊಂಡಿತು. ಸಹನೆಯಂತೂ ದಾರಿತಪ್ಪಿ ಮಿತಿ ಮೀರಿ ಕೆರಳಿತು....ತನ್ನೊಡನೆ ಕಾದಾಡು ತಿದ್ದ ಹಳೆಯ ಜೊತೆಗಾರರಲ್ಲಿ ಈಗ ಯಾರೂ ಉಳಿದಿಲ್ಲ. ತಾನೊಬ್ಬನೇ ಕೊನೇ ಆಸಾಮಿ. ತನ್ನವರು ಜೀವನಯಾತ್ರೆ ಮುಗಿಸಿದ್ದನ್ನು ಅವನು ನೋಡಿದ್ದನು. ಅಷ್ಟೇಕೆ? ಕೆಲವರ ಕೊನೆಗಾಲ ತನ್ನ ಕೈವಾಡದಿಂದಲೇ ನಡೆದಿತ್ತು. ತನ್ನನ್ನು ಎದುರಿಸಲು ಮುದುಕರೇ ಬರುತ್ತಿದ್ದರು. ಒಬ್ಬೊಬ್ಬ ರನ್ನಾಗಿ ತಾನು ಬಿಗಿದು ಎಸೆಯುತಿದ್ದನು. ಬಿಲ್‌ನಂತೆ ಅವರೂ ಡ್ರೆಸಿಂಗ್ ರೂಮಿನಲ್ಲಿ ಅಳುತ್ತಿದ್ದಾಗ ತಾನು ನಗುತ್ತಿದ್ದನು.....

ಈಗ ಟಾಮ್ ಕಿಂಗ್ ಮುದುಕ. ಅವನನ್ನು ಎದುರಿಸಲು ಯುವಕ ರಿದ್ದಾರೆ. ಅಂಥವರಲ್ಲಿ ಸ್ಯಾಂಡಲ್ ಮುಂದಾಳಾಗಿದ್ದಾನೆ. ನ್ಯೂಜಿಲೆಂಡಿ ನಲ್ಲಿ ರಿಕಾರ್ಡು ಸ್ಥಾಪಿಸಿ ಆತ ಇಲ್ಲಿಗೆ ಬಂದಿದ್ದಾನೆ. ಆದರೆ ಆಸ್ಟ್ರೇಲಿಯದ ಜನರಿಗೆ ಆತನ ಬಗ್ಗೆ ಏನೂ ತಿಳಿಯದು. ಆದ್ದರಿಂದಲೇ ಅವನನ್ನು ಟಾಮ್ ಕಿಂಗಿಗೆ ಎದುರಾಗಿ ನಿಲ್ಲಿಸಿದ್ದರು. ಅವನು ಉತ್ತಮ ಪ್ರದರ್ಶನ ನೀಡಿದರೆ, ಮುಂದೆ ಹೆಚ್ಚು ಯೋಗ್ಯತೆಯುಳ್ಳ ಮನುಷ್ಯರೊಡನೆ ಆಟವಾಡಿ ಪಂದ್ಯದ ಭಾರಿ ಹಣವನ್ನು ಹೊಡೆಯಲು ಅವಕಾಶವಿತ್ತು. ಆದ್ದರಿಂದ ಅವನು ಭಯಂಕರ ಹೋರಾಟ ನಡೆಸದೆ ಇರುತ್ತಾನೆಯೇ? ಕೇವಲ ಹಣವಲ್ಲ; ಅದ ರಿಂದ ಅವನ ಕೀರ್ತಿ, ವೃತ್ತಿಯ ಗೌರವ ಎಲ್ಲವೂ ಹೆಚ್ಚುತ್ತದೆ. ಅಂಥ ಕೀರ್ತಿಯ ಮತ್ತು ಅದೃಷ್ಟದ ರಾಜಮಾರ್ಗವನ್ನು ತಡೆದು, ಮುದುಕ ಟಾಮ್ ಕಿಂಗ್ ನಿಂತಿದ್ದಾನೆ. ತನಗೆ ಯಾವ ಕೀರ್ತಿ ಕಾಮಿನಿಯೂ ಬೇಡ. ವ್ಯಾಪಾರಸ್ಥರಿಗೆ ಮತ್ತು ಮನೆ ಯಜಮಾನನಿಗೆ ಕೊಡಬೇಕಾಗಿರುವ ಮೂವತ್ತು ಪೌಂಡು ಹಣ ಗೆದ್ದರೆ ಸಾಕು....

ಟಾಮ್ ಕಿಂಗ್ ಮತ್ತೆ ಯೋಚಿಸಿದನು. ಪುನಃ ವೈಭವಯುತ ಯೌವನದ ದೃಶ್ಯ ಕಣ್ಣಿಗೆ ಕಟ್ಟಿದಂತಾಯಿತು; ಜಯೋನ್ಮತ್ತನಾಗಿ ಮೆರೆದ

ಕಾಲ; ಕಾದಾಟಕ್ಕೆ ಮಿತಿಯುಂಟು ಎಂದು ಹೇಳುವವರನ್ನು ನಗೆಪಾಟಲು ಮಾಡುತ್ತಿದ್ದ ಕಾಲ. ನಿಜ; ಯೌವನ, ಪ್ರತೀಕಾರ ಬುದ್ಧಿಯಿಂದ ಮುಂದು ವರಿದಿತ್ತು. ಅದು ಮುದುಕರನ್ನು ನಿರ್ದಾಕ್ಷಿಣ್ಯವಾಗಿ ನಾಶಪಡಿಸಿತ್ತು. ಆದರೆ ಆ ರೀತಿ ಮಾಡುವಲ್ಲಿ ತನ್ನನ್ನು ತಾನೇ ಬಡಿದು ನಾಶಗೊಂಡಿತ್ತು! ಯೌವನದ ಬಿಸಿ ರಕ್ತ ಉಬ್ಬಿ ಹರಿಯಿತು; ಗೆಣ್ಣುಗಳಿಂದ ಒಂದೇ ಸಮನೆ ಗುದ್ದಾಟ ನಡೆ ಯಿತು; ಆದರೆ ವಯಸ್ಸು ಬಂದ ಮೇಲೆ ಪುನಃ ಯೌವನದ ಕೈಗೆ ಸಿಕ್ಕಿ ನುಚ್ಚು ನೂರಾಯಿತು. ಇಷ್ಟೇ ತಾನೆ! ಹೌದು; ಯೌವನ ಯಾವಾಗಲೂ ಉತ್ಸಾಹ ಜನಕವಾಗಿಯೆ ಇರುತ್ತದೆ! ವೃದ್ಧಾಪ್ಯವೆನ್ನುವುದು ವಯಸ್ಸಿಗೆ ಮಾತ್ರ ಅಂಟಿ ಕೊಂಡಿರುವ ಜಾಡ್ಯ....

*   *   *   *   *

ಕ್ಯಾಸಲ್‌ರೀಗ್ ರಸ್ತೆಯನ್ನು ಸೇರಿದನು. ಎಡಕ್ಕೆ ತಿರುಗಿ, ಮೂರು ಮಠಾರಗಳನ್ನು ದಾಟಿದ ಮೇಲೆ ಗೆಯಟಿಕ್ಲಬ್ ಸಿಕ್ಕಿತು. ಬಾಗಿಲ ಹೊರಗೆ ಆಟವಾಡುತ್ತಿದ್ದ ಬೀದಿ ಪುಂಡರು ಮರ್ಯಾದೆಯಿಂದ ದಾರಿಬಿಟ್ಟರು. ಅವರಲ್ಲಿ ಒಬ್ಬ ಇನ್ನೊಬ್ಬನಿಗೆ ಹೇಳುತ್ತಿದ್ದನು: "ಅವನೇ ಇವನು! ಇವನೇ ಟಾಮ್ ಕಿಂಗ್!" ಆ ಮಾತು ಟಾಮ್‌ಕಿಂಗ್‌ನ ಕಿವಿಗೂ ಬಿತ್ತು.

ಒಳಕ್ಕೆ ಹೊರಟನು. ಡ್ರೆಸ್ಸಿಂಗ್ ರೂಮಿಗೆ ಹೋಗುತ್ತಿದ್ದಾಗ ಕಾರ್ಯ ದರ್ಶಿಯನ್ನು ಸಂಧಿಸಿದನು. ಚುರುಕು ಸ್ವಭಾವದ ಕಾರ್ಯದರ್ಶಿ ಕೈ ಕುಲುಕಿದನು.

"ಹೇಗಿದ್ದೀಯಾ, ಟಾಮ್?"

"ಆರೋಗ್ಯವಾಗಿದ್ದೇನೆ...." ಎಂದು ಟಾಮ್ ಉತ್ತರಕೊಟ್ಟನು. ಅ ಸತ್ಯವನ್ನು ಹೇಳುತಿದ್ದೇನೆಂದು ಅವನಿಗೆ ಗೊತ್ತಿರದೆ ಇರಲಿಲ್ಲ. ತನ್ನಲ್ಲಿ ಸ್ವಲ್ಪ ಹಣವಿದ್ದಿದ್ದರೆ, ಆ ಸ್ಥಿತಿಯಲ್ಲಿ ಒಂದು ತುಂಡು ಮಾಂಸಕ್ಕಾಗಿ ತಕ್ಷಣ ವಿನಿ ಮಯ ಮಾಡಿಕೊಳ್ಳುತ್ತಿದ್ದನು!

ಡ್ರೆಸಿಂಗ್ ರೂಮಿನಿಂದ ಹೊರಕ್ಕೆ ಬಂದನು. ತನ್ನ ಸಹಾಯಕರು ಹಿಂದೆ ಬರುತ್ತಿದ್ದರು. ಆಸನ ಸಾಲುಗಳ ನಡುವೆ ದಾರಿಮಾಡಿಕೊಂಡು ಹಜಾರದ ಮಧ್ಯದಲ್ಲಿದ್ದ ಚೌಕಾಕಾರದ ರಂಗಸ್ಥಳದ ಬಳಿ ನಿಂತನು. ಕಾಯು ತ್ತಿದ್ದ ಜನ ಸಮುದಾಯ ಸಂತೋಷದಿಂದ ಹಿಗ್ಗಿ ಶುಭಾಶಯ ಕೋರಿತು. ಚಪ್ಪಾಳೆಯಂತೂ ಗಗನ ಭೇಧಿಸುವಂತೆ ಶಬ್ದಮಾಡಿತು. ಎಡ ಬಲ ದಿಕ್ಕು ಗಳಿಂದ ಬಂದ ಅಭಿವಂದನೆಗಳನ್ನು ಸ್ವೀಕರಿಸಿದನು; ಆದರೆ ಅವನಿಗೆ ಪರಿಚಿತ

ಮುಖಗಳು ಅತ್ಯಲ್ಪ. ಎದುರಿಗಿದ್ದ ಎಷ್ಟೋ ಮಕ್ಕಳು ತಾನು ರಂಗದಲ್ಲಿ ಮೊದಲ ಜಯಭೇರಿ ಹೊಡೆದಾಗ ಹುಟ್ಟಿಯೇ ಇರಲಿಲ್ಲ. ಮೈ ಹಗುರ ಮಾಡಿಕೊಂಡು ಮೇಲ್ಮಟ್ಟದ ವೇದಿಕೆಗೆ ನೆಗೆದನು. ತಲೆ ತಗ್ಗಿಸಿ ಹಗ್ಗವನ್ನು ಹಾದು ತನ್ನ ಮೂಲೆಯಲ್ಲಿ ಕುಳಿತನು. ಅದು ಮಡಿಸಬಹುದಾದ ಕುರ್ಚಿ. ಜ್ಯಾಕ್ ಬಾಲ್ ಎಂಬ ರೆಫರಿ ಅಲ್ಲಿಗೆ ಬಂದು ಕೈ ಕುಲುಕಿದನು. ಒಂದು ಕಾಲದಲ್ಲಿ ಬಾಲ್ ಜೆಟ್ಟಿಯಾಗಿದ್ದನು; ಇಂದು ಅವನು ಮುರಿದು ಬಿದ್ದ ಮಹಾಮಲ್ಲ; ಹತ್ತುವರ್ಷಗಳಿಗೂ ಮೇಲ್ಪಟ್ಟು ಮಲ್ಲರಂಗಕ್ಕೆ ಇಳಿದಿರಲಿಲ್ಲ. ಅಂಥವನು ರೆಫರಿಯಾಗಿರುವುದನ್ನು ನೋಡಿ ಟಾಮ್‌ಕಿಂಗ್ ಸಂತೋಷ ಪಟ್ಟನು. ತಾವಿಬ್ಬರೂ ಮುದುಕರ ಗುಂಪಿಗೆ ಸೇರಿದವರು. ತಾನು ಸ್ಯಾಂಡಲ್‌ನನ್ನು ತೀಡುವಾಗ ಸ್ವಲ್ಪ ಕಾನೂನು ಮೀರಿದರೂ ಪರವಾಗಿಲ್ಲ; ಅದನ್ನು ರಾದ್ಧಾಂತ ಮಾಡದೇ ಮುಚ್ಚಿಬಿಡುವ ಪ್ರವೃತ್ತಿ 'ಬಾಲ್'ನಲ್ಲಿರುವುದು ತನಗೆ ಗೊತ್ತುಂಟು.....

ಒಬ್ಬೊಬ್ಬರಾಗಿ ಉತ್ಸಾಹಿ ಯುವಕರು ರಂಗದ ಸುತ್ತಮುತ್ತ ನೆರೆದರು. ಅವರೆಲ್ಲರೂ ಭಾರವನ್ನೆತ್ತುವ ದೊಡ್ಡ ಆಳುಗಳು. ರೆಫರಿ ಬಾಲ್, ಜನ ಸಮುದಾಯಕ್ಕೆ ಅವರ ಪರಿಚಯಮಾಡಿಕೊಟ್ಟನು. ಮತ್ತು ಅವರವರ ದ್ವಂದ್ವ ಯುದ್ಧದ ಆಹ್ವಾನಗಳನ್ನು ಘೋಷಿಸಿದನು.

"ಐವತ್ತು ಪೌಂಡಿನ ಪಂದ್ಯದಲ್ಲಿ ಗೆದ್ದವನನ್ನು, ಉತ್ತರ ಸಿಡ್ನಿಯ ಯುವಕ ಪ್ರೊನ್ಟೊ ಆಹ್ವಾನಿಸುತ್ತಾನೆ...." ಎಂದು ಬಿಲ್ ಪ್ರಕಟಿಸಿದನು.

ಜನ ಚಪ್ಪಾಳೆತಟ್ಟಿದರು....ಸ್ಯಾಂಡಲ್ ಹಗ್ಗದ ಮೇಲೆ ನೆಗೆದು ತನ್ನ ಮೂಲೆಯಲ್ಲಿ ಕುಳಿತಾಗ ಮತ್ತೆ ಚಪ್ಪಾಳೆಯಾಯಿತು. ಟಾಮ್‌ಕಿಂಗ್ ಅಖಾಡದ ಆ ಕಡೆ ಕುತೂಹಲದಿಂದ ನೋಡಿದನು. ಏಕೆಂದರೆ ಕೆಲವೇ ನಿಮಿಷಗಳಲ್ಲಿ ತಾವಿಬ್ಬರೂ ಕರುಣರಹಿತ ಯುದ್ಧಕ್ಕೆ ಮೈಯೊಡ್ಡಬೇಕು; ಇಬ್ಬರೂ ತಮ್ಮಲ್ಲಿರುವ ಶಕ್ತಿಯನ್ನೆಲ್ಲ ಸಂಗ್ರಹಿಸಿ, ಯಾರನ್ನಾದರೂ ಜ್ಞಾನ ತಪ್ಪುವಂತೆ ಹೊಡೆಯಲೇಬೇಕು; ಸ್ಯಾಂಡಲ್ ತನ್ನಂತೆಯೇ ಕುಸ್ತಿಯಾಟದ ಉಡುಪಿನ ಮೇಲೆ ಸ್ವೆಟರ್ ಮತ್ತು ಷರಾಯಿ ಧರಿಸಿದ್ದನು; ಇದರಿಂದ ಅವನ ದೇಹಕಾಂತಿ ಸಂಪೂರ್ಣ ಹೊರಸೂಸಲು ಅವಕಾಶವಿರಲಿಲ್ಲ. ಅವನ ಮುಖ ವೇನೊ ಸುಂದರವಾಗಿತ್ತು. ಗುಂಗುರು ಹಳದಿ ಕೂದಲು ತಲೆಯ ತುಂಬ ದಟ್ಟವಾಗಿ ಬೆಳೆದಿತ್ತು. ಮಾಂಸಪುಷ್ಟಿಯುಳ್ಳ ದಪ್ಪನೆಯ ಕತ್ತು ಮಾತ್ರ ಆತನ ದೈಹಿಕ ಶಕ್ತಿಯನ್ನು ಸೂಚಿಸುವಂತಿತ್ತು.

ಯುವಕ ಪ್ರೊನ್ಟೊ ಒಳಕ್ಕೆ ಬಂದು, ಅನೇಕ ಹೋರಾಳುಗಳ ಕೈ ಕುಲುಕಿ ರಂಗದ ಹೊರಕ್ಕೆ ಬಂದನು. ದ್ವಂದ್ವ ಯುದ್ಧದ ಆಹ್ವಾನಗಳು ಮಾತ್ರ ಮುಂದುವರಿಯುತ್ತಲೇ ಇದ್ದವು. ಸುತ್ತುವರಿದ ಹಗ್ಗದ ಮೇಲೆ ಯುವಕರ ತಂಡ ನೆಗೆಯುತಿತ್ತು ; ಅತೃಪ್ತಿಯ ಅಪರಿಚಿತ ಯುವಕರು ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಗೆದ್ದವರ ಸಾಲಿನಲ್ಲಿ ಅರ್ಹತೆಯನ್ನು ಸಂಪಾದಿಸಿ ಕೊಳ್ಳುತ್ತಿದ್ದರು.

ತಾನು ಅಜೇಯನಾಗಿದ್ದ ಕಾಲದಲ್ಲಿ ಟಾಮ್‌ಕಿಂಗ್‌ಗೆ ಇಂಥ ಪ್ರಯೋಗದ ಹೋರಾಟಗಳಿಂದ ಸಂತೋಷವೋ ಬೇಸರವೊ ಬರುತಿತ್ತು. ಆದರೆ ಯುವಕರ ಸೊಬಗಿನಿಂದ ಆಕರ್ಷಿತನಾಗಿ ಟಾಮ್‌ಕಿಂಗ್ ಈಗ ಮುಗ್ಧನಂತೆ ಕುಳಿತಿದ್ದನು.....ಯಾವಾಗಲೂ ಮುಷ್ಟಿಕಾಳಗದಲ್ಲಿ ಉದ್ಧಟ ಯುವಕರದೇ ಮೇಲು ಕೈ. ಹಾಗೆಯೇ ಪ್ರತಿ ಸಲವೂ ಅವರು ಕೆಳಗೆ ಬಿದ್ದ ಮುದುಕರನ್ನು ಮೆಟ್ಟಿ ನಿಲ್ಲುತ್ತಾರೆ. ಮತ್ತೆ ಇಂದಿನ ಯುವಕರು ನಾಳಿನ ಮುದುಕರಾಗಿ ಅದೇ ಜಾಡು ಹಿಡಿಯುತ್ತಾರೆ. ಆದರೆ ಯೌವನದ ಪ್ರತಿನಿಧಿಗಳಿಗೆ ಅಭಾವವಿಲ್ಲ. ಹೊಸ ಮಕ್ಕಳು ಬಹು ಬೇಗ ಬೆಳೆದು ದೊಡ್ಡವರನ್ನು ಹಿಡಿದೆಳೆಯುತ್ತಾರೆ. ಹಿಂದೆಯೇ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಕಾಲಚಕ್ರವಿರುವ ತನಕ ಮೇಲೇರಿಬರುತ್ತಾರೆ. ಅಂತೂ ಶಾಶ್ವತವಾಗಿರುವ ಯೌವನ ತನ್ನ ಹಟ ಸಾಧಿಸದೆ ಬಿಡುವುದಿಲ್ಲ.....

ಕಿಂಗ್ ಒಂದು ಕ್ಷಣ ಕಾಲ ಪತ್ರಿಕೆಯ ವರದಿಗಾರರು ಕುಳಿತಿದ್ದ ಜಾಗವನ್ನು ನೋಡಿದನು. ಅಲ್ಲಿ 'ಸ್ಪೋರ್ಟ್ಸ್‌ಮನ್' ಪತ್ರಿಕೆಯ ಮಾರ್ಗನ್, 'ರೆಫರಿ' ಪತ್ರಿಕೆಯ ಕಾರ್‌ಬೆಟ್ ಕುಳಿತಿದ್ದರು. ಅವರಿಗೆ ವಂದನೆ ಸೂಚಿಸಲು ತಲೆದೂಗಿದನು....ಇನ್ನು ಆಟದ ಕಡೆ ಗಮನ. ಕೈ ಚಾಚಿದರು ; ಆಗ ಸಿಡ್ ಸುಲಿವಾನ್ ಮತ್ತು ಚಾರ್ಲೆ ಬೇಟ್ಸ್ ಎಂಬ ತನ್ನ ಕಡೆಯ ಸಹಾಯಕರು ತನಗೆ ಕೈಗವಸು ಹಾಕಿ ಗಟ್ಟಿಯಾಗಿ ಕಟ್ಟಿದರು. ಸ್ಯಾಂಡಲ್ ಕಡೆಯ ಸಹಾಯಕರು ಅದನ್ನೇ ಸೂಕ್ಷ್ಮವಾಗಿ ನೋಡುತಿದ್ದರು ; ಟಾಮ್‌ಕಿಂಗ್‌ನ ಗೆಣ್ಣುಗಳ ಮೇಲೆ ಕಟ್ಟಿದ್ದ ಟೇಪನ್ನು ಪರೀಕ್ಷಿಸಿದರು. ಸ್ಯಾಂಡಲ್‌ನನ್ನು ವಿಚಾರಿಸಿಕೊಳ್ಳಲು ಆ ಕಡೆ ಹೊರಟರು. ಅವನ ಷರಾಯಿ ಮತ್ತು ಸ್ವೆಟರ್ ತೆಗೆಯಲ್ಪಟ್ಟಿತು. ಈಗ ಸ್ಯಾಂಡಲ್‌ನ ಸುಕುಮಾರ ದೇಹ ಹೊಳೆಯುತಿತ್ತು. ಟಾಮ್‌ಕಿಂಗ್ ಆಶ್ಚರ್ಯಪಟ್ಟನು—ನಿಜವಾಗಿಯೂ ಸ್ಯಾಂಡಲ್ ಯೌವನದ ಅಪರಾವತಾರ ; ಆತನ ಮಾಂಸಖಂಡಗಳಂತೂ ರೇಷ್ಮೆಯಂಥ ಚರ್ಮದ ಹಿಂಬದಿ

ಯಲ್ಲಿ ಜೀವಂತ ಪದಾರ್ಥಗಳಂತೆ ಮೇಲೆ ಕೆಳಗೆ ಓಡಾಡುತಿದ್ದವು. ಇಡೀ ದೇಹ ಸ್ಫೂರ್ತಿಯುತವಾಗಿತ್ತು. ಅ ಜೀವ ತನ್ನ ಹೊಸತನವನ್ನು ಕಳೆದು ಕೊಂಡಿರಲಿಲ್ಲ; ದೊಡ್ಡ ಕಾದಾಟಗಳಲ್ಲಿ ಹುಪ್ಪುಸ್ಸಿನಿಂದ ನುಗ್ಗಿ, ಹಿಂದಕ್ಕೆ ಬರುವಾಗ ಜರ್ಜರಿತ ದೇಹದಿಂದ ಸುಂಕತೆರುವ ಅವಕಾಶ ಇನ್ನೂ ಹೊಂದಿ ರಲಿಲ್ಲ.

ಇಬ್ಬರೂ ಭೇಟಿಯಾಗಲು ಮುಂದೆಬಂದರು. ಗಂಟೆ ಬಾರಿಸಿತು. ಸಹಾಯಕರು ಪಡಬಡಿಸಿ ಕುರ್ಚಿಗಳನ್ನು ಹೊತ್ತು ರಂಗದ ಹೊರಕ್ಕೆ ಬಂದರು.

ಟಾಮ್‌ಕಿಂಗ್ ಸ್ಯಾಂಡಲ್ ಇಬ್ಬರೂ ಕೈ ಕುಲುಕಿ, ಒಂದೇ ಕ್ಷಣದಲ್ಲಿ ಕಾದಾಡುವ ಭಂಗಿಯನ್ನು ತಾಳಿದರು.

ತಕ್ಷಣ ಸ್ಯಾಂಡಲ್ ಒಳಗೂ ಹೊರಗೂ ವ್ಯಾಪಿಸತೊಡಗಿದನು. ತುಪಾಕಿಯ ಉಪಕೀಲಿನ ಮೇಲೆ ನಿಂತ ಸ್ಪ್ರಿಂಗಿನಂತೆ ಜಗ್ಗುತಿದ್ದನು. ಒಮ್ಮೆ ಕಣ್ಣಿನ ಎಡಕ್ಕೆ ನಿಂತರೆ, ಮತ್ತೊಮ್ಮೆ ಪಕ್ಕೆಲುಬಿನ ಬಲಭಾಗದಲ್ಲಿ ಕಾಣಿಸಿ ಕೊಳ್ಳುತಿದ್ದನು. ಎದುರೇಟಿಗೆ ಸಿಗದೆ ಹಾದುಹೋಗುತಿದ್ದನು. ಹಗುರ ವಾಗಿ ಹಿಂದಕ್ಕೆ ಓಡುತ್ತಿದ್ದನು. ಪುನಃ ಬೆದರಿದವನಂತೆ ಹಿಂದೆ ಬರುತಿದ್ದನು. ಅವನು ಚತುರನೂ ಚುರುಕುಳ್ಳವನೂ ಆಗಿದ್ದನು. ಅದೊಂದು ಕಣ್ಣು ಕುಕ್ಕುವ ವಿಸ್ಮಯಗೊಳಿಸುವಂಥ ದೃಶ್ಯವಾಗಿತ್ತು. ಸಭೆ ಮೆಚ್ಚಿಗೆ ಸೂಚಿಸಲು ಕೂಗಾಡಿತು. ಆದರೆ ಕಿಂಗ್ ಯಾವ ವಿಸ್ಮಯವನ್ನೂ ಹೊಂದಲಿಲ್ಲ—ಅವನು ಎಷ್ಟೋ ಯುವಕರೊಡನೆ ಕಾದಾಟನಡೆಸಿದವನು. ಯುವಕರ ಕೈಚಳಕ ತೀವ್ರವಾಗಿದ್ದಷ್ಟೂ ಗುದ್ದಾಟದಿಂದ ಅಪಾಯವಿಲ್ಲ. ಸ್ಯಾಂಡಲ್ ಪ್ರಾರಂಭ ದಲ್ಲೇ ಕಾರ್ಯ ಮುಗಿಸುವ ರಭಸದಲ್ಲಿದ್ದಾನೆ. ಅದೇನೂ ಸಹಜವಾದದ್ದೇ; ಯುವಕರ ಮಾರ್ಗವೇ ಹಾಗೆ; ತಮ್ಮ ಭವ್ಯತೆಯನ್ನು ಕಳೆದುಕೊಂಡು ರೌದ್ರಾವತಾರದಿಂದ ಮೇಲೆ ಬೀಳುವರು. ಮಿತಿಯಿಲ್ಲದ ಶಕ್ತಿ ಮತ್ತು ಆಸೆ ಯಿಂದ ಜೋರಾದ ಪ್ರತಿಕ್ರಿಯೆಯನ್ನು ಬರಮಾಡಿಕೊಳ್ಳುವರು.....

ಸ್ಯಾಂಡಲ್ ಅಲ್ಲಿ, ಇಲ್ಲಿ, ಎಲ್ಲೆಲ್ಲೂ ಇರುತಿದ್ದನು. ಆತನ ಹೆಜ್ಜೆ ತುಂಬ ಹಗುರವಾಗಿತ್ತು. ಹೃದಯವಂತೂ ಅತ್ಯಾತುರದಿಂದ ಬಡಿಯು ತಿತ್ತು. ಮಾಂಸಖಂಡಗಳನ್ನು ನೆಯ್ದು ಮಾಡಿದ ವಿಸ್ಮಯಕಾರಕ ಪ್ರತಿ ಭಟನೆಯ ವಸ್ತ್ರದಂತೆ ತನ್ನ ದೇಹವನ್ನು ಬೀಸುತಿದ್ದನು. ಹಾರಾಡುವ ಲಾಳಿ ಯಂತೆ ಮೇಲೆ ಕೆಳಗೆ ನೆಗೆದಾಡುತಿದ್ದನು. ಒಂದರಿಂದ ಮತ್ತೊಂದಕ್ಕೆ ಹಾರಿ ನೂರಾರು ಪಟ್ಟುಗಳ ಅಭ್ಯಾಸಮಾಡುತಿದ್ದನು. ಎಲ್ಲದರ ಗಮನವೂ

ಟಾಮ್ ಕಿಂಗ್‌ನ ವಿನಾಶದಲ್ಲಿ ಕೇಂದ್ರೀಕೃತವಾಗಿತ್ತು. ತನಗೂ ಅದೃಷ್ಟಕ್ಕೂ ಮಧ್ಯೆ ಟಾಮ್ ಕಿಂಗ್ ನಿಂತಿದ್ದನು. ಆದರೆ ಟಾಮ್ ಕಿಂಗ್ ಎಲ್ಲವನ್ನೂ ಶಾಂತಿಯುತವಾಗಿಯೇ ಸಹಿಸಿದನು. ಈಗ ತಾನು ಕಳೆದುಕೊಂಡಿದ್ದರೂ ಯೌವನದ ಅಟ್ಟಹಾಸವೇನೆಂಬುದು ಅವನಿಗೆ ತಿಳಿದಿತ್ತು. ಎದುರಾಳಿ ಸ್ವಲ್ಪ ಶಕ್ತಿಗುಂದುವ ತನಕ ಏನೂ ಮಾಡುವಂತಿಲ್ಲ.

ಟಾಮ್ ಕಿಂಗ್ ಹಲ್ಲುಕಡಿದನು. ತಲೆಯ ಮೇಲೆ ಭಾರಿ ಏಟು ಬೀಳಬಹುದೆಂದು ಗೊತ್ತಿದ್ದರೂ ತಗ್ಗಿಸಿದನು! ತಲೆಗೆ ಹೊಡೆಯುವುದೆಂದರೆ ಅತಿ ಕ್ರೂರವಾದ ಶಿಕ್ಷೆ; ಆದರೆ ಮುಷ್ಟಿಕಾಳಗದ ನಿಯಮದಂತೆ ಅದು ನಾಕಷ್ಟು ಉತ್ತಮ ಪ್ರದರ್ಶನ. ಪ್ರತಿ ಜೆಟ್ಟಿಯೂ ತನ್ನ ಗೆಣ್ಣುಗಳನ್ನು ಕೆಡಿಸಿಕೊಳ್ಳದೆ ಆದಷ್ಟು ಜಾಗರೂಕನಾಗಿರಬೇಕು; ಎದುರಾಳಿಯ ತಲೆಯನ್ನು ಕುಟ್ಟುತ್ತಲೇ ಇದ್ದರೆ, ತನಗಾದ ನಷ್ಟವನ್ನು ಅವನೇ ಅನುಭವಿಸಬೇಕು.....

ಕಿಂಗ್ ತಕ್ಷಣ ಕೆಳಕ್ಕೆ ಜಾರಿ, ಅತಿ ವೇಗದಿಂದ ಬರುತಿದ್ದ ಗುದ್ದಾಟಗಳನ್ನು ತಪ್ಪಿಸಿಕೊಳ್ಳಬಹುದಿತ್ತು. ಆದರೆ ಅವನು ತನ್ನ ಹಿಂದಿನ ಕಾದಾಟಗಳನ್ನು ನೆನೆಸಿಕೊಂಡನು; ತಾನು 'ವೆಲ್ಷ್ ಟೆರರ್' ತಲೆಯ ಮೇಲೆ ಎಷ್ಟು ಜೋರಾಗಿ ಬಡಿದಿದ್ದ! ಆದ್ದರಿಂದ ಸ್ಯಾಂಡಲ್ ಕೂಡ ಈ ಅವಕಾಶ ಕಳೆದುಕೊಳ್ಳುವುದು ಬೇಡ. ಆದರೆ ಈಗ ತಿಳಿಯದಿದ್ದರೂ, ಮುಂದಾದರೂ ಅವನಿಗೆ ಟಾಮ್ ಕಿಂಗ್‌ನ ತಲೆಯ ಮೇಲೆ ಹೊಡೆದ ಗೆಣ್ಣಿನ ಜ್ಞಾಪಕ ಬಂದು ದುಃಖಪಡುತ್ತಾನೆ. ಅಲ್ಲವೇ?....

ಮೊದಲ ರೌಂಡು ಸಂಪೂರ್ಣವಾಗಿ ಸ್ಯಾಂಡಲ್‌ನ ಕೈವಾಡವನ್ನೇ ಎತ್ತಿ ತೋರಿಸಿತು. ಅವನ ಚಕ್ರಮಾರುತದಂಥ ನಡಿಗೆಗೆ ಇಡೀ ಸಭೆಯ ಒಮ್ಮತ ದೊರಕಿತು. ಗುದ್ದುಗಳ ಹುಚ್ಚು ಹೊಡೆತ ಕಿಂಗಿಗೆ ತಡೆಯಲು ಅಸಾಧ್ಯವಾಯಿತು. ಆದರೂ ಕಿಂಗ್ ಏನೂ ಮಾಡಲಿಲ್ಲ. ಒಂದು ಬಾರಿಯೂ ಹೊಡೆಯಲಿಲ್ಲ. ಮರೆಯಾಗುವುದು, ತಡೆಗಟ್ಟುವುದು, ತಲೆಯನ್ನು ಥಟ್ಟನೆ ಚಲಿಸುವುದು ಅಥವಾ ಪೂರಾ ಕೈ ನೀಡಿ ಗುದ್ದಲಾಗದಷ್ಟು ಹತ್ತಿರ ಬರುವುದು—ಇಷ್ಟರಲ್ಲೇ ಅವನು ತೃಪ್ತನಾಗಿದ್ದನು. ಅವನಾಗಿಯೆ ಮೇಲ್ನುಗ್ಗಿ ಬಂದದ್ದು ಇಲ್ಲವೆಂದೇ ಹೇಳಬೇಕು. ಚಟುವಟಿಕೆಯಿಂದ ಬಿದ್ದು ಎದ್ದೇಳುವುದರಲ್ಲಿ ಅವನು ಒಂದು ಔನ್ಸಿನಷ್ಟಾದರೂ ಶಕ್ತಿಯನ್ನು ವಿನಿಯೋಗಿಸಿದಂತೆ ಕಾಣಬರಲಿಲ್ಲ. ಏಟು ಬಿದ್ದಾಗ ಮಾತ್ರ ತಲೆ ಹೊರಳುತಿತ್ತು. ಎಚ್ಚರಿಕೆಯ ಇಳಿ ವಯಸ್ಸನ್ನು ಎದುರು ಹಾಕಿಕೊಳ್ಳುವ ಪ್ರಯತ್ನದಲ್ಲಿಯೇ ಸ್ಯಾಂಡಲ್‌ನ

ಯೌವನದ ಬಡಾಯಿ ಕೊಚ್ಚಿಹೋಗುತಿತ್ತು. ಟಾಮ್‌ಕಿಂಗ್‌ನ ನಡಿಗೆ ನಿಧಾನವಾಗಿಯೂ ಕ್ರಮಬದ್ಧವಾಗಿಯೂ ಇತ್ತು. ದಪ್ಪ ರೆಪ್ಪೆಯ ಕಣ್ಣು ಗಳನ್ನು ನೋಡಿದರೆ, ಅವನು ಅರ್ಧ ನಿದ್ರೆಯಲ್ಲಿ ತೂಕಡಿಸುತ್ತಿರುವಂತೆ ಕಾಣು ತಿತ್ತು. ಆದರೆ ಆ ಕಣ್ಣುಗಳು ಎಲ್ಲವನ್ನೂ ಸೂಕ್ಷ್ಮವಾಗಿ ನೋಡುತ್ತಿದ್ದವು; ಇಪ್ಪತ್ತು ವರ್ಷಗಳಿಗಿಂತಲೂ ಮೇಲ್ಪಟ್ಟು ರಂಗಭೂಮಿಯಲ್ಲಿ ಸಾಧನೆ ಮಾಡಿದವನ ಕಣ್ಣುಗಳು ಅಭ್ಯಾಸಬಲದಿಂದಲೇ ಸೂಕ್ಷ್ಮವಾಗಿದ್ದವು. ಎಂಥ ನೋಟ! ಏಟು ಬೀಳುತ್ತಿದ್ದರೂ ರೆಪ್ಪೆ ಹೊಡೆಯುತ್ತಿರಲಿಲ್ಲ. ಆದರೆ ಗುದ್ದಾಟದ ಅಂತರವನ್ನು ಲೆಕ್ಕಹಾಕುತಿತ್ತು.

ಮೊದಲ ರೌಂಡು ಆದ ಮೇಲೆ, ಒಂದು ಮಿನಿಟು ವಿಶ್ರಾಂತಿಗೆ ಅವಕಾಶ ಸಿಕ್ಕಿತು. ಟಾಮ್‌ಕಿಂಗ್ ಕಾಲುಚಾಚಿ ಮೂಲೆಯಲ್ಲಿ ಕುಳಿತನು. ಕೈಗಳು ಓರೆಯಿಲ್ಲದೆ ಸಮಕೋನದಲ್ಲಿ ಹಗ್ಗವನ್ನು ಹಿಡಿದಿದ್ದವು. ಆತನ ಸಹಾಯಕರು ಓಡಿಬಂದು ಟವಲಿನಲ್ಲಿ ಗಾಳಿಬೀಸಿದರು. ಗಾಳಿ ಒಳಕ್ಕೆ ಹೋಗುತಿದ್ದಂತೆ, ಹೃದಯಾಂತರಾಳದಿಂದ ಸ್ಪಷ್ಟವಾಗಿ, ನಿಡಿದಾಗಿ ಎಳೆಯುತಿದ್ದ ನಿಟ್ಟುಸಿರು ಹೊರಸೂಸುತಿತ್ತು. ಕಣ್ಣು ಮುಚ್ಚಿತ್ತು. ಅದರೂ ಸಭಿಕರ ಮಾತುಕಥೆ ಆವನ ಕಿವಿಗೆ ಬಿತ್ತು.

ಮುಂದಿನ ಸಾಲಿನಲ್ಲಿ ಕುಳಿತಿದ್ದ ಒಬ್ಬಾತ ಹೇಳಿದ: "ಮಾಂಸಖಂಡ ಬಿಗಿಹಿಡಿದಿದೆ. ಅವನು ವೇಗವಾಗಿ ಚಲಿಸಲು ಸಾಧ್ಯವಿಲ್ಲ....ತಗೋ ನನ್ನ ಬಾಜಿ! ಸ್ಯಾಂಡಲ್‌ನ ಹೆಸರಿನಲ್ಲಿ ಒಂದಕ್ಕೆ ಎರಡರಷ್ಟು!"

ಮತ್ತೆ ಗಂಟೆ ಬಾರಿಸಿತು. ಮೂಲೆಗಳಿಂದ ಇಬ್ಬರೂ ಎದ್ದು ಬಂದರು. ಬೇಗನೆ ಪ್ರಾರಂಭಮಾಡಲು ಸ್ಯಾಂಡಲ್ ವೇಗವಾಗಿ ಮುಂದುವರಿದನು. ಆದರೆ ಕಿಂಗ್ ಮೆಲ್ಲಗೆ ಬಂದನು. ತೃಪ್ತನಂತೆ ಕಾಣುತಿದ್ದನು. ಅವನು ಎಷ್ಟಾದರೂ ಮಿತವಾದಿಯಲ್ಲವೇ? ಸೂಕ್ತ ಅಭ್ಯಾಸವಿರಲಿಲ್ಲ. ತಿನ್ನಲು ಸಾಕಷ್ಟು ಆಹಾರವಿದ್ದಿಲ್ಲ. ಜೊತೆಗೆ ಎರಡು ಮೈಲಿ ದೂರ ನಡೆದು ಬಂದಿ ದ್ದನು. ಆದ್ದರಿಂದ ಆತನ ಪ್ರತಿಯೊಂದು ಹೆಜ್ಜೆಯೂ ಗಣನೀಯವಾದದ್ದು.

ಈ ಬಾರಿಯೂ ಕೂಡ ಮೊದಲ ರೌಂಡಿನ ಪುನರಾವೃತ್ತಿಯೆ ಆಯಿತು. ಯಥಾಪ್ರಕಾರ ಸ್ಯಾಂಡಲ್ ಸುಂಟರಗಾಳಿಯಂತೆ ಎದುರಿಸಿದನು; ಸಭಿಕರು ಕೂಗಾಡಿ, 'ಕಿಂಗ್, ಕಾದಾಡದಿರಲು ಕಾರಣವೇನು?' ಎಂದು ಪ್ರಶ್ನಿಸತೊಡಗಿ ದರು. ಅಷ್ಟಾದರೂ ಕಿಂಗ್ ಸುಮ್ಮನಿದ್ದನು. ಕೆಲವು ವೇಳೆ ಪರಿಣಾಮಕಾರಿ ಯಲ್ಲದ ಗುದ್ದಾಟದಿಂದ ಮುನ್ನುಗ್ಗುವಂತೆ ನಟಿಸುತಿದ್ದನು; ಅಷ್ಟೆ. ಆದರೆ

ಸಾಕಷ್ಟು ಆತ್ಮರಕ್ಷಣೆ ಮಾಡಿಕೊಳ್ಳುತ್ತಿದ್ದನು. ಸ್ಯಾಂಡಲ್‌ನ ಪ್ರಗತಿಗೆ ಟಾಮ್‌ನ ಮಂದಗತಿ ತೀರ ವಿರುದ್ಧವಾಗಿತ್ತು.

ಟಾಮ್ ಕಿಂಗ್ ನೋವಿನಿಂದ ಹಲ್ಲುಕಿರಿದನು. ಪೆಟ್ಟುತಿಂದ ಅವನ ಮುಖಭಾವ ಮರುಕ ಹುಟ್ಟಿಸುವಂತಿತ್ತು. ವಯಸ್ಸಾದವರು ಮಾತ್ರ ಅಸೂಯೆ ಯಿಂದ ವರ್ತಿಸಬಲ್ಲರು; ಹಾಗೆಯೆ ಅವನು ಸ್ಯಾಂಡಲ್‌ನ ಶಕ್ತಿಯ ಬಗ್ಗೆ ಯೋಚಿಸತೊಡಗಿದನು. ಸ್ಯಾಂಡಲ್ ಎಷ್ಟಾದರೂ ಯುವಕ; ಯೌವನದ ಬಿಸಿರಕ್ತವನ್ನು ಧಾರಾಳವಾಗಿ ಚೆಲ್ಲಬಲ್ಲ. ಆದರೆ ಟಾಮ್‌ಗೆ ಕುಸ್ತಿಯ ಅಖಾಡದ ಇಡೀ ತಂತ್ರ ಗೊತ್ತಿದೆ; ಬಹು ವರ್ಷಗಳ ಧೀರ್ಘ ಕಾದಾಟಗಳಲ್ಲೇ ಬೆಳೆದ ಆತನಿಗೆ ಬುದ್ಧಿಯ ಬಲವಿದೆ. ಸ್ಯಾಂಡಲ್‌ನ ಬಿಸಿ ಆರುವ ತನಕ, ಯಾವ ಉದ್ರೇಕಕ್ಕೂ ಒಳಗಾಗದೆ ಟಾಮ್‌ಕಿಂಗ್ ಕಾಯುತ್ತಿದ್ದನು. ಆದರೆ ಪ್ರೇಕ್ಷಕರಲ್ಲಿ ಮುಕ್ಕಾಲು ಜನ 'ಇನ್ನು ಕಿಂಗ್ ತಲೆಯೆತ್ತಲಾರ' ಎಂದು ತೀರ್ಮಾನಿಸಿದರು. ಅವರ ನೋಟಕ್ಕೆ ತಿಳಿದಂತೆ ಕಿಂಗ್‌ನ ಸೋಲು ನಿಶ್ಚಯ ವಾಗಿತ್ತು. ಆದ್ದರಿಂದ ಆ ಜನ ಸ್ಯಾಂಡಲ್‌ನ ಹೆಸರಿನಲ್ಲಿ ಒಂದಕ್ಕೆ ಮೂರರಷ್ಟು ಬಾಜಿ ಕಟ್ಟಿದರು. ಆದರೆ ಹಿಂದಿನ ಕಾಲದ ಕಿಂಗ್‌ನನ್ನು ತಿಳಿದಿದ್ದ ಕೆಲವೇ ಮಂದಿ ಬುದ್ಧಿವಂತರಿದ್ದರು; ಸುಲಭವಾಗಿ ಬರುವ ಹಣಕ್ಕೆ ಅವರು ಸಿದ್ಧರಾದರು.

ಮೂರನೆಯ ರೌಂಡು ಹಿಂದಿನಂತೆ ಒಮ್ಮುಖವಾಗಿಯೇ ಪ್ರಾರಂಭ ವಾಯಿತು. ಅರ್ಧ ಮಿನಿಟು ಕಳೆದಮೇಲೆ ಸ್ಯಾಂಡಲ್ ತನ್ನ ಶಕ್ತಿಯ ಬಗ್ಗೆ ವಿಪರೀತ ಕಲ್ಪನೆಗೆ ಅವಕಾಶಕೊಟ್ಟನು. ಅದರ ಪರಿಣಾಮವಾಗಿ ಸ್ವಲ್ಪ ಸಡಿಲಗೊಂಡನು. ಅದೇ ರಸಘಳಿಗೆಯಲ್ಲಿ ಕಿಂಗ್‌ನ ಕಣ್ಣುಗಳು ಚೇತರಿಸಿ ಕೊಂಡವು. ಆ ಕ್ಷಣದಲ್ಲಿ ಅವನ ಬಲತೋಳು ಮಿಂಚಿನ ವೇಗದಲ್ಲಿ ಕೆಲಸ ಸಾಗಿಸಿತು. ಅದು ಟಾಮ್‌ಕಿಂಗ್‌ನ ಮೊದಲ ಸಾಚಾ ಹೊಡೆತ ! ಎದು ರಾಳಿಯನ್ನು ಮೊಣಕೈ ಬಾಗಿನಿಂದ ಹೊಡೆದನು. ಅದರಲ್ಲಿ ತಿರುಗುಗೂಟ ದಂತಿದ್ದ ದೇಹದ ತೂಕ ಕೇಂದ್ರೀಕೃತವಾಗಿತ್ತು. ನಿದ್ರಿಸುವಂತೆ ಕಾಣುತಿದ್ದ ಸಿಂಹ ಇದ್ದಕಿದ್ದಂತೆ ಮುಂಗಾಲಿನಿಂದ ಅಪ್ಪಳಿಸುವಂತಾಯಿತು. ಸ್ಯಾಂಡಲ್‌ನ ದವಡೆಯ ಸಾಲಿಗೆ ಬಲವಾದ ಪೆಟ್ಟು ಬಿತ್ತು. ಎತ್ತನ್ನು ಆಯುಧದಿಂದ ಹೊಡೆದು ಕೆಡವಿದಂತೆ ಭಾಸವಾಯಿತು. ಸಭಿಕರು ಆಶ್ಚರ್ಯ ಚಕಿತರಾಗಿ ಬಾಯಿಬಿಟ್ಟರು–ಅಂತೂ ಮನುಷ್ಯನ ಮಾಂಸಖಂಡಗಳು ಬಿಗಿಹಿಡಿದಿಲ್ಲ; ಆದ್ದರಿಂದಲೇ ಅವನು ಕೀಲು ಚಮ್ಮಟಿಗೆಯಂತೆ ಹೊಡೆಯಲು ಸಾಧ್ಯವಾಯಿತು.

ಸ್ಯಾಂಡಲ್ ನಡುಗಿಹೋದನು. ಕೆಳಗುರುಳಿ ಮೇಲೇಳಲು ಪ್ರಯತ್ನ ಪಟ್ಟನು. ಆದರೆ ಅವನ ಸಹಾಯಕರು ಓಡಿಬಂದು, ತಕ್ಷಣ ಏಳದೆ ಸೆಕೆಂಡುಗಳ ಅವಧಿಯನ್ನು ಉಪಯೋಗಿಸಿಕೊಳ್ಳಲು ಒತ್ತಾಯಮಾಡಿದರು. ಮಂಡಿಯೂರಿ ಏಳಲು ಸಿದ್ಧನಾದವನು ಹಾಗೆಯೇ ಇದ್ದನು. ರೆಫರಿ ಅವನ ಬಳಿ ನಿಂತು ಕಿವಿಯ ಹತ್ತಿರ ಸೆಕೆಂಡುಗಳನ್ನು ಜೋರಾಗಿ ಎಣಿಸಲು ಆರಂಭಿಸಿದನು. ಒಂಬತ್ತನೆಯ ಸೆಕೆಂಡನ್ನು ಘೋಷಿಸಿದಾಗ, ಸ್ಯಾಂಡಲ್ ಕಾದಾಡುವ ಭಂಗಿಯಲ್ಲಿ ತಟಕ್ಕನೆದ್ದನು.

ಟಾಮ್‌ಕಿಂಗ್ ಸ್ಯಾಂಡಲ್‌ನ ಮುಖ ನೋಡಿದನು. ತನ್ನ ಏಟು ದವಡೆಗೆ ಒಂದು ಇಂಚು ಹತ್ತಿರ ಬೀಳಲಿಲ್ಲವಲ್ಲಾ ಎಂದು ವ್ಯಥೆಪಟ್ಟನು. ಹಾಗೆ ಆಗಿದ್ದರೆ ಅದು ಎದುರಾಳಿಯನ್ನು ಸಂಪೂರ್ಣವಾಗಿ ಕೆಳಕ್ಕೆಹಾಕಿ ಬಿಡುತಿತ್ತು ; ಮತ್ತೆ ತಾನು ಸುಖವಾಗಿ ಮೂವತ್ತು ಪೌಂಡುಗಳನ್ನು ಮನೆಗೆ ಒಯ್ಯಬಹುದಿತ್ತು; ತನ್ನ ಹೆಂಡತಿ ಮಕ್ಕಳಿಗೆ!....

ಈ ರೌಂಡು ಮೂರು ನಿಮಿಷಗಳ ಕಾಲ ಮುಂದುವರಿಯಿತು. ಸ್ಯಾಂಡಲ್ ಪ್ರಥಮ ಬಾರಿಗೆ ತನ್ನ ಎದುರಾಳಿಯ ಬಗ್ಗೆ ಗೌರವ ಹೊಂದಿದ್ದನು. ಯಥಾ ಪ್ರಕಾರ ಕಿಂಗ್ ಸಿದ್ದೆಗಣ್ಣುಗಳಿಂದ ನಿಧಾನವಾಗಿ ನಡೆಯುತಿದ್ದನು. ಕೊನೆಯ ಘಳಿಗೆ ಹತ್ತಿರಬಂದಂತೆ ಸಹಾಯಕರು ಹಗ್ಗದ ಮೇಲೆ ನೆಗೆಯಲು ಬಗ್ಗಿ ನಿಂತಿದ್ದರು. ಆ ಕಡೆ ನೋಡಿ ಕಿಂಗ್ ಎಚ್ಚರಗೊಂಡನು. ತನ್ನ ಕಡೆಯೇ ಆಟವಾಡುತ್ತ ಮೂಲೆಗೆ ಸರಿಯುತ್ತಿದ್ದನು. ಗಂಟೆ ಬಾರಿಸಿದಾಗ ತಕ್ಷಣ ತನ್ನ ಕುರ್ಚಿಯ ಮೇಲೆ ಕುಳಿತನು. ಆದರೆ ಸ್ಯಾಂಡಲ್ ಅಷ್ಟು ದೂರ ನಡೆದು ತನ್ನ ಮೂಲೆ ಸೇರಬೇಕಾಗಿತ್ತು. ಅದು ಸಣ್ಣ ವಿಷಯವಿರಬಹುದು, ಆದರೆ ಮುಷ್ಟಿಕಾಳಗದಲ್ಲಿ ಅಂಥ ಅಲ್ಪ ವಿಷಯಗಳೇ ಹೆಚ್ಚು ಪರಿಣಾಮಕಾರಿಯಾದುದು. ಕಾಳಗ ಮುಗಿದರೂ ಸ್ಯಾಂಡಲ್ ಕೆಲವು ಹೆಜ್ಜೆಗಳನ್ನು ಇಡಬೇಕಾಯಿತು; ಅಷ್ಟೇ ಪ್ರಮಾಣದ ಶಕ್ತಿ ಹೋಯಿತು ; ಅಲ್ಲವೇ ? ಮತ್ತೆ ಅಮೂಲ್ಯವಾದ ವಿಶ್ರಾಂತಿಯ ಘಳಿಗೆಗಳು ಕಳೆದುಹೋದವು.

ಪ್ರತಿ ರೌಂಡಿನ ಪ್ರಾರಂಭದಲ್ಲೂ ಕಿಂಗ್ ನಿಧಾನವಾಗಿ ಸರಿಯುತ್ತ ತನ್ನ ಮೂಲೆಯ ಆವರಣದಲ್ಲೇ ಇರುತಿದ್ದನು. ಆದ್ದರಿಂದ ಎದುರಾಳಿ ಹೆಚ್ಚು ಹೆಜ್ಜೆಗಳನ್ನು ಹಾಕಲೇಬೇಕಾಗಿತ್ತು. ಹಾಗೆಯೆ ಪ್ರತಿ ರೌಂಡಿನ ಕೊನೆಯಲ್ಲೂ ಕಿಂಗ್ ಹಿಮ್ಮೆಟ್ಟುತ್ತಾ ತಕ್ಷಣ ಕುಳಿತುಕೊಳ್ಳುವ ಏರ್ಪಾಟುಮಾಡಿಕೊಳ್ಳುತಿದ್ದನು!

ಇನ್ನೂ ಎರಡು ರೌಂಡುಗಳು ಕಳೆದವು ; ಕಿಂಗ್ ಜಾಗರೂಕತೆಯಿಂದ ಒಂದು ಮಿತಿಯಲ್ಲಿ ಶಕ್ತಿಯನ್ನು ಪ್ರದರ್ಶಿಸುತ್ತಿದ್ದನು. ಸ್ಯಾಂಡಲ್ ಮಾತ್ರ ಮಿತಿ ಮೀರಿ ತನ್ನ ಶಕ್ತಿಯನ್ನು ಧಾರಾಳವಾಗಿ ಉಪಯೋಗಿಸುತಿದ್ದನು. ಬರಿಯ ಏಟುಗಳಿಂದ ಹೆಚ್ಚು ಪ್ರಯೋಜನವಾಗದಿರಲು ಅವನು ಕಾಲನ್ನು ನೆಲಕ್ಕೂರಿ ಒಂದು ಹೆಜ್ಜೆ ದೂರ ಛಂಗನೆ ನೆಗೆಯಲು ಪ್ರಯತ್ನಪಟ್ಟನು. ಆದರೂ.ಕಿಂಗ್ ನಿಧಾನವಾಗಿ ಹಿಮ್ಮೆಟ್ಟುತ್ತಲೇ ಇದ್ದನು. ಮುಂದೆ ಹೋಗಿ ಯುದ್ಧಮಾಡೆಂದು ಯುವಕ ಜನಸ್ತೋಮ ಕೂಗಾಡಿತು. ಕಿಂಗ್ ಯಾವು ದಕ್ಕೂ ಗಮನಕೊಡಲಿಲ್ಲ. ಪುನಃ ಆರನೇ ರೌಂಡಿನಲ್ಲಿ ಸ್ಯಾಂಡಲ್ ಬೇಜವಾ ಬ್ದಾರಿಯಿಂದ ಹೊಡೆಯಲು ಆರಂಭಿಸಿದನು. ಮತ್ತೆ ಟಾಮ್‌ಕಿಂಗ್‌ನ ಭಯಂಕರ ಹೊಡೆತ ದವಡೆಗೆ ವಿದ್ಯುತ್ತಿನಂತೆ ತಾಕಿತು. ಹಿಂದಿನಂತೆ ಈ ಸಾರಿಯೂ ಸ್ಯಾಂಡಲ್ ಒಂಬತ್ತು ಸೆಕೆಂಡುಗಳ ಕಾಲ ಕೆಳಗೆ ಬಿದ್ದಿದ್ದನು.

ಏಳನೇ ರೌಂಡಿನ ಹೊತ್ತಿಗೆ ಸ್ಯಾಂಡಲ್‌ನ ಆದರ್ಶಸ್ಥಿತಿ ಕಡಿಮೆಯಾಗಿತ್ತು. ತನ್ನ ಅನುಭವದಲ್ಲಿ ಅಚ್ಚಳಿಯದೆ ನಿಲ್ಲುವಂಥ ಕಾದಾಟವನ್ನು ಕಂಡನು. ಟಾಮ್‌ಕಿಂಗ್‌ನಂತಹ ಮುದುಕನನ್ನು ಅವನು ಇಲ್ಲಿಯ ತನಕ ಎದುರಿಸಿರಲಿಲ್ಲ. ಏಕೆಂದರೆ ಟಾಮ್‌ಕಿಂಗ್ ಮುದುಕನಾದರೂ ಬುದ್ಧಿವಂತ; ಆತ್ಮರಕ್ಷಣೆ ಮಾಡಿ ಕೊಳ್ಳುವುದರಲ್ಲಿ ದಕ್ಷ ಮತ್ತು ಆತನ ಗುದ್ದುಗಳು ಮುಳ್ಳಿನ ತುದಿಯನ್ನು ಒತ್ತಿದಂತಿತ್ತು. ಎದುರಾಳಿಯನ್ನು ಕೆಡವಲು ಎರಡು ಕೈಗಳೂ ಸಮರ್ಥ ವಾಗಿದ್ದವು....ಆದರೂ ಟಾಮ್‌ಕಿಂಗ್ ಸಾಧಾರಣವಾಗಿ ಗುದ್ದಾಟಕ್ಕೆ ನಿಲ್ಲು ತ್ತಿರಲಿಲ್ಲ. ಜಜ್ಜಿಹೋಗಿದ್ದ ಗೆಣ್ಣುಗಳ ಬೆಲೆ ಅವನಿಗೆ ತಿಳಿದಿತ್ತು. ಮೂಲೆ ಯಲ್ಲಿ ಕುಳಿತು ಎದುರಾಳಿಯ ಕಡೆ ದೃಷ್ಟಿ ಬೀರಿದಾಗ, ಒಂದು ಯೋಚನೆ ಹೊಳೆಯಿತು—ತನ್ನ ಬುದ್ಧಿವಂತಿಕೆ, ಯುವಕ ಸ್ಯಾಂಡಲ್‌ನ ಬಿಸಿರಕ್ತದೊಡನೆ ಸೇರಿದರೆ, ನಿಜವಾಗಿಯೂ ಪ್ರಪಂಚದಲ್ಲೇ ರಿಕಾರ್ಡ್ ಸ್ಥಾಪಿಸುವ 'ಹೆವಿವೈಟ್ ಛಾಂಪಿಯನ್' ಹುಟ್ಟುತ್ತಾನೆ! ಆದರೆ ಅದು ಕಷ್ಟ. ಸ್ಯಾಂಡಲ್ ಎಂದೆಂದಿಗೂ ಪ್ರಪಂಚದ ಛಾಂಪಿಯನ್ ಆಗಲಾರ. ಬುದ್ಧಿವಂತಿಕೆ ಎಂಬುದು ಅವನ ತಲೆಯಲ್ಲಿಲ್ಲ. ಅದನ್ನು ಯೌವನದಿಂದಲೇ ಸಂಪಾದಿಸಲು ಪ್ರಯತ್ನಪಡ ಬಹುದು. ಬುದ್ಧಿವಂತಿಕೆ ಅವನ ಕೈಸೇರುವ ಹೊತ್ತಿಗೆ ಯೌವನ ಮುಗಿದು ಹೋಗುತ್ತದೆ.....

ಕಿಂಗ್ ತನಗೆ ಗೊತ್ತಿದ್ದ ಎಲ್ಲ ಉಪಾಯಗಳ ಉಪಯೋಗವನ್ನೂ ಪಡೆದನು. ಸಮಯ ಸಿಕ್ಕಾಗ ಅವನು ಪೂರಾ ಕೈನೀಡಿ ಗುದ್ದಲಾಗದಷ್ಟು

ಹತ್ತಿರಕ್ಕೆ ಬರುತ್ತಿದ್ದನು. ಮುಷ್ಟಿಗೊಂಡ ತನ್ನ ತೋಳಿನಿಂದ ಎದುರಾಳಿಯ ಪಕ್ಕೆಲುಬಿಗೆ ನೋಯುವಂತೆ ಹೊಡೆಯುತ್ತಿದ್ದನು. ಮಲ್ಲಯುದ್ಧದ ತತ್ವಗಳಲ್ಲಿ ಭುಜದ ಹೊಡೆತವೂ ಒಂದು; ಅದು ಮುಷ್ಟಿಯುದ್ಧದಷ್ಟೇ ಅಪಾಯಕರವಾದುದು. ಆದರೆ ಅದಕ್ಕೆ ಹೆಚ್ಚಿನ ಪ್ರಯತ್ನ ಬೇಕಿಲ್ಲ. ತನ್ನ ತೂಕವನ್ನೂ ಕಿಂಗ್ ಎದುರಾಳಿಯ ಮೇಲೆ ಹೇರುತಿದ್ದನು. ಬಿಡಲು ಇಷ್ಟವಿಲ್ಲದೆ ಹಿಡಿಯುತಿದ್ದನು. ಆಗ ರೆಫರಿ ಮಧ್ಯೆ ಪ್ರವೇಶಿಸಿ ಇಬ್ಬರನ್ನೂ ಬೇರ್ಪಡಿಸಲೇ ಬೇಕಾಯಿತು. ಸ್ಯಾಂಡಲ್‌ಗೆ ವಿಶ್ರಾಂತಿ ತೆಗೆದುಕೊಳ್ಳುವ ಅಭ್ಯಾಸ ಇನ್ನೂ ಬಂದಿರಲಿಲ್ಲ. ಇದರಿಂದ ರೆಫರಿಗೂ ಸಹಾಯವಾಗಿತ್ತು. ಸ್ಯಾಂಡಲ್ ಹೊರಳಾಡುತಿದ್ದರೂ, ತನ್ನ ಕೈಗಳನ್ನು ಬೀಸದಿರಲು ಸಾಧ್ಯವಿರಲಿಲ್ಲ. ಕೆಲವುವೇಳೆಯಂತೂ ಹಿಂದಿನಿಂದ ಟಾಮ್‌ಕಿಂಗ್‌ನ ಚಾಚಿದ ಮುಖಕ್ಕೆ ತಿವಿಯುತಿದ್ದನು. ಆಗ ಸಭಿಕರು ಹೊಗಳುತಿದ್ದರು. ಆದರೆ ಆ ಏಟು ಯಾವ ಅಪಾಯವನ್ನೂ ಮಾಡದೆ ಸುಮ್ಮನೆ ಶಕ್ತಿ ವ್ಯಯವಾಗುತಿತ್ತು. ಆದರೂ ಸ್ಯಾಂಡಲ್ ಆಯಾಸಪಡುತ್ತಿರಲಿಲ್ಲ; ಇತಿ ಮಿತಿಗಳ ಕಡೆ ಅವನಿಗೆ ಅರಿವೇ ಇರಲಿಲ್ಲ.

ಸ್ಯಾಂಡಲ್‌ನ ಬಲಗೈ ಗುದ್ದು ತೀಕ್ಷ್ಣವಾಗಿತ್ತು. ಕಿಂಗ್ ಜೋರಾದ ಶಿಕ್ಷೆಯನ್ನೇ ಅನುಭವಿಸುತಿದ್ದಾನೆಂದು ಭಾಸವಾಯಿತು. ಮುದುಕ ಜಟ್ಟಿಗಳು ಮಾತ್ರ, ಕಿಂಗ್ ಏಟುಬೀಳುವ ಮೊದಲು ತನ್ನ ಎಡಕ್ಕೈಗವಸಿನಿಂದ ಎದುರಾಳಿಯ ಸ್ನಾಯುವಿಗೆ ಮುಟ್ಟಿಸುತಿದ್ದ ರೀತಿಯನ್ನು ಮೆಚ್ಚಿದರು; ನಿಜವಾಗಿಯೂ ಅದು ಪಳಗಿದ ಕೈಚಳಕ. ಎದುರಾಳಿಯ ಏಟಿನ ಬಲ ಕುಗ್ಗಿಸಲು ಅದು ಸಾಧನವಾಗಿತ್ತು. ಪ್ರತಿ ಸಲವೂ ಸ್ವಲ್ಪಸ್ವಲ್ಪವಾಗಿ ಏಟಿನ ರಭಸ ಕಡಿಮೆಯಾಗಲು ಕಾರಣವಾಯಿತು. ಒಂಬತ್ತನೇ ರೌಂಡಿನಲ್ಲಿ ನೋಡಬೇಕು! ಒಂದೇ ಮಿನಿಟಿನಲ್ಲಿ ಮೂರುಬಾರಿ ಕಿಂಗ್‌ನ ಬಲಗೈ ನುರಳಿಸುತ್ತಿ ದವಡೆಗೆ ಹೊಡೆಯಿತು. ತೂಕವಾಗಿದ್ದ ಸ್ಯಾಂಡಲ್‌ನ ದೇಹ ಮೂರು ಸಲವೂ ಕೆಳಕ್ಕೆ ಬಿತ್ತು. ಪ್ರತಿ ಆವೃತ್ತಿಯೂ ಒಂಬತ್ತು ಸೆಕೆಂಡುಗಳಲ್ಲೇ ಎದ್ದುಬಿಟ್ಟನು. ಮುರಿದುಬಿದ್ದವನಂತೆ ಕಾಣುತ್ತಿದ್ದರೂ, ಯೌವನವೆಂಬ ಪ್ರಧಾನ ಆಸ್ತಿಯ ಹಕ್ಕುದಾರನಂತೆ ಚೇತರಿಸಿಕೊಂಡನು. ಉರಿಮೋರೆಯಿಂದಲೇ ಯುದ್ಧ ಮಾಡುತಿದ್ದನು....ಕಿಂಗ್‌ನ ಪ್ರಧಾನ ಆಸ್ತಿ ಅನುಭವ. ತನ್ನ ಶಕ್ತಿ ಸಾಮರ್ಥ್ಯ ಕಡಿಮೆಯಾದಂತೆ, ಅದಕ್ಕೆ ಬದಲಾಗಿ ಯುಕ್ತಿಯನ್ನೂ ಮತ್ತು ಧೀರ್ಘಕಾಲದ ಕಾದಾಟದಿಂದ ಗಳಿಸಿದ ಬುದ್ಧಿವಂತಿಕೆಯನ್ನೂ ಇರಿಸುತಿದ್ದನು. ಶಕ್ತಿಯನ್ನು ವಿನಿಯೋಗಿಸುವಲ್ಲಿ · ಅತಿ ಜಾಗರೂಕನಾಗಿರುತಿದ್ದನು. ಎದುರಾಳಿಯ

ಸಂಪೂರ್ಣ ಉತ್ಸಾಹಕ್ಕೆ ಎಡೆಕೊಟ್ಟು, ಅದರಿಂದಲೇ ನಿಸ್ತೇಜನಾಗುವಂತೆ ಏರ್ಪಾಟುಮಾಡುತಿದ್ದನು. ಕೈಕಾಲು ಮತ್ತು ದೇಹದ ಹುಸಿದಾಳಿಯಿಂದ ಸ್ಯಾಂಡಲ್‌ನನ್ನು ಗುರಿತಪ್ಪಿಸಿ ಸೆಳೆಯುತಿದ್ದನು. ಆಗ ಸ್ಯಾಂಡಲ್ ಹಿಂದಕ್ಕೆ ನೆಗೆಯುತಿದ್ದನು; ಏಟನ್ನು ತಪ್ಪಿಸಿಕೊಳ್ಳಲು ತಲೆಯನ್ನು ಥಟ್ಟನೆ ಚಲಿಸುತಿದ್ದನು; ಅಥವಾ ಎದುರೇಟು ಕೊಡುತಿದ್ದನು. ಕಿಂಗ್ ವಿಶ್ರಾಂತಿ ತೆಗೆದುಕೊಳ್ಳುತಿದ್ದನು; ಆದರೆ ಅವನು ಸ್ಯಾಂಡಲ್‌ಗೆ ವಿಶ್ರಾಂತಿ ಪಡೆಯಲು ಅವಕಾಶವನ್ನೇ ಕೊಡುತಿರಲಿಲ್ಲ. ಅದು ವಯಸ್ಸಿನ ತಂತ್ರ. ಕಿಂಗ್ ಮಾತ್ರ ತಿಳಿದಿದ್ದ.

ಹತ್ತನೇ ರೌಂಡಿನ ಪ್ರಾರಂಭದಲ್ಲಿ, ಕಿಂಗ್ ತನ್ನ ಎದುರಾಳಿಯ ನುಗ್ಗಾಟವನ್ನು ತಪ್ಪಿಸಲು ಎಡಗೈಯಿಂದ ನೇರವಾಗಿ ಮುಖಕ್ಕೆ ಹೊಡೆಯಲು ಆರಂಭಿಸಿದನು. ಸ್ಯಾಂಡಲ್ ಹುಷಾರಿನಿಂದ ಹಿಂದಕ್ಕೆ ಸರಿದನು. ಆದರೆ ಅವನು ಉಯ್ಯಾಲಾಡುತ್ತಾ ತನ್ನ ಬಲಗೈನಿಂದ ಕಿಂಗ್‌ನ ತಲೆಯ ಭಾಗಕ್ಕೆ ಬಿಗಿದನು. ಅದರಿಂದ ಪ್ರಚಂಡ ಪರಿಣಾಮವಾಗದಿದ್ದರೂ, ಮೊದಲ ಏಟು ಬಿದ್ದಾಗ ಕಿಂಗ್‌ಗೆ ಹಿಂದಾಗುತಿದ್ದಂತೆ ತಲೆತಿರುಗಿ, ಕ್ಷಣಕಾಲ ಜ್ಞಾನತಪ್ಪುವಂಥ ಕಗ್ಗತ್ತಲು ಆವರಿಸಿತು. ಒಂದು ತಾಸು ಕಾಲ ಅವನ ದೃಷ್ಟಿ ಪಥವೇ ಬದಲಾಯಿಸಿತು; ಎದುರಾಳಿ ಸಂಪೂರ್ಣವಾಗಿ ಕೈ ತಪ್ಪಿ ಹೋದಂತೆಯೂ, ಅದರ ಹಿನ್ನೆಲೆಯಲ್ಲಿ ಕಾಯುತಿದ್ದ ಉತ್ಸಾಹಿ ಬಿಳೀ ಮುಖಗಳು ಕಂಡಂತೆಯೂ ಭಾಸವಾಯಿತು. ಸ್ವಲ್ಪ ಕಾಲ ಮಲಗಿದ್ದು, ಆಗತಾನೆ ಕಣ್ಣುಬಿಟ್ಟವನಂತೆ ಕಂಡನು. ಆದರೂ ಜ್ಞಾನ ತಪ್ಪಿದ ಘಳಿಗೆ ಎಷ್ಟು ಅತ್ಯಲ್ಪವಾಗಿತ್ತು! ಆ ಸಮಯದಲ್ಲಿ ಕೆಳಕ್ಕೆ ಬೀಳಲೂ ಅವಕಾಶವಿರಲಿಲ್ಲ. ತೂರಾಡುತ್ತಾ ಮೊಣಕಾಲು ಸಡಿಲವಾದ್ದನ್ನು ಸಭಿಕರು ನೋಡಿದರು; ಮತ್ತೆ ಅವನು ಚೇತರಿಸಿಕೊಂಡು ತಲೆಯನ್ನು ಎಡಭುಜದ ಆಶ್ರಯಕ್ಕೆ ವಾಲಿಸಿದ್ದನ್ನು ನೋಡಿದರು.

ಸ್ಯಾಂಡಲ್ ಹಲವು ಬಾರಿ ಅಂಥ ಏಟುಗಳನ್ನು ಕೊಟ್ಟನು. ಆಗ ಸ್ವಲ್ಪ ಹೊತ್ತು ಕಿಂಗ್‌ನ ಕಣ್ಣು ಮಂಜಾಗುತಿತ್ತು. ಆದರೂ ಕಿಂಗ್ ಅರ್ಧ ಹೆಜ್ಜೆ ಹಿಂದೆ ಹೋಗಿ ಬಲಗೈಯನ್ನು ಕೆಳಮಟ್ಟದಿಂದ ಬೀಸತೊಡಗಿದನು. ಖಚಿತವಾದ ಕಾಲಗತಿಯಲ್ಲಿ ಸ್ಯಾಂಡಲ್‌ನ ಮುಖ ಸಂಪೂರ್ಣವಾಗಿ ಸಿಕ್ಕಿಬಿಡುತಿತ್ತು. ಸ್ಯಾಂಡಲ್ ಗಾಳಿಯಂತೆ ಮೇಲೇರುತ್ತಿದ್ದನು; ಹಿಂದೆ ಹಿಂದಕ್ಕೆ ಸುರಳಿ ಸುತ್ತಿ ಇಳಿಯುತ್ತಿದ್ದನು. ಆದರೆ ತನ್ನ ಭುಜಗಳು ನೆಲಕ್ಕೆ ತಾಕುತಿದ್ದವು. ಎರಡು ಬಾರಿ ಇಂಥ ಕೆಲಸ ಮಾಡಿ, ಕಿಂಗ್ ಸಡಿಲಗೊಂಡನು.

ಆಗ ಎದುರಾಳಿಯನ್ನು ಹಗ್ಗದ ನೇರಕ್ಕೆ ನಿಲ್ಲಿಸಿ ಬಡಿಯಲಾರಂಭಿಸಿದನು. ಒಂದು ನಿಮಿಷವೂ ವಿಶ್ರಾಂತಿಗಾಗಲಿ ಅಥವಾ ಮುನ್ನುಗ್ಗುವುದಕ್ಕಾಗಲಿ ಅವಕಾಶಕೊಡಲಿಲ್ಲ. ಒಂದರ ಮೇಲೊಂದು ಏಟುಗಳ ಸುರಿಮಳೆಯಾಯಿತು. ಕಡೆಗೆ ಇಡೀ ಸಭೆ ಉತ್ಸಾಹದಿಂದ ವಾತಾವರಣವನ್ನೇ ಕಲಕಿಬಿಟ್ಟಿತು. ಮೆಚ್ಚಿಗೆಯ ಮಾತುಗಳಿಗೆ ಮಿತಿಯೇ ಇರಲಿಲ್ಲ. ಅಷ್ಟಾದರೂ ಸ್ಯಾಂಡಲ್ ಕಾಲ ಮೇಲೆಯೇ ನಿಂತಿದ್ದನು. ಗುದ್ದುಗಳು ಮಾತ್ರ ನಿಲ್ಲಲೇ ಇಲ್ಲ. ಹಾಗೆ ಬಿಟ್ಟಿದ್ದರೆ, ಅವು ಮನುಷ್ಯನನ್ನು ಕೆಡವಿಬಿಡುವುದರಲ್ಲಿ ಸಂಶಯವಿಲ್ಲ. ಇಂಥ ಭಯಂಕರ ಶಿಕ್ಷೆಯನ್ನು ನೋಡಿ ಪೋಲೀಸ್ ಕ್ಯಾಪ್ಟನ್ ಗಾಬರಿಗೊಂಡನು; ತಕ್ಷಣ ಕಾದಾಟ ನಿಲ್ಲಿಸಲು ರಂಗದ ಕಡೆ ಎದ್ದೋಡಿಬಂದನು.

ರೌಂಡಿನ ಮುಕ್ತಾಯ ಸೂಚಿಸಲು ಎಚ್ಚರಿಕೆಯ ಗಂಟೆಯನ್ನು ಹೊಡೆಯಲಾಯಿತು. ಸ್ಯಾಂಡಲ್ ತತ್ತರಿಸುತ್ತ ಮೂಲೆಗೆ ಹೋದನು; ತನಗೆ ಏನೂ ಆಗಿರಲಿಲ್ಲವೆಂದು ಕ್ಯಾಪ್ಟನ್ನಿಗೆ ದಬಾಯಿಸಿದನು. ಸಮರ್ಥನೆಗಾಗಿ, ಎರಡು ಗಾಳಿಯ ಎಗುರುವಟ್ಟೆಗಳನ್ನು ಹಿಂದಕ್ಕೆಸೆದು ತೋರಿಸಿದನು.

ಟಾಮ್‌ಕಿಂಗ್ ಕಷ್ಟದಿಂದ ಉಸಿರೆಳೆಯುತ್ತಾ, ದೇಹವನ್ನೂ ವಾಲಿಸಿ ತನ್ನ ಮೂಲೆಯಲ್ಲಿ ಕುಳಿತಿದ್ದನು. ಅವನ ನಿರೀಕ್ಷಣೆ ಸಫಲವಾಗದೆ ಹತಾಶನಾಗಿದ್ದನು. ಗಲಾಟೆಯಿಲ್ಲದಿದ್ದರೆ ರೆಫರಿ ತನ್ನ ಕಡೆಯೇ ತೀರ್ಪು ಹೇಳುತಿದ್ದನೊ ಏನೊ! ಆಗ ಹಣದ ಥೈಲಿ ತನ್ನದಾಗುತ್ತಿತ್ತು! ಸ್ಯಾಂಡಲ್‌ನಂತೆ ತಾನು ಕೀರ್ತಿಗಾಗಲಿ ಅಥವಾ ವ್ಯಕ್ತಿಯ ಘನತೆಗಾಗಲಿ ಹೊಡೆದಾಡುವವನಲ್ಲ. ಆದರೆ ತನಗೆ ಬೇಕಾಗಿರುವುದು ಮೂವತ್ತು ಪೌಂಡು ಹಣ....ಈಗ ಸ್ಯಾಂಡಲ್ ಒಂದು ಕ್ಷಣ ಮಾತ್ರದಲ್ಲಿ ಚೇತರಿಸಿಕೊಳ್ಳುತ್ತಾನೆ!....

ಯೌವನಕ್ಕೆ ಉಪಚಾರಮಾಡಲು ಎಲ್ಲರೂ ಬರುತ್ತಾರೆ—ಈ ಭಾವ ಕಿಂಗ್‌ನ ತಲೆಯಲ್ಲಿ ಮಿಂಚಿತು. ಮೊದಲಬಾರಿ ಇದನ್ನು ತಾನು ಕೇಳಿದ್ದು ಯುವಕನಾಗಿದ್ದಾಗ....ಅಂದು ರಾತ್ರಿ ಅವನು ಸ್ಟೌಷರ್ ಬಿಲ್‌ನನ್ನು ಸೋಲಿಸಿದ್ದನು. ಕಾದಾಟವಾದ ಮೇಲೆ ಒಬ್ಬ ನೀಟುಗಾರ ಭುಜತಟ್ಟಿ, ತನಗಾಗಿ ಮದ್ಯವನ್ನು ತಂದಾಗ, ಈ ಮಾತುಗಳನ್ನು ಹೇಳಿದನು: ಯೌವನಕ್ಕೆ ನನ್ನಿಂದ ಸೇವೆ ನಡೆಯಲಿ: ಆ ನೀಟುಗಾರ ಹೇಳಿದ್ದು ಸರಿ. ಬಹು ವರ್ಷಗಳ ಹಿಂದಿನ ಆ ರಾತ್ರಿಯಲ್ಲಿ ಟಾಮ್‌ಕಿಂಗ್ ಯುವಕನಾಗಿದ್ದನು. ಆದರೆ ಇಂದಿನ ರಾತ್ರಿ ಯೌವನ ಎದುರುಮೂಲೆಯಲ್ಲಿ ಕುಳಿತಿದೆ!....ಅರ್ಧಗಂಟೆಯಿಂದಲೂ ಕಾದಾಟ ನಡೆಯುತ್ತಿದೆ. ತಾನು ಮುದುಕ. ಸ್ಯಾಂಡಲ್‌ನಂತೆ ಹೋರಾಡಿದ್ದರೆ, ಆಟ

ಮುಗಿಸಲು ತನಗೆ ಹದಿನೈದು ನಿಮಿಷವೂ ಬೇಕಾಗುತ್ತಿರಲಿಲ್ಲ. ಆದರೆ ಚೇತರಿಸಿಕೊಳ್ಳಲು ತನಗೆ ಸಾಧ್ಯವಿಲ್ಲ. ಪ್ರತಿ ರೌಂಡಿನ ಮಧ್ಯದಲ್ಲೂ ಸಿಗುತಿದ್ದ ಬಿಡುವಿನಲ್ಲಿ, ಶಕ್ತಿ ಸಂಪಾದನೆ ಆಗುವುದಿಲ್ಲ. ಮೊದಲೇ ಉಬ್ಬಿದ್ದ ರಕ್ತನಾಳಗಳೂ ಮತ್ತು ಕಷ್ಟಸಂಕೋಲೆಗಳಿಂದ ಹುಣ್ಣಾದ ಹೃದಯವೂ ಶಕ್ತಿಮಾರ್ಗದಲ್ಲಿ ಅಡಚಣೆಗಳಾಗಿದ್ದವು. ಮತ್ತೆ ಪ್ರಾರಂಭದಲ್ಲೇ ತನ್ನಲ್ಲಿ ನಾಕಷ್ಟು ಸತ್ವವಿರಲಿಲ್ಲ. ತನಗೆ ಕಾಲಿನ ಭಾರವೇ ಜಾಸ್ತಿಯಾಗಿ ಹಿಡಿದುಕೊಂಡಂತಿತ್ತು. ಎರಡು ಮೈಲಿಗಳ ದೂರ ನಡೆದುಕೊಂಡು ಬರಬಾರದಿತ್ತು. ಆದರೆ ತುಂಡು ಮಾಂಸ! ಬೆಳಗಿನಿಂದಲೂ ಅದಕ್ಕಾಗಿಯೆ ಕಾತೊರೆಯುತ್ತಿರುವುದು. ಮಾಂಸದ ವ್ಯಾಪಾರಿಗಳನ್ನು ಕಂಡರೆ ದ್ವೇಷ ಉಕ್ಕೇರಿಬರುತ್ತದೆ; ತನಗೆ ಅವರು ಸಾಲ ಕೊಡಲು ನಿರಾಕರಿಸಿದರು. ತಿನ್ನಲು ಕೂಳಿಲ್ಲದ ಮುದುಕ ಕಾದಾಟಕ್ಕೆ ಬರುವುದೆಂದರೆ ಕಷ್ಟವೇ ಸರಿ. ತುಂಡುಮಾಂಸವೇನೊ ಅತಿ ಸಣ್ಣ ಪದಾರ್ಥ; ಹೆಚ್ಚೆಂದರೆ ಕೆಲವು ಪೆನ್ನಿಗಳಾಗಬಹುದು; ಆದರೆ ತನಗೆ ಅದು ಮೂವತ್ತು ಪೌಂಡಿನ ಹಣದಲ್ಲಿ ಅಡಕವಾಗಿದೆ!....

ಗಂಟೆಯ ಸದ್ದಿನಿಂದ ಹನ್ನೊಂದನೇ ರೌಂಡಿಗೆ ಆಹ್ವಾನ ಬಂತು. ನವಶಕ್ತಿ ಮುನ್ನುಗ್ಗುವಂತೆ ಸ್ಯಾಂಡಲ್ ನಟಿಸಿದನು. ಅವನಲ್ಲಿ ಯಾವ ಹೊಸ ಹುರುಪೂ ಇಲ್ಲದ ವಿಷಯ ಕಿಂಗಿಗೆ ತಿಳಿದಿತ್ತು; ಎಷ್ಟಾದರೂ ಮೋಸಗೊಳಿಸುವ ಆ ನಟನೆ ಪಂದ್ಯದಷ್ಟೇ ಹಳೆಯದಲ್ಲವೇ? ಅಂದಮೇಲೆ ಕಿಂಗಿಗೆ ತಿಳಿಯದೆ ಇಲ್ಲ. ಆದರೂ ಕಿಂಗ್ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಸ್ವೇಚ್ಛೆಯಾಗಿ ಓಡಾಡುತ್ತಾ ಸ್ಯಾಂಡಲ್‌ನು ಚೇತರಿಸಿಕೊಳ್ಳಲು ಅವಕಾಶಕೊಟ್ಟನು. ಕಿಂಗಿಗೆ ಬೇಕಾದುದೇ ಅದು. ತನ್ನ ಎಡಗೈನಿಂದ ಅವನನ್ನು ಚುಚ್ಚಿ ಪ್ರತಿಯಾಗಿ ತಲೆ ತಗ್ಗಿಸುವಂತೆ ಮಾಡಿದನು. ಮೇಲೆ ನೆಗೆದು ಮೊಣಕೈ ಬಾಗಿನಿಂದ ತಿವಿಯಲಾರಂಭಿಸಿದನು. ಅರ್ಧಹೆಜ್ಜೆ ಹಿಂದಕ್ಕೆ ಹೋಗಿ ಮುಖದ ನೇರಕ್ಕೆ ಮುಷ್ಟಾಮುಷ್ಟಿ ನಡೆಸಿದನು. ಸ್ಯಾಂಡಲ್ ರಂಗದ ಮೇಲೆ ಕುಸಿದುಬಿದ್ದನು. ಅದಾದ ಮೇಲೆ ಕಿಂಗ್ ಮತ್ತಷ್ಟು ಜೋರಾದನು. ಎದುರಾಳಿಗೆ ವಿಶ್ರಾಂತಿಗಾಗಿ ಕಾಲವಿಳಂಬ ಮಾಡದೆ, ತನ್ನಮಟ್ಟಿಗೆ ಶಿಕ್ಷೆಯನ್ನೂ ಅನುಭವಿಸಿದನು. ಅದಕ್ಕಿಂತಲೂ ಹೆಚ್ಚಾಗಿ ಎದುರಾಳಿಯನ್ನು ಗಾಯಗೊಳಿಸುತ್ತಿದ್ದನು. ಸ್ಯಾಂಡಲ್‌ನನ್ನು ಹಗ್ಗಗಳ ತನಕ ಓಡಿಸಿಕೊಂಡು ಎಲ್ಲ ರೀತಿಯ ಗುದ್ದುಗಳಿಂದ ಅಪ್ಪಳಿಸಿದನು. ಮೈ ಅಡಗಿಸಿಕೊಂಡರೆ ಹಿಡಿದೆಳೆಯುತಿದ್ದನು. ಕೆಳಕ್ಕೆ ಬೀಳುವ ಸಂದರ್ಭ ಬಂದರೆ, ಒಂದು ಕೈಯಿಂದ ಮೇಲೆತ್ತಿ, ತಕ್ಷಣ ಇನ್ನೊಂದು

ಕೈಯಿಂದ ಬಿಗಿಯುತಿದ್ದನು. ಬೀಳಲು ಆಸ್ಪದ ಕೊಡದೆ ಹಗ್ಗದ ಕಡೆಯೇ ಕಾದಾಡುತಿದ್ದನು.

ಇಷ್ಟುಹೊತ್ತಿಗೆ ಸಭಿಕರು ಹುಚ್ಚರಂತಾದರು. ಇಡೀ ಸಭೆ ಟಾಮ್ ಕಿಂಗ್‌ನ ಪರ ಕೂಗಾಡಿತು. "ಮುಂದೆ ಹೋಗು, ಟಾಮ್!" "ಅವನನ್ನು ಹಿಡಿ! ಹಿಡಿ ಅವನನ್ನು!" "ನಿನ್ನ ಕೈಗೆ ಸಿಕ್ಕಿದ್ದಾನೆ, ಟಾಮ್! ಸಿಕ್ಕಬಿದ್ದ!" ಇನ್ನೇನು ಸುಂಟರಗಾಳಿಯಂತೆ ಕೊನೆಗೊಳ್ಳಬೇಕು; ಹಣಕೊಟ್ಟು ಕುಸ್ತಿಯನ್ನು ನೋಡಲು ಬಂದ ಜನರ ಉದ್ದೇಶವೂ ಅದೇ ಅಲ್ಲವೇ?

ಅರ್ಧಗಂಟೆಯ ಕಾಲ ಶಕ್ತಿ ಹಿಡಿದಿದ್ದ ಟಾಮ್‌ಕಿಂಗ್, ತನಗೆ ಗೊತ್ತಿದ್ದ ಅತ್ಯಂತ ಮಹತ್ವಪೂರ್ಣ ಪ್ರಯತ್ನವೊಂದರಲ್ಲಿ ತೊಡಗಿದನು. ಈಗ ಆದರೆ ಆದಹಾಗೆ; ಇಲ್ಲದಿದ್ದರೆ ಇಲ್ಲವೇ ಇಲ್ಲ. ತಾನು ಗುದ್ದುಗಳನ್ನು ಹೊಡಿಯುತಿದ್ದಂತೆ, ಅದರ ಹಿನ್ನೆಲೆಯಲ್ಲಿ ಅಡಗಿದ್ದ ತೂಕ ಮತ್ತು ಅಪಾಯಗಳನ್ನು ಎಣಿಕೆ ಹಾಕಿದನು—ಸ್ಯಾಂಡಲ್ ಎಂಥ ಧೃಡಕಾಯನೆಂದು ತಿಳಿದಿತ್ತು. ಅವನನ್ನು ಸಂಪೂರ್ಣ ಕೆಡವಿಹಾಕುವುದು ಸಾಮಾನ್ಯವಲ್ಲ. ಅವನ ಹೊಸ ಪ್ರಾಯದ ತಾಕತ್ತು ಹಾಗೂ ಸಹನೆಯನ್ನು ಹೇಳತೀರದು. ಸ್ಯಾಂಡಲ್ ನಿಜವಾಗಿಯೂ ಮುಂದೆ ಬರುವ ಮನುಷ್ಯ. ಆ ಭವಿಷ್ಯ ಅವನಲ್ಲೇ ಅಡಗಿದೆ. ಅಂಥ ಒರಟು ನಾರಿನಿಂದಲೇ ಯಶಸ್ವೀ ಹೋರಾಳುಗಳು ಸಿದ್ಧರಾಗುವರು.

ಸ್ಯಾಂಡಲ್ ತಲೆತಿರುಗಿ ತೂರಾಡುತ್ತಿದ್ದನು. ಟಾಮ್‌ಕಿಂಗ್‌ನ ಕಾಲುಗಳಾದರೋ ಸುಕ್ಕಾಗಿ ಕುಸಿದುಬಿದ್ದವು; ಆದರೂ ಕಿಂಗ್ ಮನಸ್ಸು ಗಟ್ಟಿ ಮಾಡಿಕೊಂಡು ಭಯಂಕರ ಗುದ್ದುಗಳನ್ನು ಕೊಡುತ್ತಲೇ ಇದ್ದನು. ಏನು ಮಾಡುವುದು? ಪ್ರತಿಯೊಂದೂ ನೊಂದ ಕೈಗಳಿಗೆ ಮತಷ್ಟು ಯಾತನೆ ತರುತಿತ್ತು. ಪ್ರತಿಹೊಡೆತವಿಲ್ಲದಿದ್ದರೂ ಎದುರಾಳಿಯಂತೆ ತನ್ನಲ್ಲಿ ತಾನೇ ಬಹುಬೇಗ ದುರ್ಬಲನಾಗುತ್ತ ಬಂದನು. ಉಗ್ರ ಮನಸ್ಥೈರ್ಯದ ಗುದ್ದುಗಳು ನಿರರ್ಥಕವಾದವು. ಹಿಂದಿನಂತೆ ತೂಕವಿಲ್ಲದೆ ಹಗುರವಾಗಿದ್ದವು. ಕೆಳಗೆ ಎಳೆದಾಡುತಿದ್ದ ಕಾಲುಗಳು ಸೀಸದಂತಿದ್ದವು. ಇಂಥ ರೋಗದ ಲಕ್ಷಣಗಳನ್ನು ಕಂಡ ಸ್ಯಾಂಡಲ್‌ನ ಪಕ್ಷಪಾತಿಗಳು ತಮ್ಮ ಮನುಷ್ಯನನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿದರು.

ಕಿಂಗ್ ಇದ್ದಕ್ಕಿದ್ದಂತೆ ಪ್ರಚೋದನೆಗೊಂಡು ಒಂದಾದ ಮೇಲೊಂದು ಎರಡು ಗುದ್ದುಗಳನ್ನು ಕೊಟ್ಟನು. ಒಂದು ಹೊಟ್ಟೆಯ ಕುಳಿಯಲ್ಲಿಯ ನರಗಳ ಜಾಲವನ್ನು ಬಿಡಿಸಿತು; ಮತ್ತೊಂದು ದವಡೆಗೆ ತಾಕಿತು. ಅವು

ಜೋರಾದ ಹೊಡೆತಗಳಲ್ಲ. ಆದರೂ ಮುಂಕುಗವಿದು ದುರ್ಬಲನಾಗಿದ್ದ ಸ್ಯಾಂಡಲ್ ತಡೆಯಲಾಗದೆ ಕೆಳಕ್ಕೆ ಬಿದ್ದು ನಡುಗಿದನು. ರೆಫರಿ ಬಂದು ಅವನ ಕಿವಿಗಳಲ್ಲಿ ನಿರ್ಧಾರಕ ಸೆಕೆಂಡುಗಳನ್ನು ಎಣಿಸುತಿದ್ದನು. ಹತ್ತು ಸೆಕೆಂಡುಗಳಲ್ಲಿ ಏಳದಿದ್ದರೆ ಸೋಲು! ಸಭೆ ಸದ್ದಿಲ್ಲದೆ ಕಾಯುತಿತ್ತು. ಕಂಪಿಸುತಿದ್ದ ಕಾಲುಗಳ ಮೇಲೆ ಕಿಂಗ್ ನಿಂತಿದ್ದನು. ಮರಣೋನ್ಮುಖನಾದವನಂತೆ ದಿಗ್ಭ್ರಮೆಗೊಂಡನು. ತನ್ನ ಕಣ್ಣ ಮುಂದೆ ಜನರ ಅಸಂಖ್ಯಾತ ಮುಖಗಳು ಸಮುದ್ರದ ಅಲೆಗಳಂತೆ ತೂಗಾಡುತಿತ್ತು. ತನ್ನ ಕಿವಿಗೆ ಎಲ್ಲೋ ದೂರದಿಂದ ಬಂದ ಶಬ್ದದಂತೆ ರೇಫರಿ ಹೇಳುತಿದ್ದ ಎಣಿಕೆಗಳು ಕೇಳಿಸುತಿದ್ದವು. ಆದರೂ ಪಂದ್ಯ ತನ್ನ ಕಡೆಯೇ ಆಗುವಂತೆ ಭಾವಿಸಿದನು; ಅಷ್ಟು ಶಿಕ್ಷೆಗೊಳಗಾದ ಮನುಷ್ಯ ಪುನಃ ಏಳುವುದು ಅಸಂಭವ.

ಆದರೆ ಯುವಕರು ಮಾತ್ರ ಏಳಬಲ್ಲರು; ಸ್ಯಾಂಡಲ್ ಎದ್ದನು! ನಾಲ್ಕನೇ ಸೆಕೆಂಡಿಗೆ ಮುಖವಡಿಯಾಗಿ ಹೊರಳಿದನು. ಕತ್ತಲೆಯಲ್ಲಿ ಹುಡುಕುವವನಂತೆ ಹಗ್ಗಗಳಿಗಾಗಿ ತಡಕಾಡಿದನು. ಏಳನೇ ಸೆಕೆಂಡಿಗೆ ತನ್ನನ್ನು ತಾನು ಮೊಣಕಾಲ ಮೇಲೆ ಎಳೆದುಕೊಂಡನು. ತಲೆ ಸ್ಥಿರವಾಗಿ ನಿಲ್ಲದೆ ಭುಜದ ಮೇಲೆ ವಾಲುತಿತ್ತು. ಹಾಗೆಯೆ ವಿಶ್ರಾಂತಿ ಪಡೆದನು, ರೆಫರಿ 'ಒಂಬತ್ತು!' ಎಂದು ಕೂಗಿದಾಗ ಸ್ಯಾಂಡಲ್ ಎದ್ದು ನಿಂತನು. ಎಡತೋಳಿನಿಂದ ಮುಖವನ್ನೂ ಬಲತೋಳಿನಿಂದ ಹೊಟ್ಟೆಯನ್ನೂ ಮುಚ್ಚಿಕೊಂಡನು. ಆ ರೀತಿ ಅಪಾಯ ಸ್ಥಳಗಳನ್ನು ಕಾದುಕೊಂಡನು. ಥಟ್ಟನೆ ಮುಂದಕ್ಕೆ ತತ್ತರಿಸಿದನು. ಕಿಂಗ್‌ನನ್ನು ಹಿಮ್ಮೆಟ್ಟಿಸಿದರೆ ತನಗೆ ಹೆಚ್ಚು ಕಾಲಾವಕಾಶ ಸಿಗುತ್ತೆಂಬ ಭರವಸೆ ಅವನಿಗಿತ್ತು.

ಸ್ಯಾಂಡಲ್ ಎದ್ದ ತಕ್ಷಣ ಕಿಂಗ್ ಅವನ ಕಡೆ ಹೊರಟನು. ಆದರೆ ಅವನು ಕೊಟ್ಟ ಎರಡು ಗುದ್ದುಗಳು ಅಸ್ಥಿರವಾಗಿದ್ದ ಭುಜಗಳಲ್ಲಿ ನಾಟಲಿಲ್ಲ. ಮರುಕ್ಷಣ ಸ್ಯಾಂಡಲ್, ಕಿಂಗ್‌ನನ್ನು ಹತ್ತಿರ ಸೆಳೆದುಕೊಂಡು ಹುಚ್ಚನಂತೆ ಹಿಡಿದನು. ಇಬ್ಬರನ್ನೂ ಬೇರ್ಪಡಿಸಲು ರೆಫರಿ ಕಷ್ಟಪಡಬೇಕಾಯಿತು. ಬಿಡಿಸಿಕೊಂಡು ಬರಲು ಕಿಂಗ್ ಆತುರನಾಗಿದ್ದನು. ಯುವಕರು ಎಷ್ಟು ಬೇಗ ಚೇತರಿಸಿಕೊಳ್ಳಬಲ್ಲರು ಎಂಬ ಅಂಶ ಅವನಿಗೆ ತಿಳಿದಿತ್ತು. ಅದನ್ನು ತಪ್ಪಿಸಿದರೆ ಮಾತ್ರ ಸ್ಯಾಂಡಲ್ ತನ್ನವನಾಗಬಲ್ಲ. ಜೋರಾದ ಮತ್ತು ಧೃಡವಾದ ಮುಷ್ಟಿಯ ಹೊಡೆತವೊಂದು ಆ ಕೆಲಸ ಮಾಡಬಲ್ಲದು. ಸ್ಯಾಂಡಲ್ ತನ್ನವನು, ನಿಸ್ಸಂದೇಹವಾಗಿ ತನ್ನವನು. ಅವನನ್ನು ತಾನು ಮಿತಿಮೀರಿದ ಯುದ್ಧ

ತಂತ್ರದಿಂದ ಮಾತ್ರ ಗೆಲ್ಲಬೇಕು....ಸ್ಯಾಂಡಲ್ ರಭಸದಿಂದ ಅಳ್ಳಾಡಿ ಹೊರಕ್ಕೆ ಬಂದನು. ಉಳಿವು ಅಳಿವುಗಳ ಮಧ್ಯೆ ತೂರಾಡುತಿದ್ದನು. ಈಗ ಒಳ್ಳೆಯ ಗುದ್ದು ಹೊಡೆದರೆ ಸಾಕು ! ಅವನನ್ನು ಕೆಳಕ್ಕೆ ಬೀಳಿಸಿ ಹೊರಕ್ಕೆಸೆಯಬಹುದು. ನಿಜ ವಾಗಿಯೂ ಆ ಗುದ್ದಿನ ಹಿಂದೆ ತುಂಡುಮಾಂಸ ಕಾದಿದೆ ! ಎಂದು ಟಾಮ್ ಕಿಂಗ್ ಮನೋವೇಧಕ ಸ್ಥಿತಿಯಲ್ಲಿ ಯೋಚಿಸಿದನು. ಅದಕ್ಕಾಗಿ ಸಿದ್ಧ ನಾದನು. ನರವ್ಯೂಹ ಬಿಗಿಯಾಯಿತು. ಅದರೆ ಅದು ವೇಗವಾಗಿಯೂ ಜೋರಾಗಿಯೂ ಬೀಳಲಿಲ್ಲ. ಸ್ಯಾಂಡಲ್ ತೂರಾಡಿದರೂ ಕೆಳಕ್ಕೆ ಬೀಳಲಿಲ್ಲ ; ಹಗ್ಗ ಹಿಡಿದೇ ಇದ್ದನು. ಕಿಂಗ್ ಅವನ ಕಡೆ ಮತ್ತೆ ತಿರುಗಿಬಿದ್ದನು. ಘಟ್ಟ ನೆಯ ತೀವ್ರ ಮನೋಯಾತನೆಯಿಂದ ಮತ್ತೊಂದು ಗುದ್ದು ಕೊಟ್ಟನು. ಆವರೇನು? ಅವನ ದೇಹವೇ ಅವನಿಗೆ ಅನ್ಯಾಯಮಾಡಿತು. ಅವನಲ್ಲಿ ಉಳಿದಿರುವುದು ಕೇವಲ ಕಾದಾಟದ ಬುದ್ಧಿವಂತಿಕೆ ಮಾತ್ರ; ಅದೂ ಕೂಡ ಸುಸ್ತಿನಿಂದ ಮರೆಯಾಗಿ ಮಂಕಾಗಿತ್ತು. ದವಡೆಗೆಂದು ಗುರಿಯಿಟ್ಟು ಹೊಡೆದ ಗುದ್ದು ಭುಜದ ಮೇಲಕ್ಕೇ ಹೋಗಲಿಲ್ಲ! ಮನಸ್ಥೈರ್ಯವಿತ್ತು; ಆದರೆ ಬೇಸರ ಗೊಂಡ ಮಾಂಸಖಂಡಗಳು ವಿಧೇಯವಾಗಿರಲಿಲ್ಲ. ಗುದ್ದಿನ ರಭಸದಿಂದ ಟಾಮ್‌ಕಿಂಗ್ ತಾನೇ ಹಿಂದಕ್ಕೆ ತತ್ತರಿಸಿ ಇನ್ನೇನು ಬೀಳುವುದರಲ್ಲಿದ್ದನು. ಮತ್ತೆ ಸ್ಪರ್ಧಿಸಿದನು. ಈ ಬಾರಿಯಂತೂ ಸಂಪೂರ್ಣ ನಿಶ್ಶಕ್ತಿಯಿಂದ ಸ್ಯಾಂಡಲ್‌ನ ಮೇಲೆ ಬಿದ್ದನು; ನೆಲಕ್ಕೆ ಬೀಳದಂತೆ ಅವನನ್ನೇ ಹಿಡಿದಿದ್ದನು. ಜೀವ ಉಳಿಸಿಕೊಳ್ಳಲು ಪ್ರಾರ್ಥಿಸುತಿದ್ದನೋ ಏನೊ !

ಕಿಂಗ್ ಸಿಡಿಲಿನಂತೆ ತನ್ನ ಕೆಲಸವನ್ನೇನೊ ಮಾಡಿದನು. ಅವನ ಕಥೆ ಇನ್ನು ಮುಗಿಯಿತು. ಯೌವನದ ಸೇವೆ ನಡೆಯಬೇಕು. ತನ್ನ ಹಿಡಿತದಲ್ಲಿ ದ್ದರೂ ಸ್ಯಾಂಡಲ್ ಕ್ಷಣಕ್ಷಣಕ್ಕೂ ಶಕ್ತಿವಂತನಾಗುತಿದ್ದ ಪ್ರಭಾವವನ್ನು ಕಿಂಗ್ ಅನುಭವಿಸಿದನು. ರೆಫರಿ ಇಬ್ಬರನ್ನೂ ತಳ್ಳಿದಾಗ ತನ್ನ ಕಣ್ಣೆದುರಿಗೇ ಯೌವನ ಮತ್ತೆ ಚೇತರಿಸಿಕೊಳ್ಳುತಿತ್ತು! ಬರಬರುತ್ತಾ ಸ್ಯಾಂಡಲ್‌ನ ಗುದ್ದು ಗಳು ಶಕ್ತಿಯುತವಾಗಿ ಖಚಿತವಾಗಿದ್ದವು.

ಟಾಮ್‌ಕಿಂಗ್‌ನ ದೃಷ್ಟಿ ಮಬ್ಬಾಯಿತು. ಮುಷ್ಟಿಯ ಕೈಗವಸು ತನ್ನ ದವಡೆಗೆ ಬೀಸಲು ಬರುತಿದ್ದಂತೆ ಕಂಡಿತು. ಅದನ್ನು ತಪ್ಪಿಸಿಕೊಳ್ಳಲು ಕೈಮೇಲೆತ್ತಲು ಮನಸ್ಸುಮಾಡಿದನು....ಅಪಾಯದ ದರ್ಶನವಾಯಿತು; ಮುಂದಿನ ಕಾರ್ಯವೇನೆಂದು ಮನಸ್ಸು ನಿರ್ಧರಿಸಿತು; ಆದರೆ ತೋಳು ತುಂಬ ಭಾರವಾಗಿತ್ತು. ಅದು ಮೇಲೇಳಲು ಸಾಧ್ಯವಿಲ್ಲ. ತನ್ನ ಆತ್ಮವನ್ನೇ ಕಲಕಿ

ಪ್ರಯತ್ನಪಟ್ಟನು. ಅಷ್ಟು ಹೊತ್ತಿಗೆ ಆ ಮುಷ್ಟಿಯ ಕೈಗವಸು ಜೋರಾಗಿ ಬಿತ್ತು. ಟಾಮ್‌ಕಿಂಗಿಗೆ ವಿದ್ಯುತ್ತಿನ ಕಿಡಿ ಫಕ್ಕನೆ ಹೊಡೆದಂತಾಯಿತು. ತಕ್ಷಣ ಕತ್ತಲ ತೆರೆ ಅವನನ್ನು ಆವರಿಸಿತು.

ಪುನಃ ಕಣ್ಣು ತೆರೆದಾಗ ಅವನು ತನ್ನ ಮೂಲೆಯಲ್ಲಿ ಕುಳಿತಿದ್ದನು. ಬಾಂಡಿ ಬೀಚಿನಲ್ಲಿ ಅಲೆಗಳು ಬಡಿದಾಡುವಂತೆ ಸಭಿಕರು ಕೂಗುತಿದ್ದುದು ಕಿಂಗಿಗೆ ಕೇಳಿಸಿತು. ಒದ್ದೆಯಾಗಿದ್ದ ಸ್ಪಂಜನ್ನು ಮೆದುಳಿನ ಭಾಗಕ್ಕೆ ಒತ್ತಲಾಯಿತು. ಅವನ ಮುಖಕ್ಕೆ ಮತ್ತು ಎದೆಗೆ ಸ್ಪ್ರೇ ಮೂಲಕ ಸಿಡಿಸುಲಿವಾನ್ ತಣ್ಣನೆಯ ನೀರನ್ನು ಚಿಮುಕಿಸುತಿದ್ದನು. ಕೈಗವಸುಗಳನ್ನು ಆಗಲೇ ತೆಗೆಯಲಾಗಿತ್ತು. ಸ್ಯಾಂಡಲ್ ಅವನ ಕಡೆ ಬಗ್ಗಿ ಕೈ ಕುಲುಕುತಿದ್ದನು.

ತನ್ನನ್ನು ಕೆಡವಿದ ಮನುಷ್ಯನ ಬಗ್ಗೆ ಕಿಂಗಿಗೆ ಯಾವ ದ್ವೇಷವೂ ಇಲ್ಲ. ಹೃತ್ಪೂರ್ವಕವಾಗಿ ಅವನ ಕೈಗಳನ್ನು ಹಿಡಿದು ಬೀಳ್ಕೊಟ್ಟನು.

ಸ್ಯಾಂಡಲ್ ರಂಗದ ಮಧ್ಯಭಾಗಕ್ಕೆ ಬಂದು ನಿಂತನು. ಸಭಿಕರಲ್ಲಿ ಹುಯಿಲೋ ಹುಯಿಲು; ಅವರೆಲ್ಲರೂ ಸ್ಯಾಂಡಲ್‌ನ ಹತ್ತಿರ ಓಡುತ್ತಿದ್ದರು. ಯುವಕ ಪ್ರೊನ್ಟೊ ಮತ್ತೆ ದ್ವಂದ್ವಯುದ್ಧಕ್ಕೆ ಆಹ್ವಾನಿಸಿ ಪಂದ್ಯದ ಹಣವನ್ನು ನೂರು ಪೌಂಡುಗಳಿಗೆ ಏರಿಸಿದನು; ಅದನ್ನು ಸ್ಯಾಂಡಲ್ ಒಪ್ಪಿಕೊಂಡದ್ದಕ್ಕಾಗಿ ಜನ ಮತ್ತಷ್ಟು ಗೆಲುವಿನಿಂದ ಕೂಗಾಡಿದರು.

ಟಾಮ್‌ಕಿಂಗ್ ನಿರುತ್ಸಾಹದಿಂದ ನೋಡುತಿದ್ದನು; ಆತನ ಸಹಾಯಕರು ಮೈ ಮೇಲೆ ನಿಂತಿದ್ದ ನೀರನ್ನು ಒರೆಸಿ, ಮುಖವನ್ನು ಸರಿಪಡಿಸಿದರು. ರಂಗದಿಂದ ಹೊರಡಿಸಲು ಪ್ರಯತ್ನಪಟ್ಟರು.....ಟಾಮ್‌ಕಿಂಗಿಗೆ ಹಸಿವಿನ ತೀಕ್ಷ್ಣಯಾತನೆ ಉಂಟಾಗಿತ್ತು. ಅದು ಸಾಮಾನ್ಯ ಬಾಯಿ ಚಪಲದ ಪರಿಣಾಮವಲ್ಲ. ಹೊಟ್ಟೆಯನ್ನೆ ಕಲಕಿ ಬಂದ ಹಸಿವಿನಿಂದ ಇಡೀ ದೇಹ ಮೂರ್ಛೆಹೋದಂತಿತ್ತು. ಸ್ವಲ್ಪ ಕಾಲದ ಹಿಂದೆ ತಾನು ಸ್ಯಾಂಡಲ್‌ನನ್ನು ಸೋಲಿನ ಇಕ್ಕುಳದಲ್ಲಿ ಸಿಕ್ಕಿಸಿದ್ದ ಜ್ಞಾಪಕವಾಯಿತು. ಓ, ಮಾಂಸದ ತುಂಡೊಂದು ಇದ್ದಿದ್ದರೆ ಕೆಲಸ ಮಾಡುತಿತ್ತು! ಕಡೆಯ ನಿರ್ಧಾರಕ ಹೊಡೆತ ಗುರಿತಪ್ಪಲು ತುಂಡು ಮಾಂಸದ ಅಭಾವವೇ ಕಾರಣ. ಎಲ್ಲಕ್ಕೂ ತುಂಡು ಮಾಂಸ, ತುಂಡುಮಾಂಸ!

ಹಗ್ಗಗಳ ಮೂಲಕ ಈಚೆಗೆ ಬರಲು ಯಾರೋ ಸಹಾಯಮಾಡಿದರು. ಆದರೂ ಟಾಮ್‌ಕಿಂಗ್ ಸಹಾಯವನ್ನು ಅಪೇಕ್ಷಿಸಲಿಲ್ಲ. ಸ್ವತಂತ್ರವಾಗಿ ಹಾದು ನೆಲದ ಮೇಲೆ ನೆಗೆದನು. ಮಧ್ಯ ಹಜಾರದಲ್ಲಿ ಜನಜಂಗುಳಿ ವಿಪರೀತ

ವಾಗಿತ್ತು. ಹೇಗೋ ದಾರಿಮಾಡುತ್ತಿದ್ದವರನ್ನೇ ಟಾಮ್‌ಕಿಂಗ್ ಹಿಂಬಾಲಿಸಿ ನಡೆದನು. ಡ್ರೆಸಿಂಗ್ ರೂಮನ್ನು ಬಿಟ್ಟು ಹೊರಬಂದಾಗ, ಒಬ್ಬ ಯುವಕ, ಟಾಮ್‌ಕಿಂಗ್‌ನನ್ನು ಮಾತನಾಡಿಸಿದನು :

"ನಿನ್ನ ಕೈಯಲ್ಲೇ ಸಿಕ್ಕಾಗ ಅವನನ್ನು ಏಕೆ ಹಿಡಿಯಲಿಲ್ಲ? ಸುಖವಾಗಿ ಗೆಲ್ಲಬಹುದಿತ್ತು!"

"ಬಿಡಯ್ಯ, ಹಾಳಾಗಿ ಹೋಗಲಿ!" ಎಂದು ಟಾಂಕಿಗ್ ಮೆಟ್ಟಲಿಳಿದು ಕಾಲುಹಾದಿಗೆ ಬಂದನು.

ಸಾರ್ವಜನಿಕ ಭವನದ ಬಾಗಿಲುಗಳು ಪೂರ್ಣತೆರೆಯಲ್ಪಟ್ಟಿದ್ದವು. ದೀಪ ಉರಿಯುತಿತ್ತು. ಮದ್ಯವನ್ನು ಸರಬರಾಯಿಮಾಡುತ್ತ ಹುಸಿನಗೆಯ ಹೆಂಗಸರು ಓಡಾಡುತಿದ್ದರು. ಕಾದಾಟದ ಚರ್ಚೆಯಲ್ಲಿ ಭಾಗವಹಿಸುತಿದ್ದ ಅನೇಕ ಧ್ವನಿಗಳನ್ನು ಕಿಂಗ್ ಆಲಿಸಿದನು. ಮೇಜಿನ ಮೇಲೆ ನಾಣ್ಯಗಳು ಝಣ ಝಣ ಶಬ್ದಮಾಡುತ್ತಿದ್ದವು. ಯಾರೋ ಒಬ್ಬರು ಪಾನೀಯ ತೆಗೆದು ಕೊಳ್ಳಲು ಟಾಂಕಿಂಗ್‌ನನ್ನೂ ಕರೆದರು. ಕಿಂಗ್ ತಲೆಯಲ್ಲಾಡಿಸಿ ಬೇಡ ವೆಂದು ತನ್ನ ದಾರಿ ತಾನು ಹಿಡಿದನು.

ಅವನ ಜೇಬಿನಲ್ಲಿ ಒಂದು ಪೆನ್ನಿಯೂ ಇರಲಿಲ್ಲ. ಎರಡು ಮೈಲಿಗಳ ಮನೆಯ ಕಡೆ ಪ್ರಯಾಣ ಬಹು ದೂರವಿದ್ದಂತೆ ಕಂಡಿತು. ಅವನು ನಿಜ ವಾಗಿಯೂ ವೃದ್ಧನಾಗುತ್ತಿದ್ದಾನೆ. ಸ್ಥಳ ದಾಟಿ ಇದ್ದಕ್ಕಿದ್ದಂತೆ ಒಂದು ಬೆಂಚಿನ ಮೇಲೆ ಕುಳಿತನು. ಕಾದಾಟದ ಫಲಿತಾಂಶವನ್ನು ತಿಳಿಯಲು ಕಾತರಳಾಗಿಯೂ ಮತ್ತು ತನಗಾಗಿ ಕಾದು ಕುಳಿತೂ ಇರುವ ಹೆಂಡತಿಯ ನೆನಪಾಯಿತು. ಆ ಯೋಚನೆ ಅವನ ಎದೆಗುಂದಿಸಿತು ; ಇದು ಎಲ್ಲ ಸೋಲಿ ಗಿಂತಲೂ ಕಷ್ಟತರವಾದುದು ; ಎದುರಿಸಲು ಸಾಧ್ಯವೇ ಇಲ್ಲ.

ಅವನು ದುರ್ಬಲನಾಗಿ, ಮುಟ್ಟಿದರೆ ನೋಯುವವನಂತೆ ಕಂಡನು. ಜಜ್ಜಿಹೋಗಿದ್ದ ಗೆಣ್ಣುಗಳಿಂದ ನರಳಾಡುತಿದ್ದುದನ್ನು ನೋಡಿದರೆ, ಅವನಿಂದ ಮುಂದೆ ಯಾವ ಕೆಲಸವೂ ನಡೆಯಲಾರದು. ನೌಕಾದಳದಲ್ಲಿ ಉದ್ಯೋಗ ದೊರಕಿದರೂ, ಮುಷ್ಟಿಯ ಬಿಗಿ ತಪ್ಪಿಹೋಗಿದೆ ; ಆಯುಧಗಳನ್ನು ಹಿಡಿಯ ಬೇಕಾದರೆ ಒಂದು ವಾರವಾದರೂ ಬೇಕು. ಹೊಟ್ಟೆ ತೊಳಸಿ ಬರುತಿದ್ದ ಹಸಿವು ಅವನಿಗೆ ಜುಗುಪ್ಸೆ ಹುಟ್ಟಿಸಿತು. ದಾರಿದ್ರ್ಯದ ಒತ್ತಡ ತಡೆಯ ಲಾರದೆ, ಕಣ್ಣಲ್ಲಿ ನೀರು ಹರಿಯಿತು. ಇದು ಅವನ ಜಾಯಮಾನಕ್ಕೆ ವಿರೋಧ ವಾಗಿತ್ತು. ಹಾಗಿದ್ದರೂ ಕಣ್ಣೀರು ಹಾಕುವುದೆಂದರೆ ಎಂಥ ದೌರ್ಜನ್ಯದ

ಪ್ರಸಂಗವಿರಬೇಕು! ತಕ್ಷಣ ಕೈಗಳಿಂದ ಮುಖ ಮುಚ್ಚಿಕೊಂಡನು. ಅಳುತ್ತಿದ್ದಾಗ ಸ್ಟೌಷರ್‌ಬಿಲ್‌ನ ಜ್ಞಾಪಕವಾಯಿತು. ಆ ರಾತ್ರಿ; ಬಹುವರ್ಷಗಳ ಹಿಂದಿನ ರಾತ್ರಿಯಲ್ಲಿ ತಾನು ಅವನನ್ನು ಹೊಡೆದಿರಲಿಲ್ಲವೇ? ಪಾಪ; ಮುದಿ ಸ್ಟೌಷರ್‌ಬಿಲ್! ಆತ ಡ್ರೆಸಿಂಗ್ ರೂಮಿನಲ್ಲಿ ಅಂದು ಏಕೆ ಅತ್ತನೆಂಬುದು ಇಂದು ತಿಳಿಯಿತು.....

ಮುದುಕರ ಮಂಡಲಿ

ದಂಡಿನ ಪಾಳಯದಲ್ಲಿ ವ್ಯಕ್ತಿಯೊಬ್ಬನ ಜೀವನಕ್ಕೆ ಸಂಬಂಧಿಸಿದ ವಿಚಾರಣೆ ನಡೆದಿತ್ತು. ವೈಟ್‌ಫಿಶ್ ನದೀ ಪ್ರದೇಶದ ಮುದುಕನೇ ಈ ಅಪರಾಧಿ. ವೈಟ್‌ಫಿಶ್ ನದಿ ಲೀ ಬಾರ್ಗ್ ಸರೋವರದ ಹತ್ತಿರ ಯೂಕಾನ್‌ಗೆ ಸೇರುತ್ತದೆ.....ಇಡೀ ಡಾಸನ್ ನಗರವೇ ಮುದುಕನ ವಿಷಯದಲ್ಲಿ ತಲೆಕೆಡಿಸಿಕೊಂಡಿತ್ತು. ಅಷ್ಟೇ ಅಲ್ಲ; ಸಾವಿರಾರು ಮೈಲಿಗಳ ಯೂಕಾನ್ ನಿವಾಸಿಗಳೂ ಮುದುಕನ ಬಗ್ಗೆ ಕುತೂಹಲಿಗಳಾಗಿದ್ದರು; ಭೂಮಿಯನ್ನು ವಶಪಡಿಸಿಕೊಳ್ಳುವ ಮತ್ತು ಸಮುದ್ರದ ಮೇಲೆ ಕಳ್ಳತನಮಾಡುವ ಆಂಗ್ಲೋ—ಸ್ಯಾಕ್ಸನರ ಪದ್ಧತಿಯಂತೆ ಕಾನೂನಿನ ಅಧಿಕಾರ ಗೆದ್ದ ಜನಾಂಗಕ್ಕೇ ಮೀಸಲು; ಬಹು ವೇಳೆ ಆ ನ್ಯಾಯ ವಿಧಾನಗಳು ಕ್ರೂರವಾಗಿರುತಿದ್ದವು. ಆದರೆ ಇಂಬರ್‌ನ ಬಗ್ಗೆ ಕಾನೂನು ಅಪರಿಪೂರ್ಣವೂ ದುರ್ಬಲವೂ ಆಗಿದ್ದಂತೆ ಕಂಡಿತು. ಲೆಕ್ಕ ಹಾಕಿ ನೋಡುವುದಾದರೆ, ಅವನಿಗೆ ವಿಧಿಸಲಿರುವ ಶಿಕ್ಷೆಯಲ್ಲಿ ಯಾವ ಬುದ್ಧಿವಂತಿಕೆಯೂ ಕಾಣದು. ಅವನು ಅಪರಾಧಿ ಎಂಬ ಸಮರ್ಥನೆಯೂ ಅದಕ್ಕೆ ತಕ್ಕ ಶಿಕ್ಷೆಯೂ ಮೊದಲೇ ತೀರ್ಮಾನವಾಗಿತ್ತು. ಅದರಲ್ಲಿ ಯಾವ ಸಂಶಯವೂ ಇರಲಿಲ್ಲ. ಅದು ಮರಣ ದಂಡನೆಯಾಗಿದ್ದರೂ, ಇಂಬರ್‌ನಿಗೆ ಇದ್ದುದು ಒಂದು ಜೀವ ಮಾತ್ರ! ಆದರೆ ಅವನ ಬಗ್ಗೆ ಪ್ರಚಲಿತವಿದ್ದ ಕಥೆಗಳು ನೂರಾರು.....

ನಿಜವಾಗಿಯೂ ಅವನ ಕೈ ತುಂಬ ಬಹು ಜನರ ರಕ್ತದ ಕಲೆಗಳು! ಜನ ಹೇಳುವಂತೆ ಆತ ನಡೆಸಿದ ಕೊಲೆಗಳು ಎಷ್ಟೆಂದು ಸರಿಯಾಗಿ ಹೇಳಲು ಸಾಧ್ಯವಿಲ್ಲ. ದಾರಿಯ ಪಕ್ಕದಲ್ಲಿ ಧೂಮಪಾನ ಮಾಡುವವರನ್ನೋ, ಸ್ಟೌವ್ ಸುತ್ತ ಕುಳಿತು ಹರಟೆಹೊಡೆಯುವವರನ್ನೋ ಕೇಳಿದರೆ ಇಂಬರ್‌ನ ಕೈಯಲ್ಲಿ

ಎಷ್ಟು ಜನ ಸತ್ತಿರಬಹುದೆಂಬ ಸಾಮಾನ್ಯ ಲೆಕ್ಕಾಚಾರ ತಿಳಿಯಬಹುದಾಗಿತ್ತು. ಕೊಲೆಗೀಡಾದವರೆಲ್ಲ ಬಿಳಿಯ ಜನಾಂಗದವರು ; ಒಬ್ಬಂಟಿಗರಾಗಿ ಅಥವಾ ಜೊತೆಗಾರರೊಡನೆ ಅಥವಾ ತಂಡಗಳಲ್ಲಿ ಆ ಬಡ ಜೀವಿಗಳು ಕೊಲೆಗೀಡಾಗಿದ್ದರು. ಈ ಚೆಲ್ಲಾಟದ, ಉದ್ದೇಶಪೂರಿತ ಕೊಲೆಗಳು ಬಹುಕಾಲದಿಂದ ಪೋಲೀಸು ಸವಾರರಿಗೆ ಬಿಡಿಸಲಾರದ ಸಮಸ್ಯೆಯಾಗಿತ್ತು. ಮುಂದೆ ಕ್ಯಾಪ್ಟನ್‌ಗಳ ಕಾಲದಲ್ಲೂ ಹಾಗೆಯೆ ಇತ್ತು. ಇತ್ತೀಚಿನ ನದಿಯ ಕವಲುಗಳು ತಿಳಿದಂತೆ, ಆ ಭೂಮಿಯ ಮೇಲ್ವಿಚಾರಕರಾಗಿ ಗವರ್ನರ್ ಸಾಹೇಬರು ಬಂದರು. ಆಗಲೂ ಇಂಬರ್‌ನ ರಹಸ್ಯ ತಿಳಿಯಲಿಲ್ಲ.

ಎಲ್ಲಕ್ಕಿಂತಲೂ ಆಶ್ಚರ್ಯಕರವಾದ ವಿಷಯವೆಂದರೆ, ಇಂಬರ್ ತಾನಾಗಿಯೆ ಡಾಸನ್ ಪ್ರದೇಶಕ್ಕೆ ಬಂದು ತಪ್ಪುಗಳನ್ನು ಒಪ್ಪಿಕೊಂಡದ್ದು. ವಸಂತಕಾಲದ ಕೊನೆಯಲ್ಲಿ ಅವನು ಪ್ರಯಾಣ ಬೆಳೆಸಿದ್ದನು. ಯೂಕಾನ್ ನದಿ ಮಂಜುಗಡ್ಡೆಗಳ ಕೆಳಗೆ ಪ್ರವಹಿಸುತ್ತಿತ್ತು. ಆಗ ಮುದುಕನಾದ ಇಂಡಿಯನ್ ಕಷ್ಟದಿಂದ ನದಿಮಾರ್ಗದ ಏರು ನೆಲಗಳನ್ನು ಹತ್ತಿ, ಕಡೆಗೆ ದೊಡ್ಡ ರಸ್ತೆಯನ್ನು ಸೇರಿದ್ದನು. ಅಲ್ಲಿ ನಿಂತು ಮಿಕಿ ಮಿಕಿ ನೋಡುತಿದ್ದನು. ಅವನು ನಡೆಯುತಿದ್ದ ರೀತಿಯನ್ನು ಗಮನಿಸಿದವರು ಆತನು ದುರ್ಬಲನಾಗಿ ತೂರಾಡುತ್ತಿದ್ದಾನೆಂದು ತಿಳಿದರು. ಹಾಗೆಯೇ ಯಾವುದೋ ಕಟ್ಟಡಕ್ಕಾಗಿ ರಾಶಿಹಾಕಿದ್ದ ಮರದ ದಿಮ್ಮಿಗಳ ರಾಶಿಯ ಮೇಲೆ ಕುಳಿತನು. ಅನಂತ ಪ್ರವಾಹದೋಪಾದಿಯಲ್ಲಿ ಓಡಾಡುತಿದ್ದ ಬಿಳಿಯ ಜನರನ್ನು ದಿಟ್ಟಿಸಿ ನೋಡುತ್ತಾ ಆ ದಿನವನ್ನೆಲ್ಲ ಕಳೆದನು. ಅವನ ವಿಚಿತ್ರ ಮುಖಭಾವ ಅನೇಕರನ್ನು ಆ ಕಡೆ ಸೆಳೆಯಿತು. ಅಂತೆಯೆ ಅವನ ಬಗ್ಗೆ ಅನೇಕ ಟೀಕೆಗಳು ಹೊರಟದ್ದುವು. ಇಂಬರನು ಸ್ವತಃ ಅಸಾಧಾರಣ ವ್ಯಕ್ತಿಯಾಗಿದ್ದ ವಿಷಯವನ್ನು ಜನ ಮರೆತಿದ್ದರು ; ಏಕೆಂದರೆ ಸ್ವಲ್ಪ ಕಾಲಾನಂತರ ಅವನನ್ನು ತಾವೇ ಕಂಡುಹಿಡಿದವರಂತೆ ತಮ್ಮ ಸೂಕ್ಷ್ಮಗ್ರಹಣ ಶಕ್ತಿಯನ್ನು ಹೊಗಳಿಕೊಂಡರು.

ಈ ಸನ್ನಿವೇಶದಲ್ಲಿ ಧೈರ್ಯದಿಂದ ವರ್ತಿಸಲು ಕಿರಿಯ ಡಿಕನ್‌ಸನ್‌ಗೆ ಅವಕಾಶ ಸಿಕ್ಕಿತು. ಡಿಕನ್‌ಸನ್ ಇಲ್ಲಿಗೆ ಮೊದಲು ನೆಲಸಲು ಬಂದಾಗ ಅವನಲ್ಲಿ ಸ್ವಲ್ಪಹಣವಿತ್ತು. ಅಂತೆಯೇ ಎಷ್ಟೋ ಕನಸು ಕಟ್ಟಿದ್ದನು. ಆದರೆ ಹಣ ಪೋಲಾದಂತೆ ಅವನ ಆಶೆಗಳೆಲ್ಲವೂ ದೂರ ಸರಿದವು. ಪುನಃ ದೇಶಕ್ಕಾದರೂ ಹಿಂದಿರುಗಿ ಹೋಗುವ ಉದ್ದೇಶದಿಂದ, ಆತ 'ಹಾಲ್‌ಬ್ರೂಕ್ ಆ್ಯಂಡ್ ಮ್ಯಾಸನ್' ಎಂಬ ದಳ್ಳಾಳಿಗಳ ಸಂಸ್ಥೆಯಲ್ಲಿ ಗುಮಾಸ್ತೆಯಾಗಿದ್ದನು. ಆ

ಸಂಸ್ಥೆಯ ಹತ್ತಿರವೇ ಮರದ ರಾಶಿ ಇದ್ದುದು. ಅದರ ಮೇಲೆಯೇ ಇಂಬರ್ ಕುಳಿತಿದ್ದುದು. ತಿಂಡಿಗೆ ಹೋಗುವುದಕ್ಕಿಂತ ಮುಂಚೆ ಡಿಕನ್‌ಸನ್ ಕಿಟಕಿ ಯಾಚೆ ನೋಡಿದನು. ಪುನಃ ಬಂದು ನೋಡಿದಾಗಲೂ ಮುದುಕ ಅಲ್ಲೀ ಕುಳಿತಿದ್ದನು.

ಡಿಕನ್‌ಸನ್ ಒಂದೇ ಸಮನೆ ನೋಡುತ್ತಲಿದ್ದನು. ಇತರರಂತೆ ತಾನು ಕೂಡ ತನ್ನ ಸೂಕ್ಷ್ಮಗ್ರಹಣ ಶಕ್ತಿಯ ಬಗ್ಗೆ ಅಭಿಮಾನ ತಾಳಿದನು. ತನ್ನಲ್ಲೂ ಕಲ್ಪನಾ ದೃಷ್ಟಿ ಇಲ್ಲವೇ ಎಂದು ಜಂಭಪಟ್ಟನು. ಮೇಲೆ ಬೀಳುತಿದ್ದ ಸ್ಯಾಕ್ಸನ ರನ್ನು ಶಾಂತ ರೀತಿಯಿಂದ ನೋಡುತ್ತ, ಚಲಿಸದೆ ಕುಳಿತಿದ್ದ ಅಸಂಸ್ಕೃತನಾದ ಮುದುಕನು ಸಿವಾಶ್ ಜನಾಂಗದ ಪ್ರಮುಖ ಪ್ರತಿನಿಧಿ ಇರಬಹುದೆಂದು ಡಿಕನ್‌ಸನ್ ಊಹಿಸಿದನು.

ಗಂಟೆಗಳು ಉರುಳಿದವು. ಆದರೆ ಇಂಬರ್ ತನ್ನ ಭಂಗಿಯನ್ನು ಬದ ಲಾಯಿಸಲಿಲ್ಲ. ಅಂಗಾಂಗಗಳು ಸ್ವಲ್ಪವೂ ಅಲುಗಿದಂತಿರಲಿಲ್ಲ. ಡಿಕನ್‌ಸನ್‌ಗೆ ಆಶ್ಚರ್ಯವಾಯಿತು; ಹಿಂದೆ ಗಲಾಟೆಯ ಕೇಂದ್ರದಲ್ಲಿ ಒಬ್ಬ ಸ್ಲೆಜ್ ಮೇಲೆ ನಿಗುರಿ ಕುಳಿತದ್ದು ಜ್ಞಾಪಕವಾಯಿತು. ಅವನು ವಿಶ್ರಾಂತಿ ಪಡೆಯುತ್ತಿರ ಬಹುದೆಂದು ಊಹಿಸಿದರು. ಆದರೆ ಮುಟ್ಟಿದಾಗ ಅವನು ಸೆಡೆದುಕೊಂಡಿದ್ದನು. ಮೈ ತಣ್ಣಗಾಗಿತ್ತು. ಜನ ಜಂಗುಳಿಯ ಮಧ್ಯದಲ್ಲೆ ಆತ ಸಾವಿಗೆ ಆಹುತಿ ಯಾಗಿದ್ದನು. ಮೈಯೂದಿದ್ದ ಅವನನ್ನು ಕಾಫಿನ್‌ಗೆ ಸೇರಿಸಲು ಕಷ್ಟವಾಗಿತ್ತು. ಆದುದರಿಂದ ದೇಹವನ್ನು ಪ್ರಯಾಸದಿಂದ ಬೆಂಕಿಯ ಬಳಿ ಎಳೆದು ನೀರನ್ನು ತೆಗೆಯಬೇಕಾಯಿತು! ಡಿಕನ್‌ಸನ್ ಆ ನೆನಪಿನಿಂದ ನಡುಗಿದನು.

ಸ್ವಲ್ಪ ಹೊತ್ತಾದ ಮೇಲೆ ಡಿಕನ್‌ಸನ್ ಸಿಗರೇಟು ಸೇದಲು ಕಾಲು ದಾರಿಯ ಕಡೆ ಹೊರಟನು. ತಲೆಗೇರಿದ್ದ ಬಿಸಿಯನ್ನು ಕಡಿಮೆಮಾಡಿಕೊಳ್ಳಲು ಪ್ರಯತ್ನಪಟ್ಟನು. ಕೆಲ ಕಾಲಾನಂತರ ಎಮಿಲಿ ಟ್ರಾವಿಸ್ ಅದೇ ದಾರಿಯಲ್ಲಿ ಬಂದಳು. ಅವಳು ಸಿಗುವುದೇ ಅಪರೂಪ, ಎಷ್ಟಾದರೂ ಕೋಟ್ಯಾಧೀಶ ಗಣಿಯ ಇಂಜನಿಯರ್ ಮಗಳಲ್ಲವೇ? ಲಂಡನ್ನಿನಲ್ಲಿರಲಿ, ಕ್ಲಾಂಡೈಕ್‌ನಲ್ಲಿರಲಿ ಅವಳು ತನ್ನ ಯೋಗ್ಯತೆಗೆ ತಕ್ಕಂತೆ ಮೇಲುಡುಪನ್ನು ಧರಿಸುತಿದ್ದಳು. ಲಾವಣ್ಯ ವತಿಯೂ ಸೂಕ್ಷ್ಮಪ್ರಕೃತಿಯವಳೂ ಆಗಿದ್ದಳು. ಕಿರಿಯ ಡಿಕನ್‌ಸನ್ ಅವಳನ್ನು ಕಂಡೊಡನೆ ಸಿಗರೇಟನ್ನು ಹೊರ ಕಿಟಕಿಯ ಬದಿಯಲ್ಲಿ ಕಾಣುವಂತೆ ಇರಿಸಿ, ಹ್ಯಾಟ್ ಮೇಲೆತ್ತಿದನು.

ಅವರಿಬ್ಬರು ಕೇವಲ ಹತ್ತು ನಿಮಿಷ ಮಾತನಾಡಿರಬಹುದು. ಎಮಿಲಿ

ಟ್ರಾವಿಸ್ ಡಿಕನ್‌ಸನನ ಭುಜದ ಕಡೆ ನೋಡಿ ಬೆಚ್ಚಿ ಬಿದ್ದವಳಂತೆ ಚೀತ್ಕರಿಸಿದಳು. ಡಿಕನ್‌ಸನ್ ಹಿಂತಿರುಗಿ ನೋಡಿ ತಾನೂ ಬೆಚ್ಚಿದನು. ಇಂಬರ್ ದಾರಿಯನ್ನು ದಾಟಿ ಅಲ್ಲಿ ಬಂದು ನಿಂತಿದ್ದನು! ವಿಷಣ್ಣನಾಗಿಯೂ, ಹಸಿವಿನಿಂದ ಬೆಂಡಾದ ಛಾಯೆಯಂತೆಯೂ ಕಾಣುತಿದ್ದನು. ಅವನ ದೃಷ್ಟಿ ಹುಡುಗಿಯ ಕಡೆ ತಿರುಗಿತು.

"ನಿನಗೇನು ಬೇಕು?" ಎಂದು ಕಿರಿಯ ಡಿಕನ್‌ಸನ್ ನಡುಗುತ್ತಾ ತಟಕ್ಕನೆ ಕೇಳಿದನು.

ಇಂಬರ್ ಗುರುಗುಟ್ಟುತ್ತಾ ಗಂಭೀರವಾಗಿ ಎಮಿಲಿ ಟ್ರಾವಿಸಳ ಬಳಿ ನಿಂತನು. ಅವಳನ್ನು ಕಾಲಿನಿಂದ ಹಿಡಿದು ತಲೆಯ ತನಕ ಸೂಕ್ಷ್ಮವಾಗಿ ಗಮನಿಸಿದನು. ಅವಳ ರೇಷ್ಮೆಯಂಥ ಕಂದು ಬಣ್ಣದ ಕೂದಲು ಮತ್ತು ನುಣುಪಾದ ಕೆನ್ನೆಯು ಇಂಬರ್‌ನಲ್ಲಿ ವಿಶೇಷ ಆಸಕ್ತಿಯನ್ನು ಕೆರಳಿಸಿತು. ನಿಜವಾಗಿಯೂ ಕೆನ್ನೆಗೆಂಪು ಸೂಕ್ಷ್ಮವಾಗಿ ಚಿಮುಕಿಸಿದಂತಿತ್ತು. ಪತಂಗದ ಮೃದುವಾದ ರೆಕ್ಕೆಯ ಹೊಳಪಿನಂತಿತ್ತು. ದೋಣಿ ಅಥವಾ ಕುದುರೆ ಯಾವ ರೀತಿ ಇದೆ ಎಂದು ಲೆಕ್ಕಾಚಾರಹಾಕುವವನಂತೆ, ಇಂಬರ್ ಅವಳ ಸುತ್ತ ತಿರುಗಿದನು. ಪಶ್ಚಿಮಾಭಿಮುಖವಾಗಿ ಇಳಿಯುತಿದ್ದ ಸೂರ್ಯನ ಕಾಂತಿ ಎಮಿಲಿ ಟ್ರಾವಿಸಳ ಕಿವಿಯಲ್ಲಿದ್ದ ಕಡುಗೆಂಪಿನ ಹರಳಿನ ಮೂಲಕ ಹಾದು ಬರುತಿತ್ತು; ಅದನ್ನೇ ನೋಡುತ್ತ ಇಂಬರ್ ಯೋಚಿಸತೊಡಗಿದನು. ಮತ್ತೆ ಅವಳ ನೀಲಿಯ ಕಣ್ಣುಗಳನ್ನು ಶ್ರದ್ಧಾಪೂರ್ವಕವಾಗಿ ನೋಡಿದನು....ಏನನ್ನೋ ಗೊಣಗುಟ್ಟುತ್ತಾ ತನ್ನಕೈಯನ್ನು ಅವಳ ಕೈ ಮೇಲಿಟ್ಟನು. ಮತ್ತೊಂದು ಕೈಯಲ್ಲಿ ಅವಳ ಹಸ್ತವನ್ನು ಮೇಲೆತ್ತಿ ಹಿಂದಕ್ಕೆ ಬಗ್ಗಿಸಿದನು. ತಕ್ಷಣ ತಿರಸ್ಕಾರವನ್ನು ಸೂಚಿಸುವಂತೆ ಗಂಟಲಿನಲ್ಲೇ ಮಾತನಾಡುತ್ತಾ, ಅವಳ ಕೈ ಬಿಟ್ಟುಬಿಟ್ಟನು. ಅವನ ಮುಖದಲ್ಲಿ ಬೇಸರ ಮತ್ತು ಆಶ್ಚರ್ಯ ಭಾವಗಳಿದ್ದವು. ಡಿಕನ್‌ಸನ್ ಕಡೆ ತಿರುಗಿ, ಸಂಬೋಧಿಸಿದನು.

ಗಂಟಲಿನೊಳಗೇ ಮಾತನಾಡುತಿದ್ದ ಇಂಬರ್‌ನ ಭಾಷೆ ಡಿಕನ್‌ಸನ್‌ಗೆ ಅರ್ಥವಾಗಲಿಲ್ಲ. ಎಮಿಲಿ ಟ್ರಾವಿಸ್ ನಕ್ಕಳು. ಇಂಬರ್ ಸಿಂಡರಿಸಿಕೊಂಡು ಇಬ್ಬರ ಮುಖಗಳನ್ನೂ ನೋಡಿದನು. ಇನ್ನೇನು ಹೊರಡುವುದರಲ್ಲಿದ್ದನು. ಆಗ ಎಮಿಲಿ ಟ್ರಾವಿಸ್ ಜಿಮ್ಮಿಯನ್ನು ನೋಡಿ, "ಓ ಜಿಮ್ಮಿ, ಇಲ್ಲಿ ಬಾ" ಎಂದಳು.

ಜಿಮ್ಮಿ ಎದುರು ದಾರಿಯಿಂದ ಬಂದನು. ಅವನೊಬ್ಬ ದೊಡ್ಡದಾಗಿ

ಬೆಳೆದಿದ್ದ ಭಾರಿ ಇಂಡಿಯನ್. ಬಿಳೀ ಮನುಷ್ಯರಂತೆಯೆ ಬಟ್ಟೆಗಳನ್ನು ಹಾಕಿದ್ದನು. ಅಗಲವಾದ ಟೊಪ್ಪಿಗೆಯನ್ನು ಧರಿಸಿದ್ದನು. ಒಳನಾಡು ಭಾಷೆಯ ಸೂಕ್ಷ್ಮ ಪರಿಚಯ ಮಾತ್ರ ಅವನಿಗಿತ್ತು. ಮಧ್ಯೆ ಮಧ್ಯೆ ನಿಲ್ಲಿಸುತ್ತಾ, ಎಳೆದೆಳೆದು ಇಂಬರ್‌ನ ಜೊತೆ ಮಾತನಾಡಿದನು.

"ಅವನು ವೈಟ್‌ಫಿಶ್ ಮನುಷ್ಯ....ಬಿಳಿಯರ ಮುಖಂಡನನ್ನು ನೋಡಬೇಕಂತೆ" ಎಂದು ಜಿಮ್ಮಿ ಎಮಿಲಿಗೆ ಹೇಳಿದನು.

"ಗವರ್ನರನ್ನು ನೋಡಬೇಕೊ" ಎಂದನು ಡಿಕನ್‌ಸನ್.

ಜಿಮ್ಮಿ ಇನ್ನೂ ಸ್ವಲ್ಪ ಹೊತ್ತು ಇಂಬರ್‌ನ ಜೊತೆ ಸಂಭಾಷಿಸಿದನು. ಆದರೆ ಜಿಮ್ಮಿಯ ಮುಖ ಏಕೋ ಸಂಶಯಭಾವವನ್ನು ಸೂಚಿಸಿತು. ಅವನು ಕಕ್ಕಾಬಿಕ್ಕಿಯಾದನು.

"ಅವನು ಕ್ಯಾಪ್ಟನ್ ಅಲೆಗ್ಸಾಂಡರ್‌ನನ್ನು ನೊಡಬೇಕೆಂದು ಕಾಣುತ್ತೆ. ಬಿಳಿಯ ಜನಾಂಗದ ಎಷ್ಟೋ ಪುರುಷರು, ಹೆಂಗಸರು, ಮಕ್ಕಳನ್ನು ಕೊಂದನಂತೆ. ಈಗ ತಾನು ಸಾಯಬೇಕಂತೆ!" ಎಂದು ಜಿಮ್ಮಿ ವಿವರಿಸಿದನು.

ಡಿಕನ್‌ಸನ್ ಹೇಳಿದನು: "ಹುಚ್ಚನಿರಬಹುದು ಎಂದು ನನಗೆ ತೋರುತ್ತೆ."

"ಇದ್ದರೂ ಇರಬಹುದು...." ಎಂದು ಜಿಮ್ಮಿ ಇಂಬರ್‌ನ ಕಡೆ ತಿರುಗಿದನು. ಬಿಳಿಯರ ಮುಖಂಡನನ್ನು ನೋಡಬೇಕೆಂದು ಇಂಬರ್ ಒಂದೇ ಹಟ ಹಿಡಿದನು.

ಅಷ್ಟು ಹೊತ್ತಿಗೆ ಒಬ್ಬ ಪೋಲೀಸು ಸವಾರ ಗುಂಪಿನಲ್ಲಿ ಸೇರಿದ. ಕ್ಲಾಂಡೈಕ್‌ನಲ್ಲಿ ಕುದುರೆಯ ಮೇಲೆ ಹೋಗುವ ಅವಶ್ಯಕತೆಯಿರಲಿಲ್ಲ. ಆದ್ದರಿಂದ ನಡೆದುಕೊಂಡೇ ಬಂದಿದ್ದ. ಇಂಬರನ ಹಟ ಅವನಿಗೂ ತಿಳಿಯಿತು. ಪೋಲೀಸಿನವನು ಗಟ್ಟಿಮುಟ್ಟಾದ ಯುವಕ, ಅವನ ಭುಜಗಳು ವಿಶಾಲವಾಗಿದ್ದವು. ಕಾಲುಗಳನ್ನು ಸಡಲಿಸಿ ಹಾಕುತ್ತಿದ್ದನು. ಇಂಬರನಿಗಿಂತಲೂ ಅವನು ಎತ್ತರವಾಗಿದ್ದ. ವಂಶಾನುಗತವಾಗಿಯೂ, ಸಂಪ್ರದಾಯಕ್ಕನುಗುಣವಾಗಿಯೂ ಬಂದ ಶಕ್ತಿಯಲ್ಲಿ ಅವನಿಗೆ ವಿಶೇಷ ನಂಬಿಕೆ. ಅವನು ಇನ್ನೂ ಹುಡುಗ. ಮಿತಿಮೀರಿದ ಹುಡುಗತನ ಅವನ ಪೌರಷವನ್ನು ಹೆಚ್ಚಿಸಿತ್ತು. ಅವನ ನುಣಪಾದ ಕೆನ್ನೆ ಹುಡುಗಿಯರ ಕೆನ್ನೆಯಂತೆ ವಿವರ್ಣವಾಗುವ ಲಕ್ಷಣ ಹೊಂದಿತ್ತು.

ತಕ್ಷಣ ಇಂಬರ್ ಅವನ ಬಗ್ಗೆ ಆಸಕ್ತಿವಹಿಸಿದನು, ಕೊಂಕು ಕತ್ತಿಯನ್ನು

ನೋಡಿ ಕಿಡಿ ಕಾರಿದನು. ಅಂಥದೇ ಕತ್ತಿ ತನ್ನ ಗಲ್ಲದ ಮೇಲೆ ಹಿಂದೊಮ್ಮೆ ಗಾಯ ಮಾಡಿತ್ತು. ನವೆದುಹೋಗಿದ್ದ ಕೈಗಳನ್ನು ಆ ಯುವಕನ ಕಾಲುಗಳ ಮೇಲೆ ಆಡಿಸಿ, ಊದಿದ್ದ ಮಾಂಸಖಂಡಗಳನ್ನು ಸವರಿದನು. ಗೆಣ್ಣುಗಳಿಂದ ವಿಶಾಲ ಎದೆಗೆ ತಟ್ಟಿದನು. ಭುಜದ ರಕ್ಷಣೆಗಾಗಿ ಹಾಕಿದ್ದ ಮೆತ್ತೆಕಾಪನ್ನು ಒತ್ತಿದನು. ಕುತೂಹಲದಿಂದ ದಾರಿಹೋಕರು ಗುಂಪು ಸೇರುತ್ತಾ ಬಂದರು—ಧೃಢಕಾಯರಾದ ಗಣಿಕೆಲಸದವರು, ಪರ್ವತ ನಿವಾಸಿಗಳು, ಮತ್ತು ಗಡಿನಾಡಿನವರು ; ಉದ್ದ ಕಾಲಿನ, ವಿಶಾಲಭುಜದ ತಳಿಯ ಮಕ್ಕಳು, ಇತ್ಯಾದಿ.

ಇಂಬರ್ ಎಲ್ಲರ ಮುಖವನ್ನೂ ನೋಡುತ್ತ ವೈಟ್‌ಫಿಶ್ ಭಾಷೆಯಲ್ಲಿ ಜೋರಾಗಿ ಮಾತನಾಡಿದನು.

"ಅವನು ಏನು ಹೇಳಿದನು ?" ಎಂದು ಡಿಕನ್‌ಸನ್ ಕೇಳಿದನು.

"ಅವನು ಹೇಳುವಂತೆ, ಈ ಪೋಲೀಸಿನವನು ಒಬ್ಬ ಮಾತ್ರ ತನ್ನವರಂತೆ ಇದ್ದಾನಂತೆ...." ಎಂದು ಜಿಮ್ಮಿ ತಿಳಿಸಿದನು.

ಪ್ರಶ್ನೆಯನ್ನು ಕೇಳಿದ್ದೇ ತಪ್ಪಾಯಿತೆಂದು ಡಿಕನ್‌ಸನ್ ಭಾವಿಸಿದನು. ತಾನೇನೋ ಚಿಕ್ಕವನು ; ಆದರೆ ಮಿಸ್ ಟ್ರಾವಿಸ್ ಬಗ್ಗೆ ಏನು ಹೇಳುತ್ತಾನೆ ?....

ಪೋಲೀಸಿನವನು ಕನಿಕರಪಟ್ಟು ಗುಂಪಿನ ಮಧ್ಯೆ ಪ್ರವೇಶಿಸಿದನು. "ಅವನ ಮಾತುಕಥೆಯಲ್ಲಿ ಏನೋ ಅಡಗಿರಬೇಕೆಂದು ನನ್ನ ಊಹೆ. ಪರೀಕ್ಷೆಗಾಗಿ ಕ್ಯಾಪ್ಟನ್ನಿನ ಬಳಿ ಕರೆದುಕೊಂಡು ಹೋಗುತ್ತೇನೆ, ನನ್ನೊಡನೆ ಬರುವಂತೆ ಹೇಳು, ಜಿಮ್ಮಿ...." ಎಂದನು.

ಜಿಮ್ಮಿ ಕಷ್ಟಪಟ್ಟು ಮಾತನಾಡಿದನು. ಇಂಬರ್ ತೃಪ್ತಿಯನ್ನು ಸೂಚಿಸಿದಂತಿತ್ತು.

"ಆದರೆ ನನ್ನ ಕೈಗಳನ್ನು ಮೇಲೆತ್ತಿದಾಗ, ಅವನು ಏನು ಹೇಳಿದನಂತೆ? ಅದನ್ನು ಕೇಳು, ಜಿಮ್ಮಿ...." ಎಂದಳು ಎಮಿಲಿ ಟ್ರಾವಿಸ್.

ಜಿಮ್ಮಿ ಆ ಪ್ರಶ್ನೆಯನ್ನು ಇಂಬರನ ಭಾಷೆಗೆ ಪರಿವರ್ತಿಸಿ ಉತ್ತರ ದೊರಕಿಸಿಕೊಂಡನು.

"ಅವನು ಹೇಳುತ್ತಾನೆ, ನೀನು ಹೆದರುವವಳಲ್ಲ...."

ಎಮಿಲಿ ಟ್ರಾವಿಸ್‌ಗೆ ಸಂತೋಷವಾಯಿತು.

"ನೀನು ಶಕ್ತಿವಂತಳಲ್ಲ. ಚಿಕ್ಕ ಮಗುವಿನಂತೆ ಮೃದುವಾಗಿರುವೆ. ತನ್ನ ಎರಡು ಕೈಗಳಿಂದ ನಿನ್ನನ್ನು ಪುಡಿ ಮಾಡಬಹುದು—ಎಂದು ಅವನು ಹೇಳುತ್ತಾನೆ. ಮತ್ತೆ ಅವನಿಗೆ ಆಶ್ಚರ್ಯವೇನೆಂದರೆ, ಹೀಗಿರುವ ನೀನು

ಪೋಲೀಸಿನವನಂಥ ದೊಡ್ಡ ಆಕೃತಿಯ ಮತ್ತು ಶಕ್ತಿಯುತರಾದ ಮನುಷ್ಯರ ತಾಯಿಯಾಗುವ ಬಗೆ ಹೇಗೆ? ಎಂದು...."

ಎಮಿಲಿ ಟ್ರಾವಿಸ್ ಹಿಂಜರಿಯದೆ ಒಂದೇ ಸಮನೆ ನೋಡಿದಳು. ಆದರೆ ಕೆನ್ನೆಗಳು ಕೆಂಪಾದವು. ಕಿರಿಯ ಡಿಕನ್‌ಸನ್ ಸಂದಿಗ್ಧ ಸ್ಥಿತಿಯಲ್ಲಿ ಸಿಕ್ಕಿಕೊಂಡಂತೆ ವಿವರ್ಣನಾದನು. ಚಿಕ್ಕ ವಯಸ್ಸಿನ ಉತ್ಸಾಹೀ ರಕ್ತದಿಂದ ಪೋಲೀಸಿನವನ ಮುಖ ಹೊಳೆಯಿತು.

" ನನ್ನೊಡನೆ ಬಾ," ಎಂದು ಒರಟು ದನಿಯಲ್ಲಿ ಹೇಳಿ ಪೋಲೀಸಿನವನು ಕೈಗಳನ್ನು ಬೀಸುತ್ತಾ ಗುಂಪಿನಲ್ಲಿ ದಾರಿಬಿಡಿಸಿಕೊಂಡು ಹೊರಟನು.

ಈ ರೀತಿ ಇಂಬರ್ ದಂಡಿನ ಪಾಳೆಯಕ್ಕೆ ಬಂದು ಸೇರಿದನು. ಅಲ್ಲಿಯೇ ಅವನು ತನ್ನ ಸಂಪೂರ್ಣ ತಪ್ಪುಗಳನ್ನು ಒಪ್ಪಿಕೊಳ್ಳುವ ಹೇಳಿಕೆಯನ್ನು ಕೊಟ್ಟದ್ದು. ಆ ಆವರಣದಿಂದ ಅವನು ಹೊರಕ್ಕೆ ಬರಲೇ ಇಲ್ಲ....

*   *   *   *   *

ಇಂಬರ್ ತುಂಬ ಸುಸ್ತಾಗಿದ್ದನು. ವಯಸ್ಸಿನ ಮತ್ತು ನಿರಾಶೆಯ ಪರಿಣಾಮ ಮುಖದಲ್ಲಿ ಎದ್ದು ಕಾಣುತಿತ್ತು. ಭುಜಗಳು ಕುಸಿದು ಬಿದ್ದಿದ್ದವು. ಕಣ್ಣುಗಳಲ್ಲಿ ಕಾಂತಿಯಿರಲಿಲ್ಲ. ಮುದುಕನ ದಟ್ಟವಾದ ಕೂದಲು ಸ್ವಾಭಾವಿಕವಾಗಿ ಬೆಳ್ಳಗಿರಬೇಕಿತ್ತು. ಆದರೆ ವಾಯುಗುಣದ ವೈವಿಧ್ಯತೆಯಿಂದ ಮತ್ತು ಸೂರ್ಯನ ಪ್ರಭಾವದಿಂದ ಸುಟ್ಟು ಬಿಗುವಿಲ್ಲದೆ ಬಣ್ಣವನ್ನೇ ಕಳೆದುಕೊಂಡು ನೇತಾಡುತಿತ್ತು. ಸುತ್ತಲಿನ ವ್ಯವಹಾರದಲ್ಲಿ ಅವನಿಗೆ ಆಸಕ್ತಿಯೇ ಇರಲಿಲ್ಲ.

ವಿಚಾರಣಾ ಮಂದಿರದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಸ್ಥಳೀಯರಲ್ಲದೆ, ಬೆಟ್ಟಗಳ ನಡುವೆ ಇಕ್ಕಟ್ಟಾದ ಸಮಭೂಮಿಯಲ್ಲಿ ವಾಸಿನುತಿದ್ದ ಜನರೂ ಬಂದಿದ್ದರು. ಅವರ ಗುಜು ಗುಜು ಮಾತಿನಲ್ಲಿ ಎಷ್ಟೋ ಅಶುಭದ ವಾರ್ತೆಗಳು ಕೇಳಿ ಬರುತಿದ್ದುವು. ಆದರೆ ಅವು ಇಂಬರನ ಕಿವಿಗೆ ಅಸ್ಪಷ್ಟವಾಗಿದ್ದುವು. ಆಳವಾದ ಗುಹೆಯಲ್ಲಿ ಕೇಳಿಸುವ ಸಮುದ್ರದ ಘೋಷದಂತಿತ್ತು.

ಕಿಟಕಿಯ ಹತ್ತಿರ ಅವನು ಕುಳಿತಿದ್ದನು. ಕಾಂತಿಹೀನ ಕಣ್ಣುಗಳು ಬೇಸರದ ಹೊರವಾತಾವರಣವನ್ನು ವೀಕ್ಷಿಸಿದವು. ಆಕಾಶವನ್ನು ಮೋಡ ಆವರಿಸಿತ್ತು. ತುಂತುರು ಹನಿ ಬೀಳುತಿತ್ತು. ಆಗ ಯೂಕಾನ್ ನದಿಯಲ್ಲಿ ಪ್ರವಾಹ ಬರುತಿದ್ದ ಕಾಲ. ಮಂಜು ಹೋಗಿತ್ತು. ನದಿ ನಗರಕ್ಕೆ ನುಗ್ಗಿತ್ತು. ಎದುರಿನ ಮುಖ್ಯ ಬೀದಿಯಲ್ಲಿಯೇ ನೀರು ಹರಿಯತೊಡಗಿತ್ತು. ಅದರ ಮೇಲೆ ಸಣ್ಣ ದೋಣಿಗಳಲ್ಲಿ ಹಿಂದು ಮುಂದೆ ವಿಶ್ರಾಂತಿಯಿಲ್ಲದ ಜನ ಹಾದುಹೋದರು.

ಪ್ರವಾಹದಿಂದ ಮರೆಯಾಗಿದ್ದ ದಂಡಿನ ‘ ಪೆರೇಡ್ ’ ಜಾಗಕ್ಕೆ ದೋಣಿಗಳು ಬಂದು ಸೇರುತಿದ್ದವು. ಎಷ್ಟೋ ವೇಳೆ ತನ್ನ ಹತ್ತಿರವೇ ಬಂದು ಕಣ್ಮರೆಯಾಗುತ್ತಿದ್ದ ದೋಣಿಗಳನ್ನು ಇಂಬರ್ ಕಂಡನು. ಅವು ಮರದ ಮನೆಗಳಿಗೆ ಡಿಕ್ಕಿ ಹೊಡೆದಾಗ, ನಿವಾಸಿಗಳು ತೆವಳಿಕೊಂಡು ಕಿಟಕಿಯ ಮೂಲಕ ಬರುತಿದ್ದರು. ಮೇಲಿನ ಮೆಟ್ಟಲುಗಳನ್ನು ಹತ್ತುವಾಗಲೂ ನೀರಿನ ಹೊಡೆತದಿಂದ ಕಾಲುಗಳು ಎಳೆಯಲ್ಪಡುತಿದ್ದುವು. ಕಡೆಗೆ ಟೋಪಿಯಿಲ್ಲದೆ, ತೊಟ್ಟಿಕ್ಕುವ ಬೂಟುಗಳನ್ನು ಹಾಕಿಕೊಂಡು ಕಾಯುತಿದ್ದ ಗುಂಪುಗಳಿಗೆ ಅಧಿಕ ಸಂಖ್ಯೆಯಲ್ಲಿ ಜನ ಸೇರುತ್ತಾ ಬಂದರು.

ಎಲ್ಲರ ದೃಷ್ಟಿಯೂ ಇಂಬರನ ಮೇಲೆ ಕೇಂದ್ರೀಕೃತವಾಗಿತ್ತು. ಅವನು ಮುಂದೆ ಪಡಬಹುದಾದ ಶಿಕ್ಷೆಯ ಭಯಂಕರ ನಿರೀಕ್ಷಣೆಯಲ್ಲೇ ಜನ ತೃಪ್ತರಾಗಿದ್ದರು. ಇಂಬರ್ ಕೂಡ ಅವರ ಕಡೆ ನೋಡಿದನು. ಆ ಜನರ ರೀತಿ ನೀತಿಗಳ ಬಗ್ಗೆ ಯೋಚಿಸಿದನು....ನಿರಂತರವಾಗಿ ನಾಗುತ್ತಿರುವ ಇವರ ನ್ಯಾಯ ವಿಧಾನಗಳಿಗೆ ಸ್ವಲ್ಪವೂ ವಿಶ್ರಾಂತಿಯಿಲ್ಲ ; ಒಳ್ಳೆಯ ಅಥವಾ ಕೆಟ್ಟ ಕಾಲವಿರಲಿ, ಕ್ಷಾಮ ಅಥವಾ ಪ್ರವಾಹವಿರಲಿ, ಕಷ್ಟ, ಭಯ ಮತ್ತು ನಾವುಗಳಿರಲಿ.... ಯಾವುದನ್ನೂ ಲಕ್ಷಿಸುವುದಿಲ್ಲ. ಏಕೆ ? ಆಜೀವಪರ್ಯಂತ ಈ ಜನರ ವಿಚಿತ್ರ ವಿಚಾರಣ ಕ್ರಮ ಇದ್ದೇ ಇರುತ್ತದೆ....

ಒಬ್ಬಾತ ಮೇಜನ್ನು ಬಲವಾಗಿ ಕುಟ್ಟಿದನು. ಗಲಾಟೆ ನಿಂತು ನಿಶ್ಶಬ್ದವಾಯಿತು. ಇಂಬರ್ ಆ ಮನುಷ್ಯನನ್ನು ನೋಡಿದನು. ಅವನು ಅಧಿಕಾರ ಚಲಾಯಿಸುವವರ ಗುಂಪಿನವನಿರಬೇಕು. ಡೆಸ್ಕಿನ ಹಿಂದೆ ಕುಳಿತಿದ್ದ ಅಗಲವಾದ ಹಣೆಯುಳ್ಳವನು ಎಲ್ಲರಿಗೂ ಮೇಲಾದ ಮುಖ್ಯಾಧಿಕಾರಿಯಿರಬಹುದೆಂದು ಊಹಿಸಿದನು. ಅದೇ ಮೇಜಿನ ಬಳಿ ಕುಳಿತಿದ್ದ ಮತ್ತೊಬ್ಬ ವ್ಯಕ್ತಿ ಎದ್ದು ನಿಂತು ಒಳ್ಳೆಯ ಕಾಗದಗಳಲ್ಲಿ ಬರೆದಿದ್ದ ಏನನ್ನೋ ಓದತೊಡಗಿದನು. ಪ್ರತಿಯೊಂದು ಕಾಗದವನ್ನೂ ಓದಲು ಆರಂಭಿಸಿದಾಗ ಗಂಟಲು ಸರಿಮಾಡಿಕೊಳ್ಳುತಿದ್ದನು. ಹಾಗೆಯೇ ಮುಗಿದಾಗ ಬೆರಳು ಚೀಪುತಿದ್ದನು. ಆತನ ಭಾಷಣ ಇಂಬರನಿಗೆ ಅರ್ಥವಾಗಲಿಲ್ಲ. ಇತರರಿಗೆ ಗೊತ್ತಾಗುತಿತ್ತು. ಅವರ ಮುಖಗಳನ್ನು ನೋಡಿದರೆ ವಿಪರೀತ ಕೋಪಗೊಂಡಂತಿತ್ತು. ಒಬ್ಬನಂತೂ ಉದ್ವೇಗದಿಂದ ಸಣ್ಣ ಮಾತುಗಳನ್ನೂ ಚುಚ್ಚು ನುಡಿಗಳನ್ನೂ ಹಾರಿಸಿದನು. ಕಡೆಗೆ ಅವನನ್ನು ಸುಮ್ಮನಾಗಿಸಲು ಮೇಜಿನ ಬಳಿ ಕುಳಿತಿದ್ದವನೇ ಪ್ರಯಾಸಪಟ್ಟನು.

ಅಂತೂ ಆ ವ್ಯಕ್ತಿ ಬೇಸರ ಹಿಡಿಸುವಷ್ಟು ಧೀರ್ಘಕಾಲ ಓದಿದನು. ಒಂದೇ ಜಾಡಿನ ಶಬ್ದಗಳು ಇಂಬರನಿಗೆ ನಿದ್ದೆತರುತಿದ್ದುವು. ಅವನು ಮುಗಿಸುವ ಹೊತ್ತಿಗೆ ಇಂಬರ್ ಸಂಪೂರ್ಣವಾಗಿ ಕನಸುಕಾಣುತಿದ್ದನು. ಆಗ ತನ್ನ ವೈಟ್‌ಫಿಶ್ ಭಾಷೆಯಲ್ಲೇ ಒಂದು ಧ್ವನಿ ಕೇಳಿಸಿತು. ತಕ್ಷಣ ಎದ್ದುನಿಂತನು. ಆಶ್ಚರ್ಯವೇನೂ ಆಗಲಿಲ್ಲ. ಏಕೆಂದರೆ ಮಾತನಾಡುತಿದ್ದವನು ಹೊಸಬನಲ್ಲ; ತನ್ನ ಸೋದರಿಯ ಮಗ! ಎಷ್ಟೋ ವರ್ಷಗಳ ಹಿಂದೆ ಬಿಳಿಯರೊಡನೆ ವಾಸಿಸಲು ಅವನು ಪರಾರಿಯಾಗಿದ್ದ.

"ಇಂಬರ್, ನಿನಗೆ ನನ್ನ ಜ್ಞಾಪಕವಿಲ್ಲವೇ?" ಎಂದನು.

"ಒಳ್ಳೆಯದು; ನೀನು ಓಡಿಹೋದ ಹೌಕಾನ್, ಅಲ್ಲವೇ? ನಿನ್ನ ತಾಯಿ ಸತ್ತುಹೋಗಿರಬೇಕು....." ಎಂದು ಇಂಬರ್ ಉತ್ತರಕೊಟ್ಟನು.

"ಅವಳು ಮುದುಕಿಯಾಗಿದ್ದಳು" ಎಂದನು ಹೌಕಾನ್.

ಇಂಬರ್‌ಗೆ ಕೇಳಿಸಲಿಲ್ಲ. ಆದರೆ ಹೌಕಾನ್ ಅವನ ಭುಜದ ಮೇಲೆ ಕೈ ಹಾಕಿ ಮತ್ತೆ ಎಬ್ಬಿಸಿದನು.

"ಆ ಮನುಷ್ಯ ಓದುತಿದ್ದುದು ನೀನು ಮಾಡಿದ ತೊಂದರೆಗಳ ವರದಿಯನ್ನು; ನೀನು ಕ್ಯಾಪ್ಟನ್ ಅಲೆಗ್ಸಾಂಡರ್‌ನ ಬಳಿ ಹೇಳಿದ ವಿಷಯವನ್ನು. ನೀನೊಬ್ಬ ತಿಳಿಗೇಡಿ! ಇಷ್ಟು ತಿಳಿದುಕೊ; ಸತ್ಯವಿದ್ದರೆ ಮಾತನಾಡು; ಇಲ್ಲದಿದ್ದರೆ ಅಸತ್ಯವನ್ನು ಹೇಳಬೇಡ.....ಆ ರೀತಿ ಅಪ್ಪಣೆಯಾಗಿದೆ....."

ಹೌಕಾನ್ ಮಿಷನರಿಗಳ ಜೊತೆ ಸೇರಿ ಓದು ಬರಹ ಕಲಿತಿದ್ದನು. ಕೈಯಲ್ಲಿ ಕಾಗದಗಳನ್ನು ಹಿಡಿದಿದ್ದನು. ಆ ಕಾಗದಗಳಲ್ಲಿದ್ದುದನ್ನೇ ಹಿಂದೆ ಒಬ್ಬಾತ ಬೇಸರಹಿಡಿಸುವಷ್ಟು ಜೋರಾಗಿ ಓದಿದ್ದು....ಜಿಮ್ಮಿಯ ಮೂಲಕ ಇಂಬರ್ ಕ್ಯಾಪ್ಟನ್ ಅಲೆಗ್ಸಾಂಡರನ ಬಳಿ ಮಾತನಾಡಿದ್ದನು. ತನ್ನ ತಪ್ಪುಗಳನ್ನು ಮೊದಲ ಬಾರಿಗೆ ಒಪ್ಪಿಕೊಂಡಿದ್ದನು. ಆ ಅಂಶಗಳನ್ನೇ ಗುಮಾಸ್ತನು ಕಾಗದದ ಮೇಲೆ ಬರೆದಿದ್ದನು.

ಹೌಕಾನ್ ಓದುವುದಕ್ಕೆ ಪ್ರಾರಂಭಿಸಿದನು. ಇಂಬರ್ ಸ್ವಲ್ಪ ಹೊತ್ತು ಕೇಳಿದನು. ಆಶ್ಚರ್ಯಚಕಿತನಾಗಿ ಮಧ್ಯೆ ಬಾಯಿಹಾಕಿದನು.

"ಹೌಕಾನ್, ಇದು ನನ್ನದೇ ಮಾತು. ಆದರೂ ನಿನ್ನ ನಾಲಿಗೆಯಿಂದ ಬರುತ್ತಿವೆ. ನಿನ್ನ ಕಿವಿಗಳು ಮಾತ್ರ ಕೇಳಿಯೇ ಇಲ್ಲ...."

ಹೌಕಾನ್ ಸ್ವಪ್ರತಿಷ್ಠೆಯಿಂದ ನಕ್ಕನು. "ಇಲ್ಲ, ಅದು ಕಾಗದದ

ಮೂಲಕ ಬರುತ್ತಿದೆ, ಇಂಬರ್. ನನ್ನ ಕಿವಿ ಎಂದಿಗೂ ಕೇಳಿಲ್ಲ. ಕಾಗದ ದಿಂದ ನನ್ನ ಕಣ್ಣಿನ ಮೂಲಕ ತಲೆಗೆ ಹೊಕ್ಕು, ನನ್ನ ಬಾಯಿಯ ಮೂಲಕ ನಿನಗೆ ಪ್ರಕಾಶವಾಗುತ್ತಿದೆ... ."

"ಹಾಗೇನು? ಅಂದರೆ ನಾನು ಆಡಿದ ಮಾತು ಕಾಗದದ ಮೇಲಿದೆಯೇ?...." ಎನ್ನುತ್ತಾ ಇಂಬರ್ ಆಶ್ಚರ್ಯದಿಂದ ಹೆಬ್ಬೆರಳಿನ ಮಧ್ಯೆ ಆ ಕಾಗದವನ್ನಿಟ್ಟು ನೋಡಿದನು. ಗೀಚಿದ್ದ ಅಕ್ಷರಗಳನ್ನು ದಿಟ್ಟಿಸಿ ನೋಡಿದನು. ಅವನಿಗೇನು ತಿಳಿಯುತ್ತೆ?...."ಇದು ದೊಡ್ಡ ಔಷಧಿ ಇರಬೇಕು. ಹೌಕಾನ್. ನೀನು ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡುತಿದ್ದೀಯೆ"

"ಏನು ಇಲ್ಲ, ಏನೂ ಇಲ್ಲ....ಇದೇನು ದೊಡ್ಡದಲ್ಲ...." ಎಂದು ಯುವಕ ಹೌಕಾನ್ ನಿರ್ಲಕ್ಷಭಾವದಿಂದ ಉತ್ತರಕೊಟ್ಟನು.

ಮತ್ತೆ ಹೌಕಾನ್ ಓದಲಾರಂಭಿಸಿದನು: "ಹಿಮ ಬೀಳುವುದಕ್ಕಿಂತ ಮುಂಚೆ ಆ ವರ್ಷ ಒಬ್ಬ ಮುದುಕ ಮತ್ತು ಹುಡುಗ ಬಂದರು. ಹುಡುಗ ಒಂದು ಕಾಲಿಲ್ಲದ ಕುಂಟನಾಗಿದ್ದನು. ಅವರಿಬ್ಬರನ್ನೂ ಕೂಡ ನಾನೇ ಕೊಂದೆನು. ಮುದುಕ ತುಂಬ ಗಲಾಟೆ ಮಾಡಿದನು—"

"ಅದು ನಿಜ;" ಎಂದು ಇಂಬರ್ ಮಧ್ಯೆ ಮಾತನಾಡಿದನು. ಉಸಿರು ಕಟ್ಟಿ ಹೇಳಿದನು: "ಅಬ್ಬ, ಅವನು ತುಂಬ ಕೂಗಾಡಿದನು. ಸಾಯುವುದಕ್ಕೆ ಬಹಳ ಹೊತ್ತು ತೆಗೆದುಕೊಂಡ. ಆದರೆ ಆ ವಿಷಯ ನಿನಗೆ ಹೇಗೆ ಗೊತ್ತು, ಹೌಕಾನ್? ಬಿಳಿಯರ ಮುಖಂಡ ಹೇಳಿರಬಹುದು, ಅಲ್ಲವೇ? ಅವನೊಬ್ಬನಿಗೆ ಮಾತ್ರ ನಾನು ತಿಳಿಸಿರುವುದು...."

ಬೇಸರದಿಂದ ಹೌಕಾನ್ ತಲೆಯಲ್ಲಾಡಿಸಿದನು. "ಅಯ್ಯೋ ಪೆದ್ದೆ! ಅದನ್ನು ಕಾಗದದ ಮೇಲೆ ಬರೆದಿದೆ ಎಂದು ನಿನಗೆ ಆಗಲೇ ಹೇಳಲಿಲ್ಲವೇ?"

ಮಸಿಯಲ್ಲಿ ಗೀಚಿದ್ದ ಕಾಗದದ ಪೈಖರಿಯನ್ನು ಇಂಬರ್ ಮತ್ತೆ ಕಂಡನು. "ಒಬ್ಬ ಬೇಟೆಗಾರ ಹಿಮಗುರುತನ್ನು ನೋಡಿ ಏನನ್ನೋ ಹೇಳಿದರೆ—ಅಂದರೆ, ಇಲ್ಲಿ ಒಂದು ಮೊಲ ಬಂದಿತ್ತು, ಅಲ್ಲಿ ಓಡಿತು, ಕೆಳಕ್ಕೆ ಬಿತ್ತು, ಆಗ ಹೊಟ್ಟೆ ಮೇಲಾಗಿದ್ದ ಅದರ ಮೇಲೆ ಲಿಂಕ್ಸ್ ಬೆಕ್ಕು ಹಾರಿತು, ಮೊಲ ಸತ್ತು, ಲಿಂಕ್ಸ್ ಒಂದಕ್ಕೇ ದಾರಿಯಾಯಿತು—ಅದನ್ನೂ ಕಾಗದದ ಮೇಲೆ ಇಳಿಸಿ ನನ್ನ ಸಾಹಸದಂತೆಯೇ ಓದುತ್ತೀಯಾ, ಹೌಕಾನ್...."

"ಹೌದು; ಮೊದಲು ನೀನು ಬಾಯಿಮುಚ್ಚು. ಮಾತನಾಡಬೇಕೆಂದು ಕರೆದಾಗ ಬಾಯಿಬಿಡು...." ಎಂದನು ಹೌಕಾನ್.

ಇಂಬರನ ತಪ್ಪೊಪ್ಪಿಕೆಯನ್ನು ಹೌಕಾನ್ ಬಹಳ ಕಾಲದವರೆಗೆ ಓದಿದನು. ಇಂಬರ್ ಯೋಚಿಸುತ್ತ ಗಲಾಟೆಯಿಲ್ಲದೆ ಕುಳಿತಿದ್ದನು. ಕಡೆಗೆ ಅವನು ಹೇಳಿದನು : "ಅವೆಲ್ಲವೂ ನನ್ನ ಮಾತುಗಳೇ ಹೌಕಾನ್, ಸತ್ಯವಾದದ್ದೇ. ಮರೆತುಹೋದ ಇನ್ನೂ ಕೆಲವು ವಿಷಯ ಜ್ಞಾಪಕಕ್ಕೆ ಬರುತ್ತಿದೆ. ಮುಖಂಡರಿಗೆ ಉಪಯೋಗವಾಗಬಹುದು. ಮೊದಲು.... ಹಿಮ ಪರ್ವತಗಳ ಮೇಲೆ ಒಬ್ಬಾತ ಬಂದ. ಉಪಾಯದಿಂದ ಕಬ್ಬಿಣದ ಬೋನುಗಳನ್ನು ತಂದಿದ್ದ. ವೈಟ್‌ಫಿಶ್ ಪ್ರದೇಶದ ಬೀವರ್ ಪ್ರಾಣಿ ಅವನಿಗೆ ಬೇಕಾಗಿತ್ತು. ಅವನನ್ನು ನಾನು ಕೊಂದೆ. ಆಮೇಲೆ ಮೂರು ಜನ ಚಿನ್ನಕ್ಕಾಗಿ ಬಂದರು. ಅವರನ್ನೂ ಕೊಂದು ತೋಳಗಳಿಗೆ ಆಹಾರಮಾಡಿಕೊಟ್ಟೆ. ಫೈವ್ ಫಿಂಗರ್‌ನ ಬಳಿ ಒಬ್ಬ ಮನುಷ್ಯ ನೀರಿನಲ್ಲಿ ತೇಲಿಕೊಂಡು ಹೋಗಲು ಮರದ ದಿಮ್ಮಿಗಳನ್ನು ಒಟ್ಟಿಗೆ ಸೇರಿಸಿ ಕಟ್ಟಿದ್ದ. ಅಲ್ಲಿ ಬೇಕಾದಷ್ಟು ಮಾಂಸವೂ ಇತ್ತು...."

ಹಿಂದಿನ ಜ್ಞಾಪಕವನ್ನು ತಂದುಕೊಳ್ಳಲು ಇಂಬರ್‌ಗೆ ಸ್ವಲ್ಪ ಕಾಲಾವಕಾಶ ಬೇಕಾಗುತಿತ್ತು. ಆ ಸಂದರ್ಭದಲ್ಲೇ ಹೌಕಾನ್ ಭಾಷಾಂತರಿಸುತ್ತಿದ್ದನು. ಗುಮಾಸ್ತೆಯೊಬ್ಬ ಅದನ್ನೆಲ್ಲ ಬರೆಯುತಿದ್ದನು. ಯಾವ ಹಿನ್ನೆಲೆಯೂ ಇಲ್ಲದ ಸಣ್ಣ ದುರಂತಗಳನ್ನು ಜನ ಅನುದ್ವೇಗದಿಂದ ಆಲಿಸಿದರು.

ಕೆಂಪು ಕೂದಲಿನ ಮನುಷ್ಯನೊಬ್ಬ ಇಂಬರನ ಕಣ್ಣಿಗೆ ಬಿದ್ದು ಬಹು ದೂರದ ಹೊಡೆತದಿಂದಲೇ ಆಶ್ಚರ್ಯಕರವಾಗಿ ಕೊಲೆಮಾಡಲ್ಪಟ್ಟಿದ್ದನು. ಆ ಸಂಗತಿಯನ್ನು ಇಂಬರ್ ತಿಳಿಸಿದಾಗ, ಮುಂದಿನ ಸಾಲಿನಲ್ಲಿ ಕುಳಿತಿದ್ದ ಒಬ್ಬಾತ, "ಇದೆಂಥ ಅನ್ಯಾಯ !" ಎಂದು ಕೂಗಿದನು. ಅವನ ಕೂದಲೂ ಕೆಂಪಾಗಿತ್ತು. ಮತ್ತೆ 'ಅನ್ಯಾಯ' ಎಂದು ಹೇಳುತ್ತಾ, "ಕೊಲೆಯಾದವನು ನನ್ನ ಸೋದರ ಬಿಲ್" ಎಂದನು. ಅಂತೂ ನ್ಯಾಯಾಲಯದಲ್ಲಿ ಸಭೆ ಮುಗಿಯುವ ತನಕ ಅವನ 'ಇದೆಂಥ ಅನ್ಯಾಯ' ಎಂಬ ಶಬ್ದ ಮಧ್ಯೆ ಮಧ್ಯೆ ಕೇಳಿಬರುತ್ತಲೇ ಇತ್ತು. ಸ್ನೇಹಿತರು ಕೂಡ ಅವನನ್ನು ಸುಮ್ಮನಿರೆಂದು ಹೇಳಲಿಲ್ಲ. ಅಧಿಕಾರಿಯೂ ಕೂಡ ಆಜ್ಞೆ ಮಾಡಲಿಲ್ಲ.

ಇಂಬರನ ತಲೆ ತೂಗಾಡುತಿತ್ತು. ಕಣ್ಣುಗಳು ಮಂಕಾದವು. ಯಾವುದೋ ಪರದೆ ಬಾಹ್ಯವಸ್ತುಗಳನ್ನು ಮುಚ್ಚಿದಂತಿತ್ತು. ವರ್ಷಗಳನ್ನು ಸೆಳೆದುಕೊಂಡು ಅತ್ಯಂತ ನಿರರ್ಥಕ ಬಾಳನ್ನು ನಡೆಸಿದ ಯೌವನದ ಬಗ್ಗೆ ಕನಸುಕಾಣುತಿದ್ದನು.

ಹೌಕಾನ್ ಇಂಬರನನ್ನು ಮತ್ತೆ ಎಬ್ಬಿಸಿದನು. "ಇಂಬರ್, ಎದ್ದು

ನಿಂತುಕೊ. ನೀನು ಏಕೆ ಇಷ್ಟು ಗಲಾಟೆಮಾಡಿದೆ, ಜನರನ್ನು ಕೊಲೆಮಾಡಿದ್ದೆ, ಮತ್ತು ಕಡೆಗೆ ಇಲ್ಲಿಯ ತನಕ ನ್ಯಾಯಾನ್ವೇಷಿಯಾಗಿ ಬರಲು ಕಾರಣವೇನು? ಇದಕ್ಕೆ ತಕ್ಕ ಉತ್ತರ ಕೊಡಬೇಕೆಂದು ಅಧಿಕಾರದ ಅಪ್ಪಣೆಯಾಗಿದೆ"

ಇಂಬರ್ ಹಿಂದೆ ಮುಂದೆ ತೂರಾಡುತ್ತ ನಿಧಾನವಾಗಿ ಮೇಲೆದ್ದನು. ಅಸ್ಪಷ್ಟವಾಗಿ, ನಡುಗುವ ದನಿಯಿಂದ ಮೆಲ್ಲಗೆ ಮಾತುಗಳು ಹೊರಟವು.

ಆದರೆ ಹೌಕಾನ್ ಮಧ್ಯೆ ಬಾಯಿಹಾಕಿ, "ಈ ಮುದಿಗೂಬೆಗೆ ಒಂದೇ ಗೀಳು ಹಿಡಿದಂತಿದೆ. ಅವನ ಮಾತೆಂದರೆ ಎಳೆಯ ಮಕ್ಕಳ ಮಾತಿನಂತೆ ದಡ್ಡತನದ್ದು." ಎಂದು ಇಂಗ್ಲೀಷಿನಲ್ಲಿ ವಿಶಾಲವಾದ ಹುಬ್ಬುಗಳುಳ್ಳ ಮುಖ್ಯಾಧಿಕಾರಿಗೆ ಹೇಳಿದನು.

"ಆಗಲಿ; ಎಳೆಯ ಮಕ್ಕಳ ಮಾತಾದರೂ ಕೇಳೋಣ. ಅವನು ಹೇಳುತ್ತಿರುವಂತೆ ಪ್ರತಿಯೊಂದು ಪದಕ್ಕೂ ಹೆಚ್ಚು ಗಮನವಿಟ್ಟು ಆಲಿಸೋಣ. ನಿನಗೆ ಗೊತ್ತಾಯಿತೆ?" ಎಂದನು ಆ ನೀಳವಾದ ಹುಬ್ಬುಗಳುಳ್ಳ ಮಹಾಪುರುಷ.

ಇಂಬರನ ಕಣ್ಣುಗಳು ಮಿಂಚಿದವು. ತನ್ನ ಸೋದರಿಯ ಮಗ ಅಧಿಕಾರಿಯೊಡನೆ ಮಾತನಾಡಿದುದನ್ನು ಪ್ರತ್ಯಕ್ಷವಾಗಿಯೇ ನೋಡಿದಂತಾಯಿತು.

* * * * *

ಕಥೆ ಪ್ರಾರಂಭವಾಯಿತು.

ಅದೊಂದು ವೀರಕಥನ. ಆ ರಾಷ್ಟ್ರೀಯ ವೀರನನ್ನು ಮುಂದಿನ ಜನಾಂಗ ನೆನೆದುಕೊಳ್ಳುವಂತೆ ಅವನ ಕಂಚಿನ ವಿಗ್ರಹವನ್ನು ಸ್ಥಿರವಾಗಿ ಸ್ಥಾಪಿಸಬಹುದಿತ್ತು.

ಗುಂಪು ಇದ್ದಕ್ಕಿದ್ದಂತೆ ನಿಶ್ಶಬ್ದವಾಯಿತು. ವಿಶಾಲಹಣೆಯ ನ್ಯಾಯಾಧೀಶ ತಲೆಯಮೇಲೆ ಕೈಯಿಟ್ಟು, ತನ್ನ ಮತ್ತು ತನ್ನ ಜನಾಂಗದವರ ಆತ್ಮವನ್ನು ಕುರಿತು ಚಿಂತಿಸುತಿದ್ದನು. ಇಂಬರನ ಆಳವಾದ ಧ್ವನಿ, ಮಧ್ಯೆ ಮಧ್ಯೆ ಕೀರಲು ಧ್ವನಿಯ ದ್ವಿಭಾಷಿಯಿಂದ ಸ್ವರ ತರಂಗಗಳ ವಿರುದ್ಧ ಪ್ರತಿಕ್ರಿಯೆ ಮತ್ತು ಅಧಿಕಾರಿಯ ಗಂಟೆಯ ಹೊಡೆತ, ಆಗಾಗ ಕೆಂಪು ಕೂದಲು ಮನುಷ್ಯನ 'ಅನ್ಯಾಯ, ಅನ್ಯಾಯ' ಎಂಬ ಚೀರಾಟ—ಇಷ್ಟೇ ಕೇಳಿಬರುತ್ತಿದ್ದವು.

* * * * *

"ನಾನು ವೈಟ್‌ಫಿಶ್ ಜನಾಂಗದ ಇಂಬರ್."

ಹೌಕಾನ್ ಭಾಷಾಂತರಿಸಿದನು. ಇಂಬರನ ಅನಾಗರಿಕ ಕಥನವನ್ನು ಮತ್ತೊಂದು ಭಾಷೆಗೆ ತರುವಾಗ, ತನ್ನಲ್ಲೇ ರಕ್ತಗತವಾಗಿದ್ದ ವೈಟ್‌ಫಿಶ್ ಪ್ರವೃತ್ತಿ ತನ್ನ ಮೇಲೆಯೆ ಮರುಕಳಿಸಿಬರುವಂತೆ ಹೌಕಾನನಿಗೆ ಭಾಸವಾಯಿತು. ವಿಷನರಿಗಳ ಸಹವಾಸದಿಂದ ಬಂದಿದ್ದ ಹೊರ ಮೆರುಗು ಮರೆಯಾದಂತಿತ್ತು.

"ನನ್ನ ತಂದೆಯ ಹೆಸರು ಓಟ್ಸ್‌ಬೋಕ್. ಅವನು ಬಲಶಾಲಿ. ನಾನು ಹುಡುಗನಾಗಿದ್ದಾಗ, ಭೂಮಿಯ ಜನ ಸಂತೋಷಭರಿತರಾಗಿದ್ದರು. ವಾಯು ಗುಣ ಬೆಚ್ಚಗೆ ಹಿತಕರವಾಗಿತ್ತು. ಹೊಸ ಹೊಸ ವಸ್ತುಗಳನ್ನು ಹುಡುಕಿ ತಿನ್ನಲು ಜನ ಹಾತೊರೆಯುತ್ತಿರಲಿಲ್ಲ. ಅಥವಾ ಹೊಸ ಶಬ್ದಗಳನ್ನು ಕಿವಿಗೊಟ್ಟು ಕೇಳುತ್ತಿರಲಿಲ್ಲ. ಏಕೆಂದರೆ ತಂದೆಯ ಹಾದಿಯಲ್ಲೇ ಮಕ್ಕಳೂ ನಡೆಯುತಿದ್ದರು. ಹೆಂಗಸರು ಯುವಕರ ಕಣ್ಣುಗಳಲ್ಲೇ ಒಪ್ಪಿಗೆ ಸಂಪಾದಿಸುತಿದ್ದರು. ತಂಡ ಬೆಳೆಯುತಿತ್ತು. ಮಕ್ಕಳು ಎದೆ ಹಾಲು ಕುಡಿದು ಬಲ ಹೊಂದುತಿದ್ದರು. ಆಗಿನ ಕಾಲದಲ್ಲಿ ಗಂಡಸೆಂದರೆ, ಅವನು ನಿಜವಾದ ಗಂಡಸೇ ಆಗಿದ್ದನು! ಶಾಂತಿ ಸಮೃದ್ಧಿಯ ಕಾಲದಲ್ಲೂ, ಯುದ್ಧಕ್ಷಾಮದ ದಿನಗಳಲ್ಲೂ ಅವರು ಒಂದೇ ರೀತಿಯಿದ್ದರು.

"ಈಗ ನೀರಿನಲ್ಲಿ ಮೀನು, ಕಾಡಿನಲ್ಲಿ ಮಾಂಸ ದುರ್ಲಭವಾಗಿದೆ. ಆದರೆ ಆಗಿನ ಸಮಯದಲ್ಲಿ ಹಾಗಿರಲಿಲ್ಲ. ನಮ್ಮ ನಾಯಿಗಳೋ ತೋಳಗಳಂತಿದ್ದವು. ಎಂಥ ಹಿಮಮಾರುತವನ್ನೂ ಎದುರಿಸಬಲ್ಲ ದಪ್ಪನೆಯ ಚರ್ಮವನ್ನು ಹೊಂದಿದ್ದವು. ಪೆಲ್ಲಿ ಜನಾಂಗದವರು ನಮ್ಮ ನಾಡಿಗೆ ಬಂದಾಗ, ಅವರನ್ನು ಕೊಂದೆವು. ಹಾಗೆಯೇ ಅವರಿಂದ ನಮ್ಮವರು ಕೊಲ್ಲಲ್ಪಟ್ಟರು. ಅದು ಒಂದು ನಿಯಮ. ಏಕೆಂದರೆ ನಾವು ಗಂಡಸರಾಗಿದ್ದೆವು, ಅದರಲ್ಲೂ ವೈಟ್‌ಫಿಶ್‌ಗೆ ಸೇರಿದವರು. ನಮ್ಮ ಹಿಂದೆ ತಾತಂದಿರು ಪೆಲ್ಲಿಯವರ ವಿರುದ್ಧ ಹೋರಾಡಿ ನಮ್ಮ ನಾಡಿನ ಎಲ್ಲೆಯನ್ನು ನಿರ್ಧರಿಸಿದ್ದರು.

"ನಾನು ಹೇಳಿದ ಹಾಗೆ ನಾಯಿಗಳಂತೆ ನಾವೂ ಸುಖವಾಗಿದ್ದೆವು. ಒಂದು ದಿನ ಮೊದಲನೆಯ ಬಿಳಿಯ ಮನುಷ್ಯ ಬಂದನು! ಹಿಮದ ಮೇಲೆ ಹರಿದಾಡುತ್ತಾ ಬಂದನು. ಚರ್ಮವು ಮೈಗೆ ಚೆನ್ನಾಗಿ ಅಂಟಿಕೊಂಡಿತ್ತು. ಅದರ ಹಿಂಬದಿ ಚೂಪಾದ ಮೂಳೆಗಳು ಕಾಣುತಿದ್ದುವು. ಅಂಥ ಮನುಷ್ಯನನ್ನು ನಾವು ಹಿಂದೆ ನೋಡಿರಲಿಲ್ಲ. ಯಾವ ನಾಡಿನ ಎಂಥ ಗುಂಪಿನವನೋ ಎಂದು ಆಶ್ಚರ್ಯಪಟ್ಟೆವು. ಅವನು ಎಳೆಯ ಮಗುವಿನಂತೆ ತುಂಬ ದುರ್ಬಲನಾಗಿದ್ದನು. ಆದ್ದರಿಂದ ಅವನಿಗೆ ಬೆಂಕಿಯ ಬಳಿ ಜಾಗ ಕೊಟ್ಟೆವು;

ಮಲಗಲು ಬೆಚ್ಚನೆಯ ಫರ್ ದುಪಟಿಯನ್ನು ಕೊಟ್ಟೆವು ; ಚಿಕ್ಕ ಮಕ್ಕಳಹಾಗೆ ಆಹಾರದ ಉಪಚಾರವೂ ನಡೆಯಿತು.

"ಬಿಳಿಯ ಮನುಷ್ಯನೊಡನೆ ಒಂದು ನಾಯಿಯಿತ್ತು. ಅದು ನಮ್ಮ ಮೂರು ನಾಯಿಗಳಷ್ಟು ದೊಡ್ಡದಾಗಿತ್ತು. ಆದರೆ ಶಕ್ತಿಯಿರಲಿಲ್ಲ. ನಾಯಿಯ ಬಾಲದ ತುದಿ ಹಿಮದ ಹೊಡೆತದಿಂದ ಬಿದ್ದುಹೋಗಿತ್ತು. ಈ ಹೊಸ ನಾಯಿಯನ್ನು ನಮ್ಮ ನಾಯಿಗಳ ಮುಷ್ಟಿಗೆ ಸಿಗದ ಹಾಗೆ ಬೆಚ್ಚಗೆ ಕಾಪಾಡಿದೆವು. ಮೂಸ್ ಮಾಂಸ ಮತ್ತು ಸಾಮನ್ ಒಣ ಮೀನುಗಳು ಮನುಷ್ಯನಿಗೂ ನಾಯಿಗೂ ಶಕ್ತಿಯನ್ನು ಇತ್ತವು. ಏನು ಹೇಳೋಣ ? ಸ್ವಲ್ಪ ಕಾಲದಲ್ಲೇ ದೊಡ್ಡವರಾಗಿ ಲಂಗುಲಗಾಮಿಲ್ಲದವರಾದರು. ಆ ಬಿಳಿಯಮನುಷ್ಯ ಗಟ್ಟಿಯಾಗಿ ಮಾತನಾಡತೊಡಗಿದನು. ಮುದುಕರನ್ನೂ, ನಮ್ಮ ಯುವಕರನ್ನೂ ನೋಡಿ ಹಾಸ್ಯ ಮಾಡಿದನು. ಯುವತಿಯರನ್ನು ಧೈರ್ಯವಾಗಿ ನೋಡಿದನು. ಆ ನಾಯಿ ನಮ್ಮ ನಾಯಿಗಳೊಡನೆ ಜಗಳವಾಡಿತು; ನುಣುಪಾದ ಸಣ್ಣ ಕೂದಲುಳ್ಳದಾಗಿದ್ದರೂ ಒಂದೇ ದಿನದಲ್ಲಿ ಮೂರನ್ನು ಕೊಂದಿಕ್ಕಿತು.

"ನಿಮ್ಮ ಕಡೆಯವರು ಯಾರು ? ಎಂದು ಆ ಬಿಳಿಯನನ್ನು ಕೇಳಿದಾಗ, 'ನನಗೆ ಬೇಕಾದಷ್ಟು ಸೋದರರಿದ್ದಾರೆ' ಎನ್ನುತ್ತಾ ನಕ್ಕನು. ಆ ನಗುವಿನ ರೀತಿಯಲ್ಲಿ ಏನೋ ಕುಹಕವಿತ್ತು. ಅವನು ಪೂರ್ಣ ಶಕ್ತಿವಂತನಾದ ಮೇಲೆ ಹೊರಟುಹೋದನು. ಜೊತೆಗೆ ನಮ್ಮ ನಾಯಕನ ಮಗಳು 'ನೋಡಾ' ಕೂಡ ಪ್ರಯಾಣ ಮಾಡಿದಳು ! ಅದಾದ ಮೇಲೆ ನಮ್ಮ ಹೆಣ್ಣು ನಾಯಿಯೊಂದು ಮರಿಹಾಕಿತು..... ಹಿಂದಿನಂಥ ನಾಯಿಗಳ ವಂಶವೇ ಹಾಳಾಗಿ ಹೋಯಿತು. ದಪ್ಪ ತಲೆಯ, ಒರಟು ಹಲ್ಲಿನ, ಸಣ್ಣ ಕೂದಲುಳ್ಳ ಮತ್ತು ಯಾವುದಕ್ಕೂ ಸಹಾಯವಿಲ್ಲದ ನಾಯಿಗಳ ಗುಂಪನ್ನು ನೋಡುವಂತಾಯಿತು....ಹೌದು ; ನನ್ನ ತಂದೆಯ ಜ್ಞಾಪಕವಿದೆ. ಆ ಬಲಶಾಲಿ ಓಟ್ಸ್ ಬೋಕ್....ಅವನ ಮುಖ ಕೋಪದಿಂದ ಕಪ್ಪಾಯಿತು. ತನ್ನ ಅಸಹಾಯ ಸ್ಥಿತಿಯನ್ನು ಹೋಗಲಾಡಿಸಿಕೊಳ್ಳಲು ಕಲ್ಲುಗಳನ್ನು ಶೇಖರಿಸಿದನು! ಎರಡು ಬೇಸಗೆ ಕಳೆದ ಮೇಲೆ 'ನೋಡಾ' ಮರಳಿ ಬಂದಳು. ಅವಳ ಕೈಯಲ್ಲಿ ಗಂಡು ಮಗುವಿತ್ತು !

"ಅದೇ ಪ್ರಾರಂಭ. ಎರಡನೆಯ ಬಿಳಿ ಮನುಷ್ಯ ಬಂದನು. ಅವನು ವಾಪಸುಹೋದಾಗ ನಮ್ಮಲ್ಲಿದ್ದ ಆರು ಬಲವಾದ ನಾಯಿಗಳನ್ನು ಕರೆದುಕೊಂಡು ಹೊರಟನು. ಆ ನಾಯಿಗಳಿಗೆ ಬದಲಾಗಿ ಕೂ–ಸೊ–ಟೀಗೆ ಒಂದು

ಪಿಸ್ತೂಲನ್ನು ಕೊಟ್ಟನು. ಕೂ–ಸೊ–ಟೇ ನನ್ನ ತಾಯಿಯ ಸೋದರ. ಆ ಪಿಸ್ತೂಲು ಆಶ್ಚರ್ಯಕರವಾಗಿತ್ತು. ಆರು ಬಾರಿಯೂ ಜೋರಾಗಿ ಹಾರಿಸ ಬಹುದಾಗಿತ್ತು. ಕೂ–ಸೊ–ಟೇ ದೊಡ್ಡ ಮನುಷ್ಯನಾದ. ನಮ್ಮ ಬಿಲ್ಲು ಬಾಣಗಳನ್ನು ನೋಡಿ ಹೆಂಗಸರ ಸಲಕರಣೆ ಎಂದು ಹಾಸ್ಯಮಾಡಿದ. ಬೋಳು ತಲೆಯ ನೇರಕ್ಕೆ ಸರಿಯಾಗಿ ಪಿಸ್ತೂಲು ಹಿಡಿದ. ಹಾಗೆ ಮಾಡಬಾರದೆಂದು ಈಗ ನಮಗೆ ಗೊತ್ತಿದೆ. ಆದರೆ ಆಗ? ಅದರಲ್ಲೂ ಕೂ–ಸೊ–ಟೇಗೆ ಹೇಗೆ ತಿಳಿಯಬೇಕು? ಧೈರ್ಯದಿಂದ ಬೋಳುತಲೆಗೆ ಆರುಬಾರಿ ಪಿಸ್ತೂಲಿನಿಂದ ಹೊಡೆದುಕೊಂಡನು. ಮೊಟ್ಟೆ ಒಡೆಯುವಂತೆ ಮುಖ ಚೂರಾಯಿತು. ಗೂಡಿನಿಂದ ಬೀಳುವ ಜೇನಿನಂತೆ ಅವನ ಮೆದುಳು ನೆಲಕ್ಕೆ ಬಿತ್ತು! ಅವನು ಒಳ್ಳೆಯ ಬೇಟೆಗಾರನಾಗಿದ್ದನು. ಈಗ ಅವನ ಹೆಂಡತಿ ಮಕ್ಕಳಿಗೆ ಮಾಂಸ ತರಲು ಯಾರೂ ಇಲ್ಲ. ನಮಗೆ ಕೋಪ ನೆತ್ತಿಗೇರಿತು. ನಿಷ್ಠುರದಿಂದ ಹೇಳಿದೆವು: 'ಬಿಳೀ ಜನಕ್ಕೆ ಯಾವುದು ಒಳ್ಳೆಯದೋ, ಅದು ನಮಗೆ ಕೆಟ್ಟದ್ದು.' ಇದು ಸತ್ಯ, ಕೊಬ್ಬಿದ ಬಿಳೀ ಮನುಷ್ಯರು ಹೆಚ್ಚು ಸಂಖ್ಯೆಯಲ್ಲಿ ಇರಬಹುದು; ಆದರೆ ಅವರ ಮಾರ್ಗ ನಮ್ಮನ್ನು ಅಲ್ಪ ಸಂಖ್ಯಾತರನ್ನಾಗಿಯೂ, ಹೊಟ್ಟೆಗಿಲ್ಲದವರನ್ನಾಗಿಯೂ ಮಾಡುತಿತ್ತು.

"ಮೂರನೆಯ ಬಿಳೀ ಮನುಷ್ಯ ಬಂದನು. ಆಶ್ಚರ್ಯಕರ. ಆಹಾರ ಪದಾರ್ಥಗಳ ಭಂಡಾರ ಅವನಲ್ಲಿತ್ತು. ಬಹುಮಾನಗಳಿಂದಲೂ ದೊಡ್ಡ ಮಾತಿನ ಭರವಸೆಗಳಿಂದಲೂ ಮರುಳುಗೊಳಿಸಿ, ನಮ್ಮಲ್ಲಿದ್ದ ಇಪ್ಪತ್ತು ಬಲಿಷ್ಠ ನಾಯಿಗಳನ್ನು ವ್ಯಾಪಾರಮಾಡಿದನು. ಅಷ್ಟೇ ಅಲ್ಲ; ಪ್ರಯಾಣಕ್ಕೆಂದು ಹತ್ತು ಯುವಕ ಬೇಟೆಗಾರರನ್ನು ಕರೆದನು. ಯಾವ ಪ್ರಯಾಣವೋ? ಎಲ್ಲಿಗೆ ಹೋದರೆಂದು ಯಾರಿಗೂ ತಿಳಿಯದು. ಕೇಳಿಬಂದ ಮಾತಿನಂತೆ, ಯಾವ ಮನುಷ್ಯನೂ ಹೋಗದಿದ್ದ ಹಿಮ ಪರ್ವತಗಳ ಮಂಜಿನಲ್ಲಾಗಲಿ, ಭೂಮಿಯ ತುತ್ತ ತುದಿಯ ನಿಶ್ಶಬ್ದ ಬೆಟ್ಟಗಳಲ್ಲಾಗಲಿ ಅವರು ಸತ್ತಿರಬೇಕು. ಹೇಗಾದರೂ ಆಗಲಿ ಒಟ್ಟಿನಲ್ಲಿ ನಾಯಿಗಳೂ ಯುವಕ ಬೇಟೆಗಾರರೂ ವೈಟ್‌ಫಿಶ್ ಜನರ ಕಣ್ಣಿಗೆ ಮತ್ತೆ ಬೀಳಲಿಲ್ಲ.

"ವರ್ಷಗಳು ಕಳೆದಂತೆ, ಬಿಳಿಯ ಜನ ಹೆಚ್ಚು ಹೆಚ್ಚಾಗಿ ಬರತೊಡಗಿದರು. ಹಣ ಮತ್ತು ಉಡುಗೊರೆಯ ಪದಾರ್ಥಗಳನ್ನಿತ್ತು ಯುವಕರನ್ನು ತಮ್ಮೊಂದಿಗೆ ಕರೆದುಕೊಂಡು ಹೋದರು. ಕೆಲವು ವೇಳೆ ಯುವಕರು ಮರಳಿ ಬರುತಿದ್ದರು. ಪೆಲ್ಲಿ ಭೂಮಿಯಾಚೆ ಇರುವ ಅಪಾಯವನ್ನೂ ಕಷ್ಟ

ನಷ್ಟಗಳನ್ನೂ ಅದ್ಭುತ ಕಥಾರೂಪದಲ್ಲಿ ಹೇಳುತಿದ್ದರು. ಮತ್ತೆ ಕೆಲವು ವೇಳೆ ಹಿಂತಿರುಗಿ ಬರಲೇ ಇಲ್ಲ....ಆಗ ನಾವು ಯೋಚಿಸಿದೆವು: 'ಈ ಬಿಳೀ ಮನುಷ್ಯರು ಜೀವಕ್ಕೆ ಹೆದರದೆ ಇರಬೇಕಾದರೆ, ಅವರ ಜನಸಂಖ್ಯೆ ಹೆಚ್ಚಾಗಿರುವುದೇ ಕಾರಣ. ಆದರೆ ನಮ್ಮ ವೈಟ್‌ಫಿಶ್ ಜನರು ಅತ್ಯಲ್ಪ ಮಂದಿಯಿದ್ದಾರೆ. ಆದ್ದರಿಂದ ನಮ್ಮ ಯುವಕರು ಇನ್ನು ಮುಂದೆ ಹೋಗಕೂಡದು'. ಆದರೆ ಯುವಕರು ಹೋಗುತ್ತಲೇ ಇದ್ದರು. ವಯಸ್ಸಿಗೆ ಬಂದ ಹೆಣ್ಣು ಮಕ್ಕಳೂ ಪರಾರಿಯಾದರು. ನಮಗೆ ಕೋಪ ನೆತ್ತಿಗೇರಿತು.

"ನಿಜ; ನಾವು ಹಿಟ್ಟನ್ನೂ ಉಪ್ಪಾಗಿದ್ದ ಹಂದಿ ಮಾಂಸವನ್ನೂ ತಿನ್ನುತಿದ್ದೆವು. ಟೀ ಕುಡಿಯುತಿದ್ದೆವು. ಅದೊಂದು ಮಾತ್ರ ಸಂತೋಷದಾಯಕವಾಗಿತ್ತು. ಟೀ ಸಿಗದಿದ್ದಾಗ ಹುಚ್ಚರಾಗುತಿದ್ದೆವು; ಮಾತನಾಡದೆ ಕೋಪಗೊಂಡು ಮೂಲೆ ಸೇರುತಿದ್ದೆವು. ಪದಾರ್ಥಗಳ ಅಭಾವದಿಂದ ಹಸಿದವರಾಗಿ ಬಿಳಿಯರು ವ್ಯಾಪಾರಕ್ಕಾಗಿ ತಂದ ಪದಾರ್ಥಗಳಿಗಾಗಿಯೆ ಬಾಯಿಬಿಡಬೇಕಾಯಿತು. ಎಲ್ಲೆಲ್ಲಿ ನೋಡಿದರೂ ವ್ಯಾಪಾರ! ವ್ಯಾಪಾರಕ್ಕೆ ಒಂದು ನಿಮಿಷವೂ ಬಿಡುವಿಲ್ಲ; ಒಂದು ಚಳಿಗಾಲದಲ್ಲಿ ಮಾಂಸವನ್ನೆಲ್ಲ ಮಾರಿದೆವು. ಅದಕ್ಕೆ ವಿನಿಮಯವಾಗಿ ಬಂದ ವಸ್ತುಗಳು: ಕ್ರಮ ತಪ್ಪಿದ ಗಡಿಯಾರಗಳು, ನುಣುಪಾಗಿ ಹರಿದಿದ್ದ ಫೈಲುಗಳು ಮತ್ತು ಸಿಡಿಮದ್ದಿಲ್ಲದ ಪಿಸ್ತೂಲುಗಳು. ಆಮೇಲೆ ಬಂತು ಕ್ಷಾಮ! ನಮಗೆ ಮಾಂಸವಿಲ್ಲ; ವಸಂತ ಕಾಲಕ್ಕೆ ಮುಂಚೆಯೆ ನಲವತ್ತು ಜನ ಸತ್ತರು.

"ನಾವು ಈಗ ದುರ್ಬಲರಾಗಿದ್ದೇವೆ. ಪೆಲ್ಲಿಗಳು ನಮ್ಮ ಮೇಲೆ ಬಿದ್ದು ಎಲ್ಲೆಗಳನ್ನು ನಿರ್ಮೂಲಗೊಳಿಸಬಹುದು ಎಂದು ಕೊಂಡೆವು. ಆದರೆ ಪೆಲ್ಲಿಗಳೂ ಕೂಡ ನಮ್ಮಂತೆಯೇ ಪೆಟ್ಟುತಿಂದು ಮೇಲೆಬೀಳಲು ನಿಶ್ಶಕ್ತರಾಗಿದ್ದರು.

"ಆ ಸಂದರ್ಭದಲ್ಲಿ ಮುದುಕನಾಗಿದ್ದರೂ, ಬಲಶಾಲಿಯೂ ಬುದ್ಧಿವಂತನೂ ಆಗಿದ್ದ ನನ್ನ ತಂದೆ ಓಟ್ಸೊಬೋಕ್, ನಾಯಕನಿಗೆ ಹೇಳಿದ: 'ನೋಡಯ್ಯ, ನಾಯಿಗಳು ಕೆಲಸಕ್ಕೆ ಬಾರದ್ದಾಗಿವೆ; ದಪ್ಪನೆಯ 'ಫರ್' ಇಲ್ಲದೆ ನಿಶ್ಶಕ್ತವಾಗಿ ಮಂಜಿನಲ್ಲಿ ಸಾಯುತ್ತಿವೆ. ದಪ್ಪನೆಯ ಚರ್ಮದ ಮತ್ತು ಶಕ್ತಿಯುತವಾದ ನಾಯಿಗಳು ಇನ್ನು ಸಿಗುವಂತಿಲ್ಲ. ಆದ್ದರಿಂದ ಹಳ್ಳಿಗೆ ಹೋಗೋಣ. ತೋಳ ನಾಯಿಗಳನ್ನು ಮಾತ್ರ ಬಿಟ್ಟು ಉಳಿದವನ್ನು ತೀರಿಸೋಣ. ಆ ತೋಳನಾಯಿಗಳನ್ನು ರಾತ್ರಿಯ ವೇಳೆ ಕಟ್ಟಹಾಕ

ಬೇಕು. ಆಗ ಅವು ಕಾಡಿನ ಧೀರ ತೋಳಗಳೊಡನೆ ಸಂಪರ್ಕಬೆಳೆಸುತ್ತವೆ.... ಹೊಸಪೀಳಿಗೆಯ ನಮ್ಮ ನಾಯಿಗಳು ಬಲಿಷ್ಟವಾಗುತ್ತವೆ.

"ಆ ಮಾತುಗಳು ನಮ್ಮನ್ನು ಹುರಿದುಂಬಿಸಿದುವು; ಏಕೆಂದರೆ ನಮ್ಮ ವೈಟ್‌ಫಿಶ್ ಜನ ನಾಯಿಗಳಿಗಾಗಿ ಪ್ರಸಿದ್ಧರಾಗಿದ್ದರು. ಆ ನಾಯಿಗಳಿಗೆ ನಾಡಿನಲ್ಲೆಲ್ಲ ಪ್ರಥಮ ಸ್ಥಾನವಿತ್ತು. ಆದರೆ ವೈಟ್‌ಫಿಶ್ ಜನಾಂಗವೆಲ್ಲಿದೆ? ಮುಖ್ಯರಾಗಿದ್ದ ಯುವಕ ಯುವತಿಯರು ಬಿಳಿಯರೊಡನೆ ಭೂಮಿ ನದಿಗಳನ್ನು ದಾಟಿ ಹೊರಟುಹೋಗಿದ್ದರು. ಮರಳಿ ಬಂದ ಯುವತಿಯರು ನೋಡಾಳಂತೆ ಸತ್ವಹೀನರಾಗಿ ವಯಸ್ಸು ಮೀರಿದಂತಿದ್ದರು. ಯುವಕರು ಕೆಟ್ಟ ಮಾತುಗಳನ್ನಾಡುತ್ತ ನಮ್ಮೊಡನೆ ಬೆಂಕಿಯ ಬಳಿ ಕುಳಿತು ಕೀಳು ದರ್ಜೆಯ ಸಾರಾಯಿಗಳನ್ನು ಕುಡಿಯುತಿದ್ದರು. ರಾತ್ರಿ ಹಗಲೆನ್ನದೆ ಜೂಜಾಡುತಿದ್ದರು. ಅವರಿಗೆ ಹೃದಯದಲ್ಲಿ ಯಾವಾಗಲೂ ತಳಮಳ. ಮತ್ತೆ ಬಿಳಿ ಮನುಷ್ಯನ ದರ್ಶನವಾದೊಡನೆ ಅವನನ್ನು ಹಿಂಬಾಲಿಸಿ, ಕಂಡುಕೇಳದ ಸ್ಥಳಗಳಿಗೆ ಪ್ರಯಾಣಬೆಳಸುತಿದ್ದರು. ಅವರಿಗೆ ಮಾನ, ಮರ್‍ಯಾದೆ, ಗೌರವ ಯಾವುದೂ ಇರಲಿಲ್ಲ. ಹಿಂದಿನ ಪದ್ಧತಿಗಳನ್ನು ಗೇಲಿಮಾಡುತಿದ್ದರು; ನಾಯಕರನ್ನೂ ಹೀಯಾಳಿಸುತಿದ್ದರು.

"ಆಗಲೇ ಹೇಳಿದಂತೆ ನಮ್ಮ ವೈಟ್‌ಫಿಶ್ ಜನಾಂಗ ದುರ್ಬಲವಾಯಿತು. ಬೆಚ್ಚನೆಯ ಚರ್ಮಗಳನ್ನು ಹೊಗೆಸೊಪ್ಪು ವ್ಹಿಸ್ಕಿಗಳಿಗೆ ಮಾರಿ ತೆಳುವಾದ ಹತ್ತಿ ಬಟ್ಟೆಯನ್ನು ಹಾಕಿದ್ದರಿಂದ ಚಳಿಯಲ್ಲಿ ನಡುಗಬೇಕಾಯಿತು. ಗಂಡಸರೂ ಹೆಂಗಸರೂ ಇಡೀ ರಾತ್ರಿಗಳನ್ನು ಕೆಮ್ಮುತ್ತಾ ಕಳೆಯಬೇಕಾಯಿತು. ದಾರಿ ಸವೆಸಿ ಬಂದಿದ್ದ ಬೇಟೆಗಾರರು ಹಿಮದ ಮೇಲೆ ರಕ್ತ ಕಾರಿದರು. ಒಬ್ಬೊಬ್ಬರಾಗಿ ಅದೇ ಕಾಯಿಲೆಯಿಂದ ಬಾಯಿ ತೆರೆದು ಸತ್ತರು. ಹುಟ್ಟುವ ಸಂಖ್ಯೆ ಕಡಿಮೆಯಾಗುತ್ತ ಬಂದಿತು. ಹುಟ್ಟಿದವರು ತಕ್ಷಣ ಕಾಯಿಲಿಗೆ ತುತ್ತಾದರು. ನಾವು ಎಂದೂ ಕಂಡು ಕೇಳದ ಕಾಯಿಲೆಗಳು ಬಿಳಿಯರಿಂದ ಬಂದವು. ಸಿಡಬು, ದಡಾರ ಎಂಬುದೇ ಅವು ಎಂದು ಈಗ ನಾನು ಕೇಳಿದ್ದೇನೆ. ಸ್ಥಿರವಾಗಿ ನಿಂತ ನೀರುಸುಳಿಯಲ್ಲಿ ಮೊಟ್ಟೆಯೊಡೆಯುತಿದ್ದಾಗ ಸಾಯುವ ಸಾಮನ್ ಮೀನುಗಳಂತೆ ನಿರಾತಂಕವಾಗಿ ಪ್ರಾಣಬಿಟ್ಟರು.

"ಆದರೂ—ಅದರಲ್ಲೇ ಆಶ್ಚರ್ಯವಿರುವುದು—ಬಿಳಿಯ ಜನ ಸಾವಿನ ಉಸಿರಿನಂತೆ ಬರುತ್ತಲೇ ಇದ್ದರು. ಅವರ ಮಾರ್ಗವೇ ಮೃತ್ಯುಮಯವಾಗಿತ್ತು. ಅಷ್ಟಾದರೂ ಅವರು ಮಾತ್ರ ಸಾಯುತ್ತಿರಲಿಲ್ಲ. ಅವರಿಗೆ ನಮಗಿಂತ

ಹೆಚ್ಚು ಕೋಟಲೆಗಳಿದ್ದರೂ, ಯಾವ ವ್ಯತ್ಯಾಸವೂ ಇಲ್ಲದೆ, ಹಾಗೆಯೆ ಇದ್ದರು: ವಿಪರೀತದ ಜಾಡ್ಯಗಳಾದ ಸಿಡುಬು ಮತ್ತು ದಡಾರ, ಕೆಮ್ಮು ಮತ್ತು ರಕ್ತ ವಾಂತಿ ; ಹಿಮಕ್ಕೆ ಹೆದರುವ ನುಣುಪಾದ ಬಿಳಿಯ ಚರ್ಮ ; ಆರು ಬಾರಿ ಜೋರಾಗಿ ಹೊಡೆದರೂ ಪ್ರಯೋಜನವಿಲ್ಲದ ಪಿಸ್ತೂಲು ಇತ್ಯಾದಿ....ಅಂತೂ ತಮ್ಮ ಸಣ್ಣತನದಿಂದಲೇ ಬಿಳಿಯ ಜನ ಕೊಬ್ಬಿ, ಪ್ರಪಂಚದ ಎಲ್ಲೆಡೆ ದರ್ಪದ ಕೈ ಬೀಸಿ, ಇತರರ ಮೇಲೇರಿ ನಡೆದರು. ಅವರ ಹೆಂಗಸರು ಕೂಡ ಚಿಕ್ಕ ಮಕ್ಕಳಂತೆ ಮೃದುವಾಗಿದ್ದರು ; ಬಳುಕುವಂತಹ ಆಕೃತಿ ; ಆದರೆ ಎಂದಿಗೂ ಬಾಗುತ್ತಿರಲಿಲ್ಲ ! ಅಂಥವರು ಗಂಡಸರ ತಾಯಿಯಾಗಿದ್ದರು ! ಒಟ್ಟಿನಲ್ಲಿ ಈ ನಯವಾದ ಪ್ರವೃತ್ತಿ ಹಾಗೂ ಕಾಯಿಲೆ, ದೌರ್ಬಲ್ಯಗಳಿಂದಲೇ ಅವರಿಗೆ ಶಕ್ತಿ, ಅಧಿಕಾರ, ದರ್ಪಗಳು ಬಂದವು. ದೇವರೋ ದೆವ್ವವೋ ಏನಾದರಾಗಲಿ ; ನನಗೆ ಗೊತ್ತಿಲ್ಲ. ಮುದುಕ ಇಂಬರ್‌ನಂಥ ವೈಟ್‌ಫಿಶ್‌ಗೆ ಏನು ಗೊತ್ತಿದೆ ? ಇಷ್ಟು ಮಾತ್ರ ಗೊತ್ತಿತ್ತು : ಬಿಳಿಯ ಮನುಷ್ಯರು ಬುದ್ಧಿವಂತರು ಮತ್ತು ಪ್ರಪಂಚದ ಎಲ್ಲೆಡೆ ಸುತ್ತಾಡುತ್ತ ಹೊಡೆದಾಡುವವರು—ಎಂದು.

"ಹಿಂದೆ ತಿಳಿಸಿದಂತೆ, ಕಾಡಿನಲ್ಲಿ ಮಾಂಸ ಕಡಿಮೆಯಾಗುತ್ತ ಬಂತು. ಕೊಲ್ಲಲು ಯಾವ ಪ್ರಾಣಿಯೂ ಇಲ್ಲದಿರುವಾಗ, ಬಿಳಿಯರು ಕೊಟ್ಟಿದ್ದ, ದೂರದಿಂದಲೇ ಹೊಡೆಯಬಲ್ಲ ಬಂದೂಕಿನಿಂದ ಏನು ಪ್ರಯೋಜನ ? ನಾನು ಬಾಲಕನಾಗಿದ್ದಾಗ ಪ್ರತಿ ಬೆಟ್ಟದಲ್ಲೂ ಹಿಮಪಶುವಿತ್ತು ; ಪ್ರತಿವರ್ಷವೂ ಲೆಕ್ಕವಿಲ್ಲದಷ್ಟು ಕ್ಯಾರಿಬೋ ಪ್ರಾಣಿಗಳು ಬರುತಿದ್ದವು. ಈಗ ಹತ್ತು ದಿನ ತಿರುಗಿದರೂ ಯಾವುದರ ಹುಟ್ಟೂ ಇಲ್ಲ.

"ನಾನು—ಇಂಬರ್—ಈ ವಿಷಯಗಳ ಮೇಲೆ ತರ್ಕಿಸಿದೆ. ವೈಟ್‌ಫಿಶ್, ಪೆಲ್ಲಿ ಮುಂತಾದ ತಂಡಗಳು ಕಾಡು ಮಾಂಸದಂತೆ ನಾಶವಾಗುತಿದ್ದವು. ಮತ್ತೆ ಅನೇಕ ದಿನಗಳು ಯೋಚಿಸಿದೆ. ಬೇಟೆಗಾರರೊಡನೆ ಮತ್ತು ಬುದ್ಧಿವಂತರಾದ ಮುದುಕರ ಹತ್ತಿರ ಕುಳಿತು ಚರ್ಚಿಸಿದೆ. ಹಳ್ಳಿಯ ಶಬ್ದಗಳಿಂದ ದೂರವಿದ್ದು ಒಂದೇ ಧ್ಯಾನಮಾಡಿದೆ. ತುಂಬಿದ ಹೊಟ್ಟೆ ಜಡತ್ವಕ್ಕೆ ಕಾರಣವಾಗುತ್ತೆಂಬ ಭಯದಿಂದ ಮಾಂಸವನ್ನೇ ತಿನ್ನಲಿಲ್ಲ. ಕಣ್ಣು ತೆರೆದಿತ್ತು ; ಕಿವಿ ಚುರುಕಾಗಿತ್ತು. ತಲೆಗೆ ಹೊಳೆಯಬಹುದಾದ ಯಾವುದೋ ಕಾರ್ಯಕ್ಕೆ ಕಾದಿದ್ದೆ. ರಾತ್ರಿಯ ಕತ್ತಲಲ್ಲಿ ಒಬ್ಬಂಟಿಗನಾಗಿ ನದಿಯ ತೀರಕ್ಕೆ ಹೋಗಿ ಅಲೆದಾಡಿದೆನು. ನೀರು, ಗಾಳಿ ಅಳುತ್ತಿದ್ದಂತೆ ಶಬ್ದಮಾಡುತಿದ್ದವು. ಸತ್ತು ಹೋಗಿದ್ದ ವೃದ್ಧ ಬೇಟೆಗಾರರ ಸಂದೇಶ ಕೇಳಿಬಂತು.

"ಕಡೆಗೆ ಸಣ್ಣಕೂದಲಿನ ಅಸಹನೀಯ ನಾಯಿಗಳ ಸಿಂಹಸ್ವಪ್ನ ಕಂಡಂತಾಯಿತು. ಮುಂದಿನ ಮಾರ್ಗ ತಿಳಿಯಿತು! ಬಲಿಷ್ಠನಾದ ನನ್ನ ತಂದೆ ಒಟ್ಸೊಬೋಕ್‌ನ ಬುದ್ಧಿವಂತಿಕೆಯಿಂದ, ನಮ್ಮ 'ತೋಳ ನಾಯಿ'ಗಳು ಬೆಚ್ಚಗಿದ್ದು ಬಲಿಷ್ಠವಾಗಿವೆ. ಅವುಗಳ ರಕ್ತಪರಿಶುದ್ಧವಾಗಿರುವುದೇ ಇದಕ್ಕೆ ಕಾರಣ. ಕೂಡಲೇ ಹಳ್ಳಿಗೆ ಹಿಂತಿರುಗಿ ನಮ್ಮವರ ಮುಂದೆ ದೀರ್ಘ ಭಾಷಣ ಮಾಡಿದೆ: "ಬಿಳಿಯ ಮನುಷ್ಯರ ತಂಡವೊಂದಿದೆ. ಬಹು ದೊಡ್ಡ ತಂಡವೇ ಇರಬೇಕು. ನಿಸ್ಸಂಶಯವಾಗಿಯೂ ಅವರ ನಾಡಿನಲ್ಲಿ ಮಾಂಸವಿಲ್ಲ. ನಮ್ಮ ನಾಡನ್ನು ತಮ್ಮದಾಗಿ ಮಾಡಿಕೊಳ್ಳಲು ಅವರು ಬರುತ್ತಾರೆ. ನಮ್ಮನ್ನು ನಿರ್ವೀರ್ಯರನ್ನಾಗಿ ಮಾಡುತ್ತಾರೆ; ನಾವು ಸಾಯುತ್ತೇವೆ. ಅವರಂತೂ ತೀರ ಹಸಿದ ಜನ. ಈಗಾಗಲೇ ಮಾಂಸ ನಮ್ಮ ಕೈಬಿಟ್ಟು ಹೋಯಿತು. ನಾವೇನಾದರೂ ಬದುಕಬೇಕಾದರೆ, ಅವರ ನಾಯಿಗಳನ್ನು ಹೇಗೆ ನಾಶಪಡಿಸಿದೆವೋ ಹಾಗೆಯೇ ಅವರ ವಿಷಯದಲ್ಲೂ ವರ್ತಿಸಬೇಕು."

ಮುಂದುವರಿಸುತ್ತಾ—ಹೋರಾಟ ನಡೆಸಲೇಬೇಕೆಂದು ಸಲಹೆಕೊಟ್ಟೆ. ವೈಟ್‌ಫಿಶ್ ಜನ ಆಲಿಸಿದರು. ಒಬ್ಬೊಬ್ಬರು ಒಂದೊಂದು ರೀತಿ ಹೇಳಿದರು. ಕೆಲವರು ಕೆಲಸಕ್ಕೆಬಾರದ ಮಾತುಗಳನ್ನಾಡಿದರು. ಯಾರೂ ಯುದ್ಧ ಮಾಡುವ ಧೈರ್ಯದ ಮಾತನ್ನು ತರಲಿಲ್ಲ. ಸುತ್ತಲೂ ನೋಡಿದೆ. ನೀರಗುಳ್ಳೆಯಂತೆ ಯುವಕರು ಹೇಡಿಗಳಾಗಿದ್ದರು. ಮುದುಕರು ಸುಮ್ಮನೆ ಕುಳಿತಿದ್ದರು; ಆದರೆ ಮಧ್ಯೆ ಮಧ್ಯೆ ಅವರ ಕಣ್ಣಿಂದ ಕಿಡಿಗಳು ಹೊರಸೂಸುತಿದ್ದುವು. ಅದೇ ರಾತ್ರಿ ಹಳ್ಳಿಯಲ್ಲಿ ಎಲ್ಲರೂ ನಿದ್ದೆ ಹೋದಮೇಲೆ ಯಾರಿಗೂ ತಿಳಿಯದ ಹಾಗೆ ಮುದುಕರನ್ನು ಮಾತ್ರ ಎಬ್ಬಿಸಿ, ಕಾಡಿಗೆ ಕರೆದುಕೊಂಡು ಹೋದೆ! ಬಹಳ ಹೊತ್ತು ಮಾತುಕಥೆ ನಡೆಯಿತು. ನಾವೆಲ್ಲರೂ ಒಪ್ಪಿಕೊಂಡೆವು. ನಮ್ಮ ಯೌವನದ ಸುದಿನಗಳನ್ನು ನೆನೆಸಿಕೊಂಡೆವು. ಎಂಥ ಸ್ವತಂತ್ರ ನಾಡು; ಎಲ್ಲಕ್ಕೂ ಸಮೃದ್ಧಿಯ ಕಾಲ, ಸೂರ್ಯ ಬೆಳಗುತಿದ್ದ ಸಂತಸದ ದಿನಗಳು. ನಾವೆಲ್ಲರೂ ಸೋದರರೆಂದು ಭಾವಿಸಿ ಆತ್ಯಂತ ಗುಟ್ಟಿನಲ್ಲಿ, ನಮ್ಮ ನಾಡಿನಲ್ಲಿ ಹರಡುತಿದ್ದ ಕೆಟ್ಟ ವಂಶದ ಕುಡಿಯನ್ನು ಸಂಪೂರ್ಣ ನಾಶಗೊಳಿಸಬೇಕು—ಎಂಬುದಾಗಿ ಘೋರಪ್ರತಿಜ್ಞೆ ಮಾಡಿದೆವು. ಇದು ಬರೇ ಹುಚ್ಚಾಟವೆಂಬುದೇನೋ ಸ್ಪಷ್ಟ. ಆದರೆ ವೈಟ್‌ಫಿಶ್ ಮುದುಕರಾದ ನಮಗೆ ಹೇಗೆ ತಿಳಿಯಬೇಕು?

"ಇತರರರಿಗೆ ಸ್ಫೂರ್ತಿದಾಯಕವಾಗಿ ಮೊದಲ ಕೆಲಸವನ್ನು ನಾನೇ

ಮಾಡಿದೆ. ಮೊದಲನೆಯ ದೋಣಿ ಬರುವ ತನಕ ಯೂಕಾನ್ ತೀರದಲ್ಲಿ ಕಾವಲು ಹಾಕಿದೆ. ಆ ದೋಣಿಯಲ್ಲಿ ಇಬ್ಬರು ಬಿಳಿ ಜನರಿದ್ದರು. ದಡದ ಮೇಲೆ ನಿಂತು ಕೈ ಬೀಸಿದಾಗ ಅವರು ಮಾರ್ಗ ಬದಲಾಯಿಸಿ, ನನ್ನ ಕಡೆ ತಿರುಗಿದರು. ದೋಣಿಯ ಮೂತಿಯಲ್ಲಿ ಕುಳಿತಿದ್ದಾತ ತಲೆಯೆತ್ತಿ ನೋಡಿದ. ನಾನು ಎಲ್ಲಿಗೆ ಕರೆಯುತ್ತಿದ್ದೇನೆಂದು ತಿಳಿಯಲು ಇರಬಹುದು. ಹೌದು; ಅವನಿಗೆ ತಿಳಿಯಿತು; ಏಕೆಂದರೆ ನನ್ನ ಬಾಣ ಹಾರಿ ಒಂದೇ ಏಟಿಗೆ ಅವನ ಗಂಟಲನ್ನು ಕಚ್ಚಿತು! ದೋಣಿಯ ಹಿಂಬಾಗದಲ್ಲಿ ಹುಟ್ಟು ಹಿಡಿದಿದ್ದ ಎರಡನೆಯವನು ಬಂದೂಕವನ್ನು ಆಗಲೇ ಅರ್ಧ ಭುಜಕ್ಕೆ ಏರಿಸಿದ್ದನು. ಅಷ್ಟರಲ್ಲೇ ನಾನೆಸೆದ ಈಟಿಯು ಅವನನ್ನು ಇರಿಯಿತು.

"ವೃದ್ಧ ಸೋದರರು ಮತ್ತೆ ನನ್ನನ್ನು ಸುತ್ತುಗಟ್ಟಿದರು. ಆಗ ಹೇಳಿದೆ: ಇದು ಮೊದಲ ಹೆಜ್ಜೆ. ಮುಂದೆ ಎಲ್ಲ ತಂಡದ ಮುದುಕರನ್ನೂ ಒಂದೆಡೆ ಸೇರಿಸೋಣ. ಅದಾದ ಮೇಲೆ, ಶಕ್ತಿವಂತರಾಗಿ ಉಳಿದಿರುವ ಕೆಲವೇ ಯುವಕರನ್ನೂ ಕರೆಯೋಣ. ಅಲ್ಲಿಗೆ ನಮ್ಮ ಕೆಲಸ ಸುಲಭವಾಗುತ್ತದೆ....

"ಆಮೇಲೆ, ಸತ್ತ ಇಬ್ಬರು ಬಿಳಿ ಮನುಷ್ಯರನ್ನು ನದಿಗೆ ಎಸೆದೆವು. ದೋಣಿಗೆ ಬೆಂಕಿ ಹಚ್ಚಿದೆವು. ಮುಂಚೆ ದೋಣಿಯಲ್ಲಿದ್ದ ಸಾಮಾನುಗಳನ್ನು ಪರೀಕ್ಷಿಸಿದೆವು. ತೊಗಲು ಚೀಲಗಳಿದ್ದವು. ಚಾಕುವಿನಿಂದ ಕತ್ತರಿಸಿದೆವು. ಒಳಗಡೆ ತುಂಬ ಕಾಗದವಿತ್ತು....ಹೌಕಾನ್, ನೀನು ಓದುತ್ತಿರುವಂಥ ಕಾಗದಗಳು. ಅವುಗಳ ಮೇಲೆ ಏನೋ ಬರೆದಿದ್ದುದನ್ನು ನೋಡಿ ಅರ್ಥವಾಗದೆ ಆಶ್ಚರ್ಯಪಟ್ಟೆವು....ಆದರೆ ಈಗ ಬುದ್ಧಿವಂತನಾಗಿದ್ದೇನೆ; ಬಹುಶಃ ನೀನೀಗ ಹೇಳಿದಂತೆ ಆ ಕಾಗದಗಳಲ್ಲೂ ಯಾರದೋ ಭಾಷಣವಿತ್ತೆಂದು ಕಾಣುತ್ತೆ...."

ನ್ಯಾಯಸ್ಥಾನದಲ್ಲಿ ದೋಣಿಯ ವಿಷಯ ಪೂರ್ತಿಯಾದಾಗ ಗುಜು ಗುಜು ಶಬ್ದ ಹರಡಿತು. ಜನ ಪಿಸುಮಾತನಾಡಿದರು. ಒಬ್ಬನ ಧ್ವನಿ ಕೇಳಿಬಂತು: "ಅದೇ ಕಳೆದುಹೋದ ೯೧ನೇ ನಂಬರಿನ ಮೆಯಿಲ್ ದೋಣಿ! ಪೀಟರ್ ಜೇಮ್ಸ್ ಮತ್ತು ಡಿಲನೆ ಅದನ್ನು ನಡೆಸುತ್ತಿದ್ದರು. ಆ ಪತ್ರಗಳು ಲೀ ಬಾರ್ಗ್‌ನಲ್ಲಿ ಮ್ಯಾಥೂಸ್ ಮಾಡಿದ ಕೊನೆಯ ಭಾಷಣಗಳು" ಗುಮಾಸ್ತೆ ಆತುರದಿಂದ ಬರೆದುಕೊಂಡನು. ಉತ್ತರದವರ ಚರಿತ್ರೆಗೆ ಮತ್ತೊಂದು ಭಾಗ ಸೇರಿತು.

ಇಂಬರ್ ನಿಧಾನವಾಗಿ ಮುಂದುವರಿಸಿದನು: "ಇನ್ನೂ ಸ್ವಲ್ಪವಿದೆ. ನಾವು ಮಾಡಿದ ಕಾರ್ಯಗಳು ಕಾಗದದ ಮೇಲಾದರೂ ಇರಲಿ. ಮುದುಕ

ರಾದ ನಮಗೆ ಯಾವುದೂ ಅರ್ಥವಾಗುತ್ತಿರಲಿಲ್ಲ. ಈಗಲೂ ನನಗೆ ಏನೂ ತಿಳಿಯದು....ಗುಟ್ಟಾಗಿ ಕೊಲೆಗಳನ್ನು ನಡೆಸುತ್ತಾ ಬಂದೆವು. ಎಷ್ಟೋ ವರ್ಷ ಗಳಿಂದ ಈ ಕೆಲಸಮಾಡಿ ಪಳಗಿದ್ದ ನಾವು ಆತುರವಿಲ್ಲದೆ ಕುಶಲತೆಯಿಂದ ಕೆಲಸ ಸಾಗಿಸಿದೆವು. ಒಂದು ಸಾರಿ ವಕ್ರವಾಗಿ ನೋಡುತ್ತ, ಕೆಟ್ಟ ಮಾತುಗಳ ನ್ನಾಡುತ್ತ ಬಿಳಿ ಮನುಷ್ಯರು ನಮ್ಮ ಆರು ಯುವಕರನ್ನು ಕಬ್ಬಿಣದ ಬೇಡಿ ಹಾಕಿ ಎಳೆದುಕೊಂಡು ಹೋದರು. ಅಂದಿನಿಂದ ನಮ್ಮ ಹತ್ಯಾಕಾಂಡವನ್ನು ಆದಷ್ಟು ವಿಸ್ತರಿಸುತ್ತ ದೂರ ದೂರದ ಪ್ರದೇಶಗಳ ತನಕ ಹೋಗಬೇಕೆಂದು ನಾವೆಲ್ಲ ನಿರ್ಧರಿಸಿದೆವು. ಮುದುಕರು ಒಬ್ಬೊಬ್ಬರಾಗಿ ನದಿಯ ಉತ್ತರಕ್ಕೂ ದಕ್ಷಿಣಕ್ಕೂ ನುಗ್ಗಿದೆವು. ಅದು ನಿಜವಾಗಿಯೂ ಸಾಹಸದ ಕಾರ್ಯ. ಮುದುಕರಾಗಿದ್ದರೂ ಹೆದರಿಕೆಯಿರಲಿಲ್ಲ. ಆದರೆ ಅತಿ ದೂರದ ಪ್ರದೇಶ ವೆಂದರೆ ಮುದುಕರಿಗೆ ಭಯವಿಲ್ಲದೆ ಇರಲಿಲ್ಲ.

"ಅಂತೂ ಆತುರವಿಲ್ಲದೆ ದಕ್ಷತೆಯಿಂದಲೇ ಕೊಂದೆವು. ಚಿಲ್‌ಕೂಟ ನಲ್ಲಿಯೂ, ನದೀ ಮುಖಜ ಭೂಮಿಗಳಲ್ಲೂ, ಸಮುದ್ರ ಮಾರ್ಗಗಳಲ್ಲೂ ಅಲೆ ದಾಡಿದೆವು. ಬಿಳಿಯರು ಎಲ್ಲೆಲ್ಲಿ ಹೊರಟಿದ್ದರೋ ಅಥವಾ ಶಿಬಿರಗಳಲ್ಲಿ ನೆಲೆಸಿದ್ದರೋ ಅಲ್ಲೆಲ್ಲ ನಾವೂ ಹಿಂಬಾಲಿಸಿದೆವು. ಕಂಡೊಡನೇ ತಲೆ ಹಾರಿಸಿದೆವು. ಅವರೇನೋ ಸತ್ತರು. ಆದರೇನು? ಪರ್ವತದಿಂದ ಬಿಳಿ ಮನುಷ್ಯರು ಬರುತ್ತಲೇ ಇದ್ದರು! ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಾ ಬಂದರು. ವೃದ್ಧರಾಗಿದ್ದ ನಾವು ಕಡಿಮೆಯಾಗುತ್ತ ಬಂದೆವು! ಮೂವರು ಮುದುಕರು, ಒಂದು ಶಿಬಿರದಲ್ಲಿ ಮಲಗಿ ನಿದ್ರಿಸುತಿದ್ದ ಸಣ್ಣ ಬಿಳಿ ಮನುಷ್ಯನ ಮೇಲೆ ಬಿದ್ದಿದ್ದರು. ಮರುದಿನ ನಾನು ಅಲ್ಲಿಗೆ ಹೋದಾಗ, ನಾಲ್ಕು ಮಂದಿಯಲ್ಲಿ ಬಿಳಿ ಮನುಷ್ಯನೊಬ್ಬನೇ ಇನ್ನೂ ಉಸಿರಾಡುತಿದ್ದನು. ಕೊನೆಯ ಘಳಿಗೆಯಲ್ಲಿ ನನಗೆ ಶಾಪಹಾಕಿ ಸತ್ತನು. ಅಷ್ಟು ಅವಕಾಶವನ್ನು ದೊರಕಿಸಿಕೊಂಡಿದ್ದನು!

"ಹಾಗೆಯೇ ಒಬ್ಬೊಬ್ಬರಾಗಿ ಮುದುಕರು ಕಣ್ಮರೆಯಾದರು. ಎಷ್ಟೋ ವರ್ಷಗಳ ನಂತರ 'ಅವರು ಹಾಗೆ ಸತ್ತರು, ಹೀಗೆ ಸತ್ತರು' ಎಂಬ ವಿಷಯ ತಿಳಿಯುತಿತ್ತು. ಕೆಲವರ ಸಮಾಚಾರವಂತೂ ನಮ್ಮ ಕಿವಿಗೆ ಮುಟ್ಟಲೇ ಇಲ್ಲ. ಇತರ ಜನಾಂಗದ ಮುದುಕರು ದುರ್ಬಲರೂ ಭೀತರೂ ಆಗಿ ನಮ್ಮೊಡನೆ ಸೇರಲಿಲ್ಲ. ಕಡೆಗೆ ಎಲ್ಲರ ಕಥೆ ಮುಗಿದ ಮೇಲೆ, ನಾನೊಬ್ಬ ಉಳಿದೆ! ವೈಟ್ ಫಿಶ್ ಜನಾಂಗದ ಇಂಬರ್ ಎಂಬುವವನೇ ನಾನು. ನನ್ನ ತಂದೆ ಬಲಶಾಲಿ ಯಾಗಿದ್ದ ಓಟ್ಸ್‌ಬೋಕ್. ಈಗ ವೈಟ್‌ಫಿಶ್ ಎಂದು ಹೇಳಿಕೊಳ್ಳುವವರು

ಒಬ್ಬರೂ ಇಲ್ಲ. ಮುದುಕರಲ್ಲಿ ನಾನು ಕಡೆಯವನು. ಯುವಕ ಯುವತಿಯರು ಜಾಗಬಿಟ್ಟು ಹೊರಟಿದ್ದಾರೆ; ಪೆಲ್ಲಿಯವರೊಡನೆ, ಸಾಮನರೊಡನೆ, ಹೆಚ್ಚಾಗಿ ಬಿಳಿಯರೊಡನೆ ವಾಸಿಸಲು ತೆರಳಿದ್ದಾರೆ. ನನಗೆ ವಯಸ್ಸಾಗಿದೆ; ತುಂಬ ದಣಿದಿದ್ದೇನೆ. ಹೌಕಾನ್, ನೀನು ಹೇಳಿದಂತೆ ನ್ಯಾಯಕ್ಕಾಗಿ ಹೊಡೆದಾಡಲು ವೃಥಾ ಶ್ರಮಪಟ್ಟೆ. ಆದ್ದರಿಂದ ನ್ಯಾಯವನ್ನೇ ಹುಡುಕಲು ಬಂದಿದ್ದೇನೆ........"

"ಓ ಇಂಬರ್, ನೀನು ನಿಜವಾಗಿಯೂ ಮೂರ್ಖ" ಎಂದನು ಹೌಕಾನ್.

ಆದರೆ ಇಂಬರ್ ಕನಸು ಕಾಣುತಿದ್ದನು. ವಿಶಾಲ ನೇತ್ರಗಳುಳ್ಳ ನ್ಯಾಯಾಧೀಶನೂ ಅದೇ ರೀತಿ ಕನಸುಕಂಡನು—ವಿಚಿತ್ರ ದೃಶ್ಯ ಪರಂಪರೆಯಂತೆ ಜನಾಂಗವೊಂದು ತನ್ನೆದುರಿಗೇ ಹಾದುಹೋಯಿತು. ಅಲ್ಲಿ ಉಕ್ಕಿನ ಕವಚದ ಅದ್ಭುತ ವ್ಯಕ್ತಿಗಳು ವೀರಕಾರ್ಯಗಳನ್ನು ಎಸಗುತಿದ್ದರು. ಎಲ್ಲವೂ ನ್ಯಾಯಬದ್ಧವಾಗಿಯೆ ಇತ್ತು. ತಮ್ಮ ತಮ್ಮ ಕೆಲಸಗಳಿಗೆ ಅವರವರೇ ನ್ಯಾಯಾಧೀಶರಾಗಿದ್ದರು. ಹೊಸಪ್ರಪಂಚವನ್ನೇ ಸೃಷ್ಟಿಸುವಂಥ ಹೆಬ್ಬಯಕೆ ಅವರಲ್ಲಿತ್ತು.... ಕತ್ತಲ ಅರಣ್ಯಗಳಲ್ಲಿ, ಭೀಕರ ಸಮುದ್ರದ ಮೇಲೆ ಜನಾಂಗದ ಅರುಣೋದಯವಾದಂತೆ ಕಂಡಿತು. ಜೋರಾಗಿ ರಕ್ತವರ್ಣದಿಂದ ಬೆಳಗುತ್ತಾ ನಡುಹಗಲಾಯಿತು. ಕೆಳಗೆ ದಟ್ಟವಾದ ಮರಗಳ ಮರೆಯಲ್ಲಿ ಅದೇ ರಕ್ತವರ್ಣದ ಸಂಜೆಗತ್ತಲಾಯಿತು. ಇಡೀ ಜನಾಂಗ ಜಾರಿಬೀಳುವುದನ್ನೂ ಕಂಡಂತಾಯಿತು. ಇವುಗಳ ಮೂಲಕವೇ ದಯವಿಲ್ಲದ, ಸ್ಥಿರವಾದ ನ್ಯಾಯವಿಧಿಯನ್ನು ಕಂಡುಕೊಂಡನು. ಏನು ಮಾಡುವುದು? ನ್ಯಾಯಾಧೀಶನ ಹೃದಯ ಕರಗುತ್ತಿದ್ದರೂ, ನ್ಯಾಯವಿಧಿ ಮಾತ್ರ ಅವನಿಂದ ಬೇರೆಯಾಗಿ ಮೇಲೆ ಕುಳಿತಿತ್ತು!

ಬಾಳ ಪ್ರೇಮ

ಜೂಜಿನೊಳು ಕೈಬಿಟ್ಟು ಜಾರಿದರು ಹಣಹೊನ್ನು।
ಮೋಜುಪಟ್ಟುದೆ ಲಾಭ ಇದಕೆ ಸಮವೇ ಹೊನ್ನು॥
ತೊಡರುಗಳ ದಾಟುತ್ತ ಸಾಗಿದರು ಬದುಕಿನೊಳು।
ಬದುಕಿಬಾಳ್ದುದೆ ಲಾಭ ಸಂಕಷ್ಟಜಾಲದೊಳು॥

ಅವರು ನೋವಿನಿಂದ ಕುಂಟುತ್ತ ದಿಬ್ಬದಿಂದ ಇಳಿದರು. ಅವರಲ್ಲಿ

ಒಬ್ಬನು ಪ್ರಮುಖನಂತೆ ಕಾಣುತಿದ್ದನು. ಅವನೇ ಮುಂದೆ ಮುಂದೆ ಸಾಗುತ್ತಿದ್ದವನು; ಚಲ್ಲಾಪಿಲ್ಲಿಯಾಗಿ ಹರಡಿದ್ದ ಬಂಡೆಗಳ ಮಧ್ಯೆ ತೂರಾಡುತದ್ದನು. ಇಬ್ಬರೂ ಬಳಲಿ ದುರ್ಬಲರಾಗಿದ್ದರು. ಎಷ್ಟೋ ಕಾಲದಿಂದ ಕಷ್ಟ ಕೋಟಲೆಗಳಿಗೆ ಸಿಕ್ಕಿರಬೇಕು; ಆದರೂ ಅಷ್ಟರಮಟ್ಟಿನ ಸಹನೆ ಅವರಲ್ಲಿ ಹೇಗೆ ಬಂತೋ ಆಶ್ಚರ್ಯ. ಅಂತೂ ಮುಖದಲ್ಲಿ ಸಹನೆಯ ಚಿಹ್ನೆಗಳು ಎದ್ದು ಕಾಣುತಿದ್ದುವು. ಅತಿ ಭಾರವಾದ ಹಾಸುಗಂಬಳಿಯ ಮೂಟೆಗಳನ್ನು ಭುಜಕ್ಕೆ ಕಟ್ಟಿಕೊಂಡಿದ್ದರು. ಇದನ್ನು ಬಲಪಡಿಸಲು ಹಣೆಯ ಮೇಲೆ ಮತ್ತೊಂದು ಪಟ್ಟಿಯಿತ್ತು. ಇಬ್ಬರೂ ರೈಫಲನ್ನು ಹಿಡಿದಿದ್ದರು.....ನೆಲಮುಟ್ಟುವಂತೆ ಬಗ್ಗಿ ನಡೆದರು. ಭುಜಕ್ಕಿಂತಲೂ ತಲೆ ಮುಂದಾಗಿತ್ತು. ನಡೆವ ಸ್ಥಳವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದರು.

"ನಮ್ಮಲ್ಲಿದ್ದ ಎರಡು ಸಿಡಿಮದ್ದಿನ ತೋಟಾಗಳನ್ನು ಬಚ್ಚಿಡದೆ, ಇಲ್ಲಿ ತಂದಿದ್ದರೆ ಚೆನ್ನಾಗಿತ್ತು...." ಎಂದನು ಆ ಎರಡನೆಯ ಮನುಷ್ಯ.

ಅವನ ಧ್ವನಿಯಲ್ಲಿ ಉತ್ಸಾಹವಿರಲಿಲ್ಲ. ಮಾತುಗಳೂ ಅಸ್ಪಷ್ಟವಾಗಿದ್ದವು.

ಕದಡಿದ ನೀರಿನ ಸಣ್ಣ ಪ್ರವಾಹ ಕಲ್ಲು ಬಂಡೆಗಳ ಮೇಲೆ ನೊರೆ ನೊರೆಯಾಗಿ ಹರಿಯುತಿತ್ತು. ಮೊದಲ ಮನುಷ್ಯ ಅದರ ಮಧ್ಯದಲ್ಲಿ ನಡೆಯುತಿದ್ದನು; ಸ್ನೇಹಿತನ ಪ್ರಶ್ನೆಗೆ ಉತ್ತರಕೊಡುವಷ್ಟು ಕೃಪೆಯೂ ಅವನಿಗಿರಲಿಲ್ಲ.

ಆದರೂ ಆ ಸ್ನೇಹಿತ ಅವನ ಬೆನ್ನಹಿಂದೆಯೇ ಬಂದನು. ನೀರು ಮಂಜುಗಡ್ಡೆಯಷ್ಟು ತಣ್ಣಗಿತ್ತು. ಹಾಗಿದ್ದರೂ ಅವರು ಪಾದರಕ್ಷೆಯನ್ನು ಬಿಚ್ಚಲಿಲ್ಲ. ಕಾಲಿನಲ್ಲಿ ಸೆಳೆತ ಆರಂಭವಾಯಿತು; ಪಾದಗಳು ಹಿಮದಿಂದ ತೋಡಿಹೋದುವು. ಕೆಲವು ಜಾಗದಲ್ಲಂತೂ ಪ್ರವಾಹವು ಮೊಣಕಾಲ ತನಕ ಹೊಡೆದು, ಹಜ್ಜೆಯಿಡುವುದಕ್ಕೆ ಅಡ್ಡಿಮಾಡುತಿತ್ತು.

ಹಿಂಬಾಲಿಸುತಿದ್ದ ಮನುಷ್ಯನಿಗೆ ಕಾಲು ಜಾರಿತು; ಅದೂ ಎಲ್ಲಿ? ನೀರಿನ ಹೊಡೆತದಿಂದ ಸವೆದ ಕಲ್ಲುಗುಂಡಿನ ಮೇಲೆ. ಆದರೇನಂತೆ? ಅಷ್ಟರಲ್ಲೇ ಬಹು ಪ್ರಯತ್ನಮಾಡಿ ಹಿಂದಿನ ಸ್ಥಿತಿಗೆ ಬಂದನು. ಇನ್ನೇನು ಬೀಳಲಿದ್ದ ಮನುಷ್ಯ ಎದ್ದು ನಿಂತನು. ಆತನ ಕೂಗಾಟದಿಂದ ತೀವ್ರ ನೋವು ವ್ಯಕ್ತವಾಗಿತ್ತು. ತಲೆತಿರುಗಿ ಮೂರ್ಛೆಹೋಗುವಂತಿದ್ದರೂ ಗಾಳಿಗೆ ಇದಿರಾಗಿ ಏನನ್ನೋ ಹಿಡಿಯುವುದಕ್ಕೆಂದು ಕೈಚಾಚಿದನು. ಸರಿಯಾಗಿ ನಿಂತಮೇಲೆ ಮತ್ತೆ ಮುಂದಡಿಯಿಟ್ಟನು. ಆದರೆ ಪುನಃ ತಲೆಸುತ್ತಿ ಬೀಳುವಂತಾಯಿತು. ಸುಮಾರು ಒಂದು ನಿಮಿಷದ ಕಾಲ ತನ್ನಲ್ಲಿ ತಾನೇ ಚರ್ಚೆಮಾಡುವವನಂತೆ ಚಲಿಸದೆ ನಿಂತನು. ಮತ್ತೆ ಸ್ನೇಹಿತನ ಕಡೆ ನೋಡಿ ಕೂಗಿದನು: "ಏ ಬಿಲ್,

ಇಲ್ಲಿ ನೋಡಯ್ಯ. ನನ್ನ ಕಾಲು ಉಳುಕಿಹೋಗಿದೆ...."

ಬಿಲ್ ನೀರ ಮಧ್ಯೆ ಹಾಗೂ ಹೀಗೂ ಮುಗ್ಗರಿಸುವವನಂತೆ ನಡೆಯುತ್ತಲೇ ಇದ್ದನು. ಅವನ ದೃಷ್ಟಿ ಒಂದೇ ಕಡೆಯಿತ್ತು. ಅವನು ತನ್ನ ಕಡೆ ನೋಡದೆ ಮುಂದುವರಿಯುತಿದ್ದಾನೆ—ಎಂದು ಕಾಯುತಿದ್ದ ನಮ್ಮ ಮನುಷ್ಯನಿಗೆ ತಿಳಿಯಿತು. ಮುಖ ಯಥಾಪ್ರಕಾರ ಅವ್ಯಕ್ತವಾಗಿಯೆ ಇತ್ತು. ಆದರೆ ಅವನ ಕಣ್ಣುಗಳು ಗಾಯಗೊಂಡ ಜಿಂಕೆಯ ಕಣ್ಣುಗಳಂತೆ ಇದ್ದವು.

ಬಿಲ್ ಆಚೆ ದಡವನ್ನು ಸೇರಿ ಹಿಂದಕ್ಕೆ ನೋಡದೆ ಮುಂದುವರಿದನು. ಪ್ರವಾಹದಲ್ಲಿ ನಿಂತಿದ್ದ ಮನುಷ್ಯ ಕಾಯುತ್ತಲೇ ಇದ್ದನು. ತುಟಿ ಸ್ವಲ್ಪ ಅದುರಿತು; ಬಾಯನ್ನು ಮುಚ್ಚಿದ್ದ, ಒರಟಾಗಿಯೂ ಸೊಂಪಾಗಿಯೂ ಬೆಳೆದಿದ್ದ ಕಂದು ಬಣ್ಣದ ಗಡ್ಡ ಮೀಸೆಯೂ ಅಲುಗಾಡಿತು. ಥಟ್ಟನೆ ಅವುಗಳೆಡೆಯಿಂದ ನಾಲಿಗೆಯನ್ನು ಹೊರಚಾಚಿ—

"ಬಿಲ್!" ಎಂದು ಗಟ್ಟಿಯಾಗಿ ಕೂಗಿಕೊಂಡನು.

ಸಂಕಟಕ್ಕೀಡಾದ ಬಲಶಾಲಿಯೊಬ್ಬನ ಆರ್ತನಾದವದು. ಆದರೆ ಬಿಲ್‌ನ ತಲೆ ಅತ್ತ ತಿರುಗಲಿಲ್ಲ. ಆತ ಕುಂಟುತ್ತಾ ಅತ್ತಿತ್ತ ವಾಲುತ್ತಾ ಇಳಿಜಾರನ್ನು ಹತ್ತುತಿದ್ದನು. ಕೆಳಬೆಟ್ಟದ ರೂಪ ಆಕಾಶದ ಹಿನ್ನೆಲೆಯಲ್ಲಿ ಎದ್ದುಕಾಣುತಿತ್ತು. ಬಿಲ್ ಅದರ ತುದಿಯನ್ನೇರಿ ಅದೃಶ್ಯನಾದನು. ಇದನ್ನೆಲ್ಲ ನೋಡುತ್ತ ನಿಂತಲ್ಲೇ ನಿಂತಿದ್ದವನ ಮನಸ್ಸು ಹೇಗಿರಬೇಕು? ಇನ್ನು ಬಿಲ್ ನನ್ನು ಕಾಣುವಂತಿಲ್ಲವೆಂದು ತಿಳಿದು ತನ್ನ ಭಾಗಕ್ಕೆ ಉಳಿದ ಸುತ್ತಲಿನ ಪ್ರಪಂಚವನ್ನು ನಿಧಾನವಾಗಿ ನಿಟ್ಟಿಸಿದನು.

ದಿಗಂತದಲ್ಲಿ ಸೂರ್ಯನಿದ್ದಾನೋ ಇಲ್ಲವೋ! ಏಕೆಂದರೆ ಅವನ ಕಾಂತಿ ಒಳಗೊಳಗೇ ಅಡಗಿಕೊಂಡು ಮರೆಯಾಗುತಿತ್ತು. ಕಾರಣ, ಸುತ್ತಲಿನ ವಾತಾವರಣ ಮಂಜಿನ ಕಣಗಳಿಂದ ತುಂಬಿಹೋಗಿತ್ತು. ಇಬ್ಬನಿಯು ಹೊಗೆಯಂತೆ ಆಕಾರವಿಲ್ಲದೆ ಸುಳಿದಾಡುತಿತ್ತು. ಅದು ನಿಬಿಡವಾಗಿ ದ್ರವ್ಯದ ಪರಿಮಾಣ ಎದ್ದುಕಾಣುತಿದ್ದರೂ, ಸ್ಪಷ್ಟವಾದ ಎಲ್ಲೆಯನ್ನು ಕಂಡು ಹಿಡಿಯಲು ಸಾಧ್ಯವಿರಲಿಲ್ಲ. ನಾಯಕನು ಒಂದೇ ಕಾಲಿನ ಮೇಲೆ ನಿಂತು, ಗಡಿಯಾರವನ್ನು ಹೊರತೆಗೆದು ನೋಡಿಕೊಂಡನು. ನಾಲ್ಕು ಘಂಟೆಯಾಗಿತ್ತು. ಏನೋ ಯೋಚಿಸಿದನು. ಹೌದು; ಈಗ ಜುಲೈ ಕೊನೆ ಅಥವಾ ಆಗಸ್ಟ್ ಮೊದಲ ದಿನ ಇರಬಹುದು; (ಅವನಿಗೆ ವಾರಗಳ ಲೆಕ್ಕ ಗೊತ್ತೇ ಹೊರತು, ಸ್ಪಷ್ಟ ತಾರೀಖನ್ನು ಹೇಳಲಾರ); ಈ ಹೊತ್ತಿಗೆ ಸಾಧಾರಣವಾಗಿ

ಸೂರ್ಯನು ವಾಯವ್ಯ ದಿಕ್ಕಿನ ಕಡೆ ಪ್ರಯಾಣ ಮಾಡುತ್ತಿರಬೇಕು.— ಎಂದು ಎಣಿಕೆಹಾಕಿ ದಕ್ಷಿಣದ ಕಡೆ ನೋಡಿದನು. ಗಾಳಿ, ಬಿಸಿಲು, ಮಳೆ ಇವುಗಳನ್ನು ಲೆಕ್ಕಿಸದ ಬೋಳು ಬೆಟ್ಟಗಳು ಅಲ್ಲಿವೆ. ಅವುಗಳಾಚೆ ದೊಡ್ಡ ದಾದ ಬೇರ್ ಸರೋವರವಿದೆ. ಅದೇ ಮಾರ್ಗದಲ್ಲಿ ಉತ್ತರಧ್ರುವ ವೃತ್ತ, ಕೆನೆಡಿಯನ್ ಬ್ಯಾರೆನ್ಸ್ ಮಧ್ಯೆ ಕಷ್ಟಪಟ್ಟು ಸಾಗುತ್ತದೆ. ತಾನು ನಿಂತಿರುವ ಪ್ರವಾಹದ ನೀರು ಕಾಪರ್‌ಮೈನ್ ನದಿಗೆ ಪೂರಕವಾದುದು. ಕಾಪರ್‌ಮೈನ್ ನದಿ ಉತ್ತರಕ್ಕೆ ಹರಿಯುತ್ತಾ ಕಾರೋನೇಷನ್ ಕೊಲ್ಲಿಯನ್ನು ಸೇರುತ್ತದೆ. ಅಲ್ಲಿಂದ ಅಂತ್ಯವಿಲ್ಲದ ಉತ್ತರ ಸಾಗರದಲ್ಲಿ. ತಾನು ಅಲ್ಲಿಯ ತನಕ ಎಂದೂ ಹೋದವನಲ್ಲ. ಆದರೂ ಹಡ್ಸನ್ ಬೇ ಕಂಪನಿಯ ಸಮುದ್ರಪಟದಲ್ಲಿ ಆ ಸ್ಥಳಗಳನ್ನು ಒಮ್ಮೆ ನೋಡಿದ್ದುಂಟು;

ಮತ್ತೆ ಅವನ ದೃಷ್ಟಿ ಸುತ್ತಲಿನ ಪ್ರಪಂಚದ ಕಡೆ ಹರಿಯಿತು. ಮನಸ್ಸಿಗೆ ಹಿತವಾದ ದೃಶ್ಯ ಯಾವುದೂ ಇಲ್ಲ. ಎಲ್ಲೆಲ್ಲಿ ನೋಡಿದರೂ ಆಗಸದ ರೂಪರೇಖೆಗಳು ಶೂನ್ಯತೆಯನ್ನು ಸಾರುತಿದ್ದವು. ಬೆಟ್ಟಗಳು ಕೂಡ ತಗ್ಗಿನಲ್ಲಿದ್ದವು. ಮರ ಗಿಡಗಂಟೆಗಳ ಹೆಸರೇ ಇಲ್ಲ. ಉಳಿದಿರುವುದು ಒಂದೇ: ಬೃಹದಾಕಾರವಾಗಿ ಹರಡುತ್ತಿರುವ ಭಯಂಕರ ಶೂನ್ಯತೆ. ನಾಯಕನ ಕಣ್ಣು ಥಟ್ಟನೆ ಭೀತಿಗೊಂಡು ನಡುಗಿತು.

"ಬಿಲ್, ಬಿಲ್!" ಎಂದು ಎರಡು ಮೂರು ಬಾರಿ ಪಿಸುಗುಟ್ಟಿದನು. ಕೊಂಚ ನೀರಿನಲ್ಲೇ ಬಗ್ಗಿ ಅಡಗಿಕೊಳ್ಳಲು ಪ್ರಯತ್ನಿಸಿದನು. ಮೇಲಿನಿಂದ ಬಲಪ್ರಯೋಗ ನಿರಾತಂಕವಾಗಿ ನಡೆದು, ತನ್ನನ್ನು ಅರೆಯುತ್ತಿರುವಂತೆ ಭಾಸವಾಯಿತು; ಆ ಪಶುಶಕ್ತಿಯನ್ನು ತಡೆಯಲು ಅಸಾಧ್ಯವಾಯಿತು. ಚಳಿ ಜ್ವರದಿಂದ ನಡುಗಲಾರಂಭಿಸಿದನು. ಕಡೆಗೆ ಕೈಯಲ್ಲಿದ್ದ ರೈಫಲ್ ಕೆಳಕ್ಕೆ ಬಿತ್ತು. ಥಂಗನೆ ನೀರು ಎರಚಿದಾಗ ನಾಯಕನಿಗೆ ಎಚ್ಚರವಾಯಿತು. ಭಯವನ್ನು ಹೊಡೆದಟ್ಟಲು ಶರೀರದ ಎಲ್ಲ ಭಾಗಗಳಿಗೂ ಚೇತನ ತುಂಬಿಸಿದನು. ನೀರಿನಲ್ಲಿ ತಡಕಾಡಿ ಆಯುಧವನ್ನು ಮತ್ತೆ ಪಡೆದನು. ಒಂದು ಕಡೆಯೇ ಭಾರವಾಗಿದ್ದ ಮೂಟೆಯನ್ನು ಎಡ ಭುಜಕ್ಕೆ ಸರಿಸಿ ಮೇಲೆತ್ತಿ ಕಟ್ಟಿಕೊಂಡನು. ಆಗಾಗ ನರಳಾಟದಿಂದ ಬೆಚ್ಚಿಬಿದ್ದವನಂತೆ ನಿಧಾನವಾಗಿಯೂ ಜಾಗರೂಕನಾಗಿಯೂ ದಂಡೆಯ ಹತ್ತಿರ ಬಂದನು.

ಹುಚ್ಚನ ಹಾಗೆ ನಿರಾಶೆಯಿಂದ ಏನನ್ನೂ ಲಕ್ಷ್ಯಮಾಡದೆ ನಡೆಯುತಿದ್ದನು. ತನ್ನ ಸ್ನೇಹಿತನು ಹತ್ತಿ ಮಾಯವಾದ, ಬೆಟ್ಟದ ಶಿಖರ ಕಾಣುತಿತ್ತು.

ಅಲ್ಲಿಗೆ ಹೋಗಲು ಕಡಿದಾದ ಇಳಿಜಾರನ್ನು ವಿರುದ್ಧಗತಿಯಿಂದ ಹತ್ತ ಬೇಕು. ನಾಯಕನು ಮನಸ್ಸುಮಾಡಿದನು. ಸ್ನೇಹಿತನ ರೀತಿಗಿಂತ ವಕ್ರವಾಗಿಯೂ ಹಾಸ್ಯಾಸ್ಪದವಾಗಿಯೂ ಹೊರಳಿ ಹೊರಳಿ ಮೇಲೇರಿದನು. ಶಿಖರವನ್ನು ಸೇರಿಯಾಯಿತು. ಕೆಳಗೆ ನೋಡುತ್ತಾನೆ! ಜೀವದ ಉಸಿರೇ ಇಲ್ಲದ ಕಣಿವೆ! ಹೆಚ್ಚಿನ ಆಳವೂ ಇಲ್ಲ.....ಮತ್ತೆ ಮನಸ್ಸಿನ ಅಳುಕಿನೊಡನೆ ಹೋರಾಡಿ ಭಯವನ್ನು ಹೋಗಲಾಡಿಸಿಕೊಂಡನು. ಎಡಭುಜದ ಮೂಟೆಯನ್ನು ಇನ್ನಷ್ಟು ಮೇಲಕ್ಕೇರಿಸಿ ಬಿಗಿದನು. ಕೆಳಗೆ ಬೀಳಲು ಆಸ್ಪದಕೊಡದೆ ಇಳಿಯಲಾರಂಭಿಸಿದನು.

ಕಣಿವೆಯ ತಳಭಾಗ ನೀರಿನಿಂದ ತುಂಬ ನೆನೆದು ಜೌಗುಪ್ರದೇಶವಾಗಿತ್ತು. ಪಾಚಿಯು ದಟ್ಟವಾಗಿ ಬೆಳೆದಿತ್ತು. ಸ್ಪಂಜಿನಂತೆ ಕಾಲನ್ನು ಸೆಳೆಯುತಿತ್ತು. ಪ್ರತಿ ಹೆಜ್ಜೆಗೂ ನೀರು ಚುರುಕಿಬಿಟ್ಟಂತೆ ಹೊರಹೊಮ್ಮುತಿತ್ತು. ಕಾಲಿಟ್ಟು ತೆಗೆದಾಗ ಪಾಚಿಯೊಳಗಿನ ನೀರು ಸಡಿಲಗೊಂಡು 'ಚಪ್', 'ಚಪ್' ಎಂದು ಇಷ್ಟವಿಲ್ಲದೆ ಶಬ್ದಮಾಡುತಿತ್ತು; ಕಾಲ ಮೇಲೆ ಅಷ್ಟು ಪ್ರೇಮ! ನೀರೊಳಗಿನ ಬಂಡೆಯ ಉಬ್ಬುಸಾಲುಗಳು ಪಾಚಿಯ ಸಮುದ್ರದಲ್ಲಿ ಸಣ್ಣ ದ್ವೀಪಗಳಂತಿದ್ದವು. ಅದರ ಮೇಲೆಲ್ಲಾ ಬಿಲ್ ಮಹಾಶಯನ ಗುರುತುಗಳಿದ್ದವು. ನಾಯಕನು ಅವುಗಳನ್ನೆ ಹಿಂಬಾಲಿಸಿ ಹೊರಟನು.

ಒಬ್ಬಂಟಿಗನಾದರೂ ದಾರಿತಪ್ಪಲಿಲ್ಲ. ಮುಂದೆ ಮುಂದೆ ಹೋದಂತೆ ಯಾವ ಸ್ಥಳ ಸಿಗಬಹುದೆಂದು ಅವನಿಗೆ ಗೊತ್ತಿತ್ತು—'ಕಡ್ಡಿಪುಳ್ಳೆಗಳ ನಾಡು'; ಅಲ್ಲವೇ? ಅದರ ಎಲ್ಲೆಯಲ್ಲಿ ಸಣ್ಣ ಸರೋವರವಿದೆ; ತೀರದ ಸುತ್ತಲೂ ಬಾಡಿಹೋಗುತ್ತಿರುವ ಸಣ್ಣ, ಸಣ್ಣ ಸ್ಪ್ರೂಸ್ ಮತ್ತು ಫರ್ ಮರಗಳಿವೆ. ಆ ಸರೋವರಕ್ಕೆ ಸೇರುವ ಒಂದು ಸಣ್ಣ ತೊರೆಯ ನೀರು ಕೆಸರಿಲ್ಲದೆ ಸ್ವಚ್ಛವಾಗಿದೆ. ತನಗೆ ಚೆನ್ನಾಗಿ ಜ್ಞಾಪಕವಿದೆ; ಆ ತೊರೆಯ ಪಾತ್ರದಲ್ಲಿ ಹುಲ್ಲು ಜೊಂಡುಗಳು ಸೊಂಪಾಗಿ ಬೆಳೆದಿವೆ. ಆದರೆ ಅಲ್ಲಿ ಯಾವ ಮರಗಳೂ ಇಲ್ಲ. ಅದನ್ನೇ ಹಿಂಬಾಲಿಸಿ ಹೊರಟರೆ ಜಲವಿಭಾಗದ ಸ್ಥಾನ ಸಿಕ್ಕುತ್ತದೆ. ಆ ದಿಕ್ಕನ್ನೇ ಅನುಸರಿಸಿದರೆ ಮತ್ತೊಂದು ತೊರೆಯ ದರ್ಶನ. ಅದು ಪಶ್ಚಿಮಕ್ಕೆ ಹರಿಯುತ್ತದೆ. ಡೀಸ್ ನದಿಯಲ್ಲಿ ವಿಲೀನವಾಗುತ್ತದೆ. ಅಲ್ಲಿಯತನಕ ತಾನು ಎಡೆಬಿಡದೆ ಹಿಂಬಾಲಿಸಲೇಬೇಕು. ಏಕೆಂದರೆ ಅಲ್ಲೇ ಕಲ್ಲುರಾಶಿ; ಅದಕ್ಕೆ ಸಿಲುಕಿ ಬೋರಲಾದ ಸಣ್ಣ ದೋಣಿ; ಅದರ ಒಳಗಡೆ ಗುಪ್ತ ಕಣಜ! ತನ್ನ ಬಂದೂಕಕ್ಕೆ ಬೇಕಾಗುವ ಮದ್ದು ಗುಂಡುಗಳು ಇರುವುದೂ ಅಲ್ಲೇ. ಅಷ್ಟೇ

ಅಲ್ಲ; ಮೀನು ಹಿಡಿಯುವ ಕೊಕ್ಕೆ, ಗಾಳದ ಹುರಿ, ಸಣ್ಣ ಬಲೆ, ಇತ್ಯಾದಿ. ಒಟ್ಟಿನಲ್ಲಿ ಬೇಟೆಗೆ ಬೇಕಾದ ಎಲ್ಲ ಸಲಕರಣೆಗಳೂ ಆ ಗುಪ್ತಸ್ಥಳದಲ್ಲಿ ಅಡಗಿವೆ. ಜೊತೆಗೆ ಸ್ವಲ್ಪ ಹಿಟ್ಟೋ ಚೂರು ಹಂದಿಮಾಂಸವೂ ತುಸು ಕಾಳುಗಳೂ ಇರ ಬಹುದು.

ಬಿಲ್ ತನಗಾಗಿ ಅಲ್ಲಿ ಕಾದಿರಬಹುದು. ಅವನ ಭೇಟಿಯಾದರೆ ಸಾಕು; ಮುಂದಿನ ಕಾರ್ಯಕ್ರಮ ಮಿಂಚಿನಂತೆ ನಡೆದು ಹೋಗುತ್ತದೆ—ತಾವಿಬ್ಬರೂ ಡೀಸ್ ನದಿಯ ಮೇಲೆ ಹುಟ್ಟುಹಾಕುತ್ತ ದಕ್ಷಿಣಾಭಿಮುಖವಾಗಿ ಹೊರಟು ಬೇರ್ ಸರೋವರವನ್ನು ಸೇರುತ್ತೇವೆ. ಅದೇ ದಿಕ್ಕಿನಲ್ಲಿ ಇನ್ನೂ ಮುಂದೆ ಪ್ರಯಾಣಮಾಡಿದರೆ ಮೆಕನ್‌ಸಿ ಸಿಗುತ್ತದೆ. ಚಳಿಗಾಲದ ಹೊಡೆತ ಜೋರಾ ಗಿರುವುದರಿಂದ ಅಲ್ಲೇ ನಿಲ್ಲಲು ಸಾಧ್ಯವಿಲ್ಲ. ಅದರೆ ನಾವು ಚಳಿಗಾಲಕ್ಕೇ ಬುದ್ಧಿ ಕಲಿಸುವಂತೆ ಮುಂದೆ ಮುಂದೆ ಪ್ರಯಾಣಮಾಡುತ್ತೇವೆ. ಸಣ್ಣ ಸಣ್ಣ ನೀರಸುಳಿಗಳು ಮಂಜುಗಡ್ಡೆಗಳಾಗಿ ಮಾರ್ಪಟ್ಟರೂ ನಮಗೆ ಹೆದರಿಕೆಯಿಲ್ಲ. ಕಡೆಗೆ ಯಾವುದಾದರೂ ಹಡ್ಸನ್ ಬೇ ಕಂಪೆನಿಯ ಬೆಚ್ಚಗಿನ ಪಾಳೆಯ ಸಿಕ್ಕೇ ಸಿಗುತ್ತದೆ. ಆ ಮೇಲೆ ನಮ್ಮನ್ನು ಹಿಡಿಯುವವರಾರು? ಏಕೆಂದರೆ ಅಲ್ಲಿ ಮರ ಗಳು ಸೊರಗಿಹೋಗದೆ ಉದ್ದವಾಗಿ ಬೆಳೆಯುತ್ತವೆ. ಫಲಯುಕ್ತವಾಗಿಯೂ ಇವೆ. ಏನಿಲ್ಲದಿದ್ದರೂ ಕೊನೆಮೊದಲಿಲ್ಲದ ಹುಚ್ಚು ಪೈರುಗಳಿಗಂತೂ ಮೋಸ ವಿಲ್ಲ.

ನಾಯಕನು ಕಷ್ಟಪಟ್ಟು ಹೆಜ್ಜೆಹಾಕುತಿದ್ದರೂ, ಅವನ ತಲೆಯಲ್ಲಿ ಇಂಥ ಭಾವನೆಗಳು ಸುಳಿದವು. ಬಿಲ್ ತನ್ನ ಕೈಬಿಟ್ಟಿಲ್ಲವೆಂಬ ಭಾವನೆಯನ್ನು ದೃಢ ಪಡಿಸಿಕೊಳ್ಳಲು ನಾಯಕನು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಆದ್ದರಿಂದಲೇ ಬಿಲ್ ಸ್ನೇಹಿತನಿಗಾಗಿ ಆ ಗುಪ್ತ ಸ್ಥಳದಲ್ಲಿ ಕಾದಿರುತ್ತಾನೆ; ಅಲ್ಲವೇ? ಆ ನಿರ್ಧಾರ ವಿಲ್ಲದಿದ್ದರೆ ನಾಯಕನ ನರಳಾಟವೆಲ್ಲ ವ್ಯರ್ಥವೇ ಸರಿ; ತಾನು ಎಂದೋ ಕೆಳಗೆ ಬಿದ್ದು ನತ್ತು ಹೋಗಬಹುದಿತ್ತು. ಅಂತೂ ಬಲವಂತವಾಗಿಯಾದರೂ ಒಂದೇ ನಿಶ್ಚಯಕ್ಕೆ ಅಂಟುಕೊಳ್ಳಬೇಕಾಗಿದೆ ...

ಮಂಕು ಕವಿದ ಸೂರ್ಯ ಬಿಂಬವು ವಾಯುವ್ಯ ದಿಕ್ಕಿನಲ್ಲಿ ನಿಧಾನವಾಗಿ ಇಳಿಯುತಿತ್ತು. ನಾಯಕನು ಅಂಗುಲವನ್ನು ಲೆಕ್ಕ ಹಾಕಿ ದಾರಿ ನಡೆಯುತಿ ದ್ದನು. ಮತ್ತೆ ಮತ್ತೆ ಅವನ ಮನಸ್ಸಿಗೆ ಗುಪ್ತ ಸ್ಥಳದ ಸಲಕರಣೆಗಳೂ ಮತ್ತು ಹಡ್ಸನ್ ಬೇ ಕಂಪೆನಿಯ ಪಾಳೆಯದಲ್ಲಿ ಇರಬಹುದಾದ ಸಸ್ಯಸಮೂಹವೂ ಆಸೆತೋರಿಸುವಂತಿತ್ತು.

ಎರಡು ದಿನಗಳಿಂದಲೂ ಅವನು ಏನನ್ನೂ ತಿಂದಿರಲಿಲ್ಲ. ತಾನು ಇಷ್ಟ ಪಡುವ ಆಹಾರವಂತೂ ಈಚೆಗೆ ಸಿಕ್ಕೇಇರಲಿಲ್ಲ. ಎಷ್ಟೋ ವೇಳೆ ಥಟ್ಟನೆ ಬಗ್ಗಿ ಮಸ್ಕೆಗ್ ಕಾಯಿಗಳನ್ನು ಬಾಯಿಗೆ ಹಾಕಿಕೊಳ್ಳುತಿದ್ದನು; ಚೆನ್ನಾಗಿ ಜಗಿದು ನುಂಗುತಿದ್ದನು. ಮಸ್ಕೆಗ್ ವಿಚಿತ್ರ ರೀತಿಯ ಕಾಯಿ. ಓಟೆಯಿಲ್ಲ, ಸಣ್ಣ ಬೀಜಗಳೂ ಸ್ವಲ್ಪ ರಸವೂ ಅಡಕವಾಗಿರುತ್ತವೆ. ಬಾಯಿಗೆ ಹಾಕಿಕೊಂಡರೆ ನೀರಿನಭಾಗ ಕರಗಿ, ಬೀಜ ಮಾತ್ರ ಉಳಿಯುತದೆ. ಆ ಬೀಜವಾದರೋ ಕಹಿಯಾಗಿರುವುದರ ಜೊತೆಗೆ ಚುಚ್ಚುವುದೂ ಉಂಟು. ಅದರಲ್ಲಿ ಆರೋಗ್ಯಕ್ಕೆ ಬೇಕಾದ ಯಾವ ಅಂಶವೂ ಇಲ್ಲವೆಂಬುದು ನಾಯಕನಿಗೆ ಗೊತ್ತು. ಅಷ್ಟಾದರೂ ಅವನ್ನೇ ತಾಳ್ಮೆಯಿಂದ ಅಗಿಯುತಿದ್ದನು; ಸಾಮಾನ್ಯ ಪ್ರತಿಕ್ರಿಯೆಯ ಜ್ಞಾನಾನುಭವಗಳನ್ನು ಮೀರಿಸಿದ್ದ ಯಾವುದೋ ಭರವಸೆ ಅವನನ್ನು ಆ ರೀತಿ ಪ್ರೇರೇಪಿಸಿರಬೇಕು.

ಒಂಬತ್ತು ಗಂಟೆಯ ಸಮಯ. ನಾಯಕನ ಕಾಲಬೆರಳು ಬಂಡೆಯ ತುದಿಗೆ ಜೋರಾಗಿ ಎಡವಿತು. ಮೊದಲೇ ಸುಸ್ತಾಗಿದ್ದವನು ಮತ್ತಷ್ಟು ದುರ್ಬಲನಾಗಿ, ತತ್ತರಿಸಿ ಕೆಳಕ್ಕೆ ಬಿದ್ದನು. ಸ್ವಲ್ಪ ಕಾಲ ಹಾಗೆಯೆ ಚಲನೆಯಿಲ್ಲದೆ ಒಂದೇ ಪಕ್ಕಕ್ಕೆ ಮಲಗಿದ್ದನು. ಆಮೇಲೆ, ಮೈಮೇಲೆಲ್ಲಾ ಕಟ್ಟಿಕೊಂಡಿದ್ದ ಭಾರಹೊರುವ ಪಟ್ಟಿಗಳನ್ನು ಬಿಚ್ಚಿಕೊಂಡನು. ಒರಟಾಗಿದ್ದ ತನ್ನ ದೇಹವನ್ನು ಬಹು ಪ್ರಯಾಸದಿಂದ ಎಳೆದು ಕುಳಿತುಕೊಂಡನು. ಆಗ ಇನ್ನೂ ಕತ್ತಲಾಗಿರಲಿಲ್ಲ. ನಕ್ಷತ್ರಗಳ ನಸುಬೆಳಕಿನಲ್ಲಿ ಆತನು ಕಲ್ಲುಗಳ ಮಧ್ಯೆ ತಡಕಾಡಿ ಒಣಪಾಚಿಯ ತುಂಡುಗಳನ್ನು ಶೇಖರಿಸಿದನು. ಅದನ್ನೇ ಒಂದು ರಾಶಿಯಷ್ಟು ಮಾಡಿ ಬೆಂಕಿಹಚ್ಚಿದನು. ತುಂಡುಗಳು ಹೊಗೆಯಿಂದ ಆವೃತವಾಗಿ ಒಳಗೊಳಗೆ ಉರಿದವು. ಅದರ ಮೇಲೆ ಕಾಯಿಸಲು ನೀರು ತುಂಬಿದ ಟಿನ್ನಿನ ಕುಡಿಕೆಯನ್ನಿಟ್ಟನು.

ಪೆಟ್ಟಿಗೆಯನ್ನು ಬಿಚ್ಚಿ ಮೊದಲು ಬೆಂಕಿಯ ಕಡ್ಡಿಗಳನ್ನು ಎಣಿಸಿದನು. ಅರವತ್ತೇಳು ಕಡ್ಡಿಗಳಿದ್ದವು. ಸಂಖ್ಯೆಯನ್ನು ನಿಶ್ಚಯ ಮಾಡಿಕೊಳ್ಳಲು ಮೂರು ಬಾರಿ ಎಣಿಸಿದನು. ಅದನ್ನು ವಿಭಾಗಮಾಡಿ ಎಣ್ಣೆಕಾಗದದಲ್ಲಿ ಸುತ್ತಿದನು. ಒಂದನ್ನು ಬರಿದಾಗಿದ್ದ ತನ್ನ ಹೊಗೆಸೊಪ್ಪಿನ ಚೀಲಕ್ಕೆ ಹಾಕಿದನು. ಎರಡನೆಯ ಭಾಗವನ್ನು ಜಜ್ಜಿಹೋಗಿದ್ದ ಟೋಪಿಯ ಒಳಪಟ್ಟಿಗೆ ಸೇರಿಸಿದನು. ಮತ್ತೊಂದನ್ನು ತನ್ನ ಎದೆಗೆ ಅಂಟಿಕೊಂಡಂತಿದ್ದ ಅಂಗಿಯ ಸಂದಿಯಲ್ಲಿ ಗಂಟು ಹಾಕಿದನು. ಇಷ್ಟಾದ ಮೇಲೆ ಪುನಃ ಗಾಬರಿಗೊಂಡು ಎಲ್ಲವನ್ನೂ ಹೊರ

ತೆಗೆದನು. ಮತ್ತೊಮ್ಮೆ ಎಣಿಸಿದನು. ಆಗಲೂ ಹೆಚ್ಚು ಕಡಿಮೆಯಿಲ್ಲದೆ ಅರುವತ್ತೇಳು ಕಡ್ಡಿಗಳೇ ಇದ್ದವು.

ಕೊಯ್ದುಹೋಗಿದ್ದ ಪಾದರಕ್ಷೆಯನ್ನು ಉರಿಯ ಹತ್ತಿರ ಹಿಡಿದು ಒಣಗಿಸಿದನು. ದಪ್ಪನೆಯ ಕಾಲುಚೀಲ ಅನೇಕ ಭಾಗಗಳಲ್ಲಿ ಹರಿದು ಹೋಗಿತ್ತು; ಪಾದಗಳಲ್ಲಿ ಹಸಿಗಾಯಗಳಾಗಿ ರಕ್ತಸ್ರಾವ ಆಗುತಿತ್ತು. ಕಾಲಿನ ಹರಡು ಮೊಣಕಾಲ ಗೆಣ್ಣಿನಷ್ಟು ಉಬ್ಬಿತ್ತು! ತನ್ನಲ್ಲಿದ್ದ ದಪ್ಪ ಬಟ್ಟೆಗಳನ್ನೇ ಹರಿದು ಸುತ್ತಲೂ ಬಿಗಿಯಾಗಿ ಕಟ್ಟಿದನು. ಯಾಂತ್ರಿಕವಾಗಿ ಒಂದಾದ ಮೇಲೊಂದು ರಕ್ಷಣಾಕಾರ್ಯಗಳು ನಡೆದವು.

ಆಮೇಲೆ ಕುದಿಯುತ್ತಿದ್ದ ನೀರನ್ನು ಬಾಯಿಗೆ ಸುರಿದುಕೊಂಡನು. ಗಡಿಯಾರಕ್ಕೆ ಕೀಲುಕೊಟ್ಟನು. ಹಾಸುಗಂಬಳಿಗಳ ಮಧ್ಯೆ ತೆವಳಿದನು. ಸತ್ತವನಂತೆ ನಿದ್ರಿಸಿದನು. ಮಧ್ಯರಾತ್ರಿಯ ಕಗ್ಗತ್ತಲು ಯಾವಾಗಲೋ ಬಂದುಹೋಯಿತು. ಮೋಡ ಕವಿದಿದ್ದರೂ ಸೂರ್ಯನು ಈಶಾನ್ಯದಲ್ಲಿ ಕಾಣಿಸಿಕೊಂಡನು. ಅಂತೂ ಆ ಭಾಗದಲ್ಲಿ ಬೆಳಗಾಯಿತು!

ಬೆಳಿಗ್ಗೆ ಆರು ಘಂಟೆಗೆ ಎಚ್ಚರವಾದರೂ, ಹಾಗೆಯೆ ಮಲಗಿದ್ದನು. ಮೋಡ ತುಂಬಿದ ಆಕಾಶವನ್ನು ದಿಟ್ಟಿಸಿ ನೋಡಿದನು. ತನಗೆ ಹಸಿವಾಗಿದೆಯೆಂಬ ಅರಿವಾಯಿತು. ಮೊಣಕೈ ಮೇಲೆ ಹೊರಳಿದಾಗ ಎಲ್ಲಿಂದಲೋ ಗಟ್ಟಿಯಾಗಿ ಹೂಂಕರಿಸಿದ ಶಬ್ದ ಕೇಳಬಂತು. ಅದನ್ನು ಕೇಳಿದೊಡನೆಯೆ ನಾಯಕನು ಬೆಚ್ಚಿಬಿದ್ದನು. ಕ್ಯಾರಿಬ್ ಗೂಳಿಯೊಂದು ಅವನನ್ನು ಎಚ್ಚರಿಕೆಯಿಂದಲೂ ಕುತೂಹಲದಿಂದಲೂ ನೋಡುತಿತ್ತು! ಐವತ್ತು ಅಡಿಗಳಷ್ಟು ದೂರವೂ ಇಲ್ಲ. ತಕ್ಷಣ ನಾಯಕನ ತಲೆಗೆ ಹೊಳೆಯಿತು; ಕ್ಯಾರಿಬ್ ಮಾಂಸ ಎಷ್ಟು ರುಚಿಕರ! ಹೇಗಿದ್ದರೂ ಬೆಂಕಿ ಹತ್ತಿರವಲ್ಲಿವೆ; ತುಂಡು ತುಂಡು ಮಾಂಸಗಳನ್ನು ಒಂದು ಸಾರಿ ಉರಿಯಮೇಲೆ ಆಡಿಸಿದರೆ ಸಾಕು; ಹದಮಾಡುವಾಗ ಚಟಪಟಗುಟ್ಟುವ ಶಬ್ದ ಎಷ್ಟು ಹಿತಕರ! ಯಂತ್ರದಂತೆ ಅವನ ಕೈ ಪಕ್ಕಕ್ಕೆ ಚಾಚಿ ಬಂದೂಕವನ್ನು ಎತ್ತಿಕೊಂಡಿತು. ಮದ್ದಿಲ್ಲದಿದ್ದರೂ ಪರವಾಗಿಲ್ಲ. ಗುರಿ ತೋರಿಸುವ ಮಣಿಯನ್ನು ಹಿಡಿದು, ಮೋಚಕವನ್ನು ಎಳೆದನು. ಅದರೆ ಗೂಳಿ ಮತ್ತೊಮ್ಮೆ ಹೂಂಕರಿಸಿ ನೆಗೆಯುತ್ತಾ ಓಡಿಹೋಯಿತು. ಮಧ್ಯೆ ಮಧ್ಯೆ ಕಲ್ಲು ದಿಬ್ಬಗಳಿಗೆ ಅದರ ಗೊರಸು ಸಿಕ್ಕಿಕೊಂಡು ರಟ ರಟ ಸದ್ದುಮಾಡಿತು. ಆದರೂ ಬಿಡಿಸಿಕೊಂಡು ಓಡುತ್ತಿತ್ತು.

ನಾಯಕನು ಹಿಡಿಶಾಪಹಾಕುತ್ತ ಮದ್ದಿಲ್ಲದ ಬಂದೂಕವನ್ನು ಆ ಕಡೆ

ಎಸೆದನು. ಜೋರಾಗಿ ನರಳುತ್ತ ಮೇಲೇಳಲು ಪ್ರಯತ್ನಪಟ್ಟನು. ಮೂಳೆಯ ಕೀಲುಗಳು ತುಕ್ಕುಹಿಡಿದಂತೆ ಕಂಡಿತು; ಕುಳಿಯಿಂದ ಈಚೆಗೆ ಬರುವುದೇ ಕಷ್ಟ. ಕೇವಲ ಮನಸ್ಥೈರ್ಯವೊಂದರಿಂದಲೇ ಕೆಲಸನಡೆಯಬೇಕಾಯಿತು. ಕಾಲನ್ನು ವಶಪಡಿಸಿಕೊಂಡಮೇಲೆ, ನೆಟ್ಟಗೆ ನಿಲ್ಲಲು ಮತ್ತೊಂದು ನಿಮಿಷ ಬೇಕಾಯಿತು.

ಸಣ್ಣ ತಿಟ್ಟೊಂದನ್ನು ನಿಧಾನವಾಗಿ ಹತ್ತಿದನು. ಸುತ್ತಲೂ ನೋಡಿದನು. ಯಥಾಪ್ರಕಾರ ಮರ ಗಿಡಗಳ ಲಕ್ಷಣಗಳೇ ಇಲ್ಲ. ಎಲ್ಲೆಲ್ಲಿ ನೋಡಿದರೂ ಮನಸ್ಸಿಗೆ ಬೇಸರತರುವಂಥ ಬೂದುಬಣ್ಣದ ಕಲ್ಲುಗಳು; ಹಾಗೂ ಅದೇ ಬಣ್ಣದ ಸಣ್ಣ ಸಣ್ಣ ಸರೋವರಗಳು, ನದಿಗಳು, ಇದನ್ನು ಪ್ರತಿಬಿಂಬಿಸುವಂತೆ ಆಗಸಕ್ಕೂ ಮಂಕುಕವಿದಿತ್ತು. ಸೂರ್ಯನೇ ಇದ್ದಿಲ್ಲ; ತೋರಿಕೆಯ ಸೂಚನೆಯೂ ಇದ್ದಿಲ್ಲವೆಂದೇ ಹೇಳಬೇಕು. ಉತ್ತರ ಪ್ರದೇಶಗಳ ಬಗ್ಗೆ ನಾಯಕನಿಗೆ ಸಾಕಷ್ಟು ಪರಿಶ್ರಮವಿರಲಿಲ್ಲ. ಹಿಂದಿನ ರಾತ್ರಿ ಹೇಗೆ ಆ ಸ್ಥಳಕ್ಕೆ ಬಂದೆನೆಂಬುದು ಅವನಿಗೆ ಮರೆತು ಹೋಗಿತ್ತು. ಆದರೇನಂತೆ? ದಾರಿಯಂತೂ ತಪ್ಪಿರಲಿಲ್ಲ. ಸ್ವಲ್ಪ ಸಮಯದಲ್ಲೇ ಕಡ್ಡಿಪುಳ್ಳೆಗಳ ನಾಡನ್ನು ತಲಪುತ್ತೇನೆ, ಮುಂದಿನ ಬೆಟ್ಟದಾಚೆ ಎಡಗಡೆಯಲ್ಲಿ ಆ ನಾಡು ಇರಬಹುದು—ಎಂದು ಯೋಚಿಸಿದನು.

ಸ್ವಲ್ಪ ಹಿಂದಕ್ಕೆ ಸರಿದು ಪ್ರಯಾಣಕ್ಕೆ ಅನುಕೂಲವಾಗುವಂತೆ ಗಂಟು ಮೂಟೆಕಟ್ಟಿದನು. ತನ್ನಲ್ಲಿದ್ದ ಬೆಂಕಿಕಡ್ಡಿಗಳ ಮೂರು ಕಟ್ಟುಗಳನ್ನು ಮತ್ತೊಮ್ಮೆ ನೋಡಿಕೊಂಡನು. ಬರಿಯ ಮೂಸ್ ಚರ್ಮ ಹದಿನೈದು ಪೌಂಡುಗಳಷ್ಟು ಭಾರವಿತ್ತು. ಮೂಟೆಯನ್ನು ಹೊತ್ತು ಹಗಲ ಪ್ರಯಾಣವನ್ನು ಆರಂಭಿಸಿದನು.

ಆಗಾಗ ಎಡಕ್ಕೇ ವಾಲುತ್ತಾ, ಮಸ್ಕೆಗ್ ಕಾಯಿಗಳನ್ನು ತಿನ್ನಲು ನಿಂತು ಬಿಡುತ್ತಿದ್ದನು.' ಕಾಲು ಸೆಡೆದುಕೊಂಡಿತ್ತು; ಕುಂಟು ನಡಿಗೆಯಂತೂ ಎದ್ದುಕಾಣುತಿತ್ತು. ಆದರೆ ಈ ನೋವು ಹೊಟ್ಟೆಯ ನೋವಿನಷ್ಟು ತೀವ್ರವಾಗಿರಲಿಲ್ಲ. ಹಸಿವಿನ ಬಾಧೆ ವಿಪರೀತವಾಗಿತ್ತು. ಅವನ ಬಾಯಿ ಒಂದೇ ಪದಾರ್ಥವನ್ನು ಎಡಬಿಡದೆ ಅಗಿಯುತಿತ್ತು. ಮಾರ್ಗದರ್ಶನದಲ್ಲೇ ಇದ್ದ ದೃಷ್ಟಿಪಥ ಬೇರೆಯಾಯಿತು. ಕಡ್ಡಿಪುಳ್ಳೆಗಳ ನಾಡಿನ ಮೇಲೆ ಗಮನ ಕಡಿಮೆಯಾಯಿತು. ಮಸ್ಕೆಗ್ ಕಾಯಿಗಳಿಂದ ಹಸಿವಿನ ಉಪಶಮನವಾಗಲಿಲ್ಲ. ತಿಂದಮೇಲೂ ಅದರ ಪ್ರಭಾವದಿಂದ ನಾಲಿಗೆ ಮತ್ತು ಬಾಯಿಗಳು ಚುಚ್ಚು

ವಂತಾದುವು ; ಮುಟ್ಟಿದರೆ ನೋಯುವಂಥ ಹುಣ್ಣುಗಳು ಕಾಣಿಸಿಕೊಂಡವು.

ಕಣಿವೆಯೊಂದರ ಬಳಿ ಬಂದಾಗ, ಕಲ್ಲುಸಾಲಿನಲ್ಲಿ ಅಡಗಿದ್ದ ಟಾರ್ ಮಿಗನ್ ಹಕ್ಕಿ ಮೇಲಕ್ಕೆ ಹಾರಿಬಂತು. ವ್ಹಿರ್ ಎಂದು ಶಬ್ದಮಾಡುತ್ತ ಗಿರ್ರನೆ ತಿರುಗುತಿತ್ತು. "ಕರ್-ಕರ್-ಕರ್" ಎಂದು ಕೂಗಾಡಹತ್ತಿತು. ನಾಯಕನು ಹಕ್ಕಿಗೆ ಕಲ್ಲಿನಿಂದ ಹೊಡೆದನು. ಆದರೆ ಗುರಿ ತಪ್ಪಿಹೋಯಿತು. ಮೂಟೆಯನ್ನು ಬದಿಗೊತ್ತಿ ಮೆಲ್ಲಗೆ ಹಿಂಬಾಲಿಸಿದನು ; ಬೆಕ್ಕು ಗುಬ್ಬಚ್ಚಿಯನ್ನು ಬೆನ್ನಟ್ಟಿಹೋಗುವಂತಿತ್ತು ! ಹರಿತವಾದ ಕಲ್ಲ ತುದಿಗಳಿಗೆ ಅವನ ಪ್ಯಾಂಟು ಸಿಕ್ಕಿ ಹರಿಯಿತು; ಒಂದೇ ಸಮನೆ ಮೊಳಕಾಲಿನಿಂದ ರಕ್ತ ಸುರಿಯಿತು. ಆದರೆ ಅಂತರಾಳದಲ್ಲಿ ಹಸಿವೆಂಬ ಕರಾಳ ರೂಪದ ಗಾಯ ಮನೆ ಮಾಡಿರುವಾಗ, ದೇಹದ ಸಾಮಾನ್ಯ ಗಾಯಗಳು ಅವನ ಗಣನೆಗೆ ಬರುತ್ತಿರಲಿಲ್ಲ. ಒದ್ದೆಯಾಗಿದ್ದ ಪಾಚಿಯ ಮೇಲೆ ಮಿಲಿಮಿಲಿಗುಟ್ಟುತಿದ್ದನು ; ಬಟ್ಟೆಯ ಮೂಲಕ ಚಳಿಯು ದೇಹಾದ್ಯಂತ ವ್ಯಾಪಿಸಿತು ; ಅಷ್ಟಾದರೂ ಅವನಲ್ಲಿ ಯಾವ ಪ್ರತಿಕ್ರಿಯೆಯೂ ಉಂಟಾಗಲಿಲ್ಲ. ಆಹಾರ ಜ್ವರದ ಮಹಾ ಪ್ರಭಾವ ಅಷ್ಟರ ಮಟ್ಟಿಗಿತ್ತು ! ...ಪ್ರತಿ ಸಲವೂ ಟಾರ್‌ಮಿಗನ್ ರೆಕ್ಕೆ ಬಡಿಯುತ್ತಾ ಅವನ ಮುಂದೆಯೆ ಸುತ್ತುತಿತ್ತು. ಕೈಗೆ ಮಾತ್ರ ಸಿಗುತ್ತಿರಲಿಲ್ಲ. ಕಡೆಗೆ, ಅದು ಕೂಗುತಿದ್ದ 'ಕರ್ ಕರ್' ಎಂಬ ಶಬ್ದ ಅವನನ್ನು ಹಾಸ್ಯಮಾಡುವಂತಿತ್ತು. ನಾಯಕನಿಗೆ ಕೋಪವೇರಿತು. ಹಕ್ಕಿಯಂತೆಯೆ ಕೂಗಿ ಪ್ರತಿಭಟಿಸುವವನಂತೆ ಶಾಪ ಹಾಕಿದನು.

ಒಮ್ಮೆ ಹಕ್ಕಿಯೊಂದು ಬಂಡೆಯಮೇಲೆ ಮಲಗಿ ನಿದ್ರಿಸುತ್ತಿತ್ತು. ಇದನ್ನರಿಯದೆ ನಾಯಕನು ಆ ಬಂಡೆಯ ಮೇಲೆಯೆ ತೆವಳುತಿದ್ದನು. ಥಟ್ಟನೆ ಆ ಹಕ್ಕಿಯು ಬಂಡೆಯ ಬದಿಯಿಂದೆದ್ದು ಅವನ ಮುಖದ ನೇರಕ್ಕೆ ಸರಿಯಾಗಿ ರೆಕ್ಕೆ ಬಡಿಯಿತು. ನಾಯಕನು ಸುಮ್ಮನಿರಲಿಲ್ಲ. ಟಾರ್‌ಮಿಗನ್ ಮೇಲೇಳುತಿದ್ದಂತೆ, ಅಷ್ಟೇ ಆಶ್ಚರ್ಯಕರವಾಗಿ ಅದನ್ನು ಗಬಕ್ಕನೆ ಹಿಡಿಯಲು ಪ್ರಯತ್ನಪಟ್ಟನು. ಆದರೆ ಅವನ ಕೈಗೆ ಮೂರು ಗರಿಗಳು ಮಾತ್ರ ಸಿಕ್ಕಿದವು. ಹಕ್ಕಿಯು ಸಂಪೂರ್ಣ ಕೈಗೆ ಸಿಕ್ಕದೆ ಹಾರುತಿದ್ದಾಗ, ನಾಯಕನಿಗೆ ದ್ವೇಷ ಉಕ್ಕೇರಿಬಂತು. ತನಗೆ ಅದು ತುಂಬ ಅನ್ಯಾಯ ಮಾಡುತ್ತಿದೆ-ಎಂದು ಭಾವಿಸಿದನು. 'ಹಾಳಾಗಿಹೋಗಲಿ,' ಎನ್ನುತ್ತಾ ಪುನಃ ಹಿಂತಿರುಗಿದನು. ಯಥಾಪ್ರಕಾರ ಮೂಟೆಯನ್ನು ಭುಜಕ್ಕೇರಿಸಿದನು.

ಹಗಲು ಕಳೆಯುತ್ತಾ ಬಂತು. ಬೇಟೆಗೆ ಅನುಕೂಲವಾದ ಪ್ರಾಣಿಗಳು

ಹೇರಳವಾಗಿದ್ದ ಹಳ್ಳ ತಿಟ್ಟುಗಳಲ್ಲಿ ನಾಯಕನು ಪ್ರಯಾಣಮಾಡಿದನು. ಕ್ಯಾರಿಬ್ ಹಿಂಡು ಪಕ್ಕದಲ್ಲೇ ಹಾದುಹೋಯಿತು; ಅದರ ಹಿಂದೆ ಇಪ್ಪತ್ತಾರು ಇತರ ಪ್ರಾಣಿಗಳೂ ಹಿಂಬಾಲಿಸಿದವು. ಅವೆಲ್ಲವೂ ಕೈಗೆ ಸಿಕ್ಕಿ ಬಿಡುವಂತೆಯೇ, ರೈಫಲ್ ರೇಂಜಿನಲ್ಲೇ ಇದ್ದವು. ಆ ಪ್ರಾಣಿಗಳ ಮೇಲೆ ಬಿದ್ದು ಹೊಡೆದುಹಾಕಿ ಬಿಡುವಂತೆ ನಾಯಕನಲ್ಲಿ ಕ್ರೂರವಾದ ಆಸೆ ಉದ್ಭವಿಸಿತು. ಬಾಯಲ್ಲಿ ಟಾರ್ ಮಿಗನ್ ಹಕ್ಕಿಯನ್ನು ಕಚ್ಚಿಕೊಂಡು ಕರಿಯ ನರಿಯೊಂದು ಅವನ ಮುಂದೆಯ ಬಂದುನಿಂತಿತು. ಮನುಷ್ಯ ಕೂಗಿಕೊಂಡನು. ಅವನೇನೊ ಭಯ ಹುಟ್ಟಿಸು ವಂತೆ ಅರಚಿದನು. ಆದರೆ ನರಿಯು ಥಟ್ಟನೆ ಒಂದೇ ನೆಗೆತಕ್ಕೆ ಹಾರಿ ಕಣ್ಮರೆಯಾಯಿತು; ಟಾರ್‌ಮಿಗನ್ ಹಕ್ಕಿಯನ್ನು ಮಾತ್ರ ಕೆಳಕ್ಕೆ ಬೀಳಿಸಲೇ ಇಲ್ಲ!

ಮಧ್ಯಾಹ್ನ ಕೊನೆ ಘಳಿಗೆಗಳಲ್ಲಿ ಅವನಿಗೆ ಸಣ್ಣ ಹೊಳೆಯೊಂದರ ದರ್ಶನವಾಯಿತು. ಅದು ಸುಣ್ಣದ ನೀರಿನಂತೆ ತಿಳಿಯಾಗಿತ್ತು. ನೀರಿನ ಅಂಚಿನಲ್ಲಿ ಜೊಂಡು ಹುಲ್ಲು ಅಲ್ಲಲ್ಲಿ ವಿರಳವಾಗಿ ಬೆಳೆದಿತ್ತು. ಒಂದರ ಬುಡ ವನ್ನು ಭದ್ರವಾಗಿ ಹಿಡಿದು ಎಳೆದನು. ಮೇಲು ನೋಟಕ್ಕೆ ಸಣ್ಣ ಈರುಳ್ಳಿಯ ಮೃದುವಾದ ಗಿಡವನ್ನು ಹೋಲುತಿತ್ತು. ಅವನ ಹಲ್ಲುಗಳು ಮುಂದೆ ಚಾಚಿ ದವು; ಮತ್ತೆ ಕೇಳಿಸಿದ್ದು: ಚಕಚಕನೆ ಅಗಿಯುವ ಶಬ್ದ. ಆದರೆ ಗಿಡದ ನಾರುಗಳು ಒರಟಾಗಿದ್ದವು. ಮಸ್ಕೆಗ್ ಕಾಯಿಯಂತೆಯೆ ಇದರಲ್ಲೂ ನೀರಿನ ಅಂಶ ಬಿಟ್ಟರೆ, ಪುಷ್ಟಿಕೊಡುವಂಥ ಮತ್ತಾವ ಗುಣಗಳೂ ಇರಲಿಲ್ಲ. ಅಷ್ಟಾ ದರೂ, ನಾಯಕನು ತನ್ನ ಮೂಟೆಗಳನ್ನೊಗೆದು ಕೈ ಕಾಲಿಗೆ ಸಿಕ್ಕಿಬಿದ್ದ ಜೊಂಡು ಗಳನ್ನು, ಹಿಂದು ಮುಂದು ನೋಡದೆ, ಕುರುಕಿಕೊಂಡು ದನದಂತೆ ದವಡೆ ಯಿಂದಲೇ ಅಗಿಯುತಿದ್ದನು.

ಅವನು ತುಂಬಾ ಬಳಲಿದ್ದನು; ವಿಶ್ರಾಂತಿಗಾಗಿ ಹಾತೊರೆದನು. ಎಲ್ಲಾ ದರೂ ಮಲಗಿ ನಿದ್ರಿಸೋಣವೆಂದರೆ ಅವಕಾಶವೇ ಇಲ್ಲ. ಯಾವುದೋ ಶಕ್ತಿ ಅವನನ್ನು ಮುಂದೆ ಮುಂದೆ ಹೋಗುವಂತೆ ತಳ್ಳುತಿತ್ತು. ಕಡ್ಡಿಪುಳ್ಳೆಗಳ ನಾಡನ್ನು ನೋಡಲು ಅಷ್ಟು ಉತ್ಸಾಹವೇ? ಹಿಂದೆ ಇತ್ತು; ಈಗ ಖಂಡಿತ ವಾಗಿಯೂ ಇಲ್ಲ. ಸದ್ಯ ಅವನು ಮುಂದುವರಿಯುತ್ತಿರುವುದು ಹೊಟ್ಟೆಯ ತಾಳಕ್ಕೆ ಅನುಗುಣವಾಗಿ. ಆದ್ದರಿಂದಲೇ ಸಣ್ಣ ಸಣ್ಣ ಕೊಳಗಳಲ್ಲಿ ಕಪ್ಪೆಗಳಿ ಗಾಗಿ ಕೈಯಾಡಿಸಿದನು. ಕೈ ಉಗುರಿನಿಂದ ನೆಲವನ್ನು ಅಗೆದು, ಹುಳುಗಳಿ ವೆಯೇ ಎಂದು ಪರಿಶೀಲಿಸಿದನು. ಅಷ್ಟು ಉತ್ತರೋತ್ತರ ಪ್ರದೇಶಗಳಲ್ಲಿ ಕಪ್ಪೆ,

ಹುಳು ಮುಂತಾದವು ಜೀವಿಸಲೂ ಸಾಧ್ಯವಿಲ್ಲವೆಂಬ ಅಂಶ ಅವನಿಗೆ ತಿಳಿಯದೆ ಇರಲಿಲ್ಲ.

ಆದರೂ ಪಶು ಪ್ರವೃತ್ತಿ! ಪ್ರತಿಯೊಂದು ಮಡುವನ್ನೂ ನಿರರ್ಥಕವಾಗಿ ಕಣ್ಣಿಟ್ಟು ನೋಡಿದನು. ಅಷ್ಟರಲ್ಲಿ ಸಂಜೆ ಕಾಲಿಡುತ್ತಾ ಬಂತು. ಅಬ್ಬ! ಎಂಥ ಅನ್ವೇಷಣೆ! ಸಿಕ್ಕೇಬಿಟ್ಟಿತು; ಒಂದೇ ಒಂದು ಮೀನು! ಆಕಾರದಲ್ಲಿ 'ಮಿನೋ' ವಿನಷ್ಟೇ ಇತ್ತು. ಭುಜದ ತನಕ ನೀರಿನೊಳಗೆ ಕೈ ಇಳಿ ಬಿಟ್ಟನು. ಆದರೆ ಆ ಮೀನು ಚಾತುರ್ಯದಿಂದ ನುಣುಚಿಕೊಂಡಿತು. ನಾಯಕನು ಅದನ್ನು ಎರಡು ಕೈಗಳಿಂದಲೂ ಹಿಡಿಯಲು ಪ್ರಯತ್ನಪಟ್ಟು, ಇಡೀ ನೀರನ್ನು ಕೆಳಗಿನಿಂದ ಮೇಲಕ್ಕೆ ಕಲಕಿಬಿಟ್ಟನು. ಆ ಉತ್ಸಾಹದಿಂದ ಅವನೇ ಕೆಳಕ್ಕೆ ಬಿದ್ದನು. ಸೊಂಟದ ತನಕ ತೆಪ್ಪೋತ್ಸವವಾಯಿತು. ಆದರೆ ಮೀನಿನ ಗತಿ? ಕೆಸರು ತುಂಬಿದ ನೀರಲ್ಲಿ ಇನ್ನು ಕಂಡುಹಿಡಿಯಲು ಸಾಧ್ಯವೇ ಇಲ್ಲ. ನೀರು ತಿಳಿಯಾಗುವ ತನಕ ಅವನು ಕಾಯಲೇಬೇಕಾಯಿತು.

ಮತ್ತೆ ಪ್ರಯತ್ನ ಸಾಗಿತು; ಪುನಃ ನೀರು ಕೆಸರಾಯಿತು. ಎಲ್ಲಿಯ ತನಕ ಕಾಯುವುದು? ಅವನಿಗಂತೂ ತಾಳ್ಮೆಯೇ ಇಲ್ಲ. ಮನಸ್ಸಿಗೆ ಏನೊ ಹೊಳೆಯಿತು; ಟಿನ್ನಿನ ಬಕೆಟ್ಟನ್ನು ಬಿಚ್ಚಿ ಹೊರತೆಗೆದನು. ಅದರಿಂದ ಮಡುವಿನ ನೀರೆತ್ತಿ ಚೆಲ್ಲಲು ಆರಂಭಿಸಿದನು. ಮೊದಲ ರಭಸದಿಂದ ತನ್ನ ಮೇಲೆಯೆ ನೀರು ಸಿಡಿಯುತಿತ್ತು; ಹತ್ತಿರವೇ ಬೀಳುತ್ತಾ ಪುನಃ ಮಡುವನ್ನು ಸೇರುತಿತ್ತು. ಆದ್ದರಿಂದ ನಾಯಕನು ಮತ್ತೆ ತಾಳ್ಮೆವಹಿಸಲು ಬಹು ಕಷ್ಟ ಪಟ್ಟನು. ಆದರೂ ಹೃದಯ ಒಂದೇ ಸಮನೆ ಬಡಿಯುತಿತ್ತು. ಕೈಗಳು ನಡುಗುತಿದ್ದವು. ಅರ್ಧ ಘಂಟೆಯಾದ ಮೇಲೆ ಮಡು ಸಂಪೂರ್ಣ ಖಾಲಿ ಯಾಗುತ್ತ ಬಂತು. ಒಂದು ಬಟ್ಟಲಷ್ಟೂ ನೀರು ಉಳಿಯಲಿಲ್ಲ. ಆದರೆ ಮೀನು ಸಿಕ್ಕಲೇ ಇಲ್ಲ! ಏನಾಗಿ ಹೋಯಿತು? ನಾಯಕನು ಸುತ್ತಲೂ ಕಣ್ಣು ಹೊರಳಿಸಿದನು. ಹೊರನೋಟಕ್ಕೆ ಮರೆಯಾದಂತೆ ಕಲ್ಲುಗಳ ಮಧ್ಯೆ ಸಣ್ಣ ಬಿರುಕೊಂದು ಕಾಣಿಸಿತು. ಅದರ ಮೂಲಕವೇ ಮೀನು ತಪ್ಪಿಸಿಕೊಂಡು ಹೋಗಿದೆ; ಈ ಬಿರುಕಿನ ಮತ್ತೊಂದು ಮುಖ ಹತ್ತಿರದ ಯಾವುದೋ ದೊಡ್ಡ ಮಡುವಿನಲ್ಲಿ ಅಡಕವಾಗಿರಬೇಕು. ಅಂದಮೇಲೆ ಆ ಮಡುವಿನ ನೀರನ್ನು ಖಾಲಿಮಾಡಲು ಸಾಧ್ಯವೇ? ರಾತ್ರಿ ಹಗಲು ಕಷ್ಟಪಟ್ಟರೂ ಆಗದ ಕೆಲಸ. ಅಂತೂ ಕಾರ್ಯ ಮಿಂಚಿಹೋಯಿತು....ಮೊದಲೇ ಬಿರುಕಿನ ವಿಷಯ ತಿಳಿದಿದ್ದರೆ, ದೊಪ್ಪನೆ ಕಲ್ಲು ಹಾಕಿ ಮುಚ್ಚಿಬಿಡುತ್ತಿದ್ದೆ! ಆಗ ಮೀನು

ತನ್ನದೇ ಆಗಿಬಿಡುತಿತ್ತು !....

ಹೀಗೆ ಯೋಚಿಸಿದನು ; ನಿಧಾನವಾಗಿ ಮೇಲಕ್ಕೆ ಬಂದು ಹಸಿನೆಲದ ಮೇಲೆ ಕುಸಿದುಬಿದ್ದನು. ಮೊದಲು ತನ್ನ ಅಂತರಾತ್ಮಕ್ಕೆ ಕೇಳಿಸುವಂತೆ ಕೂಗಿ ಕೊಂಡನು. ಅವನ ಸುತ್ತಲೂ ನಿಷ್ಕರುಣ ಶೂನ್ಯತೆ ತಾಂಡವವಾಡುತಿತ್ತು ; ಅದು ಒಳಗೊಳಗೆ ತನ್ನನ್ನು ರೇಗಿಸುತ್ತಿರುವಂತೆ ನಾಯಕನಿಗೆ ಬಾಸವಾಯಿತು. ಅದಕ್ಕೇ ಇರಬೇಕು ; ಅವನು ಕಣ್ಣೀರಿಲ್ಲದೆ ತುಂಬಾ ಹೊತ್ತು ಗಟ್ಟಿಯಾಗಿ ಅರಚಿದನು.

ಉರಿಯನ್ನು ಹೊತ್ತಿಸಿ ಬಿಸಿ ನೀರು ಕುಡಿದು ಮೈ ಬೆಚ್ಚಗೆ ಮಾಡಿ ಕೊಂಡನು. ಹಿಂದಿನ ರಾತ್ರಿಯಂತೆ ಬಂಡೆಯ ಉಬ್ಬುಸಾಲಿನ ಮೇಲೆಯೆ ಕ್ಯಾಂಪ್ ಮಾಡಿದನು. ಬೆಂಕಿಕಡ್ಡಿಗಳನ್ನು ಆರಿಸಿ ಒಣಗಿದೆಯೋ ಇಲ್ಲವೋ ಎಂದು ಪರೀಕ್ಷಿಸಿದನು. ಗಡಿಯಾರಕ್ಕೆ ಕೀಲುಕೊಡುವುದನ್ನು ಮರೆಯಲಿಲ್ಲ. ಹಾಸುಗಂಬಳಿ ಮೈ ತಣ್ಣಗೆ ಮಾಡುವಷ್ಟು ತೇವವಾಗಿತ್ತು. ಕಾಲಿನ ಹರಡು ನೋವಿನಿಂದ ಅದಿರಾಡುತಿತ್ತು. ತಾನು ಹಸಿದಿದ್ದೇನೆಂಬ ಒಂದೇ ಅಂಶ ಅವನ ತಲೆಯಲ್ಲಿ ಸುಳಿದಾಡಿತು. ನಿದ್ರೆಯಲ್ಲೂ ವಿಶ್ರಾಂತಿಯಿಲ್ಲ. ವಿವಿಧ ರೀತಿಯಲ್ಲಿ ಉತ್ಸವದ ಊಟ ಮತ್ತು ಬಡಿಸುವ ವಿಧಾನಗಳನ್ನು ಕನಸಿನಲ್ಲಿ ಕಂಡನು.

ಎದ್ದಾಗ ಜ್ವರ ಪೀಡಿತನಾಗಿ ನಡುಗುತಿದ್ದನು. ಸೂರ್ಯ ಇನ್ನೂ ಬಂದಿರಲಿಲ್ಲ. ಆಕಾಶ, ಭೂಮಿಗಳ ಕರಾಳ ರೂಪ ಎದ್ದು ಕಾಣುತಿತ್ತು. ಚಳಿ ಗಾಳಿ ಬೀಸುತಿತ್ತು. ಹೊಸ ಹಿಮ ದಟ್ಟವಾಗಿ ಬೀಳುತ್ತಾ ಬೆಟ್ಟತುದಿಗಳನ್ನು ಮರೆಮಾಡುತಿತ್ತು. ತೇಲಿಬರುತ್ತಿದ್ದ ಗಾಳಿಯೂ ಭಾರವಾಯಿತು. ಘನಹಿಮದ ಹಲ್ಲೆಗಳು ದೊಡ್ಡದಾಗಿಯೆ ಇದ್ದವು. ಭೂಮಿಗೆ ಬಿದ್ದ ತಕ್ಷಣ ಕರಗಿ ನೀರಾಗು ತಿತ್ತು. ಹೀಗೆ ತನ್ನ ಸುತ್ತಮುತ್ತಲೂ ಸಣ್ಣ ಸಣ್ಣ ಪ್ರವಾಹಗಳು ಹರಿಯ ತೊಡಗಿದವು. ಮಳೆಯಿಲ್ಲದಿದ್ದರೂ, ಆ ಕೆಲಸ ನಡೆದಿತ್ತು. ನಾಯಕನ ಬೆಂಕಿ ಕಡೆಗೂ ತಣ್ಣಗಾಯಿತು. ಎಲ್ಲಿಯ ತನಕ ವ್ಯರ್ಥವಾಗಿ ಕಡ್ಡಿಗಳನ್ನು ಒಡ್ಡು ವುದು ?

ಇನ್ನು ಗಂಟುಕಟ್ಟಿ ಬಿದ್ದು, ಎದ್ದು, ಹೊರಡುವುದಕ್ಕೆ ಇದೇ ಮುನ್ನೆಚ್ಚರಿಕೆ ಯೆಂದು ಭಾವಿಸಿದನು. ಎಲ್ಲಿಗೆ ಹೋಗುವುದು ? ಅವನಿಗೆ ತಿಳಿಯದು .... ಕಡ್ಡಿ ಪುಳ್ಳೆಗಳ ನಾಡನ್ನು ನೋಡಲೇಬೇಕೆಂಬ ಅಪೇಕ್ಷೆ ಇಲ್ಲ ಅಥವಾ ಸ್ನೇಹಿತ ಬಿಲ್ ನನ್ನು ಪತ್ತೆಮಾಡುವ ಉತ್ಕಟ ಅಭಿಮಾನವೂ ಇಲ್ಲ ;ಎಲ್ಲಕ್ಕಿಂತಲೂ ಹೆಚ್ಚಾಗಿ ಗುಪ್ತಸ್ಥಳದ ಕಡೆಯೂ ಗಮನವಿಲ್ಲ. ಡೀಸ್ ನದಿ ಇದ್ದರೇನು ಹೋದರೇನು ?

ತಿನ್ನೋಣ ಬಾ,' ಎಂಬ ಒಂದೇ ಪದ ಅವನನ್ನು ವಶಪಡಿಸಿಕೊಂಡಿತ್ತು. ಅವನು ಹಸಿವಿನಿಂದ ಹುಚ್ಚನಾಗಿದ್ದನು. ತಾನು ಯಾವ ದಾರಿಯಲ್ಲಿ ಹೋಗು ತಿದ್ದೇನೆಂಬ ಅರಿವೂ ಅವನಿಗಿಲ್ಲ. ಕೈಗೆ ಸಿಕ್ಕಿದ್ದನ್ನು ಸುಲಭವಾಗಿ ಎಳೆದು ತಿನ್ನುವಂಥ ಸರಾಗ ಮಾರ್ಗವಿದ್ದರೆ ಸಾಕು. ಕೊರೆಯುವಂಥ ಹಿಮದಲ್ಲೂ, ನೀರು ತುಂಬಿದ ಮಸ್ಕೆಗ್ ಕಾಯಿಗಳನ್ನು ಅವನು ಕೀಳಬಲ್ಲ. ಎಷ್ಟೋ ಇಂಚುಗಳ ಹಿಮದಲ್ಲಿ ಅಡಗಿದ್ದ ಸಣ್ಣ ಸಣ್ಣ ಸಸಿಗಳನ್ನೂ ಬಿಡಲಾರ.

ಆ ರಾತ್ರಿ ಅವನ ಪಾಲಿಗೆ ಬಿಸಿನೀರೂ ಇಲ್ಲ. ಅಂಥ ಹಿಮದಲ್ಲಿ ಬೆಂಕಿ ಯನ್ನು ಹೊತ್ತಿಸುವ ಸಂಭವವೇ ಇಲ್ಲ. ಅಂತೂ ಅತೃಪ್ತ ಹಸಿವನ್ನು ಮುಲುಗಿ ಸಲು ತನ್ನ ಕಂಬಳಿಯ ಮರೆಹೊಕ್ಕನು ಆ ಮಹಾನಾಯಕ. ಘನಹಿಮ, ಶೀತಲ ಮಳೆಯಾಗಿ ಪರಿಣಮಿಸಿತು. ಮುಖಕ್ಕೆ ಸರಿಯಾಗಿ ಹನಿಬಿದ್ದು, ಎಷ್ಟೋ ವೇಳೆ ಅವನಿಗೆ ಎಚ್ಚರಿಕೆಯಾಗುತಿತ್ತು.

ಯಥಾಪ್ರಕಾರ ನಿಸ್ಸಾರ ಹಗಲು ಕಾಣಿಸಿಕೊಂಡಿತು. ಮಳೆ ಮುಕ್ತಾ ಯವಾಯಿತು. ಮನುಷ್ಯನನ್ನ ಕಂಗೆಡಿಸಿದ್ದ ಹಸಿವಿನ ತೀವ್ರತೆ ಹೊರಟು ಹೋಯಿತು. ಆಹಾರಕ್ಕಾಗಿ ಒದ್ದಾಡಿ ಇಡೀ ನರಜಾಲದಲ್ಲಿ ಅಲ್ಲೋಲ ಕಲ್ಲೋಲ ನಡೆಸಿದ, ಸಂವೇದನಶಕ್ತಿಯೂ ಮುಕ್ತಾಯವಾಯಿತು. ಜಠರದಲ್ಲಿ ಸ್ಪಷ್ಟವಾಗಿ ತಿಳಿಯದಂಥ ಒಂದು ರೀತಿಯ ಭಾರವಾದ ನೋವಿತ್ತು; ಆದರೆ ನಾಯಕನ ಗಮನವನ್ನು ಸೆಳೆಯುವಷ್ಟು ಪ್ರಮುಖವಾಗಿರಲಿಲ್ಲ. ಈಗ ಅವನಲ್ಲಿ ಬುದ್ಧಿಜೀವಿಯ ಅಂಶ ಹೆಚ್ಚಾಗಿದೆ; ಮತ್ತೆ ಡೀಸ್ ನದಿ, ಸ್ಥಳ ಮುಂತಾದುವು ಗಳ ಮೇಲೆ ತೀವ್ರಾಸಕ್ತನಾದನು. ತನ್ನ ಕಂಬಳಿಯನ್ನು ಮತ್ತಷ್ಟು ಕಿರಿದ ಗಲದ ತುಂಡುಗಳನ್ನಾಗಿ ಹರಿದು ಹಾಕಿದನು. ರಕ್ತ ಸುರಿಯುತಿದ್ದ ಕಾಲಿಗೆ ಅವುಗಳನ್ನು ಬಿಗಿದು ಕಟ್ಟಿದನು. ಮೂಸ್ ಚರ್ಮವು ಅತಿ ಭಾರವಾಗಿದ್ದ ರಿಂದ ಹೊರಲು ಸ್ವಲ್ಪ ಅನುಮಾನ ಪಟ್ಟನು. ಆದರೂ ಕಡೆಗೆ ಮೇಲೇರಿಸಿ ದನು. ಒಟ್ಟಿನಲ್ಲಿ ಮತ್ತೊಂದು ದಿನದ ಪ್ರಯಾಣಕ್ಕೆ ಸಿದ್ಧನಾದನು.

ಮಳೆಯ ಹೊಡೆತದಿಂದ ಮಂಜುಗಡ್ಡೆಗಳು ಕರಗಿಹೋದವು. ಬೆಟ್ಟದ ಮೇಲುಭಾಗಗಳು ಮಾತ್ರ ಬೆಳ್ಳಗೆ ಇದ್ದವು. ಅಂತೂ ಸೂರ್ಯನು ಕಾಣಿಸಿ ಕೊಂಡನು. ತಾನು ದಾರಿ ತಪ್ಪಿದ್ದೇನೆಂದು ತಿಳಿದರೂ ನಾಯಕನು ಅಧೈರ್ಯ ಪಡಲಿಲ್ಲ. ದಿಕ್ಸೂಚಿಯ ರೇಖೆಗಳನ್ನು ಪರೀಕ್ಷಿಸಿ ಜಯಶಾಲಿಯಾದನು. ಹಿಂದಿನ ದಿನಗಳ ಅಲೆದಾಟದಲ್ಲಿ ತಾನು ಹೆಚ್ಚಾಗಿ ಎಡಭಾಗದ ಪ್ರದೇಶಗಳಿಗೇ ವಾಲಿದಂತೆ ಕಂಡುಬರುತ್ತದೆ; ಇದ್ದರೂ ಇರಬಹುದು. ಅಡ್ಡದಾರಿಯ

ತಾಯಿ ಹಕ್ಕಿಯು ಜೋರಾಗಿ ಅರಚುತ್ತಾ ಅವನನ್ನು ಬಡಿಯ ತೊಡಗಿತು. ಬಂದೂಕಿನ ತಲೆಯಿಂದ ಜಜ್ಜಿ ಹಕ್ಕಿಯನ್ನು ಉರುಳಿಸಲು ಪ್ರಯತ್ನಪಟ್ಟನು. ಆದರೆ ಅದು ಕೈಗೆ ಸಿಕ್ಕದಂತೆ ಹೊರಳಿಕೊಂಡಿತು. ಮತ್ತೆ ಕಲ್ಲುಗಳಿಂದ ಗುರಿಯಿಟ್ಟು ಹೊಡೆಯಲು ಮೊದಲು ಮಾಡಿದನು. ಅವನ ಅದೃಷ್ಟವಿರಬೇಕು, ಒಂದು ಹೊಡೆತದಿಂದ ಹಕ್ಕಿಯ ರೆಕ್ಕೆ ಮುರಿಯಿತು. ಟಾರ್‌ಮಿಗನ್ ಪಾಡು ಹೇಳತೀರದು; ಥಟ್ಟನೆ ರೆಕ್ಕೆಯೊದರಿ ತತ್ತರಿಸುತ್ತಾ ಜೋತುಬಿದ್ದ ರೆಕ್ಕೆಯನ್ನು ಎಳೆದುಕೊಂಡೇ ಓಡಾಡಿತು. ನಾಯಕನೂ ಹಿಂಬಾಲಿಸಿದನು.

ಮರಿ ಹಕ್ಕಿಗಳಿಂದ ಅವನ ಹೊಟ್ಟೆಯೇನೂ ತುಂಬಲಿಲ್ಲ; ಕೇವಲ ಹಸಿವನ್ನು ಕೆರಳಿಸುವಂತಹ ಆಹಾರವಾಗಿತ್ತು. ಒಂದೇ ಸಮನೆ ಕಲ್ಲು ಹೊಡೆಯುತ್ತ, ಒಂಟಿಕಾಲಿನಲ್ಲಿ ಕುಂಟುತ್ತ, ಕುಪ್ಪಳಿಸುತ್ತ ನಡೆಯುತಿದ್ದನು. ಬಂಡೆಗೆ ತಾಗಿ ಕಾಲು ಗಾಯಗೊಂಡಿತು. ಕೆಲವೊಮ್ಮೆ ಜೋರಾಗಿ ವಟಗುಟ್ಟು ತಿದ್ದನು. ಇನ್ನು ಕೆಲವು ವೇಳೆ ಕೆಳಕ್ಕೆ ಬಿದ್ದರೂ ನಿಶ್ಯಬ್ದವಾಗಿ ಹೋರಾಡು ತಿದ್ದನು. ತಲೆ ಸುತ್ತು ಬಂದರೆ ಮೂರ್ಛೆ ಹೋಗದಂತೆ, ಕಣ್ಣುಜ್ಜಿಕೊಳ್ಳು ತ್ತಿದ್ದನು.

ಆತನು ಹಕ್ಕಿಯನ್ನು ಎಡಬಿಡದೆ ಅಟ್ಟಿಕೊಂಡು ಬರುತ್ತಿದ್ದನು. ಜೌಗು ಕಣಿವೆಯನ್ನೂ ಇಳಿದಾಯಿತು. ಆ ಜೌಗು ಪ್ರದೇಶದಲ್ಲಿ ಹೆಜ್ಜೆಗುರುತುಗಳು ಕಂಡವು! ತನ್ನದಂತೂ ಅಲ್ಲವೆಂಬುದು ಸ್ಪಷ್ಟವಾಗಿದೆ. ಹಾಗಿದ್ದಮೇಲೆ ಬಿಲ್‌ನ ಹೆಜ್ಜೆ ಗುರುತೇ ಇರಬೇಕು! ಆದರೆ ತಾನು ನಿಲ್ಲಲು ಅವಕಾಶವಿಲ್ಲ; ಏಕೆಂದರೆ ತಾಯಿ ಹಕ್ಕಿ ಓಡುತ್ತಾ ಇತ್ತು. ಹಕ್ಕಿಯನ್ನು ಹಿಡಿಯುವುದು ಮೊದಲ ಕರ್ತವ್ಯ. ಆಮೇಲೆ ಹಿಂತಿರುಗಿ ನಿರಾತಂಕವಾಗಿ ಹೆಜ್ಜೆ ಗುರುತುಗಳನ್ನು ಪರೀಕ್ಷಿಸಬಹುದು ...

ತಾಯಿ ಹಕ್ಕಿಯನ್ನು ಓಡಿಸಿ ಬಳಲಿಸಿದನು; ಜೊತೆಗೆ ತಾನೂ ಬಳ ಲಿದನು. ಒಂದು ಕಡೆ ಹಕ್ಕಿ ಉಸಿರೆಳೆಯುತ್ತಾ ಬಿದ್ದುಕೊಂಡಿತು. ಅಲ್ಲಿಂದ ಹನ್ನೆರಡು ಅಡಿಗಳ ದೂರದಲ್ಲೇ ಮನುಷ್ಯನೂ ಮೇಲುಸಿರುಬಿಡುತಿದ್ದನು; ಅಷ್ಟು ಹತ್ತಿರವಿದ್ದರೂ ಹಕ್ಕಿಯ ಬಳಿ ತೆವಳಲೂ ಸಾಧ್ಯವಿರಲಿಲ್ಲ. ಸ್ವಲ್ಪ ಕಾಲದಲ್ಲಿ ಅವನು ಚೇತರಿಸಿಕೊಂಡನು. ಅಷ್ಟರಲ್ಲಿ ಹಕ್ಕಿಯೂ ಹೊಸಜೀವ ಬಂದಂತೆ ಉಸಿರೆಳೆಯಿತು. ಅವನ ಹಸಿದ ಕೈಗಳು ಚಾಚಿದಾಗ, ಹಕ್ಕಿಯು ಸಿಗದೆ ಮುಂದಕ್ಕೋಡಿತು. ಬೇಟೆ ಮುಂದುವರಿಯಿತು. ಆದರೇನು? ರಾತ್ರಿ ಯಾಯಿತು; ಕತ್ತಲು ಕವಿಯಿತು. ಹಕ್ಕಿಯು ತಪ್ಪಿಸಿಕೊಂಡಿತು. ನಾಯಕನು

ತುಂಬ ನಿಶ್ಯಕ್ತನಾಗಿ ಎಡವಿಬಿದ್ದನು; ಮುಖ ಮೂತಿ ಒಡೆಯಿತು. ಬೆನ್ನ ಹಿಂದೆ ಮೂಟೆಯ ಭಾರ ಬೇರೆ. ಬಹಳ ಹೊತ್ತು ಅವನು ಚಲಿಸಲೇ ಇಲ್ಲ; ಆಮೇಲೆ ಪಕ್ಕಕ್ಕೆ ತಿರುಗಿ ಗಡಿಯಾರಕ್ಕೆ ಕೀಲುಕೊಟ್ಟನು. ಬೆಳಗಿನ ತನಕ ಹಾಗೆಯೇ ಬಿದ್ದಿದ್ದನು.

ಯಥಾಪ್ರಕಾರ ಮತ್ತೊಂದು ಮಂಜು ಮುಸುಕಿದ ದಿನವನ್ನು ಎದುರಿಸ ಬೇಕಾಯಿತು. ಅರ್ಧದಷ್ಟು ಕಂಬಳಿ ಆಗಲೇ ಸುತ್ತುವ ಚಿಂದಿಯಾಗಿ ವಿನಿಯೋಗಿಸಲ್ಪಟ್ಟಿತ್ತು. ಬಿಲ್‌ನ ಹೆಜ್ಜೆ ಗುರುತುಗಳನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ಚಿಂತಿಸುವುದೂ ಸರಿಯಲ್ಲ. ಆದರೆ ತನ್ನ ಹಸಿವಿನ ಬಾಧೆಯೊಂದಿಗೆ ಬಿಲ್ ಕೂಡ ತನ್ನಂತೆಯೇ ದಾರಿ ತಪ್ಪಿದ್ದರೆ ಏನು ಗತಿ ಎಂದು ಆಶ್ಚರ್ಯಗೊಂಡನು.

ಮಧ್ಯಾಹ್ನದ ಹೊತ್ತಿಗೆ ಮೂಟೆಯ ಭಾರ ತಡೆಯಲಸಾಧ್ಯವಾಯಿತು. ಪುನಃ ಚಿನ್ನದ ಗಟ್ಟಿಗಳನ್ನು ಬೇರ್ಪಡಿಸಿದನು; ಅರ್ಧವನ್ನು ಮರುಯೋಚನೆ ಯಿಲ್ಲದೆ ನೆಲದ ಮೇಲೆ ಚೆಲ್ಲಿಬಿಟ್ಟನು! ಮಟ ಮಟ ಮಧ್ಯಾಹ್ನ ಪ್ರಾಪ್ತ ವಾದಂತೆ ಉಳಿದರ್ಧವನ್ನೂ ಎಸೆದನು....ಈಗ ಅವನಲ್ಲಿ ಉಳಿದಿರುವುದು— ಅರ್ಧ ಕಂಬಳಿ, ಟಿನ್ ಬಕೆಟ್ಟು ಮತ್ತು ರೈಫಲ್ ಇಷ್ಟೇ.

ಅವನು ಭ್ರಾಂತಿಗೊಂಡನು. ಮನಸ್ಸಿನಲ್ಲಿ ಮಿಥ್ಯಾ ಭಾವನೆಗಳು ಉದ್ಭವಿಸಿ, ಅವನನ್ನು ಪೀಡಿಸತೊಡಗಿದ್ದುವು. ...ಒಂದು ತೋಟೆಯು ತನ್ನಲ್ಲಿ ಇದ್ದೇ ಇದೆಯೆಂದು ಭಾವಿಸಿದನು. ಬಂದೂಕದ ಕುಹರದಲ್ಲಿ ಅಡಗಿದ್ದರೂ, ತಾನು ಉಪೇಕ್ಷಿಸಿದ್ದು ತಪ್ಪು. ಹಾಗಲ್ಲ; ಕುಹರದಲ್ಲಿ ಏನೂ ಇಲ್ಲವೆಂದು ಇಲ್ಲಿಯ ತನಕ ತನ್ನ ತಿಳುವಳಿಕೆಯಾಗಿತ್ತು .... ಬುದ್ಧಿ ಭ್ರಮೆ ಇನ್ನೂ ಹೆಚ್ಚಾಯಿತು. ಗಂಟೆಗಟ್ಟಲೆ ಅವನು ತನ್ನಲ್ಲಿ ತಾನೇ ಹೋರಾಡಬೇಕಾಯಿತು. ಬಂದೂಕವನ್ನು ತಿರುಗ ಮುರುಗ ಮಾಡಿ ನೋಡಿದನು. ಒಳಗೇನೂ ಇಲ್ಲದೆ ಖಾಲಿಯಾಗಿತ್ತು. ಇಲ್ಲದಿದ್ದುದನ್ನು ಖಂಡಿತವಾಗಿಯೂ ಇದೆಯೆಂದು ನಂಬಿ, ನಿಜಪರಿಸ್ಥಿತಿಯನ್ನು ತಿಳಿದಾಗ ತೀರ ಬೇಸರಪಟ್ಟನು.

ಹಾಗೆಯೆ ಅರ್ಧಘಂಟೆಯ ಕಾಲ ಕಷ್ಟಪಟ್ಟುಕೊಂಡು ಕಾಲು ಹಾಕಿದನು. ಮತ್ತೆ ಭ್ರಾಂತಿಯ ಮುಸುಕು ಬೀಳಹತ್ತಿತು. ಕೇವಲ ಯಂತ್ರದ ಬೊಂಬೆ ಯಂತಾದನು. ವಿಚಿತ್ರ ಕಲ್ಪನೆಗಳು ಹುಚ್ಚು ಹುಚ್ಚಾಗಿ ತಲೆಯ ಸುತ್ತ ಸುಳಿದಾಡಿದುವು. ಹುಳುಗಳಂತೆ ಕೊರೆಯ ತೊಡಗಿದುವು. ಸತ್ಯಕ್ಕೆ ದೂರವಾದ ಅಂಥ ಹವ್ಯಾಸ ಕೇವಲ ಅಲ್ಪಕಾಲಿಕವಾಗಿತ್ತು. ಯಂತ್ರವನ್ನು ಹಿಂತಿರುಗಿಸುವ

ಕೀಲಿನಂತೆ, ಹಸಿವಿನ ಬಾಧೆ ಸದಾ ಸಿದ್ಧವಾಗಿ ಅವನನ್ನು ನಿಜಸ್ಥಿತಿಗೆ ಎಳೆಯುತಿತ್ತು.

ಕನಸಿನ ಲೋಕದಿಂದ ಥಟಕ್ಕನೆ ಕೆಳಗೆ ಬೀಳುವ ಮತ್ತೊಂದು ಸನ್ನಿವೇಶ ಪೊದಗಿತು. ಎದುರಿನ ದೃಶ್ಯ ಮೂರ್ಛೆ ಹೋಗಿಸುವಷ್ಟು ಪ್ರಭಾವಶಾಲಿ ಯಾಗಿತ್ತು. ಅವನು ಗಿರ್ರನೆ ತೂರಾಡಿದನು. ನೆಲಮುಟ್ಟಿದ ಕುಡುಕನ ಹಾಗೆ ವರ್ತಿಸಿದನು. ಇದಕ್ಕೆಲ್ಲ ಕಾರಣ, ತನ್ನೆದುರಿಗೇ ಕುದುರೆಯೊಂದು ನಿಂತಿತ್ತು! ಅಬ್ಬ, ಎಲ್ಲಿಂದ ಬಂತು ಕುದುರೆ! ತನ್ನ ಕಣ್ಣನ್ನು ತಾನೇ ನಂಬಲು ಅಸಾಧ್ಯ ವಾಯಿತು. ನಿಜ; ಮಧ್ಯೆ ಮಧ್ಯೆ ಪ್ರಜ್ವಲಿಸುತಿದ್ದರೂ ಕಣ್ಣು ಮಂಜಾಗಿತ್ತು. ಆದ್ದರಿಂದ ಕಣ್ಣನ್ನು ಒರಟೊರಟಾಗಿ ಉಜ್ಜಿಕೊಂಡು ದೃಷ್ಟಿ ಪಥವನ್ನು ಸರಿ ಪಡಿಸಿದನು. ಆಗ ಕಂಡದ್ದು ಕುದುರೆಯಲ್ಲ; ಕಂದು ಬಣ್ಣದ ಕರಡಿ! ಆ ಪ್ರಾಣಿಯು ಕುತೂಹಲದಿಂದ ಅವನನ್ನು ಪರೀಕ್ಷಿಸುತಿತ್ತು.

ಆಗಲೇ ನಾಯಕನು ಬಂದೂಕವನ್ನು ಭುಜಕ್ಕೇರಿಸಲು ಪ್ರಯತ್ನಪಟ್ಟನು. ಆಮೇಲೆ ಏನು ತೋರಿತೋ ಅದನ್ನು ಕೆಳಕ್ಕಿಳಿಸಿ ಸೊಂಟದ ಒರೆಯಿಂದ ಬೇಟೆಯ ಚಾಕನ್ನು ಹೊರತೆಗೆದನು. ಅವನ ಮುಂದೆ ಮಾಂಸವಿದೆ; ಅದಕ್ಕೆ ಮುಖವಾಡ ಹಾಕಿರುವ ಜೀವವೂ ಇದೆ. ಚಾಕುವನ್ನು ಹೆಬ್ಬೆರಳಿನಲ್ಲಿ ಹಿಡಿದನು. ಅದರ ಕೊನೆ ಚೂಪಾಗಿತ್ತು. ಕರಡಿಯ ಮೇಲೆ ಹಾರಿ ಚಾಕುವನ್ನು ಒಳಕ್ಕೆ ನುಗ್ಗಿಸಿಬಿಟ್ಟರೆ ಸಾಕು; ಪ್ರಾಣಿಯನ್ನು ಕೊಲ್ಲಲು ಕಷ್ಟವಾಗುವುದಿಲ್ಲ. ಆದರೆ ಅವನ ಹೃದಯ ಒಂದೇ ಸಮನೆ ಬಡಿದುಕೊಳ್ಳುತಿತ್ತು. ನೆತ್ತಿಗೇರಿದಂತೆ ಹೊಡೆತದ ರಭಸ ಜೋರಾಯಿತು. ಕಬ್ಬಿಣದ ಪಟ್ಟಿಯನ್ನು ಹಣೆಗೊತ್ತಿದಂತೆ ನೋವಾಗಿ, ಅವನ ಬುದ್ಧಿ ಭ್ರಮಣೆಗೊಂಡಿತು.

ಅಪ್ಪಳಿಸುವಂತಿದ್ದ ಹೆದರಿಕೆಗೆ ಸಿಕ್ಕಿ ಅವನ ಹುಚ್ಚು ಧೈರ್ಯ ಓಡಿ ಹೋಯಿತು. ಹೀಗೆ ದುರ್ಬಲನಾಗುತ್ತ ಬಂದರೆ ಮುಂದೇನು ಗತಿ? ಎಂದು ಕಳವಳಗೊಂಡನು. ತಕ್ಷಣ ಕರಡಿಯನ್ನೇ ದಿಟ್ಟಿಸಿನೋಡುತ್ತ, ಮುಷ್ಟಿಯಲ್ಲಿ ಭದ್ರವಾಗಿ ಚಾಕುವನ್ನು ಹಿಡಿದು, ವಿಸ್ಮಯಗೊಳಿಸುವಂಥ ಭಂಗಿಯನ್ನು ತಾಳಿದನು. ಕರಡಿ ವಕ್ರ ವಕ್ರವಾಗಿ ಎರಡು ಹೆಜ್ಜೆಗಳನ್ನು ಮುಂದೆ ಹಾಕಿ ನೆಟ್ಟಗೆ ನಿಂತಿತು. ಮನುಷ್ಯನನ್ನು ಪರೀಕ್ಷಿಸಲು 'ಗುರ್, ಗುರ್' ಎಂದು ಶಬ್ದಮಾಡಿತು....ಸುಮ್ಮನೆ ಮೇಲೆ ಬೀಳುವುದಕ್ಕಿಂತ ಮನುಷ್ಯನ ಪ್ರತಿಕ್ರಿಯೆ ಯನ್ನು ಕಾದು ನೋಡುವುದು ಒಳ್ಳೆಯದು. ಅವನೇನಾದರೂ ಓಡಿದರೆ, ಸತ್ವ ತಿಳಿದುಹೋಗುತ್ತದೆ. ಆಗ ಸುಲಭವಾಗಿ ತಾನು ಹಿಂಬಾಲಿಸಬಹುದು....

ಹೀಗೆ ಕರಡಿಯು ಯೋಚಿಸಿರಬೇಕು. ಆದರೆ ಮನುಷ್ಯ ಓಡಲೇ ಇಲ್ಲ. ಇದ್ದ ಜಾಗಬಿಟ್ಟು ಕದಲಲಿಲ್ಲ. ಮಿತಿ ಮೀರಿದ ಹೆದರಿಕೆಯುಂಟಾದರೆ, ಅತಿ ಧೈರ್ಯ ತಾಳುವ ಸಂಭವವೂ ಉಂಟು. ಹಾಗೆಯೆ ಮನುಷ್ಯನೂ ಧೈರ್ಯ ತಂದು ಕೊಂಡನು. ಪ್ರಾಣಿಯಂತೆಯೆ ಅವನೂ ಭೀಕರವಾಗಿ ಗುರುಗುಟ್ಟಿದನು. ತನ್ನ ಜೀವಮೂಲಕ್ಕೇ ಸಂಬಂಧಿಸಿದ ಹೆದರಿಕೆಯಿದ್ದರೂ, ತೋರ್ಪಡಿಸದೆ ಸೂಕ್ತ ಮುಖವಾಡವನ್ನೇ ಹಾಕಿದ್ದನು.

ಕರಡಿಯು ಒಂದು ಪಕ್ಕಕ್ಕೆ ಸರಿಯಿತು; ಭಯವಿಲ್ಲದೆ ನೆಟ್ಟಗೆ ನಿಂತಿದ್ದ ಸಮಸ್ಯಾತ್ಮಕ ಪ್ರಾಣಿಯನ್ನು ನೋಡಿ ಗಾಬರಿಪಟ್ಟಿರಬೇಕು! ವಿಪತ್ತು ಸೂಚಿಸುವಂತೆ ಹೌಹಾರುತ್ತ ಹೊರಟುಹೋಯಿತು. ಅಷ್ಟಾದರೂ ಮನುಷ್ಯ ಚಲಿಸಲಿಲ್ಲ. ಅಪಾಯದ ಸಂಭವ ಕೊನೆಗಾಣುವ ತನಕ ಶಿಲಾವಿಗ್ರಹದಂತೆ ನಿಂತಿದ್ದನು. ಆಮೇಲೆ ಧೈರ್ಯದಿಂದ ಸಡಿಲಗೊಂಡರೂ, ದೇಹ ನಡುಗುತಿತ್ತು. ತೇವಗೊಂಡ ಪಾಚಿಯ ಮೇಲೆಯೆ ಕುಸಿದುಬಿದ್ದನು.

ಈಗ ಅವನಿಗೆ ಹೊಸ ರೀತಿಯ ಹೆದರಿಕೆಯುಂಟಾಯಿತು....ಹೊಟ್ಟೆ ಗಿಲ್ಲದೆ ತಾನು ಸಾಯಬಹುದು; ಅದರಲ್ಲಿ ಅವನಿಗೆ ಸ್ವಲ್ಪವೂ ಭಯವಿಲ್ಲ. ಆದರೆ ಇಷ್ಟು ಬೇಗ್ರ ತಾನು ಕೊನೆಗಾಣುವುದೇ! ಹಸಿದಿದ್ದರೂ, ಬದುಕಿಬಾಳ ಬೇಕೆಂಬ ಸ್ಫೂರ್ತಿಯುತ ಅಂಶಗಳು ತನ್ನಲ್ಲಿ ಇನ್ನೂ ಉಳಿದಿವೆ. ಅವುಗಳ ಸಂಪೂರ್ಣ ಪ್ರಯೋಜನ ಪಡೆಯುವುದಕ್ಕಿಂತ ಮುಂಚೆ, ತಾನು ಯಾವುದೋ ಪ್ರಬಲ ಶಕ್ತಿಗೆ ಸಿಕ್ಕಿ ದೇಹವನ್ನು ನಾಶಪಡಿಸಿಕೊಂಡರೆ ತುಂಬಾ ಅನ್ಯಾಯ!.... ಕರಡಿಯೇನೋ ಬಂದ ದಾರಿ ಹಿಡಿಯಿತು; ಆದರೆ ಈ ಪ್ರದೇಶದಲ್ಲಿ ಬೇಕಾದಷ್ಟು ತೋಳಗಳಿವೆ! ಶೂನ್ಯ ವಾತಾವರಣದಲ್ಲಿ ಅವುಗಳ ಕೂಗಾಟ, ವಿಪತ್ತು ಸೂಚಿಸುವ ಡಂಗುರದಂತಿತ್ತು. ಬಿರುಗಾಳಿಗೆದ್ದ ಡೇರೆಯನ್ನು ಹಿಡಿದು ಜಗ್ಗಿಸುವಂತೆ ಅವನು ಗಾಳಿಯೊಡನೆ ಗುದ್ದಾಡಿದನು.

ಆಗಾಗ ಎರಡೆರಡು ಅಥವಾ ಮೂರು ಮೂರು ತೋಳಗಳು ಅವನ ದಾರಿಗೆ ಅಡ್ಡಲಾಗಿ ಸಾಗುತಿದ್ದವು. ಅವನನ್ನು ನೋಡಿದರೂ ನೋಡದ ಹಾಗೆ ದೂರ ಸರಿಯುತಿದ್ದವು! ಇದಕ್ಕೆ ಎರಡು ಕಾರಣಗಳಿದ್ದುವು; ಗುಂಪಿನಲ್ಲಿ ಸಾಕಷ್ಟು ತೋಳಗಳ ಸಂಖ್ಯೆ ಇಲ್ಲದಿದ್ದುದು, ಒಂದು; ಎರಡನೆಯದಾಗಿ ಅವು ಕ್ಯಾರಿಬೌ ಪ್ರಾಣಿಯನ್ನು ಬೇಟೆಯಾಡುತಿದ್ದುವು. ಎಷ್ಟಾದರೂ ಕ್ಯಾರಿಬೌ ಎದುರುಬಿದ್ದು ಕಾದಾಡುವ ಪ್ರಾಣಿಯಲ್ಲ. ಆದರೆ ನೆಟ್ಟಗೆ ನಡೆಯುತ್ತಿರುವ ಈ ನವೀನ ಪ್ರಾಣಿಯಾದರೋ ಆಶ್ಚರ್ಯಕರವಾಗಿದೆ; ಕಾಲುಕೆರೆದು ಕಚ್ಚ

ಬಹುದು!—ಎಂದು ಆ ತೋಳಗಳು ಯೋಚಿಸಿರಬೇಕು.

ಮಧ್ಯಾಹ್ನವೆಲ್ಲ ತಿರುಗಾಡಿದ ಮೇಲೆ ಅವನು ಒಂದು ಜಾಗಕ್ಕೆ ಬಂದನು. ಅಲ್ಲಿ ತೋಳಗಳು ಸಾವಿನಾಟ ನಡೆಸಿರಬೇಕು; ಏಕೆಂದರೆ ಮೂಳೆಗಳು ಚೆಲ್ಲಾಪಿಲ್ಲಿಯಾಗಿ ಹರಡಿದ್ದವು. ಆ ಅವಶೇಷಗಳೇ ಒಂದು ಗಂಟೆಯ ಹಿಂದೆ, ಉತ್ಸಾಹದಿಂದ ಚೀರುತ್ತಾ ಓಡಿದ್ದ ಕ್ಯಾರಿಬ್ ಮರಿಯದಾಗಿತ್ತು! ಮೂಳೆಗಳನ್ನೇ ದಿಟ್ಟಿಸಿ ನೋಡಿದನು. ಕಿತ್ತಾಟದ ರಕ್ತಜಾಲದಲ್ಲಿ ಓಲಾಡಿದ್ದ ಕೆಲವು ನಸುಗೆಂಪಿನ ಮೂಳೆಗಳಲ್ಲಿ ಇನ್ನೂ ಸಾಯದ ಜೀವಕಣಗಳು ಅಡಗಿದ್ದಂತೆ ಕಂಡಿತು....ಯಾವುದೋ ದಿನದಲ್ಲಿ ತನ್ನ ಗತಿಯೂ ಅಷ್ಟೇ ತಾನೆ! ಬಾಳೆಂದರೆ ಅಷ್ಟೇ ಅಲ್ಲವೇ? ನಿಸ್ಸಾರ; ಹಾಗೂ ಕ್ಷಣಿಕ. ಜೀವಿಸಬೇಕೆನ್ನುವವರಿಗೆ ಮಾತ್ರ ನರಳಾಟ ಮಾಸಲು. ಮೃತ್ಯುವೆಂಬ ಮಾಯಾಲೋಕದಲ್ಲಿ ಯಾವ ಗುದ್ದಾಟವೂ ಇಲ್ಲ. ಸಾಯುವುದೆಂದರೆ ಮಲಗಿದಂತೆ; ಅಷ್ಟೆ. ಅದೇ ಸಂಪೂರ್ಣ ವಿರಾಮ ಮತ್ತು ವಿಶ್ರಾಂತಿ. ಹಾಗಾದರೆ ತಾನು ಸಾಯುವುದರಲ್ಲೇಕೆ ತೃಪ್ತನಾಗುವುದಿಲ್ಲ? ....

ಆದರೆ ಅವನು ನೀತಿಯ ವ್ಯಾಖ್ಯಾನವನ್ನು ಬಹು ಹೊತ್ತು ಮುಂದುವರಿಸಲಿಲ್ಲ. ತಕ್ಷಣ ಕಾರ್ಯತತ್ಪರನಾದನು. ಜೌಗು ಪ್ರದೇಶದಲ್ಲಿ ಭದ್ರವಾಗಿ ಕುಳಿತನು. ಮೂಳೆಯೊಂದನ್ನು ಬಾಯ ಹತ್ತಿರ ತಂದನು. ಮೂಳೆಯ ಸುತ್ತಲೂ ಅಂಟಿಕೊಂಡಿದ್ದ ನಸುಗೆಂಪಿನ ಜೀವರಸವನ್ನು ಹೀರಿದನು. ಮಾಂಸದ ಸವಿ ಅವನನ್ನು ಹುಚ್ಚನನ್ನಾಗಿ ಮಾಡಿತು. ಸ್ವಲ್ಪ ಪ್ರಮಾಣದಲ್ಲಿದ್ದರೂ, ಆಸೆ ತೋರಿಸಿ ಮರೆಯಾಗುವ ನೆನಪಿನಂತೆ ಆ ಮಾಂಸದ ಚೂರು ದಿಗ್ಭ್ರಮೆ ಹಿಡಿಸಿತು. ಸವಿಯೂಟ ಮುಗಿಯಿತು. ಮೂಳೆ ಮಾತ್ರ ಉಳಿಯಿತು. ಅದನ್ನೂ ದವಡೆಯಲ್ಲಿ ಸಿಕ್ಕಿಸಿ ಕಟಕಟನೆ ಕಡಿದನು. ಕೆಲವು ವೇಳೆ ಮೂಳೆ ಚೂರಾಯಿತು. ಮತ್ತೆ ಕೆಲವು ಸಾರಿ ಅವನ ಹಲ್ಲುಗಳೇ ಮುರಿದುಹೋದವು. ಮತ್ತೆ ಮೂಳೆಯನ್ನು ಹೊರತೆಗೆದು ಕಲ್ಲಿನಿಂದ ಜಜ್ಜಿ ಮುದ್ದೆಮಾಡಿದನು; ಹಾಗೆಯೇ ಬಾಯಿಗೆ ಹಾಕಿಕೊಳ್ಳಲು ಹಿಂಜರಿಯಲಿಲ್ಲ. ಆತುರದಲ್ಲಿ ಎಷ್ಟೋ ಸಾರಿ ಅವನ ಬೆರಳುಗಳೂ ಜಜ್ಜಿಹೋದುವು. ಅವನಿಗೇ ಆಶ್ಚರ್ಯವಾಯಿತು; ಏಕೆಂದರೆ ತನ್ನ ಕೈ ಉರುಳುತ್ತಿದ್ದ ಬಂಡೆಕಲ್ಲಿಗೆ ಸಿಕ್ಕಿದಾಗ ಇಷ್ಟು ನೋವಾಗಿರಲಿಲ್ಲ.

ಮಂಜಿನ ಅಥವಾ ಮಳೆಯ ಅತಿರೇಕದ ದಿನಗಳು ಎಷ್ಟೋ ಆಗಿಹೋದವು. 'ಎಲ್ಲಿ ಬೀಡುಮಾಡಿದೆ, ಯಾವಾಗ ಹೊರಟೆ' ಮುಂತಾದ

ವಿಷಯಗಳು ಅವನಿಗೆ ಒಂದೂ ತಿಳಿಯದು. ರಾತ್ರಿ ಹಗಲು ಒಂದೇ ಸಮನೆ ಪ್ರಯಾಣ ಮಾಡುತಿದ್ದನು. ಕೆಳಕ್ಕೆ ಬಿದ್ದಾಗ, ಆ ಜಾಗದಲ್ಲೇ ವಿಶ್ರಾಂತಿ ಪಡೆದು ಮುಂದುವರಿಯುತಿದ್ದನು. ಬಾಳ ಬತ್ತಿ ಮೃತ್ಯುವಿನ ಹೊಡೆತಕ್ಕೆ ಸಿಕ್ಕಿ ಮಂಕಾಗಿ ಉರಿಯುತಿದ್ದಾಗ, ಏನು ಮಾಡಿಯಾನು? ಆದರೂ ಅಂಥ ಸಂದರ್ಭ ದಲ್ಲಿ ತೆವಳುತ್ತಾ ಹೋಗುತಿದ್ದನು. ಅಂತೂ ಅವನೀಗ ಮನುಷ್ಯನಾಗಿ ಕೆಲಸ ಮಾಡುತ್ತಿರಲಿಲ್ಲ! ಸಾಯಲು ಇಚ್ಛೆಯಿಲ್ಲದ ಒಳಗಿನ ಜೀವ ಅವನನ್ನು ಮುಂದೆ ಮುಂದೆ ನೂಕುತಿತ್ತು! ಅವನೇನೂ ಕಷ್ಟಪಡಲಿಲ್ಲ! ನರಗಳು ಸೂಕ್ಷ್ಮತೆಯನ್ನು ಕಳೆದುಕೊಂಡಿದ್ದವು. ಮನಸ್ಸು ದೇಹದಿಂದ ದೂರವಾಗಿ ಸ್ವಾರಸ್ಯವಾದ ಕನಸನ್ನು ಕಾಣುತಿತ್ತು; ಅಲ್ಲಿ ಒಂದರ ಮೇಲೊಂದು ವಿಜಾತೀಯ ದೃಶ್ಯ ಪರಂಪರೆಯಿತ್ತು.

ಅಂತೂ ಕ್ಯಾರಿಬೌ ಮರಿಯ ಎಲುಬುಗಳನ್ನು ಕುಟ್ಟಿ ತಿಂದವ್ದಾಯಿತು; ಹೊರಗಿನ ಮಾಂಸ ನಾರವನ್ನು ಹೀರಿದ್ದೂ ಆಯಿತು. ಅಷ್ಟಕ್ಕೇ ಮುಗಿಯಲಿಲ್ಲ; ಇನ್ನೂ ಉಳಿದಿತ್ತು. ಆ ಭಾಗವನ್ನೆಲ್ಲ ಒಂದೆಡೆ ಸೇರಿಸಿ ಕುಟ್ಟಿ ತನ್ನ ಜೊತೆ ಯಲ್ಲೇ ತೆಗೆದುಕೊಂಡು ಹೊರಟನು. ಮತ್ಯಾವ ಬೆಟ್ಟವನ್ನೂ ದಾಟಲಿಲ್ಲ. ಮರುಯೋಚನೆಯಿಲ್ಲದೆ, ದೊಡ್ಡ ಪ್ರವಾಹವನ್ನು ಯಾಂತ್ರಿಕವಾಗಿ ಹಿಂಬಾಲಿ ಸುತಿದ್ದನು; ಹೆಚ್ಚು ಆಳವಿಲ್ಲದೆ ಅಗಲವಾಗಿದ್ದ ಕಣಿವೆಯಲ್ಲಿ ನೀರು ಹರಿಯು ತಿತ್ತು. ಪ್ರವಾಹವಾಗಲಿ ಕಣಿವೆಯಾಗಲಿ ಅವನ ಕಣ್ಣಿಗೆ ಬೀಳಲಿಲ್ಲ. ಎಲ್ಲವೂ ಸ್ವಪ್ನದರ್ಶನದಂತಿತ್ತು. ದೇಹ, ಆತ್ಮ ಎರಡೂ ಪಕ್ಕ ಪಕ್ಕದಲ್ಲಿ ತೆವಳಿಕೊಂಡು ನಡೆಯುತಿದ್ದವು; ಅವೆರಡನ್ನೂ ಕಟ್ಟಿದ್ದ ದಾರ ಒಂದೇ ಏಟಿಗೆ ಕಳಚಿಬೀಳು ವಷ್ಟು ಮೃದುವಾಗಿತ್ತು. ಅಂದ ಮೇಲೆ ದೇಹ ಬೇರೆ, ಆತ್ಮ ಬೇರೆ—ಎನ್ನು ವುದೇ ಸರಿ.

ಅಂದು ಸೂರ್ಯನ ಬೆಳಕು ಜೋರಾಗಿತ್ತು; ಹಿಂದಿನೆರಡು ದಿನಗಳು ಬೇಸರ ಹಿಡಿಸಿದ ಮಳೆ ಗಾಳಿಯ ಫಲವಿರಬೇಕು. ನಾಯಕನಿಗೆ ಮಾತ್ರ ಏನೂ ಹೊಳೆಯಲಿಲ್ಲ. ಮಂಜು ಮಳೆ ಗಾಳಿ ಎಂದೋ ಇದ್ದಂತೆ ಅವನಿಗನ್ನಿ ಸಿತು. ಅಸ್ಪಷ್ಟ ನೆನಪು ಮಾತ್ರ ಉಳಿದಿತ್ತು. ಅದು ಹೋಗಲಿ ಎಂದರೆ, ಅದರಿಂದ ಪೀಡಿತನಾದ ವಿಷಯವಂತೂ ಕೊಂಚವೂ ತಿಳಿಯದು. ಅವನಿಗೆ ಎರಡು ದಿನವೂ ಒಂದೇ; ಎರಡು ವಾರವೂ ಒಂದೇ.

ಸ್ವಲ್ಪ ಹೊತ್ತು ಚಲಿಸದೆ ಹಾಗೆಯೆ ಬಿದ್ದುಕೊಂಡಿದ್ದನು. ಸೂರ್ಯ ರಶ್ಮಿಯು ಹೊಡೆತ ಉಲ್ಲಾಸಕರವಾಗಿತ್ತು. ದುರವಸ್ಥೆಯಲ್ಲಿದ್ದ ಅವನ ಶರೀರ

ಬೆಚ್ಚಗಾಯಿತು. ಇದೊಂದು ಒಳ್ಳೆಯ ದಿನವಿರಬೇಕು; ತಾನಿರುವ ಸ್ಥಳ ಯಾವುದು, ಮುಂದೆ ಹೇಗೆ ಹೋಗಬೇಕು, ಇತ್ಯಾದಿ ವಿಷಯಗಳನ್ನು ನಿರ್ಧರಿಸಲು ಇವತ್ತು ಸಾಧ್ಯವಾಗಬಹುದು—ಎಂದು ಯೋಚಿಸಿದನು. ಕಷ್ಟಪಡುತ್ತಾ ಪಕ್ಕಕ್ಕೆ ಹೊರಳಿಕೊಂಡನು. ಕೆಳಗೆ ಮಂದಗಾಮಿ ನದಿಯೊಂದು ಹರಿಯುತಿತ್ತು; ಸಾಕಷ್ಟು ದೊಡ್ಡದಾಗಿಯೂ ಇತ್ತು. ಅವನ ಕಣ್ಣಿಗೆ ಅದು ತೀರ ಅಪರಿಚಿತವಾಗಿ ಕಂಡಿತು. ಜೊತೆಗೆ ಆಶ್ಚರ್ಯವೂ ಆಯಿತು. ನೋಡೇ ಬಿಡೋಣವೆಂದು ನದಿಯನ್ನೇ ಹಿಂಬಾಲಿಸಿದನು. ನದಿಯ ಮಾರ್ಗ ಪಸರಿಸುತ್ತಾ ಬೆಟ್ಟಗಳನ್ನು ಬಳಸಿತ್ತು. ಆ ಬೆಟ್ಟದಷ್ಟು ನಿರ್ವರ್ಣವೂ ಅನಾವೃತವೂ ಕೆಳಮಟ್ಟದ್ದೂ ಆದ ಮತ್ತೊಂದು ಬೆಟ್ಟವನ್ನು ಅವನು ಹಿಂದೆಂದೂ ನೋಡಿರಲಿಲ್ಲ. ನಿಧಾನವಾಗಿಯೂ ಜಾಗರೂಕನಾಗಿಯೂ ಹಿಂಬಾಲಿಸಿದನು. ಹೆಚ್ಚು ಉದ್ರೇಕಗೊಳ್ಳದೆ ಸಾಮಾನ್ಯ ಆಸಕ್ತಿಯನ್ನು ವಹಿಸಿದ್ದನು. ಕಡೆಗೆ ಆ ನದಿ, ಹೊಳೆಯುತಿದ್ದ ಸಮುದ್ರವೊಂದಕ್ಕೆ ಹೋಗಿ ಸೇರಿತು. ಸಮುದ್ರ! ಅವನು ಇನ್ನೂ ಅನುದ್ರಿಕ್ತನಾಗಿದ್ದನು. ತುಂಬಾ ಅಸ್ವಾಭಾವಿಕವಾಗಿದೆ ಎಂದು ಯೋಚಿಸಿದನು. ಇದೇನು ಮರೀಚಿಕೆಯೋ ಅಥವಾ ತನ್ನ ಮನೋವಿಕಾರವೋ? ನಿಜ; ಕೀಲು ತಪ್ಪಿದ ಮನಸ್ಸಿನ ಉಪಾಯವೇ ಇರಬೇಕು:—ಎಂದು ತನ್ನಲ್ಲೇ ಎಣಿಕೆಹಾಕಿದನು....ಅಗೋ ಹಡಗು! ಥಳಥಳಿಸುತ್ತಿರುವ ಸಮುದ್ರದ ಮಧ್ಯೆ ಲಂಗರು ಹಾಕಿದ ಸ್ಥಿತಿಯಲ್ಲಿ ನಿಂತಿದೆ! ಈಗ ಸಿದ್ಧವಾಯಿತು; ನಿಜವಾಗಿಯೂ ಇದು ಸಮುದ್ರವೇ ಹೌದು....ಸ್ವಲ್ಪ ಹೊತ್ತು ಕಣ್ಣುಮುಚ್ಚಿ ತೆಗೆದನು. ಅಂತೂ ತನ್ನೆದುರಿನ ಸಮುದ್ರ ದೃಶ್ಯ ಆಶ್ಚರ್ಯಜನಕವೇ ಆಗಿದೆ. ಬಂಜರು ಭೂಮಿಯ ಹೃದಯದಲ್ಲಿ ಸಮುದ್ರವೆಲ್ಲಿ? ಹಡಗೆಲ್ಲಿ? ತೀರ ಅಸಂಭವ—ಎಂದು ತಿಳಿದಿದ್ದನು. ಹಿಂದೆ ಬರಿದಾದ ಬಂದೂಕಿನಲ್ಲಿ ಸಿಡಿಮದ್ದನ್ನು ಹುಡುಕಿದಂತೆ, ಈ ಪ್ರಸಂಗದಲ್ಲೂ ಭ್ರಾಂತಿಯಿಂದ ವರ್ತಿಸಿದ್ದಾಯಿತು.

ಗಾಳಿಯನ್ನು ಎಳೆದಾಡುವಂಥ 'ಸ್ನಿಫ್, ಸ್ನಿಫ್' ಎಂಬ ಸದ್ದು ಅವನಿಗೆ ಕೇಳಿಸಿತು. ಅದೂ ತನ್ನ ಹಿಂದೆಯೇ! ಯಾರದೋ ಉಸಿರು ಅರ್ಧದಲ್ಲೇ ನಿಂತಿರಬೇಕು; ಇಲ್ಲವೇ ಕೆಮ್ಮಿರಬಹುದು. ಅತಿ ದೌರ್ಬಲ್ಯದಿಂದ ಅವನ ದೇಹ ಬಳುಕಲು ಸಾಧ್ಯವಿಲ್ಲದಿದ್ದರೂ, ಮೆಲ್ಲಗೆ ಮತ್ತೊಂದು ಪಕ್ಕಕ್ಕೆ ಹೊರಳಿದನು. ಹತ್ತಿರವೇನೂ ಕಾಣಿಸಲಿಲ್ಲ. ಆದರೂ ತಾಳ್ಮೆಯಿಂದ ಕಾಯ್ದನು. ಪುನಃ 'ಸ್ನಿಫ್, ಸ್ನಿಫ್' ಎಂದು ಕೆಮ್ಮುವ ಶಬ್ದ ಕೇಳಬಂತು. ಇಪ್ಪತ್ತು ಅಡಿಗಳಷ್ಟು ದೂರವೂ ಇಲ್ಲ; ಅಲ್ಲೇ ಮೊನಚಾದ ಎರಡು ಬಂಡೆಗಳಿದ್ದುವು; ಅದರ

ಮಧ್ಯೆಯೆ ತೋಳವೊಂದರ ಮೂಸಲು ತಲೆ ಕಾಣಿಸಿತು. ಈ ಪ್ರಾಣಿಯ ಕಿವಿ ಬೇರೆಯ ತೋಳಗಳ ಕಿವಿಯಷ್ಟು ನಿಮಿರಿ ನಿಂತಿರಲಿಲ್ಲ. ಮಂದದೃಷ್ಟಿಯ ಕಣ್ಣುಗಳು ರಕ್ತದಿಂದ ಕೆಂಪೇರಿದ್ದವು. ಆ ತೋಳವನ್ನು ಎಲ್ಲರೂ ಕೈ ಬಿಟ್ಟಂತೆ ಕಂಡಿತು. ಆದ್ದರಿಂದಲೇ ಅದರ ತಲೆ ಜೋತು ಬಿದ್ದಿತ್ತು. ಸೂರ್ಯ ಕಿರಣ ವನ್ನು ತಡೆಯಲಾರದೆ, ಒಂದೇ ಸಮನೆ, ಪಟಪಟನೆ ಎವೆಯಿಕ್ಕುತಿತ್ತು. ಖಾಯಿಲೆಯಿಂದ ನರಳುತ್ತಿರುವಂತೆ ತೋರಿತು. ಮನುಷ್ಯನು ಆ ಕಡೆ ನೋಡುತ್ತಿದ್ದ ಹಾಗೆಯೆ, ಪ್ರಾಣಿಯು ಮತ್ತೆ ಮತ್ತೆ ಕೆಮ್ಮತೊಡಗಿತು.

ಇದಂತೂ ವಾಸ್ತವ ಪ್ರಪಂಚಕ್ಕೆ ಸೇರಿದ್ದು ; ಎದುರಿನಲ್ಲೇ ನಿಂತು ಕೆಮ್ಮುತ್ತಿರುವ ತೋಳವನ್ನು ಇಲ್ಲವೆಂದು ಯಾರು ತಾನೆ ಹೇಳಬಲ್ಲರು ?........

ಪಕ್ಕಕ್ಕೆ ತಿರುಗಿದನು.

ಈಗಲೂ ವಾಸ್ತವಿಕತೆಯನ್ನು ತೋರಿಸುತ್ತಿರುವ ಸಾಗರವಿದೆ. ಆದರೆ ಒಂದು ಕ್ಷಣ ಹಿಂದೆ ಅದು ತನ್ನ ಮಬ್ಬು ದೃಷ್ಟಿಯ ಮುಸುಕಿನಲ್ಲಿ ಅಡಗಿ ಹೋಗಿತ್ತು. ಸಾಗರವು ದೂರ ದೂರ ಹರಡಿದ್ದರೂ, ಇನ್ನೂ ಬೆಳಗುತ್ತಲಿದೆ. ಹಡಗನ್ನು ಕೂಡ ಪರಿಶ್ರಮವಿಲ್ಲದೆ ಗುರುತಿಸಬಹುದು. ಕಡೆಗೂ, ಇವೆಲ್ಲವನ್ನೂ ವಾಸ್ತವವೆಂದು ಒಪ್ಪಬಹುದಷ್ಟೆ ?........

ಬಹಳ ಹೊತ್ತು ಕಣ್ಣು ಮುಚ್ಚಿಕೊಂಡು ಯೋಚಿಸಿದನು. ಆಗ ಸರಿ ತೋರುವಂಥ ಮಾರ್ಗ ಹೊಳೆಯಿತು—ಇಲ್ಲಿಯ ತನಕ ತಾನು ಮಾಡಿರು ದೇನು ? ಪೂರ್ವದಿಂದ ಉತ್ತರದ ಕಡೆ ಪ್ರಯಾಣ ಮಾಡಿದ್ದಾಯಿತು. ಡೀಸ್ ವಿಭಾಗಕ್ಕೂ ತನಗೂ ಬಹಳ ಅಂತರವೇರ್ಪಟ್ಟಿದೆ. ತಾನು ನಡೆದು ಬಂದ ದಾರಿಯೇ ಕಾಪರ್‌ಮೈನ್ ಕಣಿವೆ. ಆ ಮಂದಗಾಮಿ ನದಿಯೇ ಕಾಪರ್ ಮೈನ್! ಎದುರಿಗೆ ಹೊಳೆಯುತ್ತಿರುವುದೇ ಉತ್ತರ ಸಾಗರ! ಆ ಹಡಗು ದಾರಿ ತಪ್ಪಿದ ಬೇಟೆಯ ಹಡಗು! ಅದು ಮೆಕೆನ್‌ಸಿ ದಡದಿಂದ ಪೂರ್ವಾಭಿ ಮುಖವಾಗಿ ಪ್ರಯಾಣ ಹೊರಟಿರಬೇಕು. ಈಗ ಲಂಗರು ಹಾಕಿ ನಿಂತಿರುವ ಜಲಭಾಗವೇ ಕಾರೊನೇಷನ್ ಕೊಲ್ಲಿ!........

ಅವನು ಹಡ್ಸನ್ ಬೇ ಕಂಪೆನಿಯ ಸಮುದ್ರ ಪಟವನ್ನು ಅನೇಕ ವರ್ಷ ಗಳ ಹಿಂದೆ ನೋಡಿದ್ದನು. ಈಗ ಅದನ್ನು ಜ್ಞಾಪಿಸಿಕೊಂಡು ಸಂಪೂರ್ಣ ಪ್ರಯೋಜನ ಪಡೆದನು. ಎಲ್ಲಕ್ಕೂ ಸ್ಪಷ್ಟವಾದ ತರ್ಕಬದ್ಧವಾದ ಸಮಾಧಾನ ದೊರಕಿತು.

* * * *

ಮಲಗಿದ್ದರೆ ಪ್ರಯೋಜನವಿಲ್ಲವೆಂದು ಎದ್ದು ಕುಳಿತನು. ಆತುರದಿಂದ ಹತ್ತಿರದ ಸಾಮಗ್ರಿಗಳನ್ನು ನೋಡಿಕೊಂಡನು. ಕಾಲಿಗೆ ಸುತ್ತಿದ್ದ ಬಟ್ಟೆಯ ಚೂರುಗಳು ಮತ್ತಷ್ಟು ಹರಿದು ಹೋಗಿದ್ದವು. ಕಾಲು ವಿಕಾರವಾಗಿ ಹಸಿ ಮಾಂಸದ ಮುದ್ದೆಯಂತಿತ್ತು. ಕಡೆಯದಾಗಿ ಉಳಿದಿದ್ದ ಕಂಬಳಿಯೂ ಮಾಯವಾಗಿತ್ತು. ಬಂದೂಕವಾಗಲಿ, ಚಾಕುವಾಗಲಿ ಸಮೀಪದಲ್ಲಿ ಕಾಣಲಿಲ್ಲ. ಹೇಗೆ ಕೈ ತಪ್ಪಿ ಜಾರಿತೋ ಆಶ್ಚರ್ಯ. ಜೊತೆಗೆ ಹ್ಯಾಟೂ ಕಳೆದುಹೋಗಿದೆ; ಅದರೊಳಗಿನ ಬೆಂಕಿಕಡ್ಡಿಗಳು ನೀರು ಪಾಲಾದವು. ಆದರೆ ತನ್ನ ಎದೆಯ ಮೇಲಿನ ಕಡ್ಡಿಗಳು ಸುರಕ್ಷಿತವಾಗಿದೆ! ಎಣ್ಣೆ ಕಾಗದದಲ್ಲಿ ಸುತ್ತಿ ಹೊಗೆ ಸೊಪ್ಪಿನ ಚೀಲದಲ್ಲಿ ಹಾಕಿರುವುದರಿಂದ, ಒಣಗಿರಬೇಕು. ಗಡಿಯಾರದ ಕಡೆ ನೋಡಿದನು. ಹನ್ನೊಂದು ಘಂಟೆ; ಇನ್ನೂ ನಡೆಯುತಿತ್ತು. ಅಂದಮೇಲೆ ತಾನು ಹಿಂದಿನ ದಿನ ಕೀಲುಕೊಟ್ಟಿರಲೇ ಬೇಕು.

ಅವನು ಶಾಂತನಾಗಿ ಧೈರ್ಯ ತಂದುಕೊಂಡನು. ತುಂಬಾ ದುರ್ಬಲ ನಾಗಿದ್ದರೂ, ನರಳಾಟದ ಪ್ರಜ್ಞೆಯೇ ಅವನಿಗಿರಲಿಲ್ಲ. ಹಸಿವೂ ಹೊರಟು ಹೋಗಿತ್ತು. ಆಹಾರದ ಬಗ್ಗೆ ಯೋಚಿಸುವುದೂ ಅವನಿಗೆ ಬೇಡವಾಗಿತ್ತು. ಇಲ್ಲಿಯ ತನಕ ತಾನು ಮಾಡಿದ್ದೆಲ್ಲ ಕೇವಲ ಬುದ್ಧಿ ಬಲದಿಂದಲೇ ಪ್ರಚೋದಿತ ವಾದದ್ದು—ಎಂದು ತರ್ಕಿಸಿದನು. ಹಾಕಿಕೊಂಡ ಬಟ್ಟೆಯನ್ನೇ ಉದ್ದಕ್ಕೆ ಕತ್ತರಿಸಿ ಕಾಲಿಗೆ ಬಿಗಿದುಕೊಂಡನು. ಅಂತೂ ಟಿನ್ನು ಬಕೆಟ್ಟನ್ನು ಹೇಗೋ ಮಾಡಿ ಉಳಿಸಿಕೊಂಡಿದ್ದನು. ಈಗ ಅದರಿಂದ ಎಷ್ಟೋ ಪ್ರಯೋಜನವುಂಟು; ಏಕೆಂದರೆ ಹಡಗನ್ನು ಸೇರಲು ಭಯಂಕರ ಪ್ರಯತ್ನವನ್ನೇ ನಡೆಸಬೇಕು; ಪ್ರಾರಂಭದಲ್ಲಿ ಮೈ ಬೆಚ್ಚಗೆ ಮಾಡಿಕೊಳ್ಳಲು ಬಿಸಿ ನೀರು ಬೇಕಲ್ಲ........

ಅವನ ಚಲನವಲನಗಳು ನಿಧಾನವಾಗಿದ್ದವು. ಪಕ್ಷವಾತ ಹಿಡಿದವನಂತೆ ನಡುಗುತಿದ್ದನು. ಒಣ ಕಡ್ಡಿಗಳನ್ನು ಶೇಖರಿಸಲು ಆರಂಭಿಸಿದನು. ಆದರೆ ತನ್ನ ಕಾಲ ಮೇಲೆ ತಾನು ಭದ್ರವಾಗಿ ನಿಂತುಕೊಳ್ಳಲು ಸಾಧ್ಯವಾಗಲಿಲ್ಲ. ಆದರೂ ಪ್ರಯತ್ನ ಮಾಡಿದನು. ಕಡೆಗೆ ಮೊಣಕಾಲು ಮತ್ತು ಕೈಗಳನ್ನು ಮುಂದಿಡುತ್ತಾ ತೆವಳಿಹೋಗುವುದರಲ್ಲೇ ತೃಪ್ತನಾಗಬೇಕಾಯಿತು. ಹಾಗೆಯೆ ತೆವಳುತ್ತಾ, ಖಾಯಿಲೆಯ ತೋಳನ ಹತ್ತಿರ ಬಂದನು. ಆ ಪ್ರಾಣಿಯು ಅವನ ದಾರಿಗೆ ಅಡ್ಡ ಬರಲಿಲ್ಲ. ತಕ್ಷಣ ಮನಸ್ಸಿಲ್ಲದೆ ಹಿಂದಕ್ಕೆ ಸರಿಯಿತು. ಆಹಾರದ ನಿರೀಕ್ಷಣೆಯಿಂದ ತುಟಿ ಸವರಿಕೊಂಡಿತು. ನಾಲಿಗೆಯನ್ನು ತಿರುಗಿಸುವಷ್ಟು ಶಕ್ತಿಯೂ ಅದಕ್ಕಿರಲಿಲ್ಲ. ನಾಲಿಗೆಯ ಬಣ್ಣ ಆರೋಗ್ಯ ಸೂಚಿಸುವಂಥ

ಕೆಂಪು ಬಣ್ಣವಾಗಿರಲಿಲ್ಲ. ಕಂದು ಬಣ್ಣದಿಂದ ಹಳದಿಗೆ ತಿರುಗಿತ್ತು. ಅದರ ಮೇಲೆ ಒರಟಾದ ಮತ್ತು ಅರ್ಧ ಒಣಗಿದ ಲೋಳೆಯ ಪದಾರ್ಥವನ್ನು ಸವರಿದಂತಿತ್ತು.

ಒಂದು ಕ್ವಾರ್ಟ್ ಬಿಸಿ ನೀರು ಕುಡಿದ ಮೇಲೆ ಸ್ವಲ್ಪ ಉತ್ಸಾಹ ಬಂತು. ತಾನು ನಿಂತುಕೊಳ್ಳಲು ಶಕ್ತನಾಗಿದ್ದೇನೆಂದು ಭಾವಿಸಿದನು. ಸಾಯುತ್ತಿರುವ ಮನುಷ್ಯನೂ ಮುಂದೆ ಮುಂದೆ ನಡೆಯುತ್ತಾನೆ ಎಂದು ವಾಡಿಕೆಯಾಗಿ ಹೇಳುವುದಿಲ್ಲವೇ ? ಅದರಂತೆಯೆ ತಾನು ಕೂಡ ನಡೆಯಲು ಆಸ್ಪದವುಂಟು.... ಪ್ರತಿ ನಿಮಿಷಕ್ಕೂ ನಿಂತು ನಿಂತು ಅವನು ವಿಶ್ರಾಂತಿ ಪಡೆಯಲೇಬೇಕಾಯಿತು. ಆಗಲೋ ಈಗಲೋ ಎಂಬಂತೆ ನಿತ್ರಾಣಗೊಂಡಿದ್ದನು ; ಅದನ್ನು ಅವನ ಹೆಜ್ಜೆಗಳೇ ಸೂಚಿಸುತಿದ್ದವು. ಪ್ರಾಣಿಯೂ ಕೂಡ ಅವನ ಹಾಗೆಯೆ ಹೆಜ್ಜೆ ಹಾಕುತ್ತ ಹಿಂಬಾಲಿಸಿತು. ಆ ರಾತ್ರಿಯಂತೂ ವಿಪರೀತ ಕತ್ತಲೆ; ಅದು ಸಮುದ್ರದ ಹೊಳಪನ್ನೂ ಮರೆಮಾಡಿತು. ಸಮುದ್ರಕ್ಕೆ ಸೇರಬೇಕಾದರೆ ನಾಲ್ಕು ಮೈಲಿಗಳ ಮೇಲಿಲ್ಲವೆಂದು ಅವನು ತಿಳಿದಿದ್ದನು. ರಾತ್ರಿಯಲ್ಲಿ ಎಡಬಿಡದೆ ತೋಳ ಕೆಮ್ಮುತ್ತಿದ್ದುದನ್ನು ಅವನು ಕೇಳಿದನು. ಮಧ್ಯೆ ಮಧ್ಯೆ ಕ್ಯಾರಿಬೌ ಮರಿಗಳು ಚೀರುತಿದ್ದವು.

ಅವನ ಸುತ್ತಲೂ ಶಕ್ತಿಯುತವಾದ ಉತ್ಸಾಹಿ ಜೀವಿಗಳಿದ್ದವು. ಖಾಯಿಲೆಯಿಂದ ನರಳುತ್ತಿರುವ ಈ ತೋಳವು ಖಾಯಿಲೆಯುಳ್ಳ ತನ್ನನ್ನೇ ಹಿಂಬಾಲಿಸಲು ಕಾರಣವೇನು? ಏನೊ ಭರವಸೆಯಿರಬೇಕು. ತನಗೆ ತಿಳಿದಂತೆ, ಮನುಷ್ಯನೇ ಮೊದಲು ಸಾಯಬಹುದು ಎಂಬ ಭಾವ ಪ್ರಾಣಿಯ ಮನಸ್ಸಿನಲ್ಲಿ ಹುಟ್ಟಿರಬೇಕು ; ಅದಕ್ಕಾಗಿಯೇ ತನ್ನನ್ನು ಬೆನ್ನಟ್ಟಿಬರುತ್ತಿರಬೇಕು !

ಬೆಳಗಿನ ಜಾವ ಕಣ್ಣು ಬಿಟ್ಟು ನೋಡಿದನು. ತೋಳ ಅಲ್ಲಿಯೇ ಇತ್ತು. ಹಸಿವಿನ ಹಿನ್ನೆಲೆಯಲ್ಲಿ ಯಾವುದೋ ಆಸೆಯಿಂದ ಮನುಷ್ಯನನ್ನೇ ದಿಟ್ಟಿಸಿ ನೋಡುತಿತ್ತು. ಬಾಲವನ್ನು ಕಾಲುಗಳ ಮಧ್ಯೆ ಸೇರಿಸಿ ಮುದುರಿಕೊಂಡು ನಿಂತಿತ್ತು. ದುರವಸ್ಥೆಗೀಡಾದ, ಮಂಕುಕವಿದ ನಾಯಿಯಂತೆ ಕಂಡಿತು. ಬೆಳಗಿನ ಚಳಿಯನ್ನು ತಡೆಯಲಾರದೆ ಪ್ರಾಣಿಯು ನಡುಗಿತು. ಅದನ್ನು ಮಾತನಾಡಿಸುವವನಂತೆ ಮನುಷ್ಯನು ವಟಗುಟ್ಟಿದನು. ಆದರೆ ಪ್ರಾಣಿಯು ಯಾವ ಉತ್ಸಾಹವನ್ನೂ ತೋರ್ಪಡಿಸದೆ ಹಲ್ಲುಕಿರಿಯಿತು.

ಸೂರ್ಯನು ಆಗಸದಲ್ಲಿ ಬೆಳಗುತ್ತಾ ಮೇಲೇರುತಿದ್ದನು. ನಾಯಕನ ದೃಷ್ಟಿ ಮಾತ್ರ ಸೂರ್ಯನ ಪ್ರತಿಛಾಯೆಯಂತಿದ್ದ ಸಮುದ್ರದ ಮೇಲಿತ್ತು; ಅದ

ರಲ್ಲೂ ಹಡಗಿನ ಮೇಲೆಯೆ ವಾಲಿತ್ತು. ವಾಯುಗುಣ ಹಿತಕರವಾಗಿತ್ತು. ಹೆಚ್ಚು ಅಕ್ಷಾಂಶದ ಸಂಕ್ಷಿಪ್ತ ಬೇಸಿಗೆಯಂತಿತ್ತು. ಹೀಗೆಯೇ ಇರುವುದೆಂದು ನೆಚ್ಚಿ ಕೊಳ್ಳುವುದು ಸರಿಯಲ್ಲ. ಒಂದು ವಾರವೂ ಈ ರೀತಿ ಇರಬಹುದು, ಇಲ್ಲವೇ ನಾಳೆಯೇ ವಾಯುಗುಣ ಬದಲಾಯಿಸಬಹುದು....

ಮಧ್ಯಾಹ್ನ ಮನುಷ್ಯನಿಗೆ ಸಂಶಯವುಂಟಾಯಿತು; ಏಕೆಂದರೆ ತಾನು ಹೋಗುತ್ತಿದ್ದ ದಾರಿ ಯಾರೋ ತುಳಿದ ದಾರಿಯಾಗಿತ್ತು. ಅಂದರೆ, ಮತ್ತೊಬ್ಬ ಮನುಷ್ಯ ತನಗಿಂತ ಮುಂಚೆ ಆ ದಾರಿಯಲ್ಲಿ ಪ್ರಯಾಣ ಮಾಡಿರ ಬೇಕು. ಗುರುತುಗಳನ್ನು ನೋಡಿದರೆ ಕಾಲ ಮೇಲೆ ನಡೆದಂತೆ ತೋರು ವುದಿಲ್ಲ. ಆತ ನಾಲ್ಕು ಕಡೆಯೂ ಭಾರ ಹಾಕಿ ದೇಹವನ್ನು ಎಳೆದಿರಬೇಕು....

ಆ ವ್ಯಕ್ತಿಯೇ ತನ್ನ ಸ್ನೇಹಿತ ಬಿಲ್ ಇರಬಹುದು!–ಎಂದು ನಾಯಕನು ಒಮ್ಮೆ ಯೋಚಿಸಿದನು. ಆದರೆ ಅವನು ಅದನ್ನು ತಲೆಗೇ ಹಚ್ಚಿಕೊಳ್ಳುವಷ್ಟು ಆಸಕ್ತಿಯಿಂದ ವಿವೇಚಿಸಲಿಲ್ಲ. ಅಂಥ ಕುತೂಹಲವೂ ಇಲ್ಲ. ವಾಸ್ತವವಾಗಿ ಹೇಳುವುದಾದರೆ, ಅವನಲ್ಲಿ ಭಾವೋದ್ರೇಕ ಪ್ರವೃತ್ತಿ ಕೊಂಚಮಟ್ಟಿಗೂ ಉಳಿದಿರಲಿಲ್ಲ. ನರಳಾಟದಲ್ಲಿ ನರಳಲೇಬೇಕೆಂಬ ನಿಯಮವನ್ನು ಉಲ್ಲಂಘಿ ಸಿದ್ದನು. ಹೊಟ್ಟೆಯ ಕರುಳು ತೊಂದರೆಪಡಿಸದೆ ಮಲಗಿತ್ತು. ಆದರೂ ಒಳಗಿದ್ದ ಜೀವ ಅವನನ್ನು ಮುಂದುವರಿಯುವಂತೆ ಮಾಡಿತು. ಅವನು ಆಯಾಸಪಟ್ಟಿದ್ದರೂ, ಜೀವ ಹೆದರಲಿಲ್ಲ. ಸಾಯಲು ಪ್ರತಿಭಟಿಸುತ್ತಿರುವ ಆ ಜೀವಕ್ಕಾಗಿಯೆ ಅವನು ಸಣ್ಣ ಸಣ್ಣ ಮಸ್ಕೆಗ್, ಮಿನೋಗಳನ್ನು ತಿಂದದ್ದು; ಹಾಗೂ ಬಿಸಿನೀರು ಕುಡಿದು ಹುಷಾರಿನಿಂದ ರೋಗಿಷ್ಟ ತೋಳನನ್ನು ನೋಡಿದ್ದನು.

ತನ್ನ ಸೇಹಿತನ ದಾರಿಯಲ್ಲೇ ನಡೆದನು. ಬೇಗನೆ ಕೊನೆ ಮುಟ್ಟಿದಂತಾ ಯಿತು. ನೆಲ ತುಂಬ ತೇವಗೊಂಡಿತ್ತು. ಅಲ್ಲಿ ಅನೇಕ ತೋಳಗಳ ಹೆಜ್ಜೆ ಗುರುತು ಎದ್ದು ಕಾಣುತ್ತಿತ್ತು. ಹತ್ತಿರದಲ್ಲಿ ಎಲುಬುಗಳಿದ್ದವು; ಆಗತಾನೆ ದೇಹದಿಂದ ಎಳೆದಿರಬಹುದಾದ ಹೊಸ ಎಲುಬುಗಳು! ದೊಡ್ಡ ಮೂಸ್ ಚರ್ಮದ ಗಂಟು ಕಾಣಿಸಿತು, ತನ್ನದು ಇದ್ದ ಹಾಗೆಯೆ ಇತ್ತು; ಆದರೆ ಚೂಪು ಹಲ್ಲಿನ ಕಡಿತದಿಂದ ಚೂರು ಚೂರಾಗಿತ್ತು. ತೂಕವಾಗಿದ್ದರೂ ಅದನ್ನು ಎತ್ತಿ ಕೊಂಡನು. ಯಾರದಿರಬಹುದು? ಈಗ ಹೊಳೆಯಿತು. ತನ್ನ ಸ್ನೇಹಿತ ಬಿಲ್ ಇದನ್ನು ಕಡೆಯ ತನಕ ಒಯ್ದಿದ್ದಾನೆ!....ಬಿಲ್ ಏನಾದರೂ ನನಗೆ ಸಿಕ್ಕಿದರೆ ನಕ್ಕುಬಿಡುತ್ತೇನೆ! ಏತಕ್ಕಾಗಿ ಚೂರು ಚೂರು ಮಾಡಿಸಿದ್ದಾನೋ

ತಿಳಿಯದು! ಹೋಗಲಿ ; ಇದನ್ನಾದರೂ ಸಮುದ್ರದ ಹಡಗಿಗೆ ಒಯ್ಯಲು ನಾನು ಜೀವಿಸಿದ್ದೇನೆ....

ಅವನ ಸಂತೋಷ ವಿಚಿತ್ರ ರೀತಿಯದು. ಧ್ವನಿ ಹಗುರವಾಗಿರದೆ ಭಾರವಾಗಿತ್ತು. ಮುಖದಲ್ಲಿ ಕಳೆಯಿರದೆ ವಿವರ್ಣತೆಯಿತ್ತು. ದುಶ್ಶಕುನ ಸೂಚಿಸುವ ದೊಂಬ ಕಾಗೆಯ ಧ್ವನಿಯಷ್ಟು ಒರಟಾಗಿತ್ತು, ಅವನ ಕೂಗಾಟ. ರೋಗಿಷ್ಟ ತೋಳ ಸುಮ್ಮನಿರಲಿಲ್ಲ; ಅದೂ ಕೂಡ ಹಿಂಬಾಲಿಸುತ್ತಾ ಗಟ್ಟಿಯಾಗಿ ಕೂಗುತಿತ್ತು.

ತಾನು ಮಾಡುತ್ತಿರುವುದೇನು ? ಎಂದು ಮನುಷ್ಯ ಯೋಚಿಸಿದನು. ತಲೆಗೆ ಏನು ತಾಕಿತೊ ; ತಕ್ಷಣ ವಿಕಟ ನಗು ನಿಂತು ಹೋಯಿತು.

ಒಂದು ವೇಳೆ ಇದು ಬಿಲ್‌ನ ಅವಶೇಷಗಳೇ ಆಗಿದ್ದ ಪಕ್ಷದಲ್ಲಿ, ತಾನು ನಗುತ್ತಿರುವುದರ ಅರ್ಥವೇನು ? ಸ್ವಚ್ಛವಾದ ನಸುಗೆಂಪಿನ ಛಾಯೆ ಹೊಂದಿರುವ ಈ ಬಿಳೀ ಮೂಳೆಗಳು ಅವನದೇ ಇರಬಹುದಲ್ಲವೇ ?....

ಅವನು ಪಕ್ಕಕ್ಕೆ ತಿರುಗಿಕೊಂಡು ಯೋಚಿಸಿದನು : ಎಲ್ಲಾ ತಿಳಿದ ಹಾಗಾಯಿತು. ತನ್ನನ್ನು ಬಿಲ್ ಕೈಬಿಟ್ಟದ್ದು ಅಕ್ಷರಶಃ ಸತ್ಯ. ಆದರೂ ತಾನು ಅವನ ಚಿನ್ನವನ್ನು ಕದಿಯುವುದಿಲ್ಲ. ಇನ್ನು ಆ ಎಲುಬುಗಳನ್ನು ಜಗಿಯುತ್ತೇನೆಯೇ ? ಖಂಡಿತ ಇಲ್ಲ....ಈ ಪ್ರಸಂಗ ತಿರುಗ ಮುರುಗ ಆಗಿದ್ದರೆ, ಬಿಲ್ ಮಹಾಶಯ ತನ್ನಂತೆ ವರ್ತಿಸುತ್ತಿರಲಿಲ್ಲ !....

ಹೀಗೆ ಚಿಂತಿಸುತ್ತಾ ತೂರಾಡಿಕೊಂಡು ಮುಂದುವರಿದನು.

ಒಂದು ತುಂಬಿದ ಕೊಳದ ಬಳಿ ಬಂದನು. ಮಿನ್ನೋ ಮೀನುಗಳನ್ನು ಹುಡುಕಲು ಬಗ್ಗಿದನು. ತಕ್ಷಣ ಅವನ ತಲೆ ಹಿಂದಕ್ಕೆ ಜಗ್ಗಿತು. ಯಾರಾದರೂ ಚುಚ್ಚಿರಬಹುದೇ ?....ಅವನು ತನ್ನ ಮುಖದ ಪ್ರತಿಬಿಂಬವನ್ನು ನೀರಿನಲ್ಲಿ ಕಂಡನು. ತಲೆಯನ್ನು ಹಿಂದಕ್ಕೆ ಜಗ್ಗಿಸುವಷ್ಟು ನರಗಳು ಅವಕಾಶಕೊಟ್ಟುವು. ಅಂದರೆ ಅವನ ಪ್ರತಿಬಿಂಬ ಅಷ್ಟೇ ಭೀಕರವಾಗಿತ್ತು !

ಕೊಳದಲ್ಲಿ ಮೂರು ಮಿನ್ನೋಗಳಿದ್ದವು. ಆದರೆ ಆ ದೊಡ್ಡ ಕೊಳವನ್ನು ಬರಿದುಮಾಡಲು ಸಾಧ್ಯವಿಲ್ಲ. ಆದರೂ ಟಿನ್ನು ಬಕೆಟ್ಟಿನಲ್ಲಿ ಮೀನು ಹಿಡಿಯಲು ವ್ಯರ್ಥ ಪ್ರಯತ್ನಗಳನ್ನು ನಡೆಸಿದನು. ಕಡೆಗೆ ಅವನು ಹೆದರಿದನು. ದೌರ್ಬಲ್ಯ ಜಾಸ್ತಿಯಾಗಿತ್ತು. ಈ ಮಧ್ಯೆ ಕೆಳಕ್ಕೆ ಜಾರಿ ಪ್ರಾಣಬಿಟ್ಟರೆ ಏನು ಗತಿ ? ಆ ತಂಟೆಯೇ ಬೇಡ.....ನದಿಯ ಮರಳುಗಡ್ಡೆಯ ಮೇಲೆ ಎಷ್ಟೋ ಮರದ ದಿಮ್ಮಿಗಳಿದ್ದವು. ಅವನ್ನು ನೀರಿಗೆಸೆದು ನದಿಯ ಮೇಲೆಯೆ ವೇಗವಾಗಿ ಪ್ರಯಾಣ

ಮಾಡಬಹುದಿತ್ತು. ಆದರೆ ದೌರ್ಬಲ್ಯದಿಂದ ತನ್ನನ್ನು ತಾನು ನಂಬಲು ಆಶಕ್ತ ನಾಗಿದ್ದನು.

ತನಗೂ ಹಡಗಿಗೂ ಇರುವ ಅಂತರ ಈಗ ಮೂರು ಮೈಲಿಗಳಷ್ಟು ಕಡಿಮೆಯಾಗಿದೆಯೆಂದು ಲೆಕ್ಕಾಚಾರ ಹಾಕಿದನು. ನಾಳೆಯ ದಿನ ಇನ್ನೂ ಎರಡು ಮೈಲಿ ಕಡಿಮೆಯಾಗುತ್ತೆ; ಏಕೆಂದರೆ ತಾನು ಬಿಲ್‌ನಂತೆ ತೆವಳು ವುದನ್ನು ನಿಲ್ಲಿಸಿಲ್ಲ—ಎಂದು ಯೋಚಿಸಿದನು. ಐದು ದಿನಗಳು ಉರುಳಿದವು. ಮತ್ತೆ ಸಿಂಹಾವಲೋಕನ ಮಾಡಿದಾಗ, ತಾನು ಹಡಗಿಗೆ ಇನ್ನೂ ಏಳು ಮೈಲಿ ಗಳ ದೂರವಿದ್ದೇನೆಂದು ತಿಳಿಯಿತು. ಈಗಂತೂ ದಿನಕ್ಕೆ ಒಂದು ಮೈಲಿ ದೂರ ಸಾಗುವುದಕ್ಕೂ ತ್ರಾಣವಿಲ್ಲ. ಆದರೂ ಇಂಡಿಯದ ಬೇಸಗೆ ಉತ್ಸಾಹಕರ ವಾಗಿಯೆ ಇತ್ತು. ಆದ್ದರಿಂದಲೇ ಮಧ್ಯೆ ಮಧ್ಯೆ ಮೂರ್ಛೆಬಿದ್ದರೂ, ತೆವಳುತ್ತಲೇ ಇದ್ದನು. ಅಕ್ಕ ಪಕ್ಕದಲ್ಲಿ ನೋಡಿಕೊಂಡು ಹೊರಟನು. ಒಂದೇ ಸಮನೆ ರೋಗಿಷ್ಟ ತೋಳ ಗಸ್ ಗಸ್ ಎಂದು ಉಬ್ಬಸಪಡುತ್ತಾ ಬೆನ್ನಟ್ಟಿ ಬರುತಿತ್ತು. ಅವನ ಪಾದಗಳಂತೆ ಮೊಣಕಾಲೂ ಕೂಡ ಮಾಂಸದ ಮುದ್ದೆಯಾಗಿತ್ತು. ಎಷ್ಟು ಬಿಗಿದು ಕಟ್ಟಿದರೂ ಪ್ರಯೋಜನವಿಲ್ಲ. ಒಂದೇ ಸಮನೆ ಪಾಚಿ ನೆಲದ ಮೇಲೂ, ಕಲ್ಲುಬಂಡೆಯ ಮೇಲೂ ರಕ್ತ ಸುರಿಯುತಿತ್ತು. ಒಮ್ಮೆ ಹಿಂದುಗಡೆಗೆ ದೃಷ್ಟಿ ಹೊರಳಿಸಿದನು ; ತನ್ನ ಕಾಲುಗಳಿಂದ ಸುರಿದ ರಕ್ತಮಾರ್ಗವನ್ನು ಆ ತೋಳ ಕಂಗಾಲಾಗಿ ನೆಕ್ಕುತಿತ್ತು! ಆ ಪ್ರಾಣಿಯನ್ನು ಕೊಲ್ಲದಿದ್ದರೆ, ತನ್ನ ಮುಂದಿನ ಗತಿ ಏನು ?—ಎಂದು ಅವನು ತೀವ್ರನೋಟ ಬೀರಿದನು. ಮತ್ತೆ ಕರಾಳ ಜೀವದ ದುರಂತ ನಾಟಕ ಆರಂಭವಾಯಿತು—ರೋಗಿಯೊಬ್ಬ ತೆವಳು ತಿದ್ದಾನೆ ; ಖಾಯಿಲೆಯಿಂದ ಕುಂಟುತ್ತಾ ತೋಳವೊಂದು ಬರುತ್ತಿದೆ ; ಎರಡೂ ಪ್ರಾಣಿಗಳು ತಮ್ಮ ಶವದಂಥ ದೇಹವನ್ನೂ ಲಕ್ಷಿಸದೆ ಜೀವಕ್ಕಾಗಿ ಎಳೆದಾಡ ಹತ್ತಿವೆ ; ಆ ಶೂನ್ಯರಂಗದಲ್ಲಿ ಎರಡೇ ಪಾತ್ರಗಳು....

ಒಂದು ಸಾರಿ ನಾಯಕನಿಗೆ ಅನ್ನಿಸಿತು : ಈ ತೋಳ ಬಲಿಷ್ಟವಾಗಿ ಇದ್ದಿದ್ದರೆ, ತಾನು ಅಷ್ಟಾಗಿ ಯೋಚಿಸುತ್ತಿರಲಿಲ್ಲ. ಅದುಬಿಟ್ಟು, ಇನ್ನೇನು ಸಾಯುವಂತಿರುವ ಅಸಹ್ಯ ಹುಟ್ಟಿಸುವ ಪ್ರಾಣಿಯ ಹೊಟ್ಟೆಯನ್ನು ತುಂಬಿಸು ವುದೆಂದರೆ, ಅವನಿಗೆ ಒಗ್ಗಲಿಲ್ಲ. ಅವನು ಹೀಗೆಯೆ ಯೋಚಿಸುತಿದ್ದಂತೆ, ಭ್ರಾಂತಿಯ ಭಾವನೆಗಳು ಬರತೊಡಗಿದವು. ಹುಚ್ಚು ಆವೇಶಗಳ ನಡುವೆ ಬುದ್ಧಿ ಸ್ಥಿಮಿತ ಕಡಿಮೆಯಾಗುತ್ತ ತಪ್ಪಿಹೋಯಿತು.

ಒಮ್ಮೆ ಅವನ ಕಿವಿಯ ಹತ್ತಿರವೇ ಉಬ್ಬಸದ ಗೊಸಗೊಸ ಕೇಳಿಸಿದಾಗ,

ಸ್ವಲ್ಪ ಎಚ್ಚರವಾಯಿತು. ನಡೆಯಲಾಗದ ತೋಳ ಸರಕ್ಕನೆ ಹಿಂದಕ್ಕೆ ನೆಗೆಯಿತು. ನಿಶ್ಶಕ್ತಿಯಿಂದ ಅದರ ಕಾಲು ಜಾರಿತು. ನೋಡುವುದಕ್ಕೆ ಹಾಸ್ಯಾಸ್ಪದವಾಗಿತ್ತು. ಆದರೆ ನಾಯಕನು ನಗಲಿಲ್ಲ. ಅವನಿಗೆ ಹೆದರಿಕೆಯೂ ಆಗಲಿಲ್ಲ. ಅಂಥ ಪುಕ್ಕತನ ಅವನ ಸ್ವಭಾವದಿಂದ ಎಂದೋ ಓಡಿತ್ತು. ಆದರೆ ಆ ಕ್ಷಣದಲ್ಲಿ ಅವನ ಮನಸ್ಸು ನಿರ್ಮಲವಾಗಿತ್ತು. ಮಲಗಿಕೊಂಡೇ ಆಲೋಚಿಸಿದನು.... ಹಡಗಿನ ಸ್ಥಾನ ನಾಲ್ಕು ಮೈಲಿ ದೂರವನ್ನು ಮೀರಿಯೇ ಇಲ್ಲ. ಕಣ್ಣಲ್ಲಿ ಕಸ ತುಂಬಿದೆಯೇ? ಕಣ್ಣುಜ್ಜಿ ನೋಡಿದರೂ, ಬೆಳ್ಳಗಿನ ನೌಕಾಪಟ ಸ್ಪಷ್ಟವಾಗಿ ಕಾಣುತ್ತಿದೆ! ಅದನ್ನು ಹೊತ್ತು ಸಣ್ಣ ದೋಣಿ ಬರುತ್ತಿದೆ. ಥಳಥಳಿಸುತ್ತಿರುವ ಸಮುದ್ರದ ನೀರನ್ನು ಝಾಡಿಸುತ್ತಿದೆ....ಆದರೆ ತಾನು ಇನ್ನು ಅರ್ಧ ಮೈಲಿ ಕೂಡ ತೆವಳಲು ಸಾಧ್ಯವಿಲ್ಲವೆಂದು ಗೊತ್ತಿದೆ. ಆದರೂ ತಾನು ಜೀವಿಸಲೇ ಬೇಕು! ಅದೊಂದು ಸಂಕಲ್ಪ. ಇಷ್ಟೆಲ್ಲ ಕಷ್ಟಪಟ್ಟು ಸಾಯುವುದೆಂದರೆ ತರ್ಕಬದ್ಧವಾಗಿಲ್ಲ. ವಿಧಿ ತನ್ನನ್ನು ಬಹಳವಾಗಿ ಬಳಸಿಕೊಂಡಿದೆ. ಈಗ ತಾನು ಸಾವಿನ ಸೂತ್ರದಲ್ಲಿದ್ದರೂ, ಅದಕ್ಕೆ ಸಿಕ್ಕಿಕೊಳ್ಳದಂತೆ ಪ್ರಯತ್ನ ಮಾಡಬೇಕು.

ಅವನದು ಶುದ್ಧ ಹುಚ್ಚುತನ. ಸಾವಿನ ಮುಷ್ಟಿಯನ್ನೇ ಎದುರಿಸಿ, ಗುದ್ದಾಡಲು ಹೊರಟಿದ್ದನು. ಅಬ್ಬ! ಮೃತ್ಯುವಿಗೆ ಬಹಿರಂಗ ಸವಾಲು; ಏನೇ ಆಗಲಿ ಸಾಯಲು ಒಪ್ಪದ ಪ್ರತಿಜ್ಞೆ.

ಕಣ್ಣು ಮುಚ್ಚಿದನು; ಜಾಗರೂಕನಾಗಿ ಮುಂದಿನ ಕಾರ್ಯಕ್ಕೆ ತನ್ನನ್ನು ತಾನೆ ಅಳವಡಿಸಿಕೊಂಡನು....ದೇಹಾದ್ಯಂತ ಹರಿದು ಅಪ್ಪಳಿಸುತ್ತಿದ್ದ ನಿರುತ್ಸಾಹದ ಅಲೆಗಳನ್ನು ಹಾದು ಮೇಲೇರುತಿದ್ದನು; ಕೆಲವು ವೇಳೆ ಮುಳುಗಿ ಹೋದರೂ, ಇನ್ನೆಲ್ಲೋ ಕಾಣದಂತೆ ಹಜ್ಜೆ ಬಡಿದು ಈಜುತಿದ್ದನು. ಕಡೆಗಂತೂ ಆಶ್ಚರ್ಯಪಡಿಸುವಂತೆ ವಿಚಿತ್ರ ಆತ್ಮಶಕ್ತಿಯನ್ನು ವಿನಿಯೋಗಿಸಿ, ಮನಸ್ಥೈರ್ಯದ ಬೆಂಡುಕಟ್ಟಿ ಹೊರಟನೆಂದರೆ ಕೇಳಬೇಕಾದ್ದೇ ಇಲ್ಲ!....

* * * * *

ರೋಗಿಷ್ಟ ತೋಳ ಸುಮ್ಮನಿರಲಿಲ್ಲ; ಏಕೆಂದರೆ ಅದರ ಮೇಲುಬ್ಬಸದ ಶ್ವಾಸ ನಿಶ್ವಾಸ ಮನುಷ್ಯನ ಹತ್ತಿರವೇ ಕೇಳಿಸುತಿತ್ತು. ನಿಧಾನವಾಗಿ ಅವನ ದೇಹವನ್ನು ಸಮೀಪಿಸಿತು. ಆದರೂ ಮನುಷ್ಯ ಚಲಿಸಲಿಲ್ಲ. ಅವನ ಕಿವಿಯ ಬಳಿ ಬಂದು, ಆ ತೋಳ, ತನ್ನ ಒರಟಾದ ಒಣನಾಲಿಗೆಯನ್ನು ಕೆನ್ನೆಗೆ ಸವರಿತು. ಆಗ ಮನುಷ್ಯನಿಗೆ ಕೆನ್ನೆಯ ಮೇಲೆ ಮರಳು ಕಾಗದವನ್ನು ತಿಕ್ಕಿದಂತಾಯಿತು. ತನ್ನ ಕೈ ಚಾಚಿ, ಹೊಡೆಯಲು ಮನಸ್ಸುಮಾಡಿದನು. ಅವನ ಬೆರಳು ಹಿಂಸ್ರ

ಪಕ್ಷಿಯ ಮೊನೆಯುಗುರಿನಂತೆ ಬಾಗಿತ್ತು. ಮುಷ್ಟಿಯಲ್ಲಿ ಬರಿಯ ಗಾಳಿಯನ್ನು ಒಳಕ್ಕೆ ಸೇರಿಸಿ ಹೊರಬಿಡುತಿದ್ದನು. ಚುರುಕಿನಿಂದ ಖಡಾಖಂಡಿತವಾಗಿ ವರ್ತಿಸುವಷ್ಟು ಶಕ್ತಿ ಮನುಷ್ಯನಲ್ಲಿರಲಿಲ್ಲ.

ಪ್ರಾಣಿಯ ಸಹನೆ ಭೀಕರವಾಗಿತ್ತು. ಮನುಷ್ಯನ ಸಹನೆಯೂ ಆ ಮಟ್ಟಕ್ಕೆ ಬಂದಿತ್ತು.

ಮನುಷ್ಯ ಸ್ಮೃತಿ ತಪ್ಪದಂತೆ ಒಳಗೊಳಗೆ ಹೊಡೆದಾಡುತಿದ್ದನು.... ಎಂಥ ಸನ್ನಿವೇಶ ಸಂಕಟ ಪ್ರಾಪ್ತವಾಗಿದೆ! ಪ್ರಾಣಿಯು ತನ್ನ ಮೇಲೆ ಬೀಳಲು ಹೊಂಚು ಹಾಕಿದೆ. ತಾನು ಕೂಡ ಪ್ರಾಣಿಯನ್ನು ಬಗೆದು ತಿನ್ನಲು ಕಾದಿರುವನು. ಒಟ್ಟಿನಲ್ಲಿ ಎರಡು ಜೀವಿಗಳೂ ಪರಸ್ಪರ ಆಹಾರ ವಸ್ತುಗಳಾಗಿ ಮಾರ್ಪಾಟು ಹೊಂದಬೇಕು! ಅದು ಹೇಗೆ?....

ಅವನ ಎದುರಿಗೆ ನಿಸ್ತೇಜ ಸಮುದ್ರ ಉಕ್ಕೇರಿ ಬರುತಿತ್ತು. ಉದ್ದುದ್ದನೆಯ ಕನಸುಗಳು ಹಾದುಹೋದವು. ಮಧ್ಯೆ ಮಧ್ಯೆ ಎಚ್ಚರವಾದಾಗ ವ್ಹಿಸ್ ಎಂದು ಸುತ್ತುವ ಗಾಳಿಯಿಂದ ಆವರಿಸಲ್ಪಟ್ಟು, ಒರಟು ನಾಲಿಗೆಯ ಮುದ್ದಾಟವನ್ನು ಅನುಭವಿಸುತಿದ್ದನು!

ಸ್ವಲ್ಪ ಹೊತ್ತಾದ ಮೇಲೆ ಉಸುರಿನ ಆರ್ಭಟ ಕೇಳಿಸಲಿಲ್ಲ. ಪ್ರಾಣಿಯ ನಾಲಗೆ ಅವನ ಕೈಯನ್ನು ಸವರಿತು. ಅವನು ಏನೂ ಮಾಡದೆ ಸುಮ್ಮನೆ ಕಾಯುತಿದ್ದನು, ತೋಳದ ಕೋರೆಹಲ್ಲು ಈಚೆಗೆ ಬಂದು ಮೆಲ್ಲಗೆ ಒತ್ತಲಾರಂಭಿಸಿತು; ಒತ್ತಡದ ಬಲ ಹೆಚ್ಚಾಯಿತು.

ಇಲ್ಲಿಯ ತನಕ ಕಾದು ನೋಡಿದ್ದ ಆಹಾರ ಹತ್ತಿರ ಸಿಕ್ಕೇಬಿಟ್ಟಿತು ಎಂದು ಪ್ರಾಣಿಯು ಸಂತೋಷಪಟ್ಟಿರಬೇಕು; ಆದ್ದರಿಂದಲೇ ಮನುಷ್ಯನ ದೇಹದೊಳಕ್ಕೆ ಹಲ್ಲನ್ನಿಳಿಸಲು ಸರ್ವ ಪ್ರಯತ್ನ ಮಾಡತೊಡಗಿತು, ಕೊನೆಯದಾಗಿ ಉಳಿದಿದ್ದ ಶಕ್ತಿಕಣವನ್ನೂ ಉಪಯೋಗಿಸಿತು.

ಮನುಷ್ಯನೂ ಎಲ್ಲಿಯ ತನಕ ಕಾಯಬಲ್ಲ? ಗಾಯಗೊಂಡಿದ್ದ ತನ್ನ ಕೈಯನ್ನು ಮೆಲ್ಲಗೆ ಸರಿಸಿ, ಪ್ರಾಣಿಯ ದವಡೆಯನ್ನು ಮುಚ್ಚಿಬಿಟ್ಟನು. ಮತ್ತೊಂದು ಕೈ ಆ ಕಡೆ ಬಳಸಿ ಪ್ರಾಣಿಯನ್ನು ಅಪ್ಪಿಕೊಂಡಂತಿತ್ತು.

ಐದೇ ನಿಮಿಷಗಳು! ಇಡೀ ಮನುಷ್ಯ ದೇಹದ ಭಾರ ತೋಳದ ಮೇಲಿತ್ತು. ಪ್ರಾಣಿಯ ಕತ್ತನ್ನು ಹಿಸುಕುವಷ್ಟು ಶಕ್ತಿ ಅವನ ಕೈ ಚಳಕದಲ್ಲಿರಲಿಲ್ಲ. ಆದರೆ ಮನುಷ್ಯನ ಮುಖ ನೋಡಬೇಕು; ಅದು ತೋಳದ ಗಂಟಲನ್ನು ಒತ್ತಿ ಹಿಡಿದಿತ್ತು! ಅವನ ಬಾಯ ತುಂಬ ಕೂದಲು!........

ಅರ್ಧ ಘಂಟೆಯಾದ ಮೇಲೆ ಅವನಿಗೆ ಎಚ್ಚರವಾಯಿತು. ತನ್ನ ಗಂಟಲಲ್ಲಿ ಏನೊ ಒಂದು ರೀತಿಯ ಹಿತಕರವಲ್ಲದ ಚುಚ್ಚುನೋವು ಕಾಣಿಸಿಕೊಂಡಿರುವುದಲ್ಲ! ದ್ರವರೂಪದ ಸೀಸವನ್ನು ಹೊಟ್ಟೆಗೆ ತುರುಕಿದಂತಿತ್ತು; ಕೇವಲ ಮನೋಬಲದಿಂದ ನಡೆದ ಕೆಲಸವದು. ಆಮೇಲೆ ಮನುಷ್ಯ ಹೊರಳುತ್ತಾ ಅಂಗಾತಾಗಿ ಮಲಗಿದನು.

* * * * *

ಜಲಚರಗಳ ಬೇಟೆಗಾಗಿ ಹೊರಟ 'ಬೆಡ್‌ಫೋರ್ಡ್' ಹಡಗಿನಲ್ಲಿ ವೈಜ್ಞಾನಿಕ ತಂಡದ ಕೆಲವು ಸದಸ್ಯರೂ ಇದ್ದರು. ಅವರು ಹಡಗಿನ ಅಟ್ಟದ ಮೇಲೆ ನಿಂತು ಸುತ್ತಲೂ ನೋಡಿದರು; ಆಶ್ಚರ್ಯಕರವಾದ ವಸ್ತುವೊಂದು ಕಡಲ ದಂಡೆಯ ಮೇಲಿದ್ದಂತೆ ಕಾಣಿಸಿತು. ಅದು ಉರುಳಿಕೊಂಡು ನೀರಿನ ಅಂಚಿಗೆ ಬರುತಿತ್ತು. ಆ ವಸ್ತು ಯಾವುದೆಂದು ದೂರದಲ್ಲೇ ನಿಂತು ಹೇಳಲು, ಅವರಿಗೆ ಸಾಧ್ಯವಾಗಲಿಲ್ಲ. ವಿಜ್ಞಾನಿಗಳಾದ್ದರಿಂದ ಸಹಜ ಕುತೂಹಲ ಕೆರಳಿತು. ತಕ್ಷಣ ಹಡಗಿನಲ್ಲಿದ್ದ ದೋಣಿಯನ್ನು ಹೊರತೆಗೆದರು. ಕೆಳಕ್ಕಿಳಿಸಿದರು. ಅದರಲ್ಲಿ ಕುಳಿತು ದಡದ ಕಡೆ ಹೊರಟರು. ಅವರು ಕಂಡದ್ದು ವಿಚಿತ್ರವಾಗಿದ್ದರೂ .ಉಸಿರಾಡುತ್ತಿತ್ತು. ಆದರೆ ಅದನ್ನು ಮನುಷ್ಯನೆಂದು ಹೇಳಲು ಯಾವ ಹೋಲಿಕೆಯೂ ಇರಲಿಲ್ಲ. ಅದು ಕುರುಡಾಗಿತ್ತು; ಜೊತೆಗೆ ಸ್ಮೃತಿಯೂ ತಪ್ಪಿತ್ತು. ರಾಕ್ಷಸ ಸ್ವಭಾವದ ದೊಡ್ಡ ಹುಳುವಿನಂತೆ ಮಿಲಿ ಮಿಲಿ ಒದ್ದಾಡುತಿತ್ತು. ಮುಂದು ಮುಂದಕ್ಕೆ ಹೋಗಲು ಶತಪ್ರಯತ್ನ ಮಾಡುತಿತ್ತು; ಫಲಕಾರಿಯಾಗದಿದ್ದರೂ, ಸುಮ್ಮನಿರುವ ಸ್ವಭಾವವಂತೂ ಇಲ್ಲವೇ ಇಲ್ಲ. ಮೈ ತಿರುಚಿಸಿಕೊಂಡು ತೀವ್ರ ವೇದನೆ ಪಡುತ್ತಿದ್ದರೂ, ಗಂಟೆಗೆ ಸುಮಾರು ಇಪ್ಪತ್ತು ಅಡಿಗಳನ್ನಾದರೂ ಸಾಗಿಸುತಿತ್ತು.

* * * * *

ಮೂರು ವಾರಗಗಳು ಕಳೆದವು. 'ಬೆಡ್‌ಫೋರ್ಡ್'ನ ಇರುಕಲು ತೊಟ್ಟಿಯೊಂದರಲ್ಲಿ ಮನುಷ್ಯ ಮಲಗಿದ್ದನು. ಬತ್ತಿಹೋಗಿದ್ದ ಕೆನ್ನೆಗಳ ಮೇಲೆ ಕಣ್ಣೀರು ಸುರಿಯುತಿತ್ತು. ತಾನು ಯಾರೆಂಬುದನ್ನು ತಿಳಿಸಿದನು. ಅಲ್ಲಿಯ ತನಕ ತಾನು ಪಟ್ಟಿದ್ದ ಕಷ್ಟದ ಕಥೆಯನ್ನು ಹೇಳಿದ್ದಾಯಿತು. ಬಾಲ್ಯದ ನೆನಪುಗಳನ್ನು ಹೇಳುವಾಗ ಅವನ ಮಾತು ಅಸಂಬದ್ಧವಾಗಿ ತೊದಲುತಿತ್ತು ....ತನ್ನ ತಾಯಿ! ಸೂರ್ಯನಿಂದ ಪ್ರಕಾಶಮಾನವಾದ ದಕ್ಷಿಣ ಕ್ಯಾಲಿಫೋರ್ನಿಯ ತನ್ನ ವಾಸಸ್ಥಳ! ಹೂವು ಹಣ್ಣುಗಳ ಗೊಂಚಲ ಮಧ್ಯೆ ತನ್ನ ಮನೆ!........

ಕೆಲವೇ ದಿನಗಳಲ್ಲಿ ಚೇತರಿಸಿಕೊಂಡನು. ಊಟದ ಸಮಯದಲ್ಲಿ ವಿಜ್ಞಾನಿಗಳ ಮತ್ತು ಹಡಗಿನ ಅಧಿಕಾರಿಗಳ ಪಕ್ಕದಲ್ಲೇ ಕುಳಿತನು. ಆಹಾರ ಪದಾರ್ಥಗಳು ಯಥೇಚ್ಛವಾಗಿದ್ದವು. ಆ ದೃಶ್ಯವನ್ನು ನೋಡಿದೊಡನೆಯೆ ಅವನ ಮನಸ್ಸಿನಲ್ಲಿ ಸುಖದುಃಖ ಮಿಶ್ರಿತ ಭಾವನೆಗಳು ಮೇಲೇರಿ ಬಂದವು. ಇತರರು ಬಾಯಿಗೆ ಹಾಕಿಕೊಳ್ಳುತಿದ್ದ ಪ್ರತಿಯೊಂದು ತುತ್ತನ್ನೂ ಕುತೂಹಲ ದಿಂದ ಗಮನಿಸಿದನು. 'ಅಯ್ಯೋ, ಮುಗಿದುಹೋಯಿತೇ' ಎಂದು ವಿಪರೀತ ದುಃಖವನ್ನು ಕಣ್ಣುಗಳ ಮೂಲಕ ಸೂಚಿಸಿದನು. ಅವನ ಬುದ್ಧಿಯೇನೂ ಕೆಟ್ಟಿರಲಿಲ್ಲ; ಆದರೂ ಆ ವ್ಯಕ್ತಿಗಳನ್ನು ಊಟದ ಸಮಯದಲ್ಲಿ ಮಾತ್ರ ದ್ವೇಷಿಸುತಿದ್ದನು.

ಈ ಆಹಾರ ಎಲ್ಲಿಯ ವರೆಗೆ ಸಾಕಾಗಬಹುದು? ಎಂಬ ಹೆದರಿಕೆ ಅವನನ್ನು ಪೀಡಿಸುತಿತ್ತು. ಆಹಾರ ಶೇಖರಣೆಯ ಬಗ್ಗೆ ಅಡಿಗೆಯವನನ್ನೂ, ಪರಿಚಾರಕ ನನ್ನೂ ಮತ್ತು ಕ್ಯಾಪ್ಟನ್ ಮಹಾಶಯನನ್ನೂ ವಿಚಾರಿಸಿದನು.. ಏನೂ ತೊಂದರೆಯಿಲ್ಲವೆಂದು ಅವರೆಲ್ಲರೂ ಅವನಿಗೆ ಭರವಸೆಯಿತ್ತರು. ಆದರೆ ಅವನು ಆ ಮಾತುಗಳನ್ನು ನಂಬಲಿಲ್ಲ. ಹಡಗಿನ ಉಗ್ರಾಣವನ್ನು ತಾನೇ ಉಪಾಯ ದಿಂದ ಇಣುಕಿ ನೋಡಿದನು.

ಮನುಷ್ಯ ದಿನೇ ದಿನೇ ದಪ್ಪನಾಗುತ್ತ ಬಂದನು! ಎಲ್ಲರ ಗಮನವೂ ಆ ಕಡೆ ಸೆಳೆಯಿತು. ವಿಜ್ಞಾನಿಗಳು ತಲೆ ಕೆರೆಯುತ್ತಾ ಏನೇನೊ ಊಹೆ ಮಾಡಿ ದರು; ಮನುಷ್ಯನಿಗೆ ಹಾಕುವ ಆಹಾರವನ್ನು ಕಡಿಮೆ ಮಾಡಿದರು. ಆದರೆ ಅವನ ಸುತ್ತಳತೆ ಹೆಚ್ಚುತ್ತಲೇ ಇತ್ತು! ಎದೆಯ ಭಾಗ ಅಂಗಿಯನ್ನು ಉಬ್ಬಿಸುತಿತ್ತು!

ನಾವಿಕರು ಹಲ್ಲುಕಿರಿದರು. ಅವರಿಗೆ ಗೊತ್ತಿರಬೇಕು....

ವಿಜ್ಞಾನಿಗಳು ಮನುಷ್ಯನ ಮೇಲೆ ಕಾವಲಿದ್ದು ಪರೀಕ್ಷಿಸಿದರು—ಬೆಳಗಿನ ಊಟವಾಗುವುದೇ ತಡ, ಅವನು ಒಂದು ಕಡೆ ನಿಲ್ಲುತ್ತಿರಲಿಲ್ಲ. ಅವಲಕ್ಷಣ ವಾಗಿ ಬಗ್ಗಿಕೊಂಡು ಮುಂದೆ ಮುಂದೆ ನಡೆಯುತಿದ್ದನು....ಒಮ್ಮೆ ತಿರುಕನಂತೆ ಅಂಗೈ ಚಾಚುತ್ತಾ ನಾವಿಕನನ್ನು ಕರೆದು ಮಾತನಾಡಿಸಿದನು. ಅದೇನು ಆಕರ್ಷ ಣೆಯೋ ಅಪಕರ್ಷಣೆಯೊ ತಿಳಿಯದು. ಅಂತೂ ನಾವಿಕ ನಗುತ್ತಾ ಹಲ್ಲುಕಿರಿದು, ಸಮುದ್ರ ರೊಟ್ಟಿಯ ಚೂರೊಂದನ್ನು ಅವನ ಕಡೆ ಎಸೆದನು. ಮನುಷ್ಯ ಥಟ್ಟನೆ ಅದನ್ನು ಅತ್ಯಾಶೆಯಿಂದ ಹಿಡಿದುಕೊಂಡನು. ಜಿಪುಣಾಗ್ರೇಸರನು ಬಂಗಾರದ ನಾಣ್ಯವನ್ನು ಹೇಗೆ ನೋಡುತ್ತಾನೊ ಹಾಗೆ, ಆ ರೊಟ್ಟಿಯ ಚೂರನ್ನು ಪರೀಕ್ಷಿಸಿ

ಅಂಗಿಯ ಒಳಜೋಬಿಗೆ ತುರುಕಿಕೊಂಡನು. ಉಳಿದ ನಾವಿಕರೂ ಕೂಡ ಹಲ್ಲುಕಿರಿದು, ಅದೇ ರೀತಿಯ ಸಂಭಾವನೆಗಳನ್ನು ಕೊಟ್ಟರು.

ವಿಜ್ಞಾನಿಗಳು ಹೆಚ್ಚು ಮಾತನಾಡದೆ ಮುಂದಿನ ಕ್ರಮ ಜರುಗಿಸಿದರು. ಅವನನ್ನು ಆ ಜಾಗದಿಂದ ಕದಲಿಸಿ, ಒಬ್ಬಂಟಿಗನಾಗಿ ಓಡಾಡಲು ಏರ್ಪಾಟು ಮಾಡಿದರು. ಆತನ ಗೋಜಿಗೆ ಯಾರೂ ಹೋಗಲಿಲ್ಲ.

ಅದೇ ಸಮಯದಲ್ಲಿ ವಿಜ್ಞಾನಿಗಳು ಆತ ಮಲಗುತ್ತಿದ್ದ ಸಣ್ಣ ಜಾಗವನ್ನು ಪರೀಕ್ಷಿಸಿದರು—ಅದರ ಗೋಡೆಯ ಮೇಲೆ ಸಾಲು ಸಾಲಾಗಿ ನಾವೆಯ ಗಟ್ಟಿ ಬಿಸ್ಕತ್ತುಗಳು ಅಂಟಿಕೊಂಡಿದ್ದವು ; ಅವನು ಮಲಗುತಿದ್ದ ಹಾಸಿಗೆಯ ಚೀಲವೂ ಕೂಡ ಅದರಿಂದಲೇ ತುಂಬಿಕೊಂಡಿತ್ತು ; ಯಾವ ಸಂದು ಮೂಲೆಯನ್ನು ನೋಡಿದರೂ ಅಲ್ಲೆಲ್ಲ ನಾವೆಯ ಬಿಸ್ಕತ್ತುಗಳು ! ಅಷ್ಟಾದರೂ ಅವನು ಹುಚ್ಚ ನಾಗಿರಲಿಲ್ಲ. ಮುಂದೆ ಏನಾದರೂ ಕ್ಷಾಮ ಒದಗಿದರೆ, ಅದಕ್ಕೆ ತಕ್ಕ ಎಲ್ಲ ಮುನ್ನೆಚ್ಚರಿಕೆಗಳನ್ನೂ ತೆಗೆದುಕೊಂಡಿದ್ದನು ; ಅಷ್ಟೆ !

ಆ ಖಾಯಿಲೆಯಿಂದ ಅವನು ಇಂದಲ್ಲ ನಾಳೆ ಪಾರಾಗುತ್ತಾನೆಂದು ವಿಜ್ಞಾನಿಗಳು ಹೇಳಿದರು.

ಅವರು ಹೇಳಿದಂತೆಯೆ ಆಯಿತು ; 'ಬೆಡ್‌ಫೋರ್ಡ್' ಹಡಗನ್ನು ಸ್ಯಾನ್‌ಫ್ರಾನ್ಸಿಸ್‌ಕೊ ಕೊಲ್ಲಿಯಲ್ಲಿ ಲಂಗರು ಹಾಕಿ ನಿಲ್ಲಿಸುವುದಕ್ಕಿಂತ ಮುಂಚೆಯೆ ಅವನು ಹುಷಾರಾದನು.

ಹಿಂಬಾಲಕನಿಗೆ

" ಏನೂ ಬೇಕಿಲ್ಲ, ಬಿಸಾಡಬಹುದು...."

" ಅಲ್ಲ ಮಗು, ಇಲ್ಲಿ ಕೇಳು. ಇದು ಸ್ವಲ್ಪಮಟ್ಟಿಗಾದರೂ ಶಕ್ತಿಯುತ ವಾಗಿಲ್ಲವೇ ? ಬರಿಯ ವಿಸ್ಕಿ ಮತ್ತು ಆಲ್ಕೊಹಾಲ್ ಅಷ್ಟೇನೂ ಒಳ್ಳೆಯದಲ್ಲ ; ಆದರೆ ಬ್ರಾಂದಿ, ದ್ರಾಕ್ಷಾಮದ್ಯದಿಂದ ಬಟ್ಟಿಯಿಳಿಸಿ ತೆಗೆದ ತೀಕ್ಷ್ಣ ಮಧ್ಯ ; ಅದರ ಜೊತೆಗೆ ರುಚಿಕರವಾದ ಮೆಣಸಿನಸಾರು ಮತ್ತು—"

" ಹಾಳಾಗಿ ಹೋಗಲಿ. ಈ ಬೆರಕೆಯ ಪಂಚ್ ಪಾನೀಯವನ್ನು ಮಾಡುವವರಾರು ? ...."

ಹೊಗೆಯ ಸುರುಳಿಗಳ ಮಧ್ಯದಲ್ಲಿ ಮೇಲ್‌ಮ್ಯೂಟ್ ಕಿಡ್ ನಿಂತಿದ್ದನು.

ಸಮಾಧಾನದಿಂದಲೇ ನಸುನಗು ಬೀರಿದನು. 'ಎಷ್ಟಾದರೂ ನೀನು ನನ್ನ ಮಗ. ನನ್ನಷ್ಟು ಕಾಲ ನೀನು ಈ ಸೀಮೆಯಲ್ಲಿ ಜೀವಿಸಿಲ್ಲ; ನನ್ನಂತೆ ಮೊಲದ ಹೆಜ್ಜೆ ಗುರುತುಗಳನ್ನು ಅನುಸರಿಸಿ, ಸಾಲ್‌ಮನ್ ಮೀನುಗಳನ್ನು ತಿಂದಿಲ್ಲ. ವಯಸ್ಸು ಆದಂತೆ ನಿನಗೆ ಅನುಭವ ಬರದೆ ಇರಲಾರದು. ಆಗ ನಿನಗೇ ತಿಳಿಯುತ್ತದೆ: ಕ್ರಿಸ್‌ಮಸ್ ಬರುವುದು ಕೇವಲ ವರ್ಷಕ್ಕೊಮ್ಮೆ; ಆಗ ಪಂಚ್ ಪಾನೀಯವಿಲ್ಲದಿದ್ದರೆ ಗೋರ್ಕಲ್ಲ ಮೇಲೆ ನೀರ ಸುರಿದಂತೆ ಎಂದು . . .'

"ಅಲ್ಲವೇ? ಪಂಚ್ ಪಾನೀಯದ ಸ್ಫೂರ್ತಿಗಾಗಿ ವರ್ಷವಾದರೂ ಕಾಯಬೇಕು...." ಎಂದು ಜಿಮ್‌ಬೆಲ್‌ಡನ್ ಎಂಬ ಭಾರಿ ಆಸಾಮಿಯೊಬ್ಬ ಅಂಗೀಕಾರದ ಮಾತನ್ನು ಪೋಣಿಸಿದ. ಆತ ಮೇಸಿಮೋ ಎಂಬ ಸ್ಥಳವನ್ನು ತನ್ನದಾಗಿ ಮಾಡಿಕೊಂಡಿದ್ದನು. ಎಲ್ಲರಿಗೂ ಗೊತ್ತಿದ್ದಂತೆ, ಎರಡು ತಿಂಗಳಿಂದಲೂ ಅವನ ಆಹಾರ; ಕೇವಲ ಮೂಸ್ ಮಾಂಸ. ಕ್ರಿಸ್‌ಮಸ್ ಹಬ್ಬವನ್ನು ಆಚರಿಸಲು ಅಲ್ಲಿಂದ ಇಲ್ಲಿಗೆ ಬಂದಿದ್ದನು. ಮತ್ತೆ ಕೇಳಿದನು: "ಏನಯ್ಯಾ ನಾವು 'ತನಾನ'ದಲ್ಲಿ ಮಾಡಿದ ಮದ್ಯ ಮರೆತುಹೋಯಿತೆ?....

"ಇಲ್ಲ, ಇಲ್ಲ. ನಾನು ಜ್ಞಾಪಿಸಿಕೊಂಡು ಹೇಳಬಲ್ಲೆ....ಹುಡುಗರಿರಾ, ಆಗ ನೀವು ಇದ್ದಿದ್ದರೆ, ನಿಮ್ಮ ಸಂತೋಷಕ್ಕೆ ಪಾರವೇ ಇರುತ್ತಿರಲಿಲ್ಲ! ಇಡೀ ಒಂದು ಜನಾಂಗ ಕುಡಿದು ಹೋರಾಡುವುದೆಂದರೆ ಸಾಮಾನ್ಯವೇ? ಹೂಚ್ ಮದ್ಯ ಉಕ್ಕೇರಿಬರುತಿತ್ತು. ಹುಳಿ ಹಿಡಿಯುತಿದ್ದಂತೆ ಎಲ್ಲರೂ ಆನಂದ ಸಾಗರದಲ್ಲಿ ತೇಲಿ, 'ಎಷ್ಟು ಭವ್ಯವಾಗಿದೆ!' ಎಂದು ಕೂಗಾಡ ಹತ್ತಿದರು. ಅದು ನಡೆದದ್ದು ನಿನ್ನ ಕಾಲಕ್ಕಿಂತಲೂ ಮುಂಚೆ...." ಎಂದು ಮೇಲ್‌ವ್ಯಾಟ್ ಕಿಡ್, ಸ್ಟಾನ್ಲಿ ಪ್ರಿನ್ಸ್‌ನ ಕಡೆ ತಿರುಗಿ ಹೇಳಿದನು.

ಸ್ಟಾನ್ಲಿಪ್ರಿನ್ಸ್ ಎರಡು ವರ್ಷಗಳ ಹಿಂದೆ ಅಲ್ಲಿಗೆ ಬಂದ ಯುವಕ. ಗಣಿಯ ಕೆಲಸಗಳಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಸಂಪಾದಿಸಿದ್ದನು.

ಕಿಡ್ ಮುಂದುವರಿದು, "ಆ ಸ್ಥಳದಲ್ಲಿ ಆಗ ಒಬ್ಬ ಬಿಳಿಯ ಹೆಂಗಸೂ ಇರಲಿಲ್ಲ! ಆದರೆ ಮೇಸನ್ ಮದುವೆ ಮಾಡಿಕೊಳ್ಳಬೇಕೆಂದು ಹಟ ಹಿಡಿದನು. ಠಕ್ ಮಹಾಶಯನ ತಂದೆಯೇ ತನಾನ ಜನಾಂಗದ ಮುಖ್ಯಸ್ಥನಾಗಿದ್ದನು; ಇತರ ಸದಸ್ಯರಂತೆ ಅವನು ಕೂಡ ಮದುವೆಯ ಪ್ರಸ್ತಾಪದಲ್ಲಿ ಆಸಕ್ತಿ ವಹಿಸಲಿಲ್ಲ. ಅಷ್ಟೇ ಅಲ್ಲ; ಪ್ರತಿಭಟನೆಯನ್ನು ಸೂಚಿಸಿದನು. ಎಷ್ಟಾದರೂ ಬಿಗುಮಾನದ ಮನುಷ್ಯ! ಹೇಗಾದರೂ ಮಾಡಿ ಅವನ ಮನಸ್ಸನ್ನು ತಿರುಗಿಸಬೇಕಾಗಿತ್ತು....ನನ್ನ ಜೀವಮಾನದಲ್ಲೇ ಮಾಡದ ಅತ್ಯಂತ ಒಳ್ಳೆಯ ಕಾರ್ಯವನ್ನು

ಮಾಡಿದೆ; ಪಾಕಶಾಸ್ತ್ರದ ವಿಶಿಷ್ಟತೆಯನ್ನೆಲ್ಲ ಖರ್ಚು ಮಾಡಿದೆ. ಕುಡಿದವರ ಮನಸ್ಸು ಸಡಿಲಗೊಂಡಿತು. ಆದರೂ ಒಬ್ಬರನ್ನೊಬ್ಬರು ಬೆನ್ನಟ್ಟಿ ಬಂದರು! ನದಿಯ ತನಕ ಓಡೋಡಿ ಬಂದೆವು. ಜಲಮಾರ್ಗದಲ್ಲೂ ಗುಲ್ಲೆಬ್ಬಿಸುವಂತೆ ಬೇಟೆಯಾಟ ನಡೆಯಿತು. ಅದನ್ನು ನೀವು ನೋಡಿದ್ದರೆ ಚೆನ್ನಾಗಿತ್ತು!...." ಎಂದು ಹೇಳುತ್ತಿರುವಂತೆ ಎಲ್ಲರಲ್ಲೂ ಕೂತೂಹಲ ಕೆರಳಿತು.

"ಆದರೆ ಆ ಇಂಡಿಯನ್ ಹೆಂಗಸು! . . ." ಎಂದು ಕೇಳಿದನು ಲೂಯಿಸವಾಯ್. ಅವನು ಕೆನಡದವನಾದರೂ ಫ್ರೆಂಚರ ಸಂಪರ್ಕದಿಂದ ಹುಟ್ಟಿದವನು. ಕಿಡ್ ಹೇಳುತ್ತಿದ್ದ ಕಥೆಯಲ್ಲಿ ಅವನು ತುಂಬ ಆಸಕ್ತನಾಗಿದ್ದನು. ಆ ಗಲಭೆಯ ಪ್ರಸಂಗವನ್ನು ಹೋದ ಚಳಿಗಾಲದಲ್ಲಿ ಯಾರೋ ಹೇಳಿದ್ದಂತೆ ಅವನಿಗೆ ಜ್ಞಾಪಕವಿತ್ತು.

ಮೇಲ್‌ಮ್ಯೂಟ್ ಕಿಡ್ ಎಷ್ಟಾದರೂ ಹುಟ್ಟು ಕಥೆಗಾರ. ಯಾವುದನ್ನೇ ಆಗಲಿ ಸ್ವಾರಸ್ಯವಾಗಿ ನಿರೂಪಿಸುವ ಕಲೆಗಾರಿಕೆ ಅವನಲ್ಲಿತ್ತು. ಸರಿ; ಉತ್ತರ ಪ್ರದೇಶದ ಲೊಶಿನ್‌ವಾರನ ಶುದ್ಧ ಪ್ರೇಮದ ಕಥೆಯನ್ನು ಪ್ರಾರಂಭಿಸಿದನು.

ಉತ್ತರದ ಒರಟು ಸಾಹಸಿಗಳು ತೀವ್ರಾಸಕ್ತಿಯಿಂದ ಆಲಿಸಿದರು. ಅವರ ಹೃದಯ ತಂತಿ ಮಿಡಿಯಿತು. ದಕ್ಷಿಣದ ಗೀಳು ಹಿಡಿಯಿತು. ಅಲ್ಲಿಯ ಬೆಚ್ಚಗಿನ ಹುಲ್ಲುಗಾವಲು! ಅಲ್ಲಿ ದೊರೆಯುವಷ್ಟು ಮೋಜು ಇನ್ನೆಲ್ಲಿ ತಾನೇ ಸಿಕ್ಕೀತು? ಇಲ್ಲಿಯ ಹಾಗೆ ಬರಿಯ ಸಾವಿನ ಛಳಿಯಲ್ಲ. ಏನನ್ನಾದರೂ ಮಾಡಬೇಕೆನ್ನುವವರಿಗೆ ಭರವಸೆಯನ್ನು ನೀಡುವ ಸ್ಥಳವದು . . .

ಕಥೆಯ ಓಟ ಸಾಗಿತ್ತು.

"ಪ್ರಾರಂಭದ ನೀರ್ಗಲ್ಲಿನ ಜಾಡು ಹಿಡಿಯುವುದಕ್ಕಿಂತ ಮುಂಚೆಯೆ, ನಾವು ಯೂಕಾನ್ ನದಿಯ ಮೇಲೇರಿದೆವು. ತಂಡದ ಜನ ಕಾಲು ಗಂಟೆ ಹಿಂದೆಬಿದ್ದರು; ಅಷ್ಟೆ. ಆದರೆ ಅದೇ ನಮ್ಮನ್ನು ರಕ್ಷಿಸಿತು; ಏಕೆಂದರೆ ಅವರು ಬರುವ ಹೊತ್ತಿಗೆ ನೀರಿನ ಹೊಡೆತ ಜಾಸ್ತಿಯಾಗಿ, ತಂಡದವರನ್ನು ಹಿಂದಕ್ಕೆ ತಳ್ಳಿಬಿಟ್ಟಿತು. ನಾವು ಅವರಿಗೆ ಕಾಣಸಿಗದಂತೆ ಪ್ರಕೃತಿಯೇ ಸಹಾಯ ಮಾಡಿತು. ಮುಂದುವರಿದೆವು. ಕಡೆಗೆ, ನುಕ್ಲುಕ್ಯೆಟೊ ಎಂಬ ಇಡೀ ಪಾಳೆಯ ನಮಗಾಗಿ ಕಾದಿತ್ತು! ಅಲ್ಲೇ ನಾವು ಸಭೆ ಸೇರಿದ್ದು. ಆಗ ಮಂಗಳ ಕಾರ್ಯ ವನ್ನು ನಡೆಸಿದ ಫಾದರ್ ರ್‍ಯುಬೋ ಇಲ್ಲೇ ಇದ್ದಾರೆ; ಅವರನ್ನೇ ಕೇಳಿ . . ." ಎಂದು ಮುಗಿಸಿದನು.

ತನ್ನ ಹೆಸರು ಸೂಚನೆಯಾದ ಬಗ್ಗೆ ಫಾದರ್ ರ್‍ಯುಬೋ ಸಂತೋಷ

ಪಟ್ಟನು. ಅವನು ರೋಮನ್ ಕ್ಯಾಥೊಲಿಕ್ ಮಂಡಲಿಗೆ ಸೇರಿದ ಹಿರಿಯನಾಗಿದ್ದನು. ತುಟಿಯ ಮೇಲಿದ್ದ ಹೊಗೆಸೊಪ್ಪಿನ ಪೈಪನ್ನು ಹೊರತೆಗೆದನು. ಹಿರಿತನದ ಹೆಚ್ಚಳದಿಂದ ಮುಗುಳು ನಗೆ ಬೀರಿದನು. ಆಗ ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಮುಂತಾದ ಭೇದವಿಲ್ಲದೆ ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟಿದರು.

ಪ್ರಣಯ ಸಾಹಸ ಕಥೆಯನ್ನು ಕೇಳುತ್ತಿದ್ದ ಹಾಗೆಯೆ ಫಕ್ಕನೆ ಕುಣಿದಾತ ಲೂಯಿಸವಾಯ್. ಇದ್ದಕ್ಕಿದ್ದಂತೆ ಅವನ ಬಾಯಲ್ಲಿ ನೀರೂರಿತು!.... "ದೇವರಾಣೆಯಿಟ್ಟು ಹೇಳುತ್ತೇನೆ. ಅವಳು ಸಣ್ಣ ಆಕಾರದ ಕೋಮಲ ಹೆಂಗಸಿರಬೇಕು. ಆದ್ದರಿಂದಲೇ ಮೇಸನ್ ಧೈರ್ಯವಹಿಸಿದನು!—"

ಮದ್ಯ ಸಿದ್ಧವಾಯಿತು. ಟಿನ್ನು ಬಟ್ಟಲುಗಳಲ್ಲಿ ಪಂಚ್ ಪಾನೀಯವನ್ನು ಹಂಚಲಾಯಿತು. ತಣಿಸಲಾಗದವನೆಂದು ಹೆಸರು ಪಡೆದ ಬೀಟಲ್ಸ್, ಮದ್ಯದಲ್ಲೇ ಮುಳುಗಿಹೋದನು. ಅವನ ಸ್ಫೂರ್ತಿಯಂತೂ ಹೇಳತೀರದು. ತಕ್ಷಣ ಕೈಕಾಲು ಕುಣಿಸುತ್ತಾ ತನಗೆ ಅತ್ಯಂತ ಪ್ರಿಯವಾದ ಕುಡುಕರ ಹಾಡನ್ನು ಹಾಡಿದನು:

ಸಾಸಪ್ರಸ್ ಮದ್ಯರಸ ನೋಡಿ ಸಾಸಪ್ರಸ್ ಮದ್ಯರಸ |
ಕುಡಿಯುವನು ಹಿರಿಯನಹ ಹೆನ್ರಿವಾರ್ಡ್ ಬೀಚರನು ||
ಕುಡಿಯುವರು ರವಿವಾರ ದುಡಿವ ಅಧ್ಯಾಪಕರು |||
ಆಣೆಮಾಡುವೆ ಕೇಳಿ ತಿನ್ನಲಾಗದ ಹಣ್ಣ ರಸವಿದಲ್ಲ
ಓಯ್! ತಿನ್ನಲಾಗದ ಹಣ್ಣ ರಸವಿದಲ್ಲ ||
ಆಣೆಮಾಡುವೆ ಕೇಳಿ ಸಾಸಪ್ರಸ್ ಮದ್ಯರಸ |
ಜಗದ ಫಲರಸದಂತೆ ಸುಖದ ಹವ್ಯಾಸ ||........

ಎಲ್ಲರೂ ಬ್ಯಾಕಸ್ ದೇವತೆಯ ಭಕ್ತರಾಗಿ ಒಕ್ಕೊರಲಿನಿಂದ ಹಾಡಿನ ಹಿಮ್ಮೇಳಕ್ಕೆ ಸೇರಿದರು:

"ಸಾಸಪ್ರಸ್ ಮದ್ಯರಸ ನೋಡಿ ಸಾಸಪ್ರಸ್ ಮದ್ಯರಸ |
ತಿನ್ನಲಾಗದ ಹಣ್ಣ ರಸವಿದಲ್ಲ ||
ಆಣೆಮಾಡುವೆ ಕೇಳಿ ಸಾಸಪ್ರಸ್ ಮದ್ಯರಸ |
ಜಗದ ಫಲರಸದಂತೆ ಸುಖದ ಹವ್ಯಾಸ.... ||"

* * * * *

ಮೇಲ್‌ಮ್ಯೂಟ್ ಕಿಡ್ ತಯಾರಿಸಿದ ಮದ್ಯ ಸಾಮಾನ್ಯವಲ್ಲ. ಅದರ ಪರಿಣಾಮ ಆಗಲೇ ಎದ್ದು ಕಾಣುತಿತ್ತು. ಅಲ್ಲಲ್ಲೇ ಬೀಡುಬಿಟ್ಟ ಪ್ರಯಾಣಿಕರು ಒಂದೇ ಜಾಡಿನಿಂದ ಬೇಸರಗೊಂಡಿದ್ದರು; ಅಂದು ಎಲ್ಲರೂ ಒಂದೆಡೆ ಸೇರಿ ಮನಸ್ಸಿನ ಭಾರವನ್ನಿಳಿಸಲು ಅವಕಾಶ ಸಿಕ್ಕಿತು. ಸುತ್ತಲೂ ಸ್ನೇಹಪರ ವಾತಾವರಣ ಮಿಂಚಿತು. ಹಿಂದೆ ಆಗಿಹೋದ ಎಷ್ಟೋ ಸ್ವಾರಸ್ಯದ ಕಥೆಗಳೂ, ಹಾಡುಗಳೂ ಮತ್ತು ತಮಾಷೆಯ ಪ್ರಸಂಗಗಳೂ ಎಲ್ಲರ ಬಾಯ ಮೇಲೆ ನಲಿದಾಡಿದವು. ನಾನಾಕಷ್ಟು ಪ್ರದೇಶಗಳಿಂದ ವಿದೇಶೀಯರೂ ಬಂದಿದ್ದರು. ಅವರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಆರೋಗ್ಯಭಾಗ್ಯ ಕೋರಿ ಸ್ವಸ್ತಿಪಾನಮಾಡಿದರು.

"ಹೊಸ ಪ್ರಪಂಚದ ಬಾಲಪ್ರೌಢ ಅಂಕಲ್ ಸ್ಯಾಮನಿಗೆ" ಎಂದು ಅಮೆರಿಕದ ಮಾದರಿ ಪ್ರಜೆಯ ಹೆಸರನ್ನು ಸೂಚಿಸಿ, ಸ್ವಸ್ತಿಪಾನ ಮಾಡಿದವನು ಆಂಗ್ಲೇಯನಾದ ಪ್ರಿನ್ಸ್; ಯಾಂಕಿಯಾದ ಬೀಟಲ್ಸ್ "ಇಗೋ ರಾಣಿಯ ಭಾಗ್ಯಕ್ಕೆ ...ದೇವರು ಅವಳನ್ನು ಹರಸಲಿ"ಎಂದು ಕುಡಿದನು. ಹಾಗೆಯೆ ಜರ್ಮನ್ ವರ್ತಕರೂ ಇತರರೂ ತಮ್ಮ ತಮ್ಮ ಬಟ್ಟಲುಗಳನ್ನು ಮುಟ್ಟಿಸಿ ಪರಸ್ಪರ ಆರೋಗ್ಯಭಾಗ್ಯ ಕೋರಿದರು.

ಆಗ ಮೇಲ್‌ಮ್ಯೂಟ್ ಕಿಡ್ ಎದ್ದುನಿಂತನು. ಕೈಯಲ್ಲಿ ಬಟ್ಟಲು ಹಿಡಿದಿದ್ದನು. ಏನು ಹೇಳುವುದು? ಜಿಡ್ಡು ಕಾಗದದಿಂದ ಮುಚ್ಚಲ್ಪಟ್ಟ ಕಿಟಕಿಯ ಕಡೆ ಕಣ್ಣನ್ನು ಹೊರಳಿಸಿದನು; ಮೂರು ಇಂಚುಗಳಷ್ಟು ದಟ್ಟವಾದ ಮಂಜು ಅದರ ಮೇಲೆ ಬಿದ್ದಿತ್ತು... "ಈ ರಾತ್ರಿಯಲ್ಲಿ ನಾವು ತುಳಿದ ದಾರಿಯನ್ನು ಹಿಂಬಾಲಿಸಿ ಬರುವ ಮನುಷ್ಯನಿಗೆ ಆರೋಗ್ಯವಿರಲಿ; ಆಹಾರ ಕೆಡದಿರಲಿ; ನಾಯಿಗಳ ಕಾಲಿಗೆ ಶಕ್ತಿಬರಲಿ; ಆತನ ಕಡ್ಡಿಗಳಲ್ಲಿ ಬೆಂಕಿಯು ಆರದಿರಲಿ....". ಥಟ್ಟನೆ ಹೊಳೆದ ಈ ಮಾತುಗಳೇ ಅವನ ಸ್ವಸ್ತಿಪಾನದ ಮುನ್ನುಡಿಯಾಯಿತು.

ಚಟ ಚಟ! ಚಟ ಚಟ! ನಾಯಿ ಚಾಪಟಿಯ ಸದ್ದು; ಅವರಿಗೆ ಅದೇನೂ ಹೊಸದಲ್ಲ. ಹಾಗೆಯೆ ಮೇಲ್‌ಮೂಟುಗಳ ಕೆನೆತದ ಕೂಗಾಟವೂ ಕೇಳಿಸಿತು. ಇಕ್ಕಟ್ಟಿನ ಜಾಗವಾದರೂ ಲಕ್ಷಿಸದೆ ಚಕಚಕನೆ ಚಕ್ರ ತಿರುಗಿಸುತ್ತಾ ಸ್ಲೆಜ್‌ಗಾಡಿಯೊಂದು ಹೊರಟಿರಬೇಕು!

ಸಂಭಾಷಣೆ ಕಡಿಮೆಯಾಗುತ್ತ ಬಂತು. ಯಾರು ಬರುತ್ತಿರಬಹುದು ಎಂದು ಎಲ್ಲರೂ ಕುತೂಹಲಿಗಳಾದರು.

ದವಡೆಯೇಟು ತಿಂದ ನಾಯಿಗಳು ಗುರುಗುರು ಎನ್ನುತಿದ್ದವು. ನೋವನ್ನು ಸಹಿಸಲಾರದೆ ಬೊಗಳುತಿದ್ದವು. ಒಳಗಿದ್ದವರ ಕಿವಿಗಳು ಇಂಥ ಗಲಾಟೆಯನ್ನು ಎಷ್ಟೋ ಬಾರಿ ಕೇಳಿದ್ದವು. ಎಲ್ಲರಿಗಿಂತಲೂ ಸೂಕ್ಷ್ಮಮತಿಯಾದ ಕಿಡ್ ಹೇಳಿದನು: "ಯಾರಯ್ಯಾ ಅವನು? ಎಷ್ಟಾದರೂ ಹಳೆಯ ಕಾಲದವನು. ತನ್ನ ಮತ್ತು ತನ್ನ ನಾಯಿಗಳ ಯೋಗಕ್ಷೇಮ ಬಿಟ್ಟರೆ ಮತ್ತೇನೂ ತಿಳಿಯದು."

"ನಿಜ; ಯಾವನೋ ಅಪರಿಚಿತ ತನ್ನ ನಾಯಿಗಳಿಗೆ ಮಾತ್ರ ಆಹಾರ ತುರುಕಿ, ನಮ್ಮ ನಾಯಿಗಳನ್ನು ಒದ್ದೋಡಿಸುತ್ತಿರಬೇಕು...." ಎಂದು ಇತರರು ಅಭಿಪ್ರಾಯಪಟ್ಟರು.

ಎಲ್ಲರೂ ಕಾದಿದ್ದಂತೆ ಬಾಗಿಲು ಸದ್ದಾಯಿತು. ಸರಕ್ಕನೆ ಬಾಗಿಲು ತಾನಾಗಿಯೆ ತೆರೆಯಿತು. ಅಪರಿಚಿತನಾದ ವ್ಯಕ್ತಿಯೊಬ್ಬ ಒಳಕ್ಕೆ ಪ್ರವೇಶಿಸಿದನು. ದೀಪಗಳಿಂದ ತುಂಬಿಹೋಗಿದ್ದ ಜಾಗವನ್ನು ನೋಡಿದೊಡನೆಯೆ ಮಂಕುಕವಿದವನಂತೆ, ಕ್ಷಣಕಾಲ ಬಾಗಿಲ ಬಳಿಯೆ ನಿಂತನು. ಎಲ್ಲರೂ ತನ್ನನ್ನು ಸೂಕ್ಷ್ಮವಾಗಿ ನೋಡಲು ಅವನೇ ಅವಕಾಶಮಾಡಿಕೊಟ್ಟನು.

ಕಣ್ಣು ಕೋರೈಸುವಂಥ ವ್ಯಕ್ತಿತ್ವ ಅವನದು. ಅವನು ಧರಿಸಿದ್ದ ಉತ್ತರ ಧ್ರುವದ ತುಪ್ಪುಳು ಚರ್ಮದ ಉಡುಪು ಎಂಥವನನ್ನಾದರೂ ಆಕರ್ಷಿಸುತಿತ್ತು. ಅವನು ಆರು ಅಡಿಗಳನ್ನೂ ಮೀರಿಸಿದ ಲಂಬುವಾಗಿದ್ದನು. ಎತ್ತರಕ್ಕೆ ತಕ್ಕಂತೆ ಭುಜಗಳೂ ಅಗಲವಾಗಿದ್ದವು. ವಿಶಾಲ ವಕ್ಷಸ್ಥಳ. ನುಣುಪಾದ ಮುಖ ಚಳಿಯ ಹೊಡೆತದಿಂದ ನಸುಗೆಂಪಾಗಿ ಮಿನುಗುತಿತ್ತು. ಕಣ್ಣಿನ ಹುಬ್ಬು ಹಾಗೂ ಉದ್ದನೆಯ ರೆಪ್ಪೆಗೂದಲು–ಇವುಗಳ ಮೇಲೆ ಮಂಜಿನ ಕಣಗಳು ಕೂತಿದ್ದರಿಂದ—ಬೆಳ್ಳಗೆ ಕಾಣಿಸುತಿತ್ತು. ತೋಳನ ಚರ್ಮದಿಂದ ತಯಾರಾದ ಅವನ ಟೊಪ್ಪಿಗೆ ಸ್ವಲ್ಪ ಮೇಲಕ್ಕೆ ಹಾರಿತ್ತು. ರಾತ್ರಿಯ ಕತ್ತಲಲ್ಲಿ ಆಗತಾನೆ ಹೊರಬಂದ ಹಿಮರಾಜನಂತೆ ಕಂಡನು. ನಡುವಿನ ಬೆಲ್ಟಿಗೆ ಎರಡು ದೊಡ್ಡದಾದ ರಿವಾಲ್ವರುಗಳನ್ನು ಸಿಕ್ಕಿಸಿದ್ದನು. ಇನ್ನೊಂದು ತುದಿಯಲ್ಲಿ ಬೇಟೆಯ ಚಾಕುವೊಂದು ನೇತಾಡುತಿತ್ತು. ನಾಯಿ ಚಾಟಿ ಕೈಯಲ್ಲೇ ಇತ್ತು. ಭುಜಕ್ಕೇರಿಸಿದ್ದ ಹೊಗೆ ಬಾರದ ದೊಡ್ಡ ಬಂದೂಕ ಇತ್ತೀಚಿನ ಮಾದರಿಯದು.

ಅವನು ಭದ್ರವಾದ ಹೆಜ್ಜೆಯಿಡುತ್ತ ಮುಂದಕ್ಕೆ ಬಂದನು. ನೋಡಿದಾಗ ಬಹಳ ಆಯಾಸಪಟ್ಟವನಂತಿದ್ದನು.

ಅಶುಭವನ್ನು ಸೂಚಿಸುವಂಥ ಮೌನ ಆವರಿಸಿತು. ಆದರೆ ಆ ವ್ಯಕ್ತಿಯೇ ತುಂಬುಹೃದಯದಿಂದ, "ನನ್ನ ಸ್ನೇಹಿತರೇ, ಹೇಗಿದ್ದೀರಿ? ಸ್ವಸ್ಥವೇ?" ಎಂದನು.

ತಕ್ಷಣ ಎಲ್ಲರ ಬಿಗುಮಾನವೂ ತೇಲಿಹೋಗಿ, ಸರಸ ವಾತಾವರಣ ಏರ್ಪಟ್ಟಿತು. ಮರುಕ್ಷಣ ಅವನು ಕೈಯನ್ನು ಚಾಚಿದಾಗ, ಮೇಲ್‌ಮ್ಯೂಟ್ ಕಿಡ್ ಭದ್ರವಾಗಿ ಅಪ್ಪಿ ಹಿಡಿದುಕೊಂಡನು. ಅವರಿಬ್ಬರು ಹಿಂದೆಂದೂ ಭೇಟಿಯಾಗಿರಲಿಲ್ಲ; ಆದರೆ ಪರಸ್ಪರ ವಿಷಯವನ್ನು ಕೇಳಿ ತಿಳಿದಿದ್ದರು. ಆ ಗುರುತಿನ ಮೇಲೆ ಇಬ್ಬರೂ ಕಂಡುಹಿಡಿಯಲು ಕಷ್ಟವಾಗಲಿಲ್ಲ.

ಸಭೆಯ ಪರಿಚಯವನ್ನು ಬಹುಬೇಗ ಮಾಡಿಕೊಡಲಾಯಿತು. ತನ್ನ ಕಾರ್ಯೋದ್ದೇಶವನ್ನು ಹೇಳಲು ಅವನು ಕಾದಿದ್ದನೊ ಏನೊ. ಅದಕ್ಕಿಂತ ಮುಂಚೆಯೆ ಬಲಾತ್ಕಾರದಿಂದ ಅವನಿಗೂ ಕೂಡ ಪಂಚ್ ಪಾನೀಯವನ್ನು ನೀಡಲಾಯಿತು.

“ಬುಟ್ಟಿಗಳನ್ನು ಹೊತ್ತ ಸ್ಲೆಜ್‌ಗಾಡಿಯೊಂದು ಹೊರಟು ಎಷ್ಟು ಹೊತ್ತಾಯಿತು? ಅದರಲ್ಲಿ ಮೂರು ಮನುಷ್ಯರೂ ಎಂಟು ನಾಯಿಗಳೂ ಇದ್ದಿರಬೇಕು ....”ಎಂದು ಅವನು ಕೇಳಿದನು.

“ಎರಡು ದಿನಗಳಾದರೂ ಆಗಿರಬೇಕು. ನೀನು, ಅದರ ಹಿಂದೆ ಹೊರಟಿಯೇನು?”

“ಹೌದು, ಅದು ನನ್ನ ಪ್ರಾಣಿಗಳ ತಂಡ. ಆ ಅಯೋಗ್ಯ ಆಸಾಮಿಗಳನ್ನು ನನ್ನ ಕಣ್ಣೆದುರಿನಲ್ಲೇ ಹರಿದುಹಾಕುತ್ತೇನೆ. ಆಗಲೇ ಎರಡು ದಿನಗಳ ಪ್ರಯಾಣ ಆಗಿದೆ. ಇನ್ನೇನು ಸಮೀಪಿಸಿದ್ದೇನೆ. ಇನ್ನೊಂದು ಓಟದಲ್ಲಿ ಅವರನ್ನು ಹಿಡಿಯಬಲ್ಲೆ....”

“ಅವರೇನಾದರೂ ಸಿಟ್ಟಿನಿಂದ ಮೇಲೆಬಿದ್ದರೆ?” ಎಂದು ಬೆಲ್‌ಡನ್ ಹಗುರವಾಗಿ ಪ್ರಶ್ನಿಸಿದನು. ಕೇವಲ ಸಂಭಾಷಣೆಯನ್ನು ಮುಂದುವರಿಸಲು ಆಡಿದ ಮಾತದು; ಏಕೆಂದರೆ ಮೇಲ್‌ಮ್ಯೂಟ್ ಕಿಡ್ ಮಾಂಸವನ್ನು ಕರಿಯುವುದರಲ್ಲೇ ಮಗ್ನನಾಗಿದ್ದನು.

ಹೊಸಬನು ಉತ್ತರಕೊಡದಿದ್ದರೂ, ಸಾಂಕೇತಿಕವಾಗಿ ಪಿಸ್ತೂಲನ್ನು ಕುಟ್ಟಿದನು.

“ಡಾಸನ್ ಬಿಟ್ಟಾಗ ಎಷ್ಟು ಹೊತ್ತಾಗಿತ್ತು?”

“ಹನ್ನೆರಡು ಘಂಟೆ”

“ಅಂದರೆ, ಹೋದ ರಾತ್ರಿ?”

“ಇಲ್ಲ: ಈ ದಿನ”

ಸಭೆಯಲ್ಲಿ ಆಶ್ಚರ್ಯ ಸೂಚಕವಾದಂಥ ಗುಜುಗುಜು ಮಾತು

ಹರಡಿತು. ಆಗ ಸುಮಾರು ಮಧ್ಯರಾತ್ರಿಯಿರಬಹುದು. ಹಾಗಾದರೆ ವಕ್ರ ವಕ್ರವಾದ ಎಪ್ಪತ್ತೈದು ಮೈಲಿಗಳಷ್ಟು ನದೀ ಮಾರ್ಗವನ್ನು ಕೇವಲ ಹನ್ನೆರಡು ಘಂಟೆಗಳಲ್ಲಿ ಮುಗಿಸಿರಬೇಕು. ಅದೂ ಒಂದೇ ಸಮನೆ ಓಡುತ್ತಾ! ಇದೇನು ಪರಿಹಾಸ್ಯ ಮಾಡುವಂಥ ಸಮಾಚಾರವಲ್ಲ.

ಕುಡಿತದ ಅಮಲಿನಲ್ಲಿ ಬಹುಬೇಗ ವ್ಯಕ್ತಿಗೆ ಸಂಬಂಧಪಟ್ಟ ಮಾತುಕಥೆ ಕಡಿಮೆಯಾಗತೊಡಗಿತು. ಆದರೂ ತಮ್ಮ ತಮ್ಮ ಚಿಕ್ಕ ವಯಸ್ಸಿನಲ್ಲಿ ಓಡಿದ ದಾರಿಗಳನ್ನು ಜ್ಞಾಪಿಸಿಕೊಳ್ಳುವಂತಾಯಿತು. ಹೊಸಬನಾದರೂ ಯುವಕ ಒರಟೊರಟಾದ ಆಹಾರವನ್ನು ತಿನ್ನಲು ಆರಂಭಿಸಿದನು. ಆಗ ಕಿಡ್ ಗಮನ ವಿಟ್ಟು ಅವನ ಮುಖಭಾವವನ್ನು ಅರಿಯಲು ಪ್ರಯತ್ನಿಸಿದನು. ಹೆಚ್ಚು ಹೊತ್ತು ಬೇಕಾಗಲಿಲ್ಲ. ಹೊಸಬನ ದಿಟ್ಟತನವನ್ನೂ ಸತ್ಯಶೀಲತೆಯನ್ನೂ ಮೆಚ್ಚಿದನು. ಆತನು ಯುವಕನಾಗಿದ್ದರೂ ವಿಪರೀತ ಕಷ್ಟ ಸಂಕೋಲೆಗಳಿಗೆ ಸಿಕ್ಕಿರಬೇಕು; ಇಲ್ಲದಿದ್ದರೆ ಮುಖದಲ್ಲಿನ ನರಗಳು ಎದ್ದು ಕಾಣಲು ಕಾರಣ ವೇನು? ಸಂಭಾಷಣೆಯಲ್ಲಿ ಅವನು ಸೌಜನ್ಯದಿಂದ ವರ್ತಿಸಬಹುದು; ವಿಶ್ರಾಂತಿ ಪಡೆಯುವಾಗ ಮೃದುವಾಗಿ ಕಾಣಬಹುದು; ಅವನ ಕಣ್ಣುಗಳಲ್ಲಿ ಉತ್ಸಾಹ ವಿಲ್ಲದಿದ್ದರೂ ಏನೊ ಒಂದು ಶಕ್ತಿಯ ಹಿನ್ನೆಲೆಯ ಹೊಳಪಿದೆ. ದುರ್ಗಮ ಸನ್ನಿವೇಶಗಳಲ್ಲಿ ಅದು ಉಕ್ಕಿನ ಝುರಿಯಂತೆ ಹರಿಯಬಹುದು. ಕರ್ತವ್ಯದ ಕರೆ ಬಂದಾಗ ಎಲ್ಲವೂ ಹೊರಸೂಸುತ್ತದೆ; ಅಲ್ಲವೇ? ಅವನ ಬಲವಾದ ದವಡೆಯನ್ನೂ, ಚಪ್ಪಟೆಯ ಕೆನ್ನೆಗಳನ್ನೂ ನೋಡಿದರೆ, ಅವನು ಯಾವುದಕ್ಕೂ ಬಗ್ಗದ ಛಲ ಸಾಧಿಸುವ ಪ್ರವೃತ್ತಿಯವನೆಂದು ತಿಳಿಯಬಹುದು. ಸಿಂಹದ ಗುಣಗಳಿದ್ದರೂ, ಆತನ ಮತ್ತೊಂದು ಸ್ವಭಾವವನ್ನು ಮರೆಯುವಂತಿಲ್ಲ. ಭಾವೋದ್ರೇಕಗೊಂಡರೂ ಹೆಂಗರುಳಿನ ಮೃದು ಸ್ವಭಾವ ಅವನಲ್ಲಿ ಅಡಗಿತ್ತು.

ಬೆಲ್‌ಡನ್ ತನ್ನ ಮದುವೆಯ ಪ್ರಸಂಗವನ್ನು ಹೇಳತೊಡಗಿದ್ದನು.... "ಅಬ್ಬ! ಸಾಲ್‌ಳನ್ನು ಮದುವೆಯಾಗಬೇಕಾದರೆ ಊಟದ ಕಡೆ ಗಮನವೂ ಇಲ್ಲದೆ ಭೂಮಿಯನ್ನು ಉಳಬೇಕಾಯಿತು. ಮಧ್ಯೆ ಮಧ್ಯೆ ಅವಳನ್ನೆ ನೋಡುತ್ತ ನನ್ನ ಮನಸ್ಸೂ ರಸವತ್ತಾಯಿತು!...." ಎಂದು ಪ್ರಣಯಾಚರಣೆಯನ್ನು ವಿವರಿಸುತ್ತಾ ಬಂದನು. ಅವನಂತೂ ತುಂಬ ಉದ್ರೇಕಗೊಂಡಿದ್ದನು.

"ನಿನಗೆ ಮಕ್ಕಳುಂಟೋ? ಆ ದೇಶದಲ್ಲೇ ನೆಲಸಿದ ಅವರು ನಿನಗಾಗಿ ಕಾಯುತಿದ್ದಾರೆಯೇ?" ಎಂದು ಹೊಸಬ ಕೇಳಿದನು.

"ಇಲ್ಲ, ಇಲ್ಲ; ಮತ್ತೊಂದು ಜೀವ ಹೊರಬರುವುದಕ್ಕಿಂತ ಮುಂಚೆಯೆ

ಸಾಲ್ ಸತ್ತುಹೋದಳು! ಆದ್ದರಿಂದಲೇ ನಾನು ಇಲ್ಲಿರುವುದು...." ಎಂದು ಬೆಲ್‌ಡನ್ ಏನೊ ಯೋಚನೆಯಲ್ಲಿ ಮಗ್ನನಾಗಿ ಪೈಪ್ ಹೊತ್ತಿಸಿದನು. ಮತ್ತೆ ಪ್ರಶ್ನಿಸಿದನು: "ಏನಯ್ಯಾ, ನಿನ್ನ ವಿಷಯ ಕೇಳಲೇ ಇಲ್ಲ. ನಿನಗೆ ಮದುವೆ ಯಾಗಿದೆ ತಾನೆ?"

ಉತ್ತರ ಬರಲಿಲ್ಲ. ಆದರೆ ಅವನು ಗಡಿಯಾರದ ಪೆಟ್ಟಿಗೆಯನ್ನು ತೆಗೆದು ಕೊಟ್ಟನು. ಬೆಲ್‌ಡನ್ ತಕ್ಷಣ ಮಣ್ಣಿನ ದೀಪವನ್ನು ಎಳೆದುಕೊಂಡನು. ಅದರ ಬೆಳಕಿನಲ್ಲಿ ಪೆಟ್ಟಿಗೆಯ ಒಳಭಾಗವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದನು. ತನ್ನಲ್ಲಿ ತಾನೇ ಮೆಚ್ಚಿಕೊಂಡು ಲೂಯಿ ಸವಾಯನ ಕೈಗೆ ಕೊಟ್ಟನು. ಲೂಯಿ ಸವಾಯ್ 'ಗಾರ್, ಗಾರ್' ಎಂದು ಒಂದೇ ಸಮನೆ ಕೂಗುತ್ತಾ ಪೆಟ್ಟಿಗೆಯನ್ನು ಪ್ರಿನ್ಸನ ಕೈಗೆ ರವಾನಿಸಿದನು. ಪ್ರಿನ್ಸ್ ಇನ್ನೂ ಯುವಕ; ಇತರರಂತೆ ಅನು ಭವದಿಂದ ಮಾತನಾಡಲು ಅವನಿಗೆ ಸಾಧ್ಯವಿಲ್ಲ. ಹೃದಯಾಂತರಾಳದ ಭಾವ ಗಳನ್ನು ತಡೆದುಕೊಳ್ಳಲು ಅಶಕ್ತನಾಗಿದ್ದನು. ಆದ್ದರಿಂದಲೇ ಅವನ ಕೈಗಳು ನಡುಗಿದವು; ಕಣ್ಣುಗಳು ವಿಶಿಷ್ಟವಾದ ಕನಿಕರವನ್ನು ತೋರ್ಪಡಿಸಿದವು. ಒಬ್ಬರಿಂದ ಮತ್ತೊಬ್ಬರ ಜಡ್ಡುಗಟ್ಟಿದ ಕೈಗಳಿಗೆ ವೇಗವಾಗಿ ಒಯ್ಯಲ್ಪಡುತ್ತಿದ್ದ ಆ ಪೆಟ್ಟಿಗೆಯಲ್ಲಿ ಏನೊ ಆಕರ್ಷಣೆಯಿರಬೇಕು. ನಿಜ; ಅಲ್ಲಿ ಚಿತ್ರವೊಂದನ್ನು ಅಂಟಿಸಲಾಗಿತ್ತು. ಅದೂ ಹೆಂಗಸಿನ ಚಿತ್ರ! ಆ ಹೆಂಗಸಿನ ಎದೆಯ ಮೇಲೆ ಸಣ್ಣಮಗು ನಲಿದಾಡುತಿತ್ತು! ಅಲೆದಾಡುವ ತಂಡದವರಿಗೆ ಚಿತ್ರವಂತೂ ಅಪೇಕ್ಷಣೀಯವಾಗಿತ್ತು. ಸರದಿ ಕಾಯುತಿದ್ದ ಇತರರಿಗೆ ಆಶ್ಚರ್ಯವಾಯಿತು. ಏನಿರಬಹುದೆಂದು ಯೋಚಿಸುತ್ತಾ ಕುತೂಹಲಿಗಳಾಗಿದ್ದರು. ಒಬ್ಬೊಬ್ಬರಾಗಿ ನೋಡುತ್ತ ಬಂದರು. ನೋಡಿದವರು ಮೌನಿಗಳಾಗಿ ಹಿನ್ನೆನಪುಗಳನ್ನು ಮೆಲುಕುಹಾಕಿದರು....ಕ್ಷಾಮಡಾಮರದ ಹಿಂಸೆಯನ್ನು ಅವರು ಎದುರಿಸಬಲ್ಲರು; ಕ್ರೂರ ಆಟಗಳನ್ನಾಡಿ ಸಾಯಲೂಬಹುದು; ಅಥವಾ ಪ್ರವಾಹದ ಭರದಲ್ಲಿ ಒಂದೇ ಏಟಿಗೆ ನಾವನ್ನಪ್ಪಬಹುದು. ಯಾವುದಕ್ಕೂ ತಮಗೆ ಹೆದರಿಕೆಯಿಲ್ಲ. ಆದರೆ ಚಿತ್ರಗತವಾದ ಆ ನವೀನ ಸ್ತ್ರೀ ಮತ್ತು ಶಿಶುವಿನ ರೂಪವನ್ನು ಕಂಡಾಕ್ಷಣ ಅವರೆಲ್ಲರೂ ಸ್ತ್ರೀಯರೂ ಎಳೆಯ ಮಕ್ಕಳೂ ಆದರು! ಹಾಗಿತ್ತು ಚಿತ್ರದ ಪ್ರಭಾವ.

ತನ್ನ ನಿಧಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತ ಹೊಸಬನು, "ನಾನು ಆ ಮಗುವನ್ನು ನೋಡಿಯೇ ಇಲ್ಲ. ಅದು ಗಂಡು ಮಗು, ಎರಡು ವರ್ಷ ವಯಸ್ಸು, ಎಂದು ಅವಳೇ ಹೇಳಿಕಳಿಸಿದ್ದಾಳೆ...." ಎಂದು ಮುಚ್ಚಲು ಮನಸ್ಸಿಲ್ಲದೆ ಆ

ಚಿತ್ರವನ್ನೇ ಕ್ಷಣಕಾಲ ದಿಟ್ಟಿಸಿ ನೋಡಿದನು. ಕಣ್ಣೀರು ಧಾರೆಯನ್ನು ತಡೆ ಹಿಡಿದು ನಿಲ್ಲಿಸಿದ್ದನು. ಆದರೆ ಪೆಟ್ಟಿಗೆಯನ್ನು ಮುಚ್ಚುವ ಹೊತ್ತಿಗೆ ಸಂಯಮ ದಿಂದಿರಲು ಸಾಧ್ಯವಾಗಲಿಲ್ಲ.

ಸೂಕ್ಷ್ಮವನ್ನರಿತ ಮೇಲ್‌ಮ್ಯೂಟ್ ಕಿಡ್ ಅವನನ್ನು ಪಕ್ಕಕ್ಕೆ ಕರೆದು ಕೊಂಡು ಹೋದನು. ಜಾಗವಿಲ್ಲದಿದ್ದರೂ ಇಕ್ಕಟ್ಟಿನ ನೆಲೆಯನ್ನೇ ಸರಿಪಡಿಸಿ ಅವನು ಮಲಗುವಂತೆ ಏರ್ಪಾಟು ಮಾಡಿದನು.

"ಬರಾಬರಿ ನಾಲ್ಕು ಘಂಟೆಗೆ ನನ್ನನ್ನು ಕೂಗಿ ಎಬ್ಬಿಸಬೇಕು. ಇದನ್ನು ಮಾತ್ರ ಮರೆಯಕೂಡದು...." ಎಂದು ಅವನು ಕಡೆಯ ಮಾತುಗಳನ್ನು ಆಡಿದನು. ಮರುಕ್ಷಣ ತನ್ನ ಆಯಾಸವನ್ನು ಪರಿಹರಿಸಿಕೊಳ್ಳಲು ಗಾಢ ನಿದ್ರೆಯಲ್ಲಿ ಮುಳುಗಿದನು. ಶ್ವಾಸ ಜೋರಾಗಿ ಎಳೆಯುತಿತ್ತು.

"ದೇವರಾಣೆಗೂ ಇವನು ಕೆಚ್ಚಿನ ಮನುಷ್ಯ! ನಾಯಿಗಳೊಡನೆ ಎಪ್ಪತ್ತೈದು ಮೈಲಿಗಳು ಪ್ರಯಾಣಮಾಡಿರುವ ಮನುಷ್ಯನಿಗೆ ಮೂರು ಘಂಟೆ ಗಳ ನಿದ್ರೆ ಸಾಕೆಂದರೆ ಅರ್ಥವೇನು? ಅದೂ ನಿದ್ದೆಯಾದ ಮೇಲೆ ಮತ್ತೆ ಓಡುವುದಂತೆ. ಕಿಡ್, ಇವನು ಯಾರು?" ಎಂದು ಪ್ರಿನ್ಸ್ ವ್ಯಾಖ್ಯಾನ ಮಾಡುತ್ತ ಪ್ರಶ್ನಿಸಿದನು.

"ಜಾಕ್ ವೆಸ್ಟನ್‌ಡೇಲ್. ಮೂರು ವರ್ಷಗಳಿಂದಲೂ ಹೀಗೆಯೆ ತಿರುಗಾಡುತಿದ್ದಾನೆ. ಯಾವ ಪುರುಷಾರ್ಥವನ್ನು ಸಾಧಿಸುವುದಕ್ಕೊ ತಿಳಿಯದು. ಅಂತೂ ಕುದುರೆಯಂತೆ ದುಡಿಯುವ ಮನುಷ್ಯನೆಂದು ಹೆಸರುಪಡೆದಿದ್ದಾನೆ. ಅವನ ಭಾಗಕ್ಕೆ ದುರದೃಷ್ಟವೇ ಜಾಸ್ತಿ. ಅವನ ಬಗ್ಗೆ ನನಗೆ ಏನೂ ಗೊತ್ತಿರ ಲಿಲ್ಲ. ಆದರೆ ಸಿತ್‌ಚಾರ್ಲ್ಲೆ ಇವನ ವಿಷಯ ಹೇಳುತಿದ್ದ...."

"ಸೊಗಸಾದ ಯುವತಿಯನ್ನು ಹೆಂಡತಿಯಾಗುಳ್ಳ ಈ ಮನುಷ್ಯ ಇಂಥ ಹಾಳುಕೊಂಪೆಯಲ್ಲಿ ಹೇಗೆ ಕಾಲಕಳೆಯುತ್ತಾನೋ ಆಶ್ಚರ್ಯ ..."

"ಮೊಂಡುತನದ ಛಾತಿಯೇ ಅವನು ತೊಂದರೆಪಡಲು ಕಾರಣ. ಎರಡು ಬಾರಿ ಪಂದ್ಯದ ಹಣವನ್ನು ದಕ್ಕಿಸಿಕೊಂಡರೂ ಉಳಿಸಿಕೊಳ್ಳದೆ ಹೋದನು."

ಇಲ್ಲಿಯ ತನಕ ನಡೆದುಬಂದ ಸಂಭಾಷಣೆ ಬೀಟಲ್ಸ್‌ನ ಕೂಗಾಟದಿಂದ ಕಡಿದುಹೋಯಿತು. ಕುಡಿತದ ಅಮಲು ನಿಧಾನವಾಗಿ ಕಡಿಮೆಯಾಗುತಿತ್ತು. ಮತ್ತೆ ಕುಡಿತವಾಯಿತು. ಇನ್ನು ಕೇಳಬೇಕೆ? ಅದರ ಉಲ್ಲಾಸಾನುಭವದಲ್ಲಿ ಕಷ್ಟಕಾರ್ಪಣ್ಯದ ದಿನಗಳು ಬಹುಬೇಗ ಮರೆತುಹೋದವು. ಮೇಲ್‌ಮ್ಯೂಟ್ ಕಿಡ್ ಮಾತ್ರ ಮನಸ್ಸನ್ನು ಸಡಿಲಗೊಳಿಸದೆ ಬಿಗಿ ಹಿಡಿದಿದ್ದನು. ಆಗಾಗ

ಗಡಿಯಾರವ ಕಡೆಯೇ ಅವನ ಕಣ್ಣಿತ್ತು. ಕೈಗವಸನ್ನು ತೂರಿಸಿಕೊಂಡು ಬೀವರ್ ಚರ್ಮದ ಟೊಪ್ಪಿಗೆಯನ್ನು ತಲೆಗೇರಿಸಿದನು. ಜೋಪಡಿಯಿಂದ ಹೊರಬಂದು ಗುಪ್ತಸ್ಥಳದಲ್ಲಿ ಏನನ್ನೊ ಹುಡುಕಲು ತೊಡಗಿದ್ದನು.

ಅವನು ಅಷ್ಟು ಹೊತ್ತಿನ ತನಕವೂ ಕಾಯಲಿಲ್ಲ; ಅತಿಥಿಯನ್ನು ಹದಿನೈದು ನಿಮಿಷಗಳು ಮುಂಚಿತವಾಗಿಯೆ ಎಬ್ಬಿಸಿಬಿಟ್ಟನು. ಜಾಕ್ ವೆಸ್ಟನ್‌ಡೇಲ್ ಯುವಕ ರಾಕ್ಷಸನಂತೆ ಕಂಡನು. ಆದರೂ ಅವನ ಕೈಕಾಲುಗಳು ಸೇದಿಹೋಗಿದ್ದವು. ಅವನ್ನು ಸರಿಪಡಿಸಲು ಜೋರಾಗಿ ತಿಕ್ಕಬೇಕಾಯಿತು. ನರಳುತಿದ್ದರೂ ತತ್ತರಿಸುತ್ತಾ ಜೋಪಡಿಯ ಹೊರಕ್ಕೆ ಬಂದು ನೋಡಿದನು. ನಾಯಿಗಳನ್ನು ಸ್ಲೆಜ್ಜಿಗೆ ಹೂಡಲಾಗಿತ್ತು. ಹೊರಡಲು ಎಲ್ಲವೂ ಸಿದ್ಧವಾಗಿತ್ತು. ವಿಶ್ವಾಸಿಗಳು ಅವನಿಗೆ ಶುಭ ಕೋರಿದರು ; ಓಟದ ಪ್ರತಿಫಲ ಬೇಗ ಸಿಕ್ಕಲೆಂದು ಹಾರೈಸಿದರು. ಫಾದರ್ ರ್‍ಯಾಬೊ ಆತುರದಿಂದ ಆಶೀರ್ವದಿಸಿ, ದಿಕ್ಕಾಪಾಲಾಗಿ ಓಡುತಿದ್ದ ಪ್ರಾಣಿಗಳನ್ನು ಜೋಪಡಿಯೊಳಕ್ಕೆ ನುಗ್ಗಿಸಿದನು. ಸೊನ್ನೆಗಿಂತಲೂ ಎಪ್ಪತ್ತುನಾಲ್ಕು ಡಿಗ್ರಿಗಳು ಕಡಿಮೆಯ ಶಾಖಾಂಶವಿರುವಾಗ ಬತ್ತಲೆಯ ಕೈ ಕಿವಿಗಳಲ್ಲಿ ಹೊರಡುವುದು ಸರಿಯಲ್ಲವೆಂದು ಹೇಳುತಿದ್ದನು.

ಮೇಲ್‌ಮ್ಯೂಟ್ ಕಿಡ್ ಮಾತ್ರ ಮುಖ್ಯ ಮಾರ್ಗದವರೆಗೆ ಹೊರಟಿದ್ದನು. ವಿಶ್ವಾಸದಿಂದ ಗಟ್ಟಿಯಾಗಿ ಅವನ ಕೈ ಹಿಡಿದು ಬುದ್ಧಿವಾದ ಹೇಳಿದನು :

"ಸ್ಲೆಜ್ ಮೇಲೆ ನೂರು ಪೌಂಡುಗಳಷ್ಟು ಸಾಮನ್ ಮೊಟ್ಟೆಗಳಿವೆ. ಅದನ್ನು ಮರೆಯಬೇಡ. ನೀನು ತಿಳಿದಿರುವಂತೆ, ನಾಯಿಗಳಿಗೆ ಪೆಲ್ಲಿಯಲ್ಲಿ ಆಹಾರ ಸಿಗುವುದಿಲ್ಲ ..."

ಜಾಕ್ ಆಶ್ಚರ್ಯಪಟ್ಟನು. ಕಣ್ಣು ಮಿಂಚಿತು. ಆದರೆ ಮಾತನಾಡಲಿಲ್ಲ.

"ಫೈವ್‌ಫಿಂಗರ್ಸ್ ಸೇರುವತನಕ ನಾಯಿಗಳಿಗಾಗಲಿ ಮನುಷ್ಯನಿಗಾಗಲಿ ಒಂದು ಔನ್ಸಿನಷ್ಟು ಆಹಾರವೂ ಸಿಗಲಾರದು. ಅಂದರೆ ಇನ್ನೂರು ಮೈಲಿಗಳು ಅದೇ ಗತಿ. ಮೊದಲು 'ಮೂವತ್ತು ಮೈಲು ನದಿಯ' ನೀರನ್ನು ಕಾಣಬೇಕು; ಆಮೇಲೆ ಲೀ ಬಾರ್ಗ್ ಹತ್ತಿರ ತಿರುಗಬೇಕು...."

"ಇದೆಲ್ಲ ನಿನಗೆ ಹೇಗೆ ಗೊತ್ತು ? ನನಗಿಂತಲೂ ಮುಂಚೆ ಸಮಾಚಾರ ಬಂದಿರಲಾರದು ; ಅದು ನಿಜ ತಾನೆ?...." ಎಂದನು ಜಾಕ್.

"ತಿಳಿಯದು; ಅದಕ್ಕಿಂತಲೂ ಹೆಚ್ಚಾಗಿ ತಿಳಿದುಕೊಳ್ಳುವ ಅಪೇಕ್ಷೆಯೂ ಇಲ್ಲ. ಆದರೆ ನೀನು ಬೆನ್ನಟ್ಟಿ ಹೋಗುತ್ತಿರುವ ತಂಡ ಎಂದಿಗೂ ನಿನ್ನದಲ್ಲ. ಹೋದ ವಸಂತದಲ್ಲಿ ಸಿಕ್ಕ ಚಾರ್ಲೆ ಅದನ್ನು ಆ ತಂಡದವರಿಗೆ ಮಾರಿಬಿಟ್ಟನು.

ಎಲ್ಲರೀತಿಯಲ್ಲೂ ಋಣಮುಕ್ತನಾದ ಪ್ರಾಮಾಣಿಕನೆಂದು ನಿನ್ನನ್ನು ನನ್ನೆದುರಿಗೆ ಅವನೇ ಹೊಗಳಿದ್ದನು. ಆ ಮಾತುಗಳಲ್ಲಿ ನನಗೆ ನಂಬಿಕೆಯುಂಟು. ನಿನ್ನ ಮುಖ ಪರಿಚಯವಿದೆ, ಅಂದಿನಿಂದ ಇಂದಿನವರೆಗೂ ನಿನ್ನಲ್ಲಿ ವಿಶ್ವಾಸವಿಟ್ಟಿದ್ದೇನೆ. ಎಷ್ಟೋ ಸಾರಿ ನೋಡಿದ್ದೇನೆ; ನೀನು ಸುಮ್ಮನೆ ಉಪ್ಪುನೀರಿನ ಎತ್ತರದ ಪ್ರದೇಶ ಗಳಲ್ಲಿ ಹೊಡೆದಾಡುತ್ತಿದ್ದೀಯೆ. ಆದರೆ ಆ ನಿನ್ನ ಹೆಂಡತಿ ಮತ್ತು—" ಎನ್ನುತ್ತಿ ರುವಂತೆಯೆ ಕಿಡ್ ತನ್ನ ಕೈಗವಸನ್ನು ಬಿಚ್ಚಿ ಅವನಿಗೆ ಕೊಡಲು ಹೊರಟನು.

"ಬೇಡ, ಬೇಡ; ಅದರ ಅವಶ್ಯಕತೆ ನನಗಿಲ್ಲ."

ಅವನ ಕೆನ್ನೆಯ ಮೇಲೆ ಕಣ್ಣೀರು ಹರಿದು ಘನೀಭೂತವಾಯಿತು. ದೇಹ ಕಂಪಿಸುತಿತ್ತು. ಆದರೂ ಅವನು ಮೇಲ್‌ಮೂಟ್ ಕಿಡ್‌ನ ಕೈಯನ್ನು ಭದ್ರವಾಗಿ ಹಿಡಿದಿದ್ದನು.

"ಹಾಗಿದ್ದರೆ ನಾಯಿಗಳನ್ನು ಮಾತ್ರ ಬಿಟ್ಟುಕೊಡಬೇಡ; ಅವುಗಳಲ್ಲಿ ಯಾವುದಾದರೂ ಕೆಳಕ್ಕೆ ಬಿದ್ದರೆ, ತಕ್ಷಣ ಸರಪಣಿಯನ್ನು ಬಿಚ್ಚು. ಅವುಗಳಿಗೆ 'ಫೈನ್‌ಫಿಂಗರ್'ನಲ್ಲಿ ಆಹಾರ ಕೊಂಡು ತಿನ್ನಿಸಲು ಮರೆಯಬೇಡ. ನಿನ್ನ ಕಾಲುಗಳು ಹೆಚ್ಚು ತೇವವಾಗದಂತೆ ನೋಡಿಕೊ. ಇಪ್ಪತ್ತೈದು ಡಿಗ್ರಿಗಳ ವರೆಗೂ ಪ್ರಯಾಣಮಾಡಬಹುದು; ಅದಕ್ಕಿಂತ ಕಡಿಮೆಯಾದರೆ ತಕ್ಷಣ ಬೆಂಕಿ ಯನ್ನು ಹೊತ್ತಿಸಿ, ಬೆಚ್ಚಗೆ ಮಾಡಿಕೊಂಡು ಕಾಲುಚೀಲಗಳನ್ನು ಬದಲಾ ಯಿಸು ..." ಎಂದು ಕೊನೆಯದಾಗಿ ಉಪದೇಶಿಸಿ ಅವನನ್ನು ಕಳಿಸಿದನು.

* * * * *

ಇನ್ನೂ ಹದಿನೈದು ನಿಮಿಷವಿಲ್ಲ; ಆಗಲೇ ಸಣ್ಣ ಗಂಟೆಗಳ ಝಣ ಝಣ ಕೇಳಿಸಿತು. ಮತ್ತೆ ಯಾರೋ ಬರುತ್ತಿರುವ ಸೂಚನೆಯದು. ನಿಜ; ಬಾಗಿಲು ತೆರೆಯಿತು. ವಾಯುವ್ಯ ನರಹದ್ದಿನ ಪೋಲೀಸು ಸವಾರನೊಬ್ಬ ಪ್ರವೇಶಿಸಿದನು. ಅವನ ಹಿಂದೆ ನಾಯಿ ಹೊಡೆಯುವ ಇಬ್ಬರು ಮಿಶ್ರಕುಲದವರೂ ಇದ್ದರು. ವೆಸ್ಟನ್‌ಡೇಲಿನಂತೆ ಇವರೂ ಕೂಡ ಹೆಚ್ಚು ಆಯುಧಗಳನ್ನು ಹೊಂದಿದ್ದರು; ಮತ್ತು ತುಂಬ ಆಯಾಸಗೊಂಡವರಂತೆ ತೋರಿದರು. ಮಿಶ್ರಕುಲದವರು ಎಷ್ಟಾದರೂ ಅಲೆದಾಟಕ್ಕೇ ಹುಟ್ಟಿದವರು; ಆದ್ದರಿಂದ ಮೇಲುಸಿರನ್ನು ಹಗುರ ವಾಗಿಯೆ ಎಳೆಯುತಿದ್ದು ಬಚಾಯಿಸಿಕೊಂಡಿದ್ದರು. ಆದರೆ ಪೋಲೀಸು ಯುವಕ ವಿಪರೀತ ಸುಸ್ತಾಗಿದ್ದನು. ಕುಲದ ಗೌರವದಿಂದ ಅವನು ಪೇಚಿನಲ್ಲಿ ಸಿಕ್ಕಿದ್ದನು. ತಮ್ಮ ಮಾರ್ಗವನ್ನೇ ಮುಂದಿಡುತ್ತ, ಹಿಡಿದ ಪಟ್ಟು ಬಿಡದಂಥ ಕುಲ ಅವನದು. ಆದ್ದರಿಂದ ತನ್ನನ್ನು ತಾನೆ ಹಿಡಿದು ನಿಲ್ಲಿಸಿದ್ದನು. ನಿಂತಲ್ಲೇ

ಬೀಳುವ ಸರದಿ ಬರುವ ತನಕ ಸುಳ್ಳು ಮರ್ಯಾದೆಯನ್ನು ತೋರ್ಪಡಿಸ ಬೇಕಾಯಿತು.

"ವೆಸ್ಟನ್‌ಡೇಲ್ ಓಡಿದ್ದು ಯಾವಾಗ? ಅವನು ಇಲ್ಲಿ ನಿಂತು ಹೊರಟನು; ಅಲ್ಲವೇ ?"

ಪ್ರಶ್ನೆಯ ಉತ್ತರಾರ್ಧ ಅನವಶ್ಯಕವಾಗಿತ್ತು; ಏಕೆಂದರೆ ಅದನ್ನು ಮಾರ್ಗದ ಗುರುತುಗಳಿಂದಲೇ ತಿಳಿಯಬಹುದು.

ಮೇಲ್‌ಮ್ಯೂಟ್ ಕಿಡ್ ಬೆಲ್‌ಡನ್ ಕಡೆ ನೋಡಿ ಕಣ್ಣುಸನ್ನೆ ಮಾಡಿದನು. ಬೆಲ್‌ಡನ್ ಇಂಗಿತವನ್ನರಿತನು. ಪ್ರಶ್ನೆಗೆ ಉತ್ತರಕೊಡದೆ ಏನನ್ನೋ ಹೇಳಿದನು.

"ಎಳಯ್ಯ ಮನುಷ್ಯ; ಸರಿಯಾಗಿ ಮಾತನಾಡು" ಎಂದು ಪೋಲೀಸಿನವನು ಎಚ್ಚರಿಸಿದನು.

"ನೀವು ಬಹಳ ಆತುರದಿಂದ ಬಂದಂತೆ ಕಾಣುತ್ತದೆ. ಈಗಲೇ ಅವನನ್ನು ನೋಡಬೇಕೆ? ಡಾಸನ್ ಮಾರ್ಗದಲ್ಲಿ ಏನಾದರೂ ತಂಟೆಮಾಡಿದ್ದಾನೆಯೋ ?"

"ಮೆಕ್‌ಫರ್‌ಲ್ಯಾಂಡ್ಸ್‌ನ ಹ್ಯಾರಿ ಅವರನ್ನು ಅವನು ದಾರಿಗಟ್ಟಿ ಹೊಡೆದು ಸುಲಿಗೆ ಮಾಡಿದ್ದಾನೆ. ಸ್ವಲ್ಪವಲ್ಲ; ನಲವತ್ತು ಸಾವಿರ! ಆ ಹಣವನ್ನು ಪಿ. ಸಿ. ಸ್ಟೋರಿನಲ್ಲಿ ವಿನಿಮಯಮಾಡಿ, ಸೀಟಲ್ ಮೇಲೆ ಒಂದು ಚೆಕ್ ಪಡೆದಿದ್ದಾನೆ. ಅದರಿಂದ ಹಣ ಅವನಿಗೆ ಸಿಗದಂತೆ ಮಾಡಬೇಕಾದರೆ, ಈಗಲೇ ಅವನನ್ನು ಬೆನ್ನಟ್ಟಿ ಹಿಡಿಯಬೇಕು. ಆ ಕೆಲಸವನ್ನು ನಾವಲ್ಲದೆ ಮತ್ತಾರು ಮಾಡಲು ಸಾಧ್ಯ ?....ಅವನು ಇಲ್ಲಿಂದ ಯಾವಾಗ ಓಟಕಿತ್ತನು ?"

ಪ್ರತಿಯೊಬ್ಬರೂ ಆಶ್ಚರ್ಯದಿಂದ ಕೆರಳಿದ್ದರೂ, ಹೊರಕ್ಕೆ ತೋರಿಸದಂತೆ ತಮ್ಮ ತಮ್ಮಲ್ಲಿ ಅದುಮಿಕೊಂಡರು; ಮೇಲ್‌ಮ್ಯೂಟ್ ಕಿಡ್ ಮೊದಲೇ ಸೂಚನೆಕೊಟ್ಟಿದ್ದನು. ಮರದಂತೆ ನಿಶ್ಚೇಷ್ಟಿತವಾದ ಮುಖಗಳನ್ನು ಯುವಕ ಸಾಹೇಬ ಎದುರಿಸಬೇಕಾಯಿತು.

ಮಾರುಗಾಲು ಹಾಕುತ್ತಾ ಪ್ರಿನ್ಸನ ಹತ್ತಿರ ಬಂದು ಪ್ರಶ್ನಿಸಿದನು. ಎಷ್ಟಾದರೂ ಪೋಲೀಸಿನವನು ತಮ್ಮ ದೇಶದವನು; ಮತ್ತು ಬಿಚ್ಚುನುಡಿಯ ಕಾರ್ಯಾಸಕ್ತನಾಗಿದ್ದಾನೆ.—ಅವನನ್ನೇ ದಿಟ್ಟಿಸಿ ನೋಡುವಾಗ ಪ್ರಿನ್ಸ್‌ನ ಮನಸ್ಸು ಸ್ವಲ್ಪ ಅಳುಕಿತು. ಆದರೂ ನೇರ ಉತ್ತರ ಹೇಳಲು ಮನಸ್ಸು ಬಾರದು. ಆದ್ದರಿಂದ ಪೂರ್ವಾಪರ ಸಂಬಂಧವಿಲ್ಲದಂತೆ ಮಾರ್ಗದ ಸ್ಥಿತಿಗತಿ

ಗಳನ್ನು ವಿವರಿಸಿದನು. ಅವನ ಉತ್ತರ ಅಷ್ಟು ಸಮರ್ಪಕವಾಗಿರಲಿಲ್ಲ.

ಮತ್ತೆ ಪೋಲೀಸಿನವನು ಫಾದರ್ ರ್‍ಯ್ಯಾಬೋ ಕಡೆ ನೋಡಿದನು. ಅವನಾದರೂ ನಿಜ ಹೇಳುತ್ತಾನಲ್ಲವೇ ?

"ಕಾಲು ಘಂಟೆಯ ಹಿಂದೆ ಹೊರಟನು. ಆದರೆ ಅವನೂ ಮತ್ತು ಅವನ ನಾಯಿಗಳು ನಾಲ್ಕು ಘಂಟೆಯ ಕಾಲ ವಿಶ್ರಾಂತಿ ಹೊಂದಿದ್ದರಿಂದ, ಮುಂದಿನ ಪ್ರಯಾಣಕ್ಕೆ ಅನುಕೂಲವಾಯಿತು" ಎಂದು ಫಾದರ್ ಹೇಳಿಯೇ ಬಿಟ್ಟನು.

"ಹದಿನೈದು ನಿಮಿಷಗಳಲ್ಲಿ ಚೇತರಿಸಿಕೊಂಡು ಸಿದ್ಧನಾಗುವುದು ; ಅಬ್ಬ !...."

ಪಾಪ ; ಪೋಲೀಸಿನವನು ಹಿಂದಕ್ಕೆ ತತ್ತರಿಸಿದನು, ಆಯಾಸದ ಜೊತೆಯಲ್ಲಿ ಆಶಾಭಂಗವೂ ಆದದ್ದರಿಂದ ಮೂರ್ಛೆಹೋದಂತಾಯಿತು. ಡಾಸನ್ನಿನಿಂದ ಹತ್ತು ಘಂಟೆಗಳ ಕಾಲ ಓಡಿದ್ದಾಯಿತು. ಅಷ್ಟರಲ್ಲೇ ನಾಯಿಗಳು ಶಕ್ತಿಗುಂದಿ ಅಪ್ರಯೋಜಕವಾಗಿವೆ—ಎಂದು ಏನೇನೊ ಗೊಣಗುತಿದ್ದನು.

ಮೇಲ್‌ಮ್ಯೂಟ್ ಕಿಡ್ ಅವನಿಗೂ ಬಲಾತ್ಕಾರಮಾಡಿ ಪಂಚ್ ಪಾನೀಯವನ್ನು ಸುರಿದನು. ಹೊರಕ್ಕೆ ಹೋಗಿ ನಾಯಿ ಹೊಡೆಯುವವರನ್ನೂ ಕರೆದನು ; ಬೆಚ್ಚಗಿನ ವಾತಾವರಣದಲ್ಲಿ ವಿಶ್ರಾಂತಿಗಾಗಿ ಅವರು ಹಂಬಲಿಸುತ್ತಿದ್ದರು ; ಆದರೆ ಸಾಹೇಬನ ಎದುರಿಗೆ ಅವರು 'ಬೇಡ, ಬೇಡ' ಎಂದು ಬಹು ಕಷ್ಟದಿಂದ ನಟಿಸಿದರು. ಅವರು ಮಾತನಾಡುತಿದ್ದ ಫ್ರೆಂಚ್‌ಗ್ರಾಮ್ಯ ಕಿಡ್‌ಗೂ ಬರುತಿತ್ತು. ಕುತೂಹಲದಿಂದ ಅವರ ಸಂಭಾಷಣೆಯನ್ನು ಹಿಂಬಾಲಿಸಿದನು.

ನಾಯಿಗಳಿಗೆ ಸಾಕಾಗಿಹೋಗಿದೆ ಎಂದು ಆಣೆಯಿಟ್ಟು ಹೇಳುತಿದ್ದರು. ಇನ್ನೊಂದು ಮೈಲಿಯಲ್ಲಿ ಸಿವಾಶ್ ಮತ್ತು ಬ್ಯಾಬಟಿಯನ್ನು ಗುಂಡಿಟ್ಟು ಕೊಲ್ಲಬೇಕಾಗುತ್ತದೆ ; ಉಳಿದವೂ ಕೂಡ ಅದೇ ಪರಿಸ್ಥಿತಿಯಲ್ಲಿದೆ ; ಆದ್ದರಿಂದ ಎಲ್ಲವೂ ವಿಶ್ರಾಂತಿಪಡೆಯುವುದು ಉತ್ತಮ—ಎಂದು ಅವರ ಸೂಚನೆಯಾಗಿತ್ತು.

"ನನಗೆ ಐದು ನಾಯಿಗಳನ್ನು ಕೊಡಿ ?" ಎಂದು ಪೋಲೀಸಿನವನು ಮೇಲ್‌ಮೂಟ್ ಕಿಡ್‌ನನ್ನು ಕೇಳಿದನು.

ಆದರೆ ಕಿಡ್ ತಲೆಯಲ್ಲಾಡಿಸಿದನು.

"ಏಕೆ ? ಇಗೋ ಈ ಕಾಗದಗಳು. ಕ್ಯಾಪ್ಟನ್ ಕಾನ್‌ಸ್ಟೆನ್‌ಟೈನ್

ಲೆಕ್ಕದಲ್ಲಿ ಚೆಕ್ ಬರೆಯಲು ನನಗೆ ಅನುಮತಿಯುಂಟು; ದುಡ್ಡು ಎಳೆಯಲು ಯಾರನ್ನೂ ಕೇಳಬೇಕಾದ್ದಿಲ್ಲ. ತಗೊಳ್ಳಿ, ಐದು ಸಾವಿರಕ್ಕೆ ಚೆಕ್ ಬರೆಯುತ್ತೇನೆ.....

ಮೌನವೇ ವಿರುದ್ಧ ಉತ್ತರವನ್ನು ತೋರ್ಪಡಿಸಿತು.

"ಹಾಗಾದರೆ ನಾನು ಅವುಗಳಿಗಾಗಿ ರಾಣಿಯ ಹೆಸರಿನಲ್ಲಿ ಅಪ್ಪಣೆ ಮಾಡುತ್ತೇನೆ!"

ಯಾವುದನ್ನೂ ನಂಬದವನಂತೆ ಕಿಡ್ ನಸುನಕ್ಕನು. ತುಂಬಿಹೋಗಿದ್ದ ತೋಫ್‌ಖಾನೆಯ ಕಡೆ ದೃಷ್ಟಿಬೀರಿದನು. ಆಂಗ್ಲೇಯನಾದ ಪೋಲೀಸಿನವನು ತನ್ನ ದುರ್ಬಲತೆಯನ್ನು ಕಂಡುಕೊಂಡನು. ತಕ್ಷಣ ಬಾಗಿಲ ಹಾದಿ ಹಿಡಿದನು. ಆದರೆ ನಾಯಿ ಹೊಡೆಯುವವರು ಇನ್ನು ಒಪ್ಪಿಗೆ ಸೂಚಿಸದೆ ಕುಳಿತಿದ್ದರು. ಅವನನ್ನು ಹಿಂಬಾಲಿಸಲು ಹಿಂಜರಿದರು. ಆಂಗ್ಲೇಯನಿಗೆ ಕೋಪ ನೆತ್ತಿಗೇರಿತು. ಸುಂಟರ ಗಾಳಿಯಂತೆ ಅವರ ಮೇಲೆ ಬಿದ್ದನು. "ನಾಯಿ ಕುನ್ನಿಗಳು, ಹೆಂಗಸರು!" ಮುಂತಾಗಿ ಏನೇನೊ ಬೈದನು. ಆ ಇಬ್ಬರಲ್ಲಿ ದೊಡ್ಡವನು ತಿರುಗಿಬಿದ್ದನು. ಮೇಲೇಳುತ್ತಿದ್ದಂತೆ ಅವನ ಮುಖ ಕೆಂಪೇರಿತು. ಈ ಮುಖಂಡನನ್ನು ಬೆನ್ನಟ್ಟಿ, ಅವನ ಕಾಲು ಕಿತ್ತು ಹಿಮದಲ್ಲಿ ನೆಡುತ್ತೇನೆಂದು ಪ್ರತಿಜ್ಞೆಮಾಡಿದನು. ಆಗಲೇ ತನಗೆ ಸಂತೋಷವೆಂದು ನೇರವಾಗಿ ಹೇಳಿಯೇಬಿಟ್ಟನು.

ಯುವಕ ಸಾಹೇಬ ದಮ್ಮುಕಟ್ಟಿ ತತ್ತರಿಸದೆ ಬಾಗಿಲ ಬಳಿ ಬಂದನು. ಒಳಗಡೆ ಪೊಳ್ಳಾಗಿದ್ದರೂ ಮೇಲೆ ಮಾತ್ರ ನವಚೈತನ್ಯದ ಪ್ರದರ್ಶನ ಮಾಡಿದನು. ಅವನ ವಿಷಯ ಎಲ್ಲರಿಗೂ ಗೊತ್ತಾಗಿತ್ತು. ಆದರೂ ಅವನ ಹೆಮ್ಮೆಯ ಪ್ರದರ್ಶನವನ್ನು ಮೆಚ್ಚಿದರು. ಆದರೆ ಮುಖದಲ್ಲಿದ್ದ ದುಃಖದ ಪರೆಯನ್ನು ಮುಚ್ಚಿಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ.

ಮಂಜು ಬೀಳುತಿತ್ತು. ಮೇಲೆ ಕೆಳಗೆ ಹಿಮದಿಂದ ಆವೃತವಾಗಿದ್ದ ನಾಯಿಗಳು ಮೈ ಮುದುರಿಕೊಂಡು ಒದ್ದಾಡುತಿದ್ದವು. ಅವುಗಳನ್ನು ಎದ್ದು ನಿಲ್ಲುವಂತೆ ಮಾಡಲು ಅಸಾಧ್ಯವಾಗಿತ್ತು. ಮುಳ್ಳಿನ ಚಾಟಿಯಿಂದ ಏಟುತಿಂದ ಬಡ ಪ್ರಾಣಿಗಳು ಕುಂಯ್ ಎಂದು ಕೂಗುತ್ತಿದ್ದವು. ಕ್ರೋಧಗೊಂಡಿದ್ದ ನಾಯಿ ನಡೆಸುವವರು ಅಷ್ಟು ಧುರೀಣರಾಗಿದ್ದರು. ಬ್ಯಾಬಟಿ ಮುಂದುಗಡೆಯಿದ್ದ ನಾಯಿ. ಅದಕ್ಕೆ ಕಟ್ಟಿದ್ದ ಸರಪಳಿಯನ್ನು ಕತ್ತರಿಸಲೇಬೇಕು; ಇಲ್ಲದಿದ್ದರೆ ಸ್ಲೆಜ್ ಗಾಡಿಯನ್ನು ತಹಬಂದಿಗೆ ತರಲು ಸಾಧ್ಯವೇ ಇಲ್ಲ. ಏನು ಮಾಡುವುದು?

ಎಲ್ಲವೂ ವ್ಯರ್ಥ ಪ್ರಯತ್ನವಾಗಿತ್ತು.

"ಕೊಳಕು ಮನುಷ್ಯ, ದಗಾಕೋರ, ಸುಳ್ಳುಗಾರ!" "ದೇವರಾಣೆ! ಅವನಲ್ಲಿ ಸ್ವಲ್ಪವೂ ಒಳ್ಳೆಯತನವಿಲ್ಲ." ಕಳ್ಳ!" "ಇಂಡಿಯನ್‌ಗಿಂತಲೂ ಕೀಳು!". ಈ ಮಾತುಗಳಿಂದ ಅವರು ಕೋಪಗೊಂಡಿದ್ದಾರೆಂದು ಸ್ಪಷ್ಟ ವಾಗಿತ್ತು. ಅದಕ್ಕೆ ಎರಡು ಕಾರಣಗಳು: ಒಂದನೆಯದಾಗಿ, ಅವರು ಮೋಸ ಕ್ಕೀಡಾದ ರೀತಿ ಹಾಸ್ಯಾಸ್ಪದವಾಗಿತ್ತು. ಎರಡನೆಯದು, ಉತ್ತರದೇಶದವರ ನೀತಿ ನಿಯಮಾವಳಿಗಳ ವಿಪರೀತ ಕಲ್ಪನೆ; ಅಲ್ಲಿಯ ಮನುಷ್ಯನಿಗೆ ಪ್ರಾಮಾಣಿಕತೆಯೆಂಬುದು ಎಲ್ಲವನ್ನೂ ಮೀರಿಸಿದ ಭೂಷಣವಂತೆ!

"ಹೌದು; ಸಂಕಟಕ್ಕೀಡಾದ ವ್ಯಕ್ತಿಗೆ ಸಹಾಯ ಮಾಡಿದೆವು. ಅದೂ ಅವನು ಮಾಡಿದ್ದೆಲ್ಲವನ್ನು ತಿಳಿದ ಮೇಲೆ!" ಎಲ್ಲ ಕಣ್ಣುಗಳೂ ತಕ್ಷಣ ಮೆಲ್ ಮ್ಯೂಟ್ ಕಿಡ್‌ನ ಕಡೆ ತಿರುಗಿದವು. ಮುಖಗಳು ಗಂಟುಹಾಕಿದವು.

ಮೂಲೆಯಲ್ಲಿ ಬ್ಯಾಬಟಿ ನಾಯಿಯನ್ನು ಸುಧಾರಿಸುತಿದ್ದ ಕಿಡ್ ಎದ್ದು ನಿಂತನು. ಇನ್ನೇನು ಕೊನೆಯ ಸಲ 'ಪಂಚ್' ಹಂಚಬೇಕು! ಮೌನವಾಗಿ ಪಾತ್ರೆಯನ್ನು ಬರಿದು ಮಾಡುತಿದ್ದನು.

"ಹುಡುಗರಿರಾ, ಇದೊಂದು ಚಳಿಯ ರಾತ್ರಿ—ಚುಚ್ಚುವಂಥ ಚಳಿ...." ಎಂದು ಕಿಡ್ ತನ್ನ ಪರ ವಾದಿಸಲು ಅಸಂಬದ್ಧವಾಗಿ ಆರಂಭಿಸಿದನು.

"ನೀವೆಲ್ಲಾ ಆ ದಾರಿಯಲ್ಲಿ ನಡೆದವರು. ಅದರ ಕಷ್ಟಸುಖ ತಿಳಿದೇ ಇದೆ. ಅವನು ಕೆಳಕ್ಕೆ ಬಿದ್ದಾಗ ನಾಯಿಯನ್ನು ಹಾರಿಸಬೇಡಿ. ನೀವು ಕೇಳಿರುವುದು ಕೇವಲ ಒಂದು ಪಕ್ಷದ ಮಾತು. ಆದರೆ....? ಇರಲಿ. ಜಾಕ್ ವೆಸ್ಟನ್‌ಹೇಲಿನಂಥ ಮತ್ತೊಬ್ಬ ಬಿಳೀ ಮನುಷ್ಯನನ್ನು ತೋರಿಸಿ; ನೋಡೋಣ. ಅವನು ಒಂದು ದಿನವಾದರೂ ಮತ್ತೊಬ್ಬರ ಆಶ್ರಯಕ್ಕೆ ಹಾತೊರೆದವನಲ್ಲ. ನಾನೂ ನೀವೂ ಎಲ್ಲರೂ ಅವನಿಗೆ ಹೊಸಬರು....ಕಡೆಯ ಪಂದ್ಯದ ಹೋರಾಟ ದಲ್ಲಿ ಅವನಿಗೆ ನಲವತ್ತು ಸಾವಿರ ಆದಾಯವಾಗಿ ಬಂತು. ಜುಯೋಕ್ಯಾಸ್ಪೆಲ್ ಮಧ್ಯಸ್ಥಗಾರನಾಗಿದ್ದನು. ಡೊಮಿನಿಯನ್ ಕುದುರೆಯನ್ನು ಹರಾಜಿನಲ್ಲಿ ಕೊಂಡುಕೊಳ್ಳಲು ಜಾಕ್ ಇಷ್ಟಪಟ್ಟನು. ಆ ಕೆಲಸಕ್ಕಾಗಿ ಜುಯೋನನ್ನು ನೇಮಿಸಿ ಸಂಪೂರ್ಣ ನಲವತ್ತು ಸಾವಿರವನ್ನು ಅವನು ಕೈಗೆ ಕೊಟ್ಟನು. ಇವತ್ತು ಅವನು ಕೋಟ್ಯಾಧೀಶನಾಗಬಹುದಿತ್ತು. ಆದರೆ ಅದೃಷ್ಟವಿಲ್ಲ; ಏಕೆಂದರೆ ತನ್ನ ಪ್ರತಿಸ್ಪರ್ಧಿಗೆ ಕೈಕಾಲು ನೋವು ವಿಪರೀತವಾದ್ದರಿಂದ, 'ಸರ್ಕಲ್ ಸಿಟಿ'ಯಲ್ಲೇ ಆತನ ಶುಶ್ರೂಶೆಗಾಗಿ ಜಾಕ್ ಉಳಿದುಕೊಂಡನು.

ಅಷ್ಟರಲ್ಲಿ ಕ್ಯಾಪ್ಟೈಲ್ ಮಾಡಿದ್ದೇನು? 'ಮೆಕ್‌ಫರ್‌ಲಾಂಡ'ರ ಪ್ರದೇಶವನ್ನು ಅತಿ ಕ್ರಮಿಸಿದನು. ಬೇಲಿ ಹಾರುವಾಗ ಇಡೀ ಚೀಲವನ್ನು ಕೆಳಕ್ಕೆ ಹಾಕಿಬಿಟ್ಟನು. ಮಾರನೆಯ ದಿನ ಹಿಮದಲ್ಲಿ ಅವನು ಪ್ರಾಣಬಿಟ್ಟದ್ದನ್ನು ಜಾಕ್ ಕಣ್ಣಾರೆ ಕಂಡನು. ಏನು ಮಾಡುವುದು ? ಈ ಚಳಿಗಾಲದಲ್ಲಿಯಾದರೂ ತನ್ನ ಹೆಂಡತಿ ಯನ್ನೂ ಮತ್ತು ಇಲ್ಲಿಯ ತನಕವೂ ನೋಡದ ಮಗುವನ್ನು ಭೇಟಿಯಾಗ ಬೇಕೆಂದು ಜಾಕ್ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದನು. ಎಲ್ಲವೂ ಮಣ್ಣುಪಾಲಾಯಿತು....ಇದರಲ್ಲಿ ಒಂದು ಅಂಶ ನಿಮಗೇ ತಿಳಿಯುತ್ತದೆ. ನೋಡಿ; ಅವನು ತನ್ನ ಪ್ರತಿಸ್ಪರ್ಧಿ ಕಳೆದುಕೊಂಡಷ್ಟೇ ಹಣವನ್ನು ತೆಗೆದು ಕೊಂಡಿದ್ದಾನೆ—ಅಂದರೆ, ಸರಿಯಾಗಿ ನಲುವತ್ತು ಸಾವಿರ ಮಾತ್ರ !....ಸರಿ ; ಅವನಂತೂ ಹೊರಟುಬಿಟ್ಟನಲ್ಲ. ಮತ್ತೆ ಅವನ ಬಗ್ಗೆ ತಾವು ಏನು ಮಾಡ ಬೇಕೆಂದಿದ್ದೀರಿ ?...."

ನ್ಯಾಯಾಧೀಶರ ಮಂಡಲಿಯ ಸುತ್ತಲೂ, ಕಿಡ್, ತನ್ನ ಕಣ್ಣನ್ನು ಹೊರಳಿಸಿದನು. ಅವರು ಇಳಿಮುಖವಾಗುತ್ತಿದ್ದುದನ್ನು ಗಮನಿಸಿದನು. ಆಗ ತನ್ನ ಬಟ್ಟಲನ್ನು ಎತ್ತರದಲ್ಲಿ ಹಿಡಿದು, "ಆದ್ದರಿಂದ ಈ ರಾತ್ರಿಯಲ್ಲಿ, ನಾವು ತುಳಿದ ದಾರಿಯನ್ನು ಹಿಂಬಾಲಿಸಿ ಬಂದ ಮನುಷ್ಯನಿಗೆ ಆರೋಗ್ಯವಿರಲಿ ; ಆಹಾರ ಕೆಡದಿರಲಿ; ನಾಯಿಗಳ ಕಾಲಿಗೆ ಶಕ್ತಿ ಬರಲಿ; ಆತನ ಕಡ್ಡಿಗಳಲ್ಲಿ ಬೆಂಕಿಯು ಆರದಿರಲಿ; ದೇವರು ಅವನನ್ನು ಜಯಪ್ರದನನ್ನಾಗಿ ಮಾಡಲಿ ; ಅದೃಷ್ಟ ಅವನ ಜೊತೆಯಲ್ಲೇ ಪ್ರಯಾಣಮಾಡಲಿ ; ಮತ್ತು—"

"ಪೋಲೀಸು ಸವಾರರಿಗೆ ಗಲಿಬಿಲಿಯಾಗಲಿ !" ಎಂದು ಬೀಟಲ್ಸ್, ಬರಿಯ ಬಟ್ಟಲನ್ನು ರಭಸದಿಂದ ಡಿಕ್ಕಿಹೊಡೆಸುತ್ತಾ ಕೂಗಿಕೊಂಡನು.

ಮೆಕ್ಸಿಕನ್

ಅವನ ಚರಿತ್ರೆ ಯಾರಿಗೂ ತಿಳಿಯದು ; ಸಂಚುಕೂಟದವರಿಗೂ ಏನೂ ಗೊತ್ತಿಲ್ಲ. ಕೂಟದವರ ದೃಷ್ಟಿಯಲ್ಲಿ ಅವನು ಚಿಕ್ಕವನಾಗಿದ್ದರೂ 'ರಹಸ್ಯ ಪ್ರಕೃತಿಯವನು' ಮತ್ತು 'ದೊಡ್ಡ ದೇಶಭಕ್ತನು'. ತಮ್ಮಂತೆಯೇ ಅವನೂ ಕೂಡ ಕಷ್ಟಪಟ್ಟು ಮೆಕ್ಸಿಕನರ ಕ್ರಾಂತಿಗೆ ದುಡಿಯುತಿದ್ದನು. ಆದರೆ ಅವನ ಮಾರ್ಗವೇ ಬೇರೆ. ಅದನ್ನು ಅರಿಯಬೇಕಾದರೆ ಸಂಚುಕೂಟದವರಿಗೆ ಹೆಚ್ಚು

ಕಾಲಾವಕಾಶ ಬೇಕಾಯಿತು; ಕಾರಣ ಯಾರೂ ಅವನನ್ನು ಪ್ರೀತಿಸುತ್ತಿರಲಿಲ್ಲ. ಮೊದಲ ಭೇಟಿಯಂತೂ ವಿಚಿತ್ರವಾಗಿತ್ತು. ಇದ್ದಕ್ಕಿದ್ದಂತೆ ಅವನು ಒಂದು ದಿನ ಅವರ ಕೋಣೆಗೆ ನುಗ್ಗಿದಾಗ ಕೋಣೆ ತುಂಬ ಜನಸಂದಣಿ ನೆರೆದಿತ್ತು. ಅವನು ಗೂಢಚಾರನಿರಬೇಕೆಂದು ಅವರೆಲ್ಲ ಸಂದೇಹಪಟ್ಟರು. ಡಯೂಸ್‌ನ ರಹಸ್ಯಪಡೆಗೆ ಸಹಕರಿಸುವ ಸಲಕರಣೆಯಿರಬಹುದೆಂದು ತಿಳಿದರು. ಆಗಲೇ ಎಷ್ಟೋ ತಮ್ಮ ಸ್ನೇಹಿತರು ಸಂಯುಕ್ತ ಸಂಸ್ಥಾನಗಳಲ್ಲಿ, ಸಿವಿಲ್ ಮತ್ತು ಮಿಲಿಟರಿ ಜೈಲುಗಳಲ್ಲಿ ಕೊಳೆಯುತಿದ್ದರು; ಬೇಡಿಹಾಕಿದ ಕೆಲವರನ್ನು ಎಲ್ಲಿಯಾಚೆ ಕೊಂಡುಹೋಗಿ ಹಸಿಯಿಟ್ಟಿಗೆ ಗೋಡೆಯ ನೇರಕ್ಕೆ ನಿಲ್ಲಿಸಿ, ಗುಂಡು ಹಾರಿಸಿದ್ದರು.

ಹುಡುಗನನ್ನು ಮೊದಲ ಬಾರಿಗೆ ನೋಡಿದಾಗ, ಅವನ ಮೇಲೆ ಒಳ್ಳೆಯ ಅಭಿಪ್ರಾಯ ಕೂಟದ ಸದಸ್ಯರಿಗೆ ಮೂಡಲಿಲ್ಲ. ಅವನೇನೊ ಹುಡುಗ; ಹದಿನೆಂಟು ವರ್ಷಗಳನ್ನೂ ದಾಟಿರಲಿಲ್ಲ; ವಯಸ್ಸಿಗೆ ಮೀರಿದ ಬೆಳವಣಿಗೆಯೂ ಇರಲಿಲ್ಲ. ತನ್ನ ಹೆಸರು 'ಫೆಲಿಪಿ ರಿವೆರ' ಎಂದು ಹೇಳಿಕೊಂಡನು. ಕ್ರಾಂತಿ ಗೋಸ್ಕರ ದುಡಿಯಲು ಅವನಿಗೆ ಇಷ್ಟವಂತೆ. ಅಷ್ಟೇ ಅವನು ತಿಳಿಸಿದ್ದು. ಒಂದು ಮಾತನ್ನೂ ಹೆಚ್ಚಿಗೆಯಾಡದೆ ವಿವರಗಳ ತಂಟೆಗೆ ಹೋಗಲಿಲ್ಲ. ಕಾಯುತ್ತ ಸುಮ್ಮನೆ ನಿಂತಿದ್ದನು. ತುಟಿಯ ಮೇಲೆ ನಗೆಯಿಲ್ಲ; ಕಣ್ಣಿನಲ್ಲಿ ಗೆಲುವಿಲ್ಲ. ಧೈರ್ಯಸ್ಥನಾದ ದಪ್ಪನೆಯ 'ಪೌಲಿನೊ ವೆರ' ನಿಗೂ ಅಂತರಂಗದಲ್ಲಿ ಅಧೈರ್ಯವಾಯಿತು ಮತ್ತು ಹೇಳಲಸಾಧ್ಯವಾದ ಪರೀಕ್ಷೆಗೆ ಸಿಲುಕದ ಭಯಗ್ರಸ್ತನಾದನು. ಹುಡುಗನ ಕಪ್ಪು ಕಣ್ಣುಗಳು ವಿಷ ಕಾರುವಂತಿದ್ದುವು; ದ್ವೇಷಾಸೂಯೆಯ ಜ್ವಾಲೆಯು ಹೊರಸೂಸುತಿತ್ತು. ಪಿತೂರಿಗಾರರನ್ನು ದಿಟ್ಟಿಸುತ್ತಿದ್ದ ಕಣ್ಣುಗಳು, ಟೈಪ್‌ರೈಟರ್ ಕಡೆ ತಿರುಗಿದುವು. ಮಿಸೆಸ್ ಸೆತ್‌ಬೈ ಕಷ್ಟಪಟ್ಟು ಟೈಪ್‌ಮಾಡುತಿದ್ದಳು. ಅವನು ಕೇವಲ ಕ್ಷಣಕಾಲ ಅವಳನ್ನು ದೃಷ್ಟಿಸಿದನು. ಅಷ್ಟರಲ್ಲೇ ಅವಳು ತಲೆಯೆತ್ತಿ ನೋಡಿ ತಿಳಿಯದ ವಸ್ತುವನ್ನು ಕಂಡಂತೆ ಸುಮ್ಮನಾದಳು; ಟೈಪ್‌ಮಾಡಲು ಮತ್ತೆ ಹಿಂದಿನಿಂದ ಓದಬೇಕಾಯಿತು.

ಪೌಲಿನೊ ವೆರ ಸಂಶಯಗ್ರಸ್ತನಾಗಿ ಅರೆಲಾನೊ ಮತ್ತು ರಮೋಸ್‌ರ ಕಡೆ ನೋಡಿದನು; ಆದರೆ ಅವರೂ ಕೂಡ ತಮ್ಮಲ್ಲೇ ಪ್ರಶ್ನಿಸುವವರಂತೆ ಹಿಂತಿರುಗಿ ನೋಡಿದರು. ಅವರ ಕಣ್ಣುಗಳಲ್ಲಿ ಸಂಶಯಾತ್ಮಕ ಚಿಹ್ನೆ ಎದ್ದು ಕಾಣುತಿತ್ತು. ಈ ತೆಳ್ಳನೆಯ ಹುಡುಗ ಅಪರಿಚಿತನು. ಅಜ್ಞಾತದ ಅಪಾಯ

ವೆಲ್ಲ ಅವನಲ್ಲಿ ಅಡಗಿದೆ. ಅವನು ಸಾಮಾನ್ಯ ಕ್ರಾಂತಿಕಾರರಿಗಿಂತಲೂ ವ್ಯತಿರಿಕ್ತನಾದವನು. ಸತ್ಯ ಶೀಲ ದೇಶಾಭಿಮಾನಿಗಳಂತೆ ಡಯಾಸ್ ಆಡಳಿತದ ವಿರುದ್ಧ ದಂಗೆಯೇಳುವ ಒಂದೇ ಗುರಿ ಅವನಲ್ಲಿದ್ದಂತೆ ಕಾಣಲಿಲ್ಲ. ಇನ್ನೇನೋ ಇರಬೇಕು; ಅದೇನೆಂದು ಅವರಿಗೆ ತಿಳಿಯದು. ಆದರೆ ವೆರ ಸಮಯೋಚಿತ ಬುದ್ಧಿಯುಳ್ಳವನು. ಫಕ್ಕನೆ ಮುಂದೆ ಬಂದು ಮೌನವನ್ನು ಮುರಿದು ಹುಡುಗನನ್ನುದ್ದೇಶಿಸಿ—

"ಒಳ್ಳೆಯದು; ಕ್ರಾಂತಿಗಾಗಿ ಕೆಲಸಮಾಡಲು ನಿನಗೆ ಇಷ್ಟವೆಂದು ಹೇಳುತ್ತೀಯೆ. ಕೋಟು ಬಿಚ್ಚು. ಅದನ್ನು ಅಲ್ಲಿ ನೇತುಹಾಕು. ಬಟ್ಟೆ, ಬಕೆಟ್ಟುಗಳು ಎಲ್ಲಿವೆಯೆಂದು ತೋರಿಸುತ್ತೇನೆ; ನನ್ನೊಡನೆ ಬಾ. ನೆಲ ಬಹಳ ಕೊಳಕಾಗಿದೆ. ಮೊದಲು ಈ ನೆಲವನ್ನು ತಿಕ್ಕಿ ಇತರ ಕೋಣೆಗಳಿಗೂ ಹೋಗಬೇಕು. ಹಾಗೆಯೆ ಪೀಕದಾನಿಗಳನ್ನೂ ಚೊಕ್ಕಟವಾಗಿಡಬೇಕು. ಆಮೇಲೆ ಕಿಟಕಿಗಳಿವೆ...." ಎಂದು ಅನಾದರದಿಂದ ಹೇಳಿದನು.

"ಇವೆಲ್ಲವೂ ಕ್ರಾಂತಿಗೋಸ್ಕರವೇ?" ಎಂದು ಹುಡುಗ ಕೇಳಿದನು.

ವೆರ ಉತ್ತರಕೊಟ್ಟನು; "ಹೌದು; ಎಲ್ಲವೂ ಕ್ರಾಂತಿಗಾಗಿಯೇ!"

ರಿವೆರ ನಿರುತ್ಸಾಹದಿಂದಲೂ ಸಂಶಯದಿಂದಲೂ ಎಲ್ಲರ ಕಡೆ ನೋಡಿ ಮುಂದುವರಿದನು. "ಒಳ್ಳೆಯದು" ಎಂದು ಕೋಟನ್ನು ಬಿಚ್ಚಿಟ್ಟನು.

ಮುಂದೆ ಯಾವ ಮಾತೂ ಇಲ್ಲ. ಆಡಿದ ಮಾತಿಗೆ ಬೆಲೆಯುಂಟು; ಅಷ್ಟೆ. ಪ್ರತಿದಿನವೂ ತಪ್ಪದೆ ಕೆಲಸಕ್ಕೆ ಬಂದನು—ನೆಲ ಗುಡಿಸುವುದು, ತಿಕ್ಕುವುದು, ಚೊಕ್ಕಟಮಾಡುವುದು. ಸ್ಟೌವ್‌ನಲ್ಲಿದ್ದ ಬೂದಿಯನ್ನು ಹೊರಕ್ಕೆ ಹಾಕಿ ಬೆಂಕಿ ಹೊತ್ತಿಸಿದನು. ಅತಿ ಚುರಕನೆಂದು ಹೆಸರುಪಡೆದ ಕ್ರಾಂತಿಕಾರಿ ಏಳುವುದಕ್ಕಿಂತ ಮುಂಚೆಯೇ ರಿವೆರ ಎಲ್ಲ ಕೆಲಸವನ್ನು ಪೂರೈಸಿಬಿಟ್ಟನು.

"ನಾನು ಇಲ್ಲಿ ಮಲಗಬಹುದೇ" ಎಂದು ಒಮ್ಮೆ ಕೇಳಿದನು.

ಅಬ್ಬ! ತಿಳಿಯಿತು; ಡಯಾಸನ ಕೈ ಹತ್ತಿರ ಬರುತ್ತಿದೆ! ಸಂಚುಕೂಟದವರ ರೂಮಿನಲ್ಲಿ ಮಲಗುವುದೆಂದರೇನು? ನಮ್ಮ ಗುಟ್ಟುಗಳನ್ನು ತಿಳಿಯುವುದಕ್ಕೆ ತಾನೆ? ಮೆಕ್ಸಿಕೋ ನೆಲದಲ್ಲಿ ಅಡಗಿರುವ ಸಂಗಾತಿಗಳ ಹೆಸರು ಮತ್ತು ಸಂಪೂರ್ಣ ವಿಳಾಸವನ್ನು ತಿಳಿಯಲು ಈ ಉಪಾಯ!

ರಿವೆರ ಕೇಳಿದಂತೆ, ಮಲಗಲು ಅವಕಾಶಕೊಡಲಿಲ್ಲ. ಅದರ ವಿಷಯವಾಗಿ ಮತ್ತೆ ಅವನು ಪ್ರಸ್ತಾಪಿಸಲಿಲ್ಲ. ಅವನು ಎಲ್ಲಿ ಮಲಗುತಿದ್ದ, ಹೇಗೆ ತಿನ್ನುತಿದ್ದ ಮುಂತಾದ ವಿಷಯಗಳು ಕೂಟದವರಿಗೆ ತಿಳಿಯಲಿಲ್ಲ. ಒಮ್ಮೆ ಅರೆಲಾನೊ

ಅವನಿಗೆ ಎರಡು ಡಾಲರುಗಳನ್ನು ಕೊಡಹೋದನು. ರಿವೆರ ದುಡ್ಡು ಬೇಡ ವೆಂದು ತಲೆಯಲ್ಲಾಡಿಸಿದನು. ವೆರ ಮುಂದೆಬಂದು ಬಲವಂತಮಾಡಿದಾಗ, ಆ ಹುಡುಗ ಹೇಳಿದನು :

"ನಾನು ಕ್ರಾಂತಿಗಾಗಿ ಕೆಲಸಮಾಡುತಿದ್ದೇನೆ."

*   *   *   *

ಆಧುನಿಕ ಕ್ರಾಂತಿಗಳನ್ನು ನಡೆಸಬೇಕಾದರೆ ಹಣ ಬೇಕು ; ಅದಕ್ಕಾಗಿಯೆ ಸಂಚುಕೂಟದವರು ತೊಂದರೆ ಪಡುತ್ತಿದ್ದರು. ಸದಸ್ಯರು ಹೊಟ್ಟೆಗಿಲ್ಲದೆ ದುಡಿಯುತಿದ್ದರು. ಅತಿ ಹೆಚ್ಚು ಹಗಲಿನ ದಿನ ಅವರಿಗೆ ದೊಡ್ಡದಾಗಿ ಕಾಣಿಸು ತ್ತಿರಲಿಲ್ಲ. ಅದರೂ ಕೆಲವು ಸಂದರ್ಭಗಳಲ್ಲಿ ದಿಗಿಲಾಗುತಿತ್ತು ; ಏಕೆಂದರೆ ಕೆಲವೇ ಡಾಲರುಗಳ ಮೇಲೆ ಕ್ರಾಂತಿಯ ಉಳಿವು ಅಳಿವು ನಿಂತಂತೆ ಭಾಸ ವಾಗುತಿತ್ತು. ಒಂದು ನಾರಿಯಂತೂ ಎರಡು ತಿಂಗಳ ಮನೆಯ ಬಾಡಿಗೆ ಯನ್ನು ಕೊಡಲು ಅಸಾಧ್ಯವಾದಾಗ, ಮನೆಯ ಮಾಲೀಕ ಜಾಗಬಿಡಲೇ ಬೇಕೆಂದು ಗಲಾಟೆಯೆಬ್ಬಿಸಿದ. ಆಗ ಸಹಾಯಮಾಡಿದವನು ಫೆಲಿಪೆ ರಿವೆರ ! ಅದೇ ಕಸಗುಡಿಸುವ ಹುಡುಗ ; ಅವನ ಬಡತನದ ಅಗ್ಗದ ಉಡುಪು ಜೀರ್ಣ ವಾಗಿ ಹರಿದುಹೋಗಿತ್ತು. ಅಂಥವನು ಹೊನ್ನಿನ ಅರುವತ್ತು ಡಾಲರುಗಳನ್ನು 'ಮೇಸೇತ್ ಬೈಯಳ' ಡೆಸ್ಕಿನ ಮೇಲೆ ತಂದಿಟ್ಟನು !....

ಇನ್ನೂ ಎಷ್ಟೋ ವೇಳೆ ಕಷ್ಟಪರಂಪರೆ ಬಂದೊದಗಿತ್ತು—ಆತುರದಿಂದ ಟೈಪ್‌ಮಾಡಿದ ಮುನ್ನೂರು ಕಾಗದಗಳು ರವಾನೆಯಾಗಿರಲಿಲ್ಲ. ಟಪಾಲಿನ ಖರ್ಚಿಗೆ ಒಂದು ಸೆಂಟೂ ಇರಲಿಲ್ಲ. ಆ ಕಾಗದಗಳು ತಕ್ಷಣ ಹೋಗಬೇಕಾಗಿ ದ್ದವು. (ಸಹಾಯಕ್ಕಾಗಿ ಮನವಿ, ಸಂಘಟಿತ ಕೂಲಿಗಾರ ಸಂಘಗಳ ಸಹಾನು ಭೂತಿ, ವರದಿಗಳನ್ನು ಮಾಡುವಲ್ಲಿ ನ್ಯಾಯಕ್ಕೆ ಚ್ಯುತಿಬರದಂತೆ ಸಂಪಾದಕರಲ್ಲಿ ಕೋರಿಕೆ, ಕ್ರಾಂತಿಕಾರರನ್ನು ಸದೆಬಡಿಯಲು ಸಂಯುಕ್ತ ಸಂಸ್ಥಾನದ ನ್ಯಾಯಾ ಲಯಗಳಲ್ಲಿ ನಡೆಯುತ್ತಿರುವ ಸ್ವೇಚ್ಛಾಪ್ರವೃತ್ತಿಗೆ ಧಿಕ್ಕಾರ, ಇತ್ಯಾದಿ) ವೆರಾನ ಕೈಯಲ್ಲಿದ್ದ ಗಡಿಯಾರ ಮಾಯವಾಗಿತ್ತು. ಪಾಪ; ಅದು ಅವನ ತಂದೆ ಯಿಂದ ಬಂದದ್ದು. ಹಾಗೆಯೆ ಮೇಸೇತ್‌ಬೈಯಳ ಮೂರನೆಯ ಬೆರಳಲ್ಲಿ ಹೊಳೆಯುತಿದ್ದ ಬಂಗಾರದ ಪಟ್ಟಿಯೂ ಹೋಗಿತ್ತು. ಅಷ್ಟಾದರೂ ಕೆಲಸ ಸುಗಮವಾಗಿ ನಡೆಯುವಂತಿದ್ದಿಲ್ಲ. ಎಲ್ಲರೂ ಧೈರ್ಯಗೆಡುವಂತಾಯಿತು. ರಮೋನ್ ಮತ್ತು ಅರೆಲಾನೊ ಬೇಸರದಿಂದ ತಮ್ಮ ಉದ್ದವಾದ ಮೀಸೆಗಳನ್ನು ಹಿಡಿದೆಳೆದುಕೊಂಡರು ! ಹೇಗಾದರೂ ಕಾಗದಗಳು ಹೋಗಲೇಬೇಕು ; ಬರಿಯ

ಸ್ಟಾಂಪುಕೊಳ್ಳುವವರಿಗೆ ಅಂಚೆಮನೆಯಲ್ಲಿ ಯಾವ ಸಾಲವೂ ದೊರಕುವಂತಿಲ್ಲ. ಆಗ ಅದೇ ರಿವೆರ ಟೋಪಿ ಧರಿಸಿ ಹೊರಕ್ಕೆ ಹೊರಟನು. ಹಿಂತಿರುಗಿ ಬಂದಾಗ ಕೈಯಲ್ಲಿ ಎರಡು ಸೆಂಟುಗಳ ಸ್ಟಾಂಪು ಒಂದು ಸಾವಿರವಿತ್ತು; ಅವನ್ನು ಮೇಸೇಕ್‌ಬೈಯಳ ಡೆಸ್ಕಿನ ಮೇಲಿಟ್ಟನು.

"ನನಗೆ ಆಶ್ಚರ್ಯವಾಗಿದೆ; ಇಷ್ಟೊಂದು ಹಣ ಡಯಾಸನ ಶಾಪಗ್ರಸ್ತ ಹಣವಾಗಿರಬಹುದೇ" ಎಂದು ವೆರ ಸಂಗಾತಿಗಳಿಗೆ ಹೇಳಿದನು.

ಎಲ್ಲರೂ ತಲೆಯೆತ್ತಿದರು. ಯಾವ ತೀರ್ಮಾನಕ್ಕೂ ಬರಲಿಲ್ಲ. ಹೇಗಾದರೂ ಆಗಲಿ; ಕ್ರಾಂತಿಗಾಗಿ ನೆಲವನ್ನು ತಿಕ್ಕುತಿದ್ದ ಫೆಲಿಪಿ ರಿವೆರ ಮಾತ್ರ, ಸಂದರ್ಭ ಬಂದಾಗಲೆಲ್ಲ ಸಂಚುಕೂಟದವರ ಉಪಯೋಗಕ್ಕಾಗಿ ಚಿನ್ನ ಬೆಳ್ಳಿಗಳನ್ನು ತರುವುದನ್ನು ನಿಲ್ಲಿಸಲಿಲ್ಲ.

ಅಷ್ಟಾದರೂ ಅವರು ರಿವೆರನನ್ನು ಪ್ರೀತಿಸುವ ಗೋಜಿಗೆ ಹೋಗಲಿಲ್ಲ. ಅವನು ಯಾರೆಂಬುದು ಅವರಿಗೆ ತಿಳಿಯದು. ತಮಗೂ ಅವನಿಗೂ ರೀತಿನೀತಿಗಳಲ್ಲಿ ವ್ಯತ್ಯಾಸವಿದೆ. ಅವನು ಅಂತರಂಗದ ಗುಟ್ಟುಗಳನ್ನು ಬಿಟ್ಟುಕೊಡುವುದಿಲ್ಲ. ತನ್ನ ವಿಷಯವನ್ನು ಶೋಧನೆಗೂ ನಿಲುಕದಂತೆ ಮಾಡಿಕೊಂಡಿದ್ದಾನೆ. ಅವನನ್ನು ಪ್ರಶ್ನಿಸಲು ಹಿಂಜರಿದರು; ಎಷ್ಟಾದರೂ ಅವನು ಯುವಕನಲ್ಲವೇ?

"ಬಹುಶಃ ಏಕಾಂಗವೀರನಿರಬೇಕು. ಮತ್ತೆ ನಾನರಿಯೆ, ನಾನರಿಯೆ" ಎಂದು ಕೈಲಾಗದವನಂತೆ ಅರೆಲಾನೊ ಹೇಳಿದನು.

"ಅವನು ಮನುಷ್ಯನೇ ಅಲ್ಲ," ಎಂದನು ರಮೋಸ್.

ಮೇಸೇಕ್‌ಬೈ ಹೇಳಿದಳು: "ಅವನ ಆತ್ಮವು ಒಣಗಿಹೋಗಿದೆ. ದೇಹವು ಕಾಂತಿಹೀನವಾಗಿ ನಗೆಯು ಸುಟ್ಟು ಬೂದಿಯಾಗಿದೆ. ಸತ್ತವನಂತೆ ಕಾಣುತ್ತಿದ್ದರೂ ಭಯಂಕರನಾಗಿ ಜೀವಿಸಿದ್ದಾನೆ."

"ಅವನ ಮುಖ ನೋಡಿದರೆ ವಿಪರೀತ ಕಷ್ಟಪಟ್ಟಿರಬೇಕು. ಕೇವಲ ಹುಡುಗನಾಗಿದ್ದರೂ, ವಯಸ್ಸಾದವರನ್ನು ಮೀರಿಸಿದ್ದಾನೆ...." ಎಂದನು ವೆರ.

ಆದರೂ ಅವನನ್ನು ಪ್ರೀತಿಸಲು ಮನಸ್ಸುಬಾರದು. ರಿವೆರ ಎಂದೂ ಮಾತನಾಡಿದವನಲ್ಲ; ವಿಷಯವನ್ನು ವಿಚಾರಿಸಿದವನಲ್ಲ; ಹಾಗೆಯೆ ಹೊಸ ಸೂಚನೆಗಳನ್ನು ಕೊಟ್ಟವನೂ ಅಲ್ಲ. ಸುಮ್ಮನೆ ನಿಂತು ಆಲಿಸುತಿದ್ದನು. ಕ್ರಾಂತಿಯ ಮಾತುಕಥೆ ಬಿಸಿ ಬಿಸಿಯಾಗಿ ಏರುತಿದ್ದರೆ, ಅವನ ಕಣ್ಣುಗಳು ಒಳಗೊಳಗೇ ಉರಿಯುತಿದ್ದವು; ಒಬ್ಬೊಬ್ಬರ ಮುಖದ ಕಡೆಯೂ ತಿರುಗಿಸುತ್ತ ಕ್ರಮಭಂಗಮಾಡುವಂತೆ ಗಲಿಬಿಲಿಮಾಡುತಿದ್ದವು.

"ಅವನು ಗೂಢಚಾರನಲ್ಲ....ದೇಶಭಕ್ತ. ನನ್ನ ಮಾತು ಕೇಳು— ಅವನು ನಮ್ಮೆಲ್ಲರನ್ನೂ ಮೀರಿಸುವಂಥ ದೇಶಾಭಿಮಾನಿ. ಇದು ನನ್ನ ತಲೆಗೆ ಹೊಳೆದಿದೆ; ಹೃದಯದಿಂದ ಅನುಭವವಾಣಿ ತಿಳಿಸಿದೆ. ಆದರೆ ಅವನನ್ನು ಮಾತ್ರ ಹಿಂದೆಂದೂ ನೋಡಿಲ್ಲ...." ಎಂದು ವಿಶ್ವಾಸದಿಂದ ವೆರ ಮೇಸೇಕ್ ಬೈಳಿಗೆ ತಿಳಿಸಿದನು.

"ಅವನಲ್ಲಿ ಸಿಡುಕಿನ ಮನೋಧರ್ಮವಿದೆ" ಎಂದಳು ಮೇಸೇಕ್‌ಬೈ.

"ಹೌದು, ನನಗೆ ಗೊತ್ತಿದೆ. ಆ ಕಣ್ಣುಗಳಲ್ಲೇ ನನ್ನನ್ನೂ ನೋಡಿ ದ್ದಾನೆ. ಅವನ ಕಣ್ಣುಗಳು ಕ್ರೂರ ಹುಲಿಯ ಕಣ್ಣುಗಳಂತಿವೆ. ಪ್ರೀತಿ ವಿಶ್ವಾಸಗಳನ್ನು ದೂರವಿಟ್ಟು ಮೇಲೆಬೀಳುವಂತಿವೆ. ಧ್ಯೇಯ ಸಾಧನೆಯಲ್ಲಿ ದಾರಿ ತಪ್ಪಿದರೆ ನನ್ನನ್ನು ಅವನು ಕೊಲ್ಲಬಹುದು. ಅವನಿಗೆ ಹೃದಯವಿಲ್ಲ. ಉಕ್ಕಿನಷ್ಟು ಕಠಿಣ. ಹಿಮಮಾರುತದಷ್ಟೇ ತೀಕ್ಷ್ಣ....ಚಳಿಗಾಲದ ರಾತ್ರಿಯಲ್ಲಿ ಒಬ್ಬನು ಪರ್ವತ ತುದಿಯ ಏಕಾಂತ ಪ್ರದೇಶದಲ್ಲಿ ಮಂಜಿನ ಹೊಡೆತದಿಂದ ಸತ್ತಾಗ ಮೇಲೆ ಶೋಭಿಸುವ ಬೆಳದಿಂಗಳಂತಿದ್ದಾನೆ....ನನಗೆ ಡಯಾಸನನ್ನು ಕಂಡರೆ ಹೆದರಿಕೆಯಿಲ್ಲ. ನಿಜವಾಗಿ ಹೇಳುವುದಾದರೆ ಈ ಹುಡುಗನನ್ನು ಕಂಡರೆ ನನಗೆ ಹೆದರಿಕೆ! ಇವನು ಮೃತ್ಯು ಸಮಾನನು" ಎಂದು ವೆರ ನಡುಗಿದನು.

ಹೀಗಿದ್ದರೂ ರಿವೆರನ ಬಗ್ಗೆ ದೃಢ ನಂಬಿಕೆಯಿಟ್ಟಿದ್ದವನೆಂದರೆ ವೆರ ಒಬ್ಬನೇ; ಇತರರನ್ನೂ ಆ ಮನೋಭಾವಕ್ಕೆ ಒಡಂಬಡಿಸುತಿದ್ದನು.

ಲಾಸ್ ಏಂಜಲೀಸ್‌ಗೂ ಕೆಳ ಕ್ಯಾಲಿಫೋರ್ನಿಯಾಕ್ಕೂ ಮಧ್ಯೆ ಇದ್ದ ವಾರ್ತಾ ತಂತಿಗಳು ಮುರಿದುಹೋಗಿದ್ದವು. ಮೂರು ಜನ ಸಂಗಾತಿಗಳು ತಮ್ಮ ಗೋರಿಗಳನ್ನು ತಾವೇ ಅಗೆದು ಗುಂಡಿನ ಬಾಯಿಗೆ ತುತ್ತಾಗಿದ್ದರು. ಇನ್ನಿಬ್ಬರು ಲಾಸ್ ಏಂಜಲೀಸ್‌ನಲ್ಲಿ ಸಂಯುಕ್ತ ಸಂಸ್ಥಾನದ ಖೈದಿಗಳೆಂದು ಪರಿಗಣಿಸಲ್ಪಟ್ಟಿದ್ದರು. ಜ್ಯಾನ್ ಅಲ್ವರ್ಯಾಡೋ ಎಂಬ ಸಂಯುಕ್ತ ರಾಷ್ಟ್ರದ ಸೇನಾಧಿಕಾರಿ ಕಿರಾತನಂತಿದ್ದನು; ತಮ್ಮ ಎಲ್ಲ ಪ್ರಯತ್ನಗಳನ್ನೂ ಸಾಗದಂತೆ ಮಾಡುತಿದ್ದನು. ಉತ್ಸಾಹಿ ಕ್ರಾಂತಿಕಾರರ ಹತ್ತಿರ ತಾವು ಸುಳಿಯಲೂ ಅವಕಾಶ ವಿರಲಿಲ್ಲ. ಕೆಳ ಕ್ಯಾಲಿಫೋರ್ನಿಯದಲ್ಲಿ ಹೊಸದಾಗಿ ಕ್ರಾಂತಿ ಆರಂಭವಾಗಿದ್ದರೂ, ಅಲ್ಲಿಗೆ ಹೋಗಿ ಮಾರ್ಗದರ್ಶನ ನೀಡಲು ದುರ್ಲಭವಾಗಿತ್ತು.

ಯುವಕ ರಿವೆರನಿಗೆ ಜವಾಬ್ದಾರಿಯುತವಾದ ಕೆಲಸವನ್ನು ಕೊಡ ಲಾಯಿತು. ದಕ್ಷಿಣದ ಕಡೆ ಹೋಗುವಂತೆ ಸಲಹೆ ನೀಡಲಾಯಿತು....ಅವನು ಮರಳಿ ಬಂದಾಗ ವಾರ್ತಾ ವ್ಯವಸ್ಥೆ ಸರಿಪಡಿಸಲಾಗಿತ್ತು. ಮತ್ತು ಜಾನ್

ಅಲ್ವರ್ರ್ಯಾಡೋ ಮೃತಪಟ್ಟಿದ್ದನು. ಹಾಸಿಗೆಯಲ್ಲಿ ಸತ್ತು ಬಿದ್ದಿದ್ದ ಅವನ ಎದೆಯೊಳಗೆ ಕತ್ತಿಯೊಂದು ಆಳವಾಗಿ ನಾಟಿತ್ತು. ಸಂಚುಕೂಟದವರ ಸಲಹೆ ಯಂತೆ ರಿವೆರನು ಇಂಥ ಸಾಹಸ ಕಾರ್ಯವನ್ನು ಮಾಡಬಾರದಿತ್ತು. ಆದರೆ ಅವನ ವಿಚಿತ್ರ ಪ್ರಕೃತಿಯನ್ನು ಆಗಲೇ ಕಂಡುಕೊಂಡಿದ್ದ ಕೂಟದವರು ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ರಿವೆರ ಕೂಡ ಏನೂ ಹೇಳಲಿಲ್ಲ. ಆದರೆ ಸಂಚಿನವರು ತಮ್ಮ ತಮ್ಮ ಮುಖಗಳನ್ನು ನೋಡಿಕೊಂಡು ಏನನ್ನೋ ಊಹಿಸಿದರು.

"ನಾನು ಆಗಲೇ ನಿಮಗೆ ಹೇಳಿದ್ದೇನೆ. ಇತರರಿಗಿಂತಲೂ ಈ ಹುಡುಗನ ವಿಷಯದಲ್ಲಿ ಡಯಾಸ್ ವಿಪರೀತ ಹೆದರುತ್ತಾನೆ ಎಂದು. ಇವನು ಕಠಿಣ ಹೃದಯನು. ಆದರೆ ದೇವರ ಪ್ರತಿನಿಧಿಯಾಗಿದ್ದಾನೆ...." ಎಂದನು ವೆರ.

ಮೇಸೇಕ್‌ಬೈ ಆಗಲೇ ಸೂಚಿಸಿದಂತೆ, ರಿವೆರನ ಭಯಂಕರ ಮನೋ ಧರ್ಮ ಎಲ್ಲರಿಗೂ ತಿಳಿಯಿತು. ಅದಕ್ಕೆ ಸಾಕ್ಷಿಯಾಗಿ ಅವನ ಶರೀರ ಮಾರ್ಪಾಟು ಹೊಂದಿತ್ತು. ತುಟಿ ಹರಿದಿತ್ತು; ಕೆನ್ನೆ ಕಪ್ಪುಗಟ್ಟಿತ್ತು, ಕಿವಿ ಉಬ್ಬಿತ್ತು. ಅವನು ಹೊರಗಿನ ಪ್ರಪಂಚದ ಯಾವುದೋ ಸ್ಥಳದಲ್ಲಿರಬೇಕು! ಅಲ್ಲಿಯೇ ಅವನು ಅವರಿಗೆ ತಿಳಿಯದಂತೆ ತಿರುಗಾಡುತ್ತಿರುವುದು; ತಿನ್ನುವುದು, ಮಲಗುವುದು ಮತ್ತು ದುಡ್ಡು ಗಳಿಸುವುದು ಅಲ್ಲಿಯೇ ಇರಬಹುದು. ಕಾಲಕಳೆ ದಂತೆ ಅವರು ಪ್ರಕಟಿಸುತಿದ್ದ ಕ್ರಾಂತಿಕಾರಿ ವಾರಪತ್ರಿಕೆಗೆ ಮೊಳೆ ಜೋಡಿಸಲು ಬಂದಿದ್ದನು. ಆದರೆ ಅನೇಕ ಸಂದರ್ಭಗಳಲ್ಲಿ ಅವನಿಗೆ ಅನಾನುಕೂಲವಾಗು ತಿತ್ತು. ಬೆರಳಿನ ಗೆಣ್ಣುಗಳು ಜಜ್ಜಿಹೋದಾಗ, ಹೆಬ್ಬೆರಳು ಗಾಯಗೊಂಡಾಗ, ಅಥವಾ ಒಂದುಪಾರ್ಶ್ವವೇ ಸುಸ್ತಿನಿಂದ ಜೋತುಬಿದ್ದಾಗ ಮೊಳೆ ಜೋಡಿ ಸುವುದಾದರೂ ಹೇಗೆ? ನೋವಿನ ತೀವ್ರತೆ ಮುಖದಲ್ಲಿ ಕಾಣುತ್ತಿದ್ದರೂ, ಅದನ್ನು ಹೇಳಿಕೊಳ್ಳುವ ಸ್ವಭಾವವಿರಲಿಲ್ಲ.

"ಇವನೊಬ್ಬ ಬೀದಿ ಪೋರ," ಎಂದನು ಅರೆಲಾನೊ.

ರಮೋಸ್ ಹೇಳಿದನು: "ಇವನು ಕೀಳುಮಟ್ಟದ ಗುಪ್ತ ಸ್ಥಳಗಳಿಗೆ ಹೋಗಿಬರುತ್ತಿರುವನು."

ವೆರನಿಗೆ ಆಶ್ಚರ್ಯವಾಯಿತು: "ಆಗಲಿ; ಅವನಿಗೆ ದುಡ್ಡಾದರೂ ಎಲ್ಲಿ ಸಿಗುತ್ತದೆ? ಇವತ್ತು ಈಗತಾನೆ ಕೇಳಿದೆ; ಬಿಳೀ ಕಾಗದಕ್ಕಾಗಿ ಮಾಡಿದ್ದ ಸಾಲವನ್ನು ಪೂರ್ತ ತೀರಿಸಿದನಂತೆ. ಅದೇನು ಸ್ವಲ್ಪವಲ್ಲ; ನೂರನಲವತ್ತು ಡಾಲರುಗಳು...."

"ಮಧ್ಯೆ ಮಧ್ಯೆ ಅವನು ಈ ಸ್ಥಳ ಬಿಟ್ಟು ಹೊರಟುಹೋಗುವುದಿಲ್ಲವೇ ? ಏಕೆಂದು ಎಂದಾದರೂ ಹೇಳಿದ್ದಾನೆಯೇ ?" ಎಂದಳು ಮೇಸೇಕ್ ಬೈ.

"ಅವನ ನಡೆನುಡಿಗಳನ್ನು ತಿಳಿಯಲು ಒಬ್ಬ ಗೂಢಚಾರನನ್ನು ನೇಮಿಸ ಬೇಕು", ಎಂದು ರಮೋಸ್ ಸೂಚಿಸಿದನು.

ವೆರ ಹೇಳಿದನು : " ಅಂಥ ಗೂಢಚಾರನಾಗಲು ನನಗೇನೂ ಇಷ್ಟವಿಲ್ಲ. ಹಾಗೇನಾದರೂ ಆದರೆ ಬಹುಶಃ ನನ್ನನ್ನು ನೀನು ಜೀವಸಹಿತ ನೋಡಲಾರೆ. ರಿವೆರನ ಭಾವೋದ್ರೇಕ ಅತ್ಯಂತ ತೀವ್ರವಾದುದು. ದೇವರು ಕೂಡ ಅದರ ಮಧ್ಯೆ ನಿಲ್ಲಲಾರ."

"ಅವನ ಮುಂದೆ ನಾನೊಬ್ಬ ಮಗುವಿನಂತೆ...." ಎಂದು ರಮೋಸ್ ಒಪ್ಪಿಕೊಂಡನು.

"ನನಗಂತೂ ಅವನೊಬ್ಬ ವ್ಯಕ್ತಿಯಲ್ಲ, ಶಕ್ತಿ—ಆದಿಕಾಲದವನು, ತೋಳ ನಂತೆ ಮೇಲೆ ಬೀಳುವವನು ಮತ್ತು ರಟ ರಟ ಸದ್ದು ಮಾಡಿ ಕಡಿಯುವ ವಿಷ ಸರ್ಪದಂತೆ ಅಥವಾ ಚುಚ್ಚುವ ಶತಪದಿಯಂತೆ ಇರುವವನು...." ಎಂದನು ಅರೆಲಾನೋ.

"ಅವನು ಮೂರ್ತಿಮತ್ತಾದ ಕ್ರಾಂತಿಯೇ ಸರಿ. ಕ್ರಾಂತಿಯ ಜ್ವಾಲೆಯೂ ಸ್ಫೂರ್ತಿಯೂ ಅವನಲ್ಲಿವೆ. ಸೇಡು ತೀರಿಸುವ ಮನೋಭಾವವುಳ್ಳವನು. ಗುಲ್ಲೆಬ್ಬಿಸದೆ ನಿಶ್ಶಬ್ದವಾಗಿ ಕೊಲೆ ಮಾಡುವವನು. ಮಾತ್ರವಲ್ಲ, ಅವನೊಬ್ಬ ವಿನಾಶಕಾರಿ ನಿಶಾಚರ ದೇವತೆ." ಎಂದು ವೆರ ಹೇಳಿದನು.

"ಅವನ ವಿಷಯದಲ್ಲಿ ನನಗೆ ಅಳುಬರುತ್ತದೆ. ಅವನಿಗೆ ಯಾರ ಪರಿ ಚಯವೂ ಇಲ್ಲ. ಎಲ್ಲರನ್ನೂ ದ್ವೇಷಿಸುತ್ತಾನೆ. ನಮ್ಮನ್ನು ಮಾತ್ರ ಸಹಾನು ಭೂತಿಯಿಂದ ನೋಡುತ್ತಾನೆ; ಏಕೆಂದರೆ ಅವನ ಆಶೆ ನಮ್ಮ ಮೂಲಕ ನೆರವೇರ ಬಹುದು....ಆದರೂ ಅವನು ಏಕಾಂಗಿ,....ಸದಾ ಒಬ್ಬನೇ ಇರುತ್ತಾನೆ" ಎನ್ನುತ್ತಾ ಮೇಸಕ್‌ಬೈ ಇನ್ನೇನು ಅಳುವುದರಲ್ಲಿದ್ದಳು. ಕಣ್ಣು ಮಂಜಾ ಯಿತು.

ನಿಜವಾಗಿಯೂ ರಿವೆರನ ಅಕಾಲದ ಓಡಾಟಗಳು ಸಮಸ್ಯಾತ್ಮಕ ವಾಗಿದ್ದವು. ಕೆಲವು ವೇಳೆ ಹೊರಟನೆಂದರೆ ಒಂದು ವಾರದ ತನಕವೂ ಮುಖ ತೋರಿಸುತ್ತಿರಲಿಲ್ಲ. ಒಂದು ಸಾರಿಯಂತೂ ಒಂದು ತಿಂಗಳ ಪ್ರವಾಸ ಹೊರಟಿದ್ದನು. ಆದರೂ ಮರಳಿ ಬಾರದೆ ಇರುತ್ತಿರಲಿಲ್ಲ. ಆ ಸುಸಂದರ್ಭ ಗಳಲ್ಲಿ ಯಾವ ಮಾತುಕಥೆಯು ಪ್ರಚಾರಕ್ಕೂ ಹೋಗದೆ, ಸೇಕ್‌ಬೈಳ ಡೆಸ್ಕಿನ

ಮೇಲೆ ಬಂಗಾರದ ನಾಣ್ಯಗಳನ್ನು ಇರಿಸುತಿದ್ದನು. ಮತ್ತೆ ದಿನ ವಾರಗಳ ಲೆಕ್ಕವಿಲ್ಲದೆ ಸಂಚುಕೂಟದವರೊಡನೆ ತನ್ನ ಎಲ್ಲ ಕಾಲವನ್ನೂ ವಿನಿಯೋಗಿಸುತಿದ್ದನು. ಎಷ್ಟೋ ಬೆಳಗಿನ ಜಾವ ಇದ್ದಕ್ಕಿದ್ದಂತೆ ಮಾಯವಾಗಿ ಮಧ್ಯಾಹ್ನ ಮುಗಿಯುವ ತನಕ ಬರುತ್ತಿರಲಿಲ್ಲ. ಅವನು ಮಧ್ಯರಾತ್ರಿಯಲ್ಲಿ ಬರುತ್ತಿದ್ದುದನ್ನು ಅರೆಲಾನೊ ನೋಡಿದ್ದನು; ಆಗತಾನೆ ಗಾಯಗೊಂಡು, ಉಬ್ಬುತಿದ್ದ ಗೆಣ್ಣುಗಳಿಂದ ನರಳಾಡುತ್ತಿದ್ದರೂ ಮೊಳೆ ಜೋಡಿಸುತ್ತಿದ್ದನಂತೆ; ಅಥವಾ ತುಟಿ ಹರಿದು ರಕ್ತ ಸುರಿಯುತಿದ್ದರೂ ಲಕ್ಷ್ಯ ಕೊಡುತ್ತಿರಲಿಲ್ಲವಂತೆ........

II

ಗಂಡಾಂತರ ಸಮಯ ಸಮಾಪಿಸಿತು. ಸಂಚುಕೂಟದವರು ಕ್ರಾಂತಿಯ ಬೆಂಬಲಿಗರಾಗಿರಲಿ ಇಲ್ಲದಿರಲಿ, ಅವರಂತೂ ಕಷ್ಟಕ್ಕೊಳಗಾದರು. ಹಿಂದಿಗಿಂತಲೂ ಈಗ ಹಣದ ಅವಶ್ಯಕತೆ ಹೆಚ್ಚಾಗಿತ್ತು. ಆದರೆ ಅದರ ಸಂಪಾದನೆ ಮಾತ್ರ ಕಷ್ಟತರವಾಗಿತ್ತು. ದೇಶಾಭಿಮಾನಿಗಳು ತಮ್ಮಲ್ಲುಳಿದಿದ್ದ ಕೊನೆಯ ಸೆಂಟನ್ನೂ ಕೊಟ್ಟುಬಿಟ್ಟರು; ಇನ್ನು ಕೇಳಲು ಮಾರ್ಗವಿಲ್ಲ. ಸ್ಥಳ ಬದಲಾಯಿಸುತ್ತಿರುವ ಗ್ಯಾಂಗ್ ಕೂಲಿಗಾರರು ಕೂಡ ಅಲ್ಪ ಸಂಬಳದ ಅರ್ಧಭಾಗವನ್ನು ದಾನ ಮಾಡುತಿದ್ದರು. ಆದರೆ ಮತ್ತಷ್ಟು ಬೇಕಾಗಿತ್ತು. ಏಕೆಂದರೆ, ಹೃದಯಭೇದಕವಾದ ಗುಪ್ತ ಕಾರ್ಯಾಚರಣೆಗಳು ಫಲಿಸತೊಡಗಿವೆ. ಸಕಾಲ ಒದಗಿ ಬಂದಿದೆ. ಕ್ರಾಂತಿಯು ತಕ್ಕಡಿಯಲ್ಲಿ ತೂಗಾಡುತ್ತಿದೆ. ಕೊನೆಯದಾದ ದಿಟ್ಟತನದ ಪ್ರಯತ್ನದಿಂದ ನೂಕಿದರೆ ಸಾಕು; ಕ್ರಾಂತಿ ವಿಜಯದ ಗುರುತಿಗೆ ಬಂದು ನಿಲ್ಲುತ್ತದೆ. ಅವರ ಮೆಕ್ಸಿಕೊ ಅವರಿಗೆ ಗೊತ್ತಿದೆ. ಒಮ್ಮೆ ಕ್ರಾಂತಿ ಆರಂಭವಾಗಿಬಿಟ್ಟರೆ, ತನಗೆ ತಾನೆ ವ್ಯಾಪಿಸುವುದರಲ್ಲಿ ಸಂಶಯವಿಲ್ಲ. ಇಡೀ ಡಿಯಾಸ್ ಯಂತ್ರ ಎಲೆಯ ಮನೆಯಂತೆ ಕೆಳಗುರುಳದಿರಲಾರದು. ಎಲ್ಲೆಯ ಜನ ದಂಗೆಯೇಳಲು ಸಿದ್ಧರಿದ್ದಾರೆ. ಕೆಳ ಕ್ಯಾಲಿಫೋರ್ನಿಯಕ್ಕೆ ಮುತ್ತಿಗೆ ಹಾಕಲು ಒಬ್ಬ ಯಾಂಕಿ ನೂರು ಜನ ಯೋಧರೊಡನೆ ಒಂದೇ ಆಜ್ಞೆಯ ಪದಕ್ಕಾಗಿ ಕಾದಿದ್ದಾನೆ. ಆದರೆ ಅವನಿಗೆ ಬಂದೂಕಗಳು ಬೇಕಾಗಿವೆ. ಅಟ್ಲಾಂಟಿಕ್ ಆಚೆಯ ಸಂಚುಕೂಟದವರ ಸಂಪರ್ಕ ಕೂಡ ಬೆಳೆದಿದೆ; ಅಲ್ಲಿಯುವರಿಗೂ ಬಂದೂಕಗಳ ಅವಶ್ಯಕತೆಯುಂಟು. ಆಧುನಿಕ ಪ್ರಪಂಚದ ಹುಚ್ಚು ಹೊಳೆಯಲ್ಲಿ ತೇಲಿಬಂದ ಅಥವಾ ಎಸೆಯಲ್ಪಟ್ಟ ವ್ಯಕ್ತಿಗಳು ತಮ್ಮ ಸಂಗಾತಿಗಳ ಗುಂಪಿನಲ್ಲಿ ಸೇರಿದ್ದಾರೆ. ಎಲ್ಲ ರೀತಿಯ ಎಲ್ಲ ವೃತ್ತಿಯ ಜನರನ್ನೂ ಕಾಣಬಹುದು—ಬರಿಯ ಸಾಹಸಕ್ಕಾಗಿಯೆ ಜೀವ ತೆತ್ತವರು, ಅದೃಷ್ಟಕ್ಕಾಗಿ

ಹೋರಾಡುವ ಸಿಪಾಯಿಗಳು, ಡಕಾಯತರು, ಅಮೆರಿಕನ್ ಯೂನಿಯನ್ನಿನ ಅತೃಪ್ತ ಸದಸ್ಯರು, ಸಮಾಜಸ್ವಾಮ್ಯ ವಾದಿಗಳು, ಅರಾಜಕತಾ ವಾದಿಗಳು, ಗಡಿಪಾರಾದ ಮೆಕ್ಸಿಕನರು, ಬಂಧನದಿಂದ ಬಿಡಿಸಲ್ಪಟ್ಟ ಸೇವಕರು, ಇತ್ಯಾದಿ. ಕೌರ್ ಡಿ ಅಲೆನೆ ಮತ್ತು ಕಲರ್‍ಯಾಡೂ ಆವರಣದಲ್ಲಿ ಏಟುತಿಂದ ಗಣಿಕೆಲಸದವರು ಕೇವಲ ಸೇಡು ತೀರಿಸಿಕೊಳ್ಳಲು ಹುಚ್ಚು ಹೋರಾಟಕ್ಕೆ ನಿಂತಿದ್ದರು. ಎಲ್ಲೆಲ್ಲೂ ನಿರಂತರ ಒಂದೇ ಕೂಗು ಕೇಳಬಂತು—ಬಂದೂಕು, ಸಿಡಿಗುಂಡು! ಸಿಡಿಗುಂಡು ಬಂದೂಕು."

ದಿವಾಳಿಯಾದರೂ ವೈವಿಧ್ಯದಿಂದ ಕೂಡಿರುವ ಈ ಪ್ರತೀಕಾರಕ ಸಮುದಾಯವು ಗಡಿಯಾಚೆ ದಾಟಿದರೆ ಸಾಕು; ಕ್ರಾಂತಿ ಮುಂದುವರಿಯವುದು. ಉತ್ತರದ ರೇವುಪಟ್ಟಣಗಳನ್ನೂ, ಸುಂಕದ ಕಟ್ಟೆಗಳನ್ನೂ ಸುಲಭವಾಗಿ ಹಿಡಿಯಬಹುದು. ಡಿಯಾಸ್ ಪ್ರತಿಭಟಿಸಲು ಸಾಧ್ಯವಿಲ್ಲ. ಕ್ರಾಂತಿಕಾರರ ಮೇಲೆ ಸೈನ್ಯವನ್ನು ಛೂ ಬಿಡಲು ಮುಂದವರಿಯಲಾರ; ಏಕೆಂದರೆ ಹಿಡಿತದಲ್ಲಿರುವ ದಕ್ಷಿಣ ದೇಶದ ಆಡಳಿತವನ್ನು ಸಡಿಲಗೊಳಿಸಲು ಅವನು ಒಪ್ಪಲಾರ. ಅಷ್ಟಾದರೂ ದಕ್ಷಿಣ ದೇಶದಲ್ಲಿ ಅಂತರ್ಯುದ್ಧ ಮೆಲ್ಲಗೆ ಆವರಿಸದಿರದು. ಜನ ದಂಗೆಯೇಳುವರು. ಒಂದಾದ ಮೇಲೊಂದು ನಗರ ರಕ್ಷಣೆಗಳು ಮುರಿದುಬೀಳುವುವು. ಮತ್ತೆ ದೇಶ ದೇಶಾಂತರಗಳು ಉರುಳಿಹೋಗುವುವು. ಕಡೆಗೆ ಎಲ್ಲ ಭಾಗಗಳಿಂದಲೂ ಗೆದ್ದ ದಳಗಳು ಒಂದೆಡೆ ಸೇರುತ್ತವೆ. ಉಳಿದಿರುವುದು ಮೆಕ್ಸಿಕೊ ನಗರ. ಅದೊಂದೇ ಡಿಯಾಸನ ಕೊನೆಗಾಲದ ಭದ್ರವಾದ ಆಶ್ರಯ. ಅದನ್ನೂ ಕ್ರಾಂತಿ ಸೈನ್ಯವು ವಶಪಡಿಸದೆ ಬಿಡಲಾರದು.

ಆದರೆ ಎಲ್ಲಕ್ಕೂ ಹಣ ಬೇಕು! ಅಸಹನೆಯ ಅತುರದ ಮನುಷ್ಯರು ಬಂದೂಕ ಹಾರಿಸಲು ಕಾದಿದ್ದಾರೆ. ಬಂದೂಕದ ವ್ಯಾಪಾರಿಗಳ ಪರಿಚಯವೂ ಇದೆ. ಆದರೇನು ಪ್ರಯೋಜನ? ಕ್ರಾಂತಿಯನ್ನು ಇಷ್ಟರ ಮಟ್ಟಿಗೆ ಸುಧಾರಿಸುವುದು ಸಾಮಾನ್ಯವಲ್ಲ. ಆ ಮಹತ್ಕಾರ್ಯದಲ್ಲಿ ಸಂಚುಕೂಟದವರು ಎಲ್ಲ ಸಾಧನಗಳನ್ನೂ ಬಳಸಿಕೊಂಡಿದ್ದರು. ಕೊನೆ ಡಾಲರೂ ಖರ್ಚಾಯಿತು. ಕೊನೆಯ ಮನುಷ್ಯನ ಸರ್ವಸ್ವವನ್ನೂ ಹೀರಿದ್ದಾಯಿತು. ಆದರೂ ಈ ಮಹತ್ಕಾರ್ಯ ಇನ್ನೂ ತಕ್ಕಡಿಯಲ್ಲಿ ತೂಗಾಡುತ್ತಿದೆ! ಕೋವಿಗಳು, ಮದ್ದು ಗುಂಡುಗಳು! ಚಿಂದಿಯನ್ನುಟ್ಟ ಯೋಧರು ಯುದ್ಧಪಾಣಿಗಳಾಗಬೇಕು. ಆದರೆ ಹೇಗೆ ಸಾಧ್ಯ? ಸರಕಾರ ವಶಪಡಿಸಿಕೊಂಡ ತನ್ನ ಸ್ಥಿರಾಸ್ತಿಗಳನ್ನು ನೆನಸಿಕೊಂಡು ರಮೋಸ್ ಪ್ರಲಾಪಿಸಿದನು. ಯೌವನದಲ್ಲಿ ದುಂದುಗಾರಿಕೆಯ ಖರ್ಚು

ಮಾಡಿದೆನಲ್ಲಾ ಎಂದು ಅರೆಲಾನೊ ಮರುಗಿದನು. ಸಂಚುಕೂಟದವರು ಹಿಂದೆ ಮಿತವಾಗಿ ಖರ್ಚು ಮಾಡಿದ್ದಿದ್ದರೆ, ಈಗ ಈ ಸ್ಥಿತಿ ಬರುತ್ತಿರಲಿಲ್ಲವೆಂದು ಮೆಸೇತ್‌ಬ್ರೈ ಉದ್ಗಾರವೆತ್ತಿದಳು..

"ಮೆಕ್ಸಿಕೊ ಸ್ವಾತಂತ್ರ್ಯ ಕೇವಲ ಸಾವಿರಾರು ಡಾಲರುಗಳ ಮೇಲೆ ನಿಲ್ಲುವಂತಾಯಿತೇ ?" ಎಂದುಕೊಂಡನು ಪೌಲಿನೊವೆರ.

ನಿರಾಶೆ ಎಲ್ಲರ ಮುಖದಲ್ಲೂ ಕಾಣಿಸಿಕೊಂಡಿತು....ಅಬ್ಬಾ, ಎಂಥ ಸುದ್ದಿ ಬಂದಿದೆ? ತಮ್ಮ ಕಡೆಯ ಆಶ್ರಯನಾಗಿದ್ದ ಜೋಸ್ ಅಮರಿಲೋ ಹೋಗಿ ಬಿಟ್ಟನೇ ? ಅವನು ಇತ್ತೀಚೆಗೆ ತಮ್ಮ ಪಕ್ಷವಹಿಸಿ ಹಣ ಕೊಡಲು ವಾಗ್ದಾನ ಮಾಡಿದ್ದನು. ಅವನು ತನ್ನ ಸ್ವಂತ ಸ್ಥಳದಲ್ಲೇ ಗುಂಡಿನ ಬಾಯಿಗೆ ಆಹುತಿ ಯಾದನಂತೆ....

ನೆಲ ಉಜ್ಜುತಿದ್ದ ರಿವೆರ ಮೊಣಕಾಲ ಮೇಲೆ ನಿಂತು ನೋಡಿದನು. ಬ್ರಷ್ ಕೆಳಗೆ ಬಿತ್ತು. ಬಟ್ಟೆಯಿಲ್ಲದ ತೋಳುಗಳ ಮೇಲೆ ಸೋಪಿನ ಕೊಳಕು ನೀರು ಸಿಡಿದಿತ್ತು.

"ಐದು ಸಾವಿರ ಸಾಕೋ ?" ಎಂದು ಕೇಳಿದನು.

ಎಲ್ಲರಿಗೂ ಆಶ್ಚರ್ಯವಾಯಿತು. ವೆರ ತಲೆದೂಗಿ ಸಮ್ಮತಿಸಿದನು. ಮಾತನಾಡದಿದ್ದರೂ ರಿವೆರನ ಬಗ್ಗೆ ಸಂಪೂರ್ಣ ನಂಬಿಕೆ ಉದ್ಭವಿಸಿತು.

"ಬಂದೂಕುಗಳಿಗೆ ಆರ್ಡರ್ ಮಾಡಿರಿ, ಕಾಲಾವಕಾಶ ಹೆಚ್ಚಿಲ್ಲ. ಐದು ಸಾವಿರವನ್ನು ಮೂರು ವಾರಗಳಲ್ಲಿ ತರುತ್ತೇನೆ, ಒಳ್ಳೆಯದು. ಕಾದಾಡುವವರಿಗೆ ವಾಯುಗುಣ ಬೆಚ್ಚಗೆ ಹಿತಕರವಾಗಿರುತ್ತದೆ. ಅದೇ ನಾನು ಮಾಡಬಹು ದಾದ ಹೆಚ್ಚಿನ ಕೆಲಸ...." ಎಂದನು ರಿವೆರ. ಇಷ್ಟು ಮಾತುಗಳನ್ನೇಕಾಡಿದೆ ಎಂದು ತನ್ನಲ್ಲಿ ತಾನೇ ಸಂಶಯಪಟ್ಟನು. ಹಾಗೆಯೇ ಕೂಟದವರೂ ಕೂಡ ರಿವೆರನ ದೊಡ್ಡವಾಕ್ಯಗಳನ್ನು ಕೇಳಿದ್ದು ಇದೇ ಮೊದಲು.

ರಿವೆರನ ಆಜ್ಞೆಯಂಥ ಮಾತುಗಳು ನಂಬಲಸಾಧ್ಯವಾಗಿದ್ದರೂ, ವೆರ ನಂಬಲು ಪ್ರಯತ್ನ ಪಟ್ಟನು. ಕ್ರಾಂತಿಯ ಸಂಧ್ಯ ಪ್ರಾರಂಭವಾದಾಗಿ ನಿಂದ ತನ್ನ ಎಷ್ಟೋ ವಿಶ್ವಾಸದ ಭರವಸೆಗಳು ಮುರಿದು ಬಿದ್ದಿದ್ದವು. ಕ್ರಾಂತಿ ಪಥವನ್ನು ಚೊಕ್ಕಟಮಾಡುತ್ತಿರುವ ಈ ಚಿಂದಿ ಬಟ್ಟೆಯವನನ್ನು ನಂಬಲಸಾಧ್ಯ ವಾದರೂ ನಂಬಲೇಬೇಕಾಯಿತು.

"ನೀನು ಒಂದೇ ಗೀಳುಹಿಡಿದವನು," ಎಂದನು.

"ಏನಾದರಾಗಲಿ; ಮೂರೇ ವಾರಗಳು; ಬಂದೂಕಗಳಿಗೆ ಆರ್ಡರ್

ಮಾಡಿರಿ...." ಎಂದು ರಿವೆರ ಹೇಳಿದನು.

ರಿವೆರ ಎದ್ದು ನಿಂತನು. ಅಂಗಿಯ ತೋಳನ್ನು ಮೇಲೆ ಮಡಚಿಕೊಂಡನು. ಕೋಟು ಧರಿಸಿದನು.

"ಇದೋ ಹೊರಟೆ, ಬಂದೂಕಗಳಿಗೆ ಆರ್ಡರ್ ಮಾಡಿರಿ...." ಎಂದನು.

III

ಆ ರಾತ್ರಿ ಕೆಲ್ಲಿಯ ಕಛೇರಿಯಲ್ಲಿ ಸಭೆ ಸೇರಿತ್ತು. ಆತುರವಂತೂ ಹೇಳತೀರದು. ಟೆಲಿಫೋನಿಗೆ ಬಿಡುವೇ ಇಲ್ಲ. ಸಣ್ಣ ಮಾತುಗಳಂತೂ ವಿಪರೀತ. ಕೆಲ್ಲಿ ಭರಾಟೆಯಿಂದ ವ್ಯಾಪಾರ ನಡೆಸಿದ್ದನು. ಅದೃಷ್ಟ ನೆಟ್ಟಗಿರಲಿಲ್ಲ. ನ್ಯೂಯಾರ್ಕಿನ ಡಾನಿವಾರ್ಡ್ ಬಿಲ್ಲಿ ಕಾರ್ಥೆಯೊಡನೆ ಕಾದಾಟ ನಡೆಸಲು ಏರ್ಪಾಟುಮಾಡಿದವನು ಕೆಲ್ಲಿಯೇ. ಆಟದ ದಿನಕ್ಕೆ ಇನ್ನೇನು ಮೂರು ವಾರವಿತ್ತು. ಆದರೆ ಎರಡು ದಿನಗಳಿಂದ ಕಾರ್ಥೆಗೆ ತುಂಬ ಗಾಯಗಳಾಗಿ ಮಲಗಿಬಿಟ್ಟಿದ್ದನು. ಆ ವಿಷಯವನ್ನು ಕ್ರೀಡಾ ವರದಿಗಾರರಿಂದ ಹೊರ ಬರದಂತೆ ನೋಡಿಕೊಳ್ಳಲಾಗಿತ್ತು. ಕಾರ್ಥೆಗೆ ಬದಲು ಯಾರ ಹೆಸರೂ ಹೊಳೆಯುತ್ತಿರಲಿಲ್ಲ. ಪೂರ್ವ ದಿಕ್ಕಿನ ಎಲ್ಲ ಪ್ರದೇಶಗಳಿಗೂ ಕೆಲ್ಲಿ ತಂತಿ ಮಾಡುತಿದ್ದನು; ಕಡಿಮೆಯ ತೂಕದ ಎಲ್ಲ ಹೋರಾಳುಗಳನ್ನೂ ವಿಚಾರಿಸಿ ಯಾಯಿತು; ಆದರೆ ಬೇರೆಯ ಆಟಗಳು ಅದೇ ತಾರೀಖಿನಲ್ಲಿ ಮೊದಲೇ ನಿಶ್ಚಯವಾಗಿದ್ದರಿಂದ ಅವರಿಗೆ ಪುರುಸೊತ್ತಿರಲಿಲ್ಲ....

ಈಗ ಸ್ವಲ್ಪಮಟ್ಟಿಗಾದರೂ ಭರವಸೆ ಬಂದಂತಾಯಿತು.

ರಿವೆರ ಬಂದು ನಿಂತಿದ್ದನು. ಕೆಲ್ಲಿ ಒಮ್ಮೆ ದೃಷ್ಟಿಸಿ ನೋಡಿ, "ಇದು ಸಾಮಾನ್ಯವಲ್ಲ; ನಿನಗೆ ತುಂಬ ತೊಂದರೆಯಿದೆ...." ಎಂದನು.

ರಿವೆರನ ಕಣ್ಣುಗಳು ಬದ್ಧ ವೈರವನ್ನು ಸೂಚಿಸುತಿದ್ದವು; ಆದರೆ ಅವನ ಮುಖ ಮಾತ್ರ ಭಾವೋದ್ರೇಕ ಶೂನ್ಯವಾಗಿಯೆ ಇತ್ತು.

"ನಾನು ವಾರ್ಡ್‌ನನ್ನು ಸೋಲಿಸಬಲ್ಲೆ" ಎಂದು ಮಾತ್ರ ಅವನು ಹೇಳಿದನು.

"ನಿನಗೆ ಹೇಗೆ ಗೊತ್ತು? ಅವನ ಗುದ್ದಾಟವನ್ನು ಎಂದಾದರೂ ನೋಡಿದ್ದೀಯಾ?"

ರಿವೆರ ತಲೆಯಲ್ಲಾಡಿಸಿದನು.

"ಅವನು ಎರಡು ಕಣ್ಣುಗಳನ್ನೂ ಮುಚ್ಚಿಕೊಂಡು ಒಂದೇ ಕೈಯಲ್ಲಿ ನಿನ್ನನ್ನು ಬಾರಿಸಬಲ್ಲ...."

ತಿರಸ್ಕಾರ ಸೂಚಿಸುವಂತೆ ರಿವೆರ ಭುಜ ಎಗುರಿಸಿದನು.

"ನೀನು ಹೇಳಬಹುದಾದ ಸಮಾಚಾರವೇನಾದರೂ ಉಂಟೋ?" ಎಂದು ಕಾದಾಟದ ಪ್ರವರ್ತಕ ಪ್ರಶ್ನಿಸಿದನು. ತಾನಾಗಿಯೆ ಅತೃಪ್ತಿ ಸೂಚಿಸುವಂತೆ ಗುರುಗುಟ್ಟಿದನು.

"ನಾನು ಅವನನ್ನು ಸೋಲಿಸಬಲ್ಲೆ."

"ಹೋಗಲಿ; ಎಂದಾದರೂ ಯಾರ ಜೊತೆಯಾದರೂ ಕಾದಾಡಿದ್ದೀಯಾ?" ಎಂದು ಮೈಕೇಲ್ ಕೆಲ್ಲಿ ಜರೂರಾಗಿ ಕೇಳಿದನು. ಪ್ರವರ್ತಕನ ಸಹೋದರನೇ ಮೈಕೆಲ್. ಪಂದ್ಯದ ಕಟ್ಟೆಯನ್ನು ಸ್ಥಾಪಿಸಿ ದುಡ್ಡುಗಳಿಸಿದ್ದನು.

ಅವನ ಪ್ರಶ್ನೆಗೆ ಉತ್ತರಕೊಡದೆ ರಿವೆರ ದಿಟ್ಟಿಸಿ ನೋಡಿದನು.

ಪ್ರವರ್ತಕನ ಕಾರ್ಯದರ್ಶಿ ಸಂಪೂರ್ಣವಾಗಿ ಕ್ರೀಡಾಸಕ್ತ ಯುವಕನಾಗಿದ್ದನು. ಅವನು ರಿವೆರನನ್ನು ಜೋರಾಗಿ ಹೀಯಾಳಿಸಿದನು.

ಸ್ವಲ್ಪಹೊತ್ತು ಮೌನ. ಪ್ರತಿಕೂಲವಾಗಿದ್ದ ಮೌನವನ್ನು ಭೇದಿಸಿ ಕೆಲ್ಲಿ ಮಾತನಾಡಿದನು: "ಒಳ್ಳೆಯದು, ನಿನಗೆ ರಾಬರ್ಟ್ಸ್ ಗೊತ್ತಿದೆಯಲ್ಲವೇ? ಈಗ ಅವನು ಇಲ್ಲಿಗೆ ಬರಬೇಕಾಗಿತ್ತು. ಹೇಳಿಕಳಿಸಿದ್ದೇನೆ. ಕುಳಿತಿಕೊ; ಸ್ವಲ್ಪ ಕಾಯೋಣ. ನಿನ್ನನ್ನು ನೋಡಿದರೆ ಯಾವ ಅವಕಾಶವೂ ಸಿಗಲಾರದು. ಆದರೂ ನೋಡೋಣ....ಸಾರ್ವಜನಿಕರಿಗೆ ಕೇವಲ ಸಾಮಾನ್ಯವಾದ ಹಿಮ್ಮೆಟ್ಟುವಂಥ ಕಾಳಗವನ್ನು ತೋರ್ಪಡಿಸಲು ನಾನು ಸಿದ್ಧನಿಲ್ಲ. ರಿಂಗ್ ಪಕ್ಕದ ಸೀಟುಗಳು ಹದಿನೈದು ಡಾಲರುಗಳಿಗೆ ಮಾರಾಟವಾಗುತ್ತಿವೆ; ನಿನಗೆ ಗೊತ್ತಿದೆ ತಾನೆ?......"

ರಾಬರ್ಟ್ ಬಂದನು. ಸ್ವಲ್ಪ ಅಮಲೇರಿತ್ತು. ಅವನೊಬ್ಬ ಸೋಮಾರಿ. ಉದ್ದನೆಯ ತೆಳ್ಳನೆಯ ಮನುಷ್ಯ. ಮಾತಿನಂತೆ ನಡಿಗೆಯೂ ಚಟುವಟಿಕೆಯಿಲ್ಲದೆ ಎಳೆದುಹಾಕಲ್ಪಡುತಿತ್ತು.

ಕೆಲ್ಲಿ ನೇರ ವಿಷಯಕ್ಕೆ ಇಳಿದನು.

"ರಾಬರ್ಟ್, ಇಲ್ಲಿ ನೋಡು. ಈ ಸಣ್ಣ ಮೆಕ್ಸಿಕನ್ ಮಹಾಶಯನನ್ನು ನೀನೇ ಕಂಡುಹಿಡಿದಂತೆ ಬಡಾಯಿಕೊಚ್ಚುತಿದ್ದೀಯೆ. ಇರಲಿ. ಕಾರ್ಥೆಯ ತೋಳು ಮುರಿದ ವಿಷಯ ನಿನಗೆ ಗೊತ್ತಿದೆಯಲ್ಲವೇ? ಹಳದಿ ರೇಖೆಯಂತಿರುವ ಈ ಸಣ್ಣವನಿಗೆ ಎಷ್ಟು ದುರಹಂಕಾರ? ಥಟ್ಟನೆ ಸೂಚನೆಯಿಲ್ಲದೆ ಒಳನುಗ್ಗಿದ್ದಾನೆ; ಕಾರ್ಥೆಯ ಜಾಗವನ್ನು ಭರ್ತಿಮಾಡುತ್ತೇನೆಂದು ಹೇಳುತಿದ್ದಾನೆ. ಏನು ಮಾಡುವುದು?"

"ಸರಿಯಾಗಿದೆ, ಕೆಲ್ಲಿ. ಅವನು ಹೋರಾಡಬಲ್ಲ. ಒಳ್ಳೆಯ ಪ್ರದರ್ಶನವನ್ನೇ ನೀಡಬಹುದು." ಎಂದು ರಾಬರ್ಟ್ ನಿಧಾನವಾಗಿ ಉತ್ತರಕೊಟ್ಟನು.

"ಮುಂದೆ ನೀನು ಹೇಳುವುದು—ಅವನು ವಾರ್ಡ್‌ನನ್ನು ಸೋಲಿಸಬಲ್ಲನೆಂದು; ಅಲ್ಲವೇ ?" ಎನ್ನುತ್ತಾ ಕೆಲ್ಲಿ ಸಿಡಿಗುಟ್ಟಿದನು.

ಈಗ ರಾಬರ್ಟ್ ವಿಮರ್ಶಾತ್ಮಕವಾಗಿ ವಿವೇಚಿಸಿದನು.

"ನಾನು ಹಾಗೇನೂ ಹೇಳುವುದಿಲ್ಲ. ವಾರ್ಡ್ ಎಷ್ಟಾದರೂ ಅಖಾಡದ ಯಜಮಾನ. ಎಲ್ಲರನ್ನೂ ಮೀರಿಸಿದ ಗೆಲ್ಲು ಸಂಖ್ಯೆಗಳನ್ನು ಹೊಂದಿದ್ದಾನೆ. ಆದರೆ ಅವನು ರಿವೆರನನ್ನು ಬಹು ಬೇಗನೆ ಅದುಮಿಬಿಡಲು ಸಾಧ್ಯವಿಲ್ಲ. ರಿವೆರನ ಸ್ವಭಾವ ನನಗೆ ಗೊತ್ತು. ಅವನನ್ನು ರೇಗಿಸಲು ಯಾರಿಂದಲೂ ಆಗದು. ಎರಡು ಕೈಗಳಿಂದಲೂ ಅವನು ಗುದ್ದಾಟ ನಡೆಸಬಲ್ಲ...."

"ಅದು ಹೋಗಲಿ ಬಿಡು. ನಮಗೆ ಬೇಕಾದುದು, ಅವನು ಎಂಥ ಪ್ರದರ್ಶನ ನೀಡಬಲ್ಲ ? ಎಂದು. ಕಾದಾಡುವವರಿಗೆ ಸೂಕ್ತ ಅಭ್ಯಾಸ ನೀಡಿ ಮಾರ್ಗದರ್ಶನ ಮಾಡುವುದರಲ್ಲಿ ನಿನ್ನ ಜೀವಮಾನವನ್ನೇ ಸವೆಸಿದ್ದೀಯೆ. ಆದ್ದರಿಂದ ನಿನ್ನ ತೀರ್ಮಾನಕ್ಕೆ ಗೌರವ ಕೊಡುತ್ತೇನೆ. ಅವನು ಜನಸಮುದಾಯಕ್ಕೆ ದುಡ್ಡಿಗೆ ತಕ್ಕ ಪ್ರತಿಫಲ ನೀಡಬಲ್ಲನೇ ?....ಹೇಳು...."

"ನಿಶ್ಚಯವಾಗಿಯೂ ಅವನು ವಾರ್ಡ್‌ಗೆ ತೊಂದರೆಯ ಹೊರೆಯನ್ನು ಹೊರಿಸಬಲ್ಲ. ನಿನಗೆ ಆ ಹುಡುಗನ ಸಮಾಚಾರ ತಿಳಿಯದು. ನನಗೆ ಗೊತ್ತುಂಟು. ನಾನು ಅವನನ್ನು ಕಂಡುಹಿಡಿದಿದ್ದೇನೆಂದು ಹೇಳಬಹುದು. ಅವನೊಬ್ಬ ದೆವ್ವದಂಥ ವ್ಯಕ್ತಿ; ವಾರ್ಡ್ ತನ್ನ ಸ್ಥಳೀಯ ಸಹಜ ಶಕ್ತಿಯನ್ನು ಪ್ರದರ್ಶಿಸಲು ಸದಾ ಎಚ್ಚೆತ್ತಿರುವಂತೆ ಈ ಮೆಕ್ಸಿಕನ್ ನೋಡಿಕೊಳ್ಳುತ್ತಾನೆ. ಅಂದ ಮೇಲೆ ಉಳಿದವರೂ ಅದೇ ರೀತಿ ಕುತೂಹಲಿಗಳಾಗಿ ವರ್ತಿಸಲು ಅವಕಾಶವಿರುತ್ತದೆ. ಅವನು ವಾರ್ಡ್‌ನನ್ನು ಸೋಲಿಸುತ್ತಾನೆಂದು ಹೇಳಲಾರೆ. ಆದರೂ ಪ್ರದರ್ಶನ ನೋಡುವ ನೀವೆಲ್ಲರೂ, 'ಇವನು ಮುಂದೆ ಬರುವವನು' ಎನ್ನದೆ ಇರಲಾರಿರಿ...."

"ಸರಿ," ಎನ್ನುತ್ತಾ ಕೆಲ್ಲಿ ಕಾರ್ಯದರ್ಶಿಯ ಕಡೆ ತಿರುಗಿದನು. "ವಾರ್ಡ್‌ಗೆ ಫೋನ್ ಮಾಡು. ಅವನು ಅವಶ್ಯವಿದ್ದರೆ ಬರುವಂತೆ ಮೊದಲೇ ಹೇಳಿದ್ದೆ. ಈಗ ಅವನು 'ಎಲ್ಲೋಸ್ಟೋನ್' ಆಚೆ ಇದ್ದಾನೆ; ಎದೆ ಬೀಸುತ್ತಾ ಜನಪ್ರಿಯ ವರಿಸೆಗಳನ್ನು ತೋರುಸುತ್ತಿರಬೇಕು...."

"ಡ್ರಿಂಕ್ ತೆಗೆದುಕೊಳ್ಳೋಣವೇ ?" ಎಂದು ರಾಬರ್ಟ್‌ಗೆ ಸೂಚಿಸಿದನು.

ಉದ್ದನೆಯ ಲೋಟಾದಲ್ಲಿ ಸೋಡಾ ಮಿಶ್ರಿತ ವಿಸ್ಕಿ ಬಂದಿತು. ರಾಬರ್ಟ್ ನಿಧಾನವಾಗಿ ಹೀರುತ್ತಾ ಭಾರ ಇಳಿಸಿದವನಂತೆ ಕಂಡನು.

"ಈ ಪ್ರಾಣಿಯನ್ನು ಕಂಡುಹಿಡಿದ ಬಗೆ ನಿನಗೆ ಹೇಳೇ ಇರಲಿಲ್ಲ. ಎರಡು ವರ್ಷಗಳ ಹಿಂದೆ ನಮ್ಮ ಬೀಡಿನ ಹತ್ತಿರ ಇವನು ಬಂದ. ಡಿಲನೆ ಜೊತೆ ಕಾದಾಡಲು ಪ್ರೇನಿಗೆ ತಯಾರಿ ಕೊಡುತಿದ್ದೆ. ಪ್ರೇನಿ ತುಂಬ ದುಷ್ಟ; ಅವನಲ್ಲಿ ಒಂದು ಕಣದಷ್ಟೂ ದಯೆಯಿರಲಿಲ್ಲ. ತನ್ನ ಸಹಭಾಗಿಗಳಿಗೆ ಕತ್ತರಿಸುವಂಥ ಏಟುಕೊಡುತಿದ್ದ. ಅವನ ಜೊತೆ ಕಾದಾಡಲು ಯಾರಿಗೂ ಇಷ್ಟವಿರಲಿಲ್ಲ. ಆ ಸಮಯದಲ್ಲಿಯೇ ಈ ಮೆಕ್ಸಿಕನ್ ಮರಿಯನ್ನು ಕಂಡದ್ದು. ಈ ಸಣ್ಣ ಹುಡುಗ ಹಸಿದಿದ್ದನು. ಯಾವಾಗಲೂ ಇಲ್ಲೇ ಒದ್ದಾಡುತಿದ್ದನು. ನನಗಂತೂ ಬೇಸರವಾಗಿತ್ತು. ಆದ್ದರಿಂದ ತಕ್ಷಣ ಇವನನ್ನು ಹಿಡಿದು ಕೈಗವಸು ತೊಡಿಸಿದೆ; ದಾರಿಗೆ ತರಲು ಪ್ರಯತ್ನಿಸಿದೆ. ಹಸಿದ ಚರ್ಮಕ್ಕಿಂತಲೂ ಒರಟಾಗಿದ್ದನು; ಆದರೂ ದುರ್ಬಲ. ಮುಷ್ಟಿಕಾಳಗದ ಬಗ್ಗೆ ಒಂದು ಅಕ್ಷರವೂ ಅವನಿಗೆ ತಿಳಿಯದು. ಪ್ರೇನಿಯಂತೂ ಅವನನ್ನು ಎಡಬಿಡದೆ ತೂಗಾಡಿಸಿದ್ದನು. ಅಸಹ್ಯ ತರುವಂಥ ಎರಡು ರೌಂಡುಗಳಾಡಿ ಸುಸ್ತಾದನು. ಎಷ್ಟಾದರೂ ಹಸಿವು; ಅದೇ ಎಲ್ಲಕ್ಕೂ ಕಾರಣ. ಅಬ್ಬ ಎಷ್ಟು ಜಜ್ಜಿಹೋಗಿದ್ದ! ಆಗ ನೀನು ಅವನನ್ನು ಎಷ್ಟು ಗುರುತಿಸಲೂ ಸಾಧ್ಯವಾಗುತ್ತಿರಲಿಲ್ಲ. ಅವನಿಗೆ ನಾನು ಕೊಡುತ್ತಿದ್ದುದು ಅರ್ಧ ಡಾಲರು; ಜೊತೆಗೆ ಅಚ್ಚುಕಟ್ಟಾದ ಊಟ. ಕಾಲ ಕಳೆದಂತೆ ಜೋರಾಗುತ್ತ ಬಂದನು. ಬಕಬಕನೆ ತಿನ್ನುವ ರೀತಿಯನ್ನು ನೀನು ನೋಡಬೇಕಿತ್ತು. ಮಧ್ಯೆ ಮಧ್ಯೆ ಚುಚ್ಚುಗಾಯಗಳಿಗೆ ಸಿಕ್ಕುತ್ತಿದ್ದ. ಆಗ ಅವನ ಕಥೆ ಮುಗಿಯಿತೆಂದು ಊಹಿಸಿದ್ದೆ. ಆದರೆ ಮಾರನೆಯ ದಿನ ಪುನಃ ಎದ್ದೇಳುತಿದ್ದನು. ಅಂಗಾಂಗಳು ಸೆಡೆದುಕೊಂಡು ಯಾತನೆಪಡುತಿದ್ದನು. ಆದರೂ ಹೊಟ್ಟೆಬಾಕನಂತೆ ತಿಂದು ಅರ್ಧ ಡಾಲರಿಗಾಗಿ ಸದಾ ಸಿದ್ಧನಾಗಿದ್ದನು. ಪ್ರತಿ ಸಾರಿಯೂ ಹೆಚ್ಚು ಹೆಚ್ಚು ಅಂಶಗಳನ್ನು ಕಲಿಯುತ್ತಾ ಬಂದನು. ಇಷ್ಟು ಹೇಳಬಹುದು; ಅವನು ಹುಟ್ಟು ಹೋರಾಟಗಾರ, ನಂಬಲಸಾಧ್ಯವಾದ ಪುಂಡುತನ ಅವನಲ್ಲಿದೆ. ಹೃದಯವಿಲ್ಲದ ಮಂಜುಗಡ್ಡೆ; ಕೇಳಬೇಕೇ? ಅವನು ಹತ್ತಾರು ಪದಗಳನ್ನು ಒಟ್ಟಿಗೆ ಉಸುರಿಸಿದ ಒಂದು ಸನ್ನಿವೇಶವೂ ಇಲ್ಲ. ಮರ ಕೊಯ್ಯುವವರಂತೆ ಯಾವ ಪರಿವೆಯೂ ಇಲ್ಲದೆ ತನ್ನ ಕೆಲಸವನ್ನು ಮಾತ್ರ ಮಾಡುತ್ತಿರುತ್ತಾನೆ...."

ಕಾರ್ಯದರ್ಶಿ ಹೇಳಿದನು: "ನಾನು ಅವನನ್ನು ನೋಡಿದ್ದೇನೆ. ನಿನ

ಗೋಸ್ಕರ ಬೇಕಾದಷ್ಟು ಕೆಲಸಮಾಡಿದ್ದಾನೆ."

"ದೊಡ್ಡವರೆಂದು ಹೇಳಿಕೊಳ್ಳುವ ಸಣ್ಣ ಆಸಾಮಿಗಳೆಲ್ಲರನ್ನೂ ಅವನು ಎದುರಿಸಿದ್ದಾನೆ. ಅವರಿಂದ ಎಷ್ಟೋ ವಿಷಯ ತಿಳಿದುಕೊಂಡಿದ್ದಾನೆ. ಕೆಲವರು ಅವನ ಕೈಯಲ್ಲಿ ಸೋತಿದ್ದವನ್ನು ನೋಡಿದ್ದೇನೆ. ಆದರೂ ಅವನ ಸಂಪೂರ್ಣ ಹೃದಯ ಆ ಕಡೆ ವಾಲುತ್ತಿರಲಿಲ್ಲ. ಪಂದ್ಯದಲ್ಲಿ ಸಹಜ ಆಸಕ್ತಿಯಿರಲಿಲ್ಲ. ಏನೋ ಹೋರಾಡಬೇಕು—ಅದೊಂದು ಕೆಲಸ...." ಎಂದು ರಾಬರ್ಟ್ ಉತ್ತರಕೊಟ್ಟನು.

"ಕೆಲವು ತಿಂಗಳುಗಳಿಂದ ಸಣ್ಣ ಸಣ್ಣ ಕ್ಲಬ್ಬುಗಳಲ್ಲಿ ಹೋರಾಡುತಿದ್ದ...." ಎಂದನು ಕೆಲ್ಲಿ.

"ನಿಜ; ಹೇಗೆ ಅವನಿಗೆ ಹೊಳೆಯಿತೋ ತಿಳಿಯದು. ಇದ್ದಕ್ಕಿದ್ದಂತೆ ಅವನ ಗಮನ ಆ ಕಡೆ ಹರಿಯಿತು. ಮಿಂಚಿನ ವೇಗದಲ್ಲಿ ನುಗ್ಗಿ ಸಣ್ಣ ಪುಟ್ಟ ಸ್ಥಳೀಯರನ್ನೆಲ್ಲ ಬೀಳಿಸಿದನು. ಅವನಿಗೆ ದುಡ್ಡು ಬೇಕಾಗಿತ್ತೇನೋ. ಸ್ವಲ್ಪ ಹಣ ದೊರಕಿದ್ದರೂ, ಅವನ ಬಟ್ಟೆಗಳು ಮಾತ್ರ ಹಾಗೆಯೆ ಇದ್ದವು. ಅವನು ವಿಚಿತ್ರನಾಗಿದ್ದನು. ಅವನ ವ್ಯಾಪಾರ ಯಾರಿಗೂ ತಿಳಿಯದು. ಹೇಗೆ ಕಾಲ ವಿನಿಯೋಗ ಮಾಡುತ್ತಾನೋ ಆಶ್ಚರ್ಯ. ತನ್ನ ಕೆಲಸ ಮುಗಿದ ತಕ್ಷಣ ಹೊರಟುಹೋಗುತಿದ್ದನು; ಪ್ರತಿದಿನದ ಬಹು ಭಾಗ ಅವನಿಗೆ ಅಜ್ಞಾತವಾಸ. ಕೆಲವು ಸಾರಿಯಂತೂ ನಾಲ್ಕಾರುವಾರಗಳು ಬರುತ್ತಲೇ ಇರಲಿಲ್ಲ. ಯಾರ ಉಪದೇಶಕ್ಕೂ ಕಿವಿಕೊಕೊಡುತ್ತಿರಲಿಲ್ಲ. ಅವನನ್ನು ಸರಿಯಾದ ವ್ಯವಸ್ಥೆಯಲ್ಲಿ ಇಡಬಲ್ಲ ವ್ಯಕ್ತಿ ಯಾರಾದರೂ ಇದ್ದಾರೆಯೇ? ಇದ್ದರೆ ಆ ಅಧಿಕಾರಿ ಒಳ್ಳೆಯ ಅದೃಷ್ಟವಂತ. ಯಾರೂ ಆ ವಿಷಯದ ಬಗ್ಗೆ ವಿವೇಚಿಸಿಲ್ಲ....ಅವನ ಜೊತೆ ವ್ಯವಹಾರಕ್ಕೆ ನಿಂತರೆ....ಎಷ್ಟು ಬೇಗ ಅವನು ದುಡ್ಡಿಗಾಗಿ ಕೈಯೊಡ್ಡಬಲ್ಲ—ಎಂಬುದು ತಿಳಿಯುತ್ತದೆ. ಸ್ವಲ್ಪ ಕಾದುನೋಡು...."

ಆ ಸಮಯಕ್ಕೆ ಸರಿಯಾಗಿ ಡ್ಯಾನಿವಾರ್ಡ್ ಬಂದಿಳಿದನು. ಜೊತೆಗೆ ಅವನ ವ್ಯವಸ್ಥಾಪಕ, ತರಬೇತುಗಾರ ಇಬ್ಬರೂ ಇದ್ದರು. ಡ್ಯಾನಿ ವಾರ್ಡ್ ಅಜೇಯನಂತೆ ಭಾವಿಸಿಕೊಂಡು ಉಲ್ಲಾಸದಿಂದ ಉಸಿರೆಳೆದನು. ಸುತ್ತಲಿಂದಲೂ ಶುಭಾಶಯಗಳ ಸುರಿಮಳೆಯಾಯಿತು. ಒಂದು ಕಡೆ ಹಾಸ್ಯ ಚಟಾಕಿ ಹಾರಿದರೆ, ಮತ್ತೊಂದೆಡೆ ಚಮತ್ಕಾರದ ಮಾರ್ನುಡಿ ಏಳುತಿತ್ತು. ಕೆಲವರು ಮುಗುಳುನಗೆ ಬೀರಿದರು. ಮತ್ತೆ ಕೆಲವರು ಗೊಳ್ಳೆಂದು ನಕ್ಕರು. ಹಾಗಿತ್ತು ಅವನ ಮಾರ್ಗ; ಅವನಲ್ಲಿ ಸ್ವಲ್ಪ ಮಾತ್ರ ಪ್ರಾಮಾಣಿಕತೆಯನ್ನು ಕಾಣಬಹು

ದಿತ್ತು. ಅವನು ಉತ್ತಮ ನಟನೆಂದು ಹೇಳಬಹುದು. ಈ ಪ್ರಪಂಚದಲ್ಲಿ ನಗು ಮುಖವೊಂದಿದ್ದರೆ ಎಲ್ಲವನ್ನೂ ಸಾಧಿಸಬಹುದೆಂಬ ತತ್ವವನ್ನು ಅರಿತಿದ್ದನು. ಆದರೆ ಒಳಹೊಕ್ಕು ನೋಡಿದರೆ ಮಾತ್ರ ಅವನ ನಿಜ ಸ್ವಭಾವ ತಿಳಿಯಬಹುದು; ಮೊದಲೇ ತೀರ್ಮಾನಿಸಿ ಏನೋ ಉದ್ದೇಶವಿಟ್ಟು ಕಾದಾಡುವ ಮನುಷ್ಯ; ಎಲ್ಲ ಕ್ಕಿಂತ ಮೇಲಾಗಿ ಅವನು ವ್ಯಾಪಾರಸ್ಥ. ಮುಖವಾಡ ಧರಿಸುವುದರಲ್ಲಿ ಪ್ರವೀಣ. ಅವನು ಎಂಥ ಮನುಷ್ಯನೆಂಬುದು ಅವನೊಡನೆ ವ್ಯವಹಾರ ಮಾಡಿದವರಿಗೆ ಗೊತ್ತು. ವ್ಯಾಪಾರಕ್ಕೆ ಸಂಬಂಧಪಟ್ಟ ಎಲ್ಲ ಚರ್ಚೆಗಳಲ್ಲೂ ಅವನು ಇರುತ್ತಲೇ ಇದ್ದನು. ಡ್ಯಾನಿ ಹೇಳುವಂತೆ ವ್ಯವಸ್ಥಾಪಕ ಕೇಳುತಿದ್ದನು.

ರಿವೆರನ ರೀತಿಯೇ ಬೇರೆ. ಅವನಲ್ಲಿ ಇಂಡಿಯನ್ ಹಾಗೂ ಸ್ಪ್ಯಾನಿಷ್ ರಕ್ತ ಹರಿಯುತಿತ್ತು. ಅಲುಗಾಡದೆ ಮಾತನಾಡದೆ ಮೂಲೆಯಲ್ಲಿ ಕುಳಿತಿದ್ದನು. ಆದರೆ ಅವನ ಕಪ್ಪು ಕಣ್ಣುಗಳು ಮಾತ್ರ ಪ್ರತಿ ಮುಖಗಳನ್ನೂ ನೋಡುತ್ತ ಎಲ್ಲವನ್ನೂ ತಿಳಿಯುತಿದ್ದವು.

"ಓ, ಈ ಆಸಾಮಿಯೋ", ಎನ್ನುತ್ತ ಡ್ಯಾನಿ ತನ್ನ ಎದುರಾಳಿಯೆಂದು ಕರೆಯಲ್ಪಟ್ಟ ರಿವೆರನನ್ನು ಒರೆಹಚ್ಚಿ ನೋಡುವವನಂತೆ ಹೇಳಿದನು. "ಸರಿ; ಏನಯ್ಯಾ ದೊಡ್ಡ ಮನುಷ್ಯ ; ಹೇಗಿದ್ದೀ ?...."

ರಿವೆರ ಉತ್ತರ ಸೂಚಿಸುವ ಯಾವ ಸಂಜ್ಞೆಗಳನ್ನೂ ಮಾಡಲಿಲ್ಲ. ಕಣ್ಣುಗಳು ವಿಷಪೂರಿತವಾಗಿ ಕಿಡಿಕಾರುತಿದ್ದವು. ಗ್ರಿನ್‌ಗೋಗಳನ್ನು ಕಂಡರೆ ಅವನಿಗೆ ಆಗದು. ಈ ಗ್ರಿನ್‌ಗೋನನ್ನು ಕಂಡ ತಕ್ಷಣ ತನ್ನ ಸ್ವಭಾವಕ್ಕೇ ಮೀರಿದ ಹೆಚ್ಚಿನ ದ್ವೇಷ ಹೊರಹೊಮ್ಮಿತು.

ಡ್ಯಾನಿ ಪಂದ್ಯದ ಪ್ರವರ್ತಕನಿಗೆ ದಬಾಯಿಸಿದನು. ಹಾಸ್ಯವಾಗಿ ಹೇಳಿ ದನು : "ನಾನೇನು ಈ ಮೌನ ಪ್ರಾಣಿಯೊಂದಿಗೆ ಕಾದಾಡಬೇಕೆಂದು ನಿನ್ನ ಇಷ್ಟವೋ ?" ನಗು ಕಡಿಮೆಯಾದ ಮೇಲೆ, ಮತ್ತೊಂದು ಬಾಣ ಬಿಟ್ಟನು : "ಇಂಥ ಉತ್ತಮ ಜೋಡಿಯನ್ನು ಹುಡುಕಿದಮೇಲೆ, ಲಾಸ್‌ಏಂಜಲ್ಸ್ ನಿಜ ವಾಗಿಯೂ ಗೌರವಹೊಂದಿದಂತಾಯಿತು. ಯಾವ ಶಿಶುವಿಹಾರದಿಂದ ಅವನನ್ನು ತಂದೆ....?"

"ಡ್ಯಾನಿ, ನನ್ನ ಮಾತು ಕೇಳು. ಅವನು ಒಳ್ಳೆಯ ಪುಟ್ಟ ಹುಡುಗ. ಹೊರನೋಟದಷ್ಟು ಸುಲಭಸಾಧ್ಯನಂತೂ ಅಲ್ಲ...." ಎಂದು ರಾಬರ್ಟ್ ಪಕ್ಷ ವಹಿಸಿದನು.

"ಆಗಲೇ ಅರ್ಧಮನೆಯಷ್ಟು ಮಾರಾಟವಾಗಿದೆ. ಡ್ಯಾನಿ, ನೀನು

ಅವನನ್ನು ಜೊತೆಯಲ್ಲಿ ಕರಕೊಂಡು ಹೋಗಲೇಬೇಕು. ಇದಕ್ಕಿಂತ ಹೆಚ್ಚಿಗೆ ನಾವೇನು ಮಾಡಬಲ್ಲೆವು?" ಎಂದು ಕೆಲ್ಲಿ ವಾದಿಸಿದನು.

ಡ್ಯಾನಿ ಮತ್ತೆ ಬೇಜವಾಬ್ದಾರಿಯಿಂದ ಮೇಲೆ ಕೆಳಗೆ ನೋಡುತ್ತಾ ನಿಟ್ಟುಸಿರು ಬಿಟ್ಟನು.

"ನಾನೇನು ಅವನೊಡನೆ ಸುಲಭವಾಗಿ ವರ್ತಿಸಬಲ್ಲೆ. ಮೇಲೆ ಬೀಳದೆ ಹುಷಾರಿದ್ದರೆ ಅವನಿಗೇ ಉತ್ತಮ...."

ರಾಬರ್ಟ್ ಘೂಂಕರಿಸಿದನು.

"ನೀನು ಹುಷಾರಾಗಿರಬೇಕು. ಹುಡುಗನೆಂದು ಹಗುರವಾಗಿ ಹೋರಾಡುವುದು ಬೇಡ. ಯಾರಿಗೆ ಗೊತ್ತು? ಈ ಗುರುಗಮ್ಮನ ಕಡೆಯೆ ಅದೃಷ್ಟ ಒಲಿಯಬಹುದು ..." ಎಂದು ಡ್ಯಾನಿಯ ವ್ಯವಸ್ಥಾಪಕ ಎಚ್ಚರಿಕೆಯಿತ್ತನು.

ಡ್ಯಾನಿ ನಸುನಗೆ ಬೀರುತ್ತಾ, "ಸರಿಕಣಯ್ಯಾ, ಜಾಗರೂಕನಾಗಿಯೇ ಇರುತ್ತೇನೆ..ಈತನನ್ನು ಪ್ರಾರಂಭದಿಂದ ಕೊನೆಯ ತನಕ ಪ್ರೀತಿಯ ಜನತೆಗಾಗಿ ಜಾಗ್ರತೆಯಿಂದ ರಕ್ಷಿಸಿಕೊಳ್ಳುತ್ತೇನೆ. ಏನು ಹೇಳುವೆ ಕೆಲ್ಲಿ? ಹದಿನೈದು ರೌಂಡುಗಳ ತನಕ ಹೋರಾಡುವಂತೆ ಮಾಡಿದರೆ ಮತ್ತೆ ಜಯವನ್ನು ಗಳಿಸುವ ನಲ್ಲವೇ?" ಎಂದನು.

"ಅಷ್ಟೇ ಸಾಕು. ನೀನು ಈಗ ಹೇಳಿದುದನ್ನು ಕಾರ್ಯರೂಪಕ್ಕೆ ತಂದರೆ ಸರಿ!" ಎಂದನು.

"ಹಾಗಾದರೆ ವ್ಯವಹಾರಕ್ಕೆ ಬರೋಣ," ಎಂದು ಡ್ಯಾನಿ ಸ್ವಲ್ಪ ಹೊತ್ತು ಸುಮ್ಮನಿದ್ದು ಲೆಕ್ಕಾಚಾರಹಾಕಿದನು—"ಕಾರ್ಥೆಗೆ ಹೇಳಿರುವಂತೆಯೇ ನಮಗೂ ಕೂಡ ಗೇಟು ಹಣದಲ್ಲಿ ಶೇಕಡ ಅರವತ್ತೈದನ್ನು ಮೀಸಲಿಡಬೇಕು. ಆದರೆ ವಿಭಾಗ ಮಾಡುವುದರಲ್ಲಿ ವ್ಯತ್ಯಾಸವಿದೆ. ನನಗೆ ಅದರಲ್ಲಿ ಎಂಬತ್ತರಷ್ಟು ಭಾಗ ಕೊಟ್ಟರೆ ಒಪ್ಪಿಗೆಯುಂಟು. ಮ್ಯಾನೇಜರ್ ಸಾಹೇಬರೆ, ಸರಿ ತಾನೆ?"

ವ್ಯವಸ್ಥಾಪಕ ತಲೆದೂಗಿದನು.

"ಎಲಾ, ನಿನಗೆ ಅರ್ಥವಾಯಿತೇ?" ಎಂದು ಕೆಲ್ಲಿ ರಿವೆರನನ್ನು ಕೇಳಿದನು.

ರಿವೆರ ತಲೆಯಲ್ಲಾಡಿಸಿದನು.

"ಇರಲಿ; ಇಲ್ಲಿ ಕೇಳು. ಪಂದ್ಯದ ಪರ್ಸ್ ಎಷ್ಟೆಂದರ ಗೇಟು ಹಣದ ಶೇಕಡ ಅರವತ್ತೈದು. ನೀನು ಇನ್ನೂ ಬೆಳಕಿಗೆ ಬರದ ಸಣ್ಣವನಾಗಿದ್ದಿ. ಆದ್ದರಿಂದ ಪರ್ಸಿನ ಶೇಕಡ ಇಪ್ಪತ್ತು ಭಾಗ ನಿನಗೆ ಮತ್ತು ಎಂಬತ್ತು ಭಾಗ ಡ್ಯಾನಿಗೆ. . . ." ಎಂದು ಕೆಲ್ಲಿ.ವಿವರಿಸಿ, ರಾಬರ್ಟ್ ಕಡೆ ನೋಡಿದನು.

"ಓಹೋ, ಸರಿಯಾಗಿದೆ ರಿವೆರ. ನೋಡು; ನೀನು ಎಷ್ಟಾದರೂ ಇನ್ನೂ ಪ್ರಖ್ಯಾತನಾಗಿಲ್ಲ...." ಎಂದು ರಾಬರ್ಟ್ ಹೇಳಿದನು.

"ಗೇಟು ಹಣದ ಶೇಕಡ ಅರವತ್ತೈದು ಎಂದರೆ ಎಷ್ಟಾಗುತ್ತದೆ?" ಎಂದು ರಿವೆರ ಆಗ್ರಹಮಾಡಿದನು.

ಡ್ಯಾನಿ ಮಧ್ಯೆ ಬಾಯಿಹಾಕಿ, "ಹೇಗೆ ಹೇಳಲು ಸಾಧ್ಯ? ಐದು ಸಾವಿರ ವಾಗಬಹುದು; ಇಲ್ಲವೇ ಎಂಟು ಸಾವಿರದ ತನಕ ಹೋಗಬಹುದು. ನಿನ್ನ ಭಾಗ ಸುಮಾರು ಸಾವಿರವೋ ಅಥವಾ ಸಾವಿರದ ಆರುನೂರೋ ಆಗಬಹುದು. ನನ್ನಂಥ ಹೆಸರಾಂತ ವ್ಯಕ್ತಿಯ ಕೆಳಗೆ ಬಿದ್ದು, ಅಷ್ಟು ಸಂಪಾದಿಸುವುದೆಂದರೆ ನಿಜವಾಗಿಯೂ ನಿನ್ನ ಪುಣ್ಯ. ಏನಯ್ಯಾ ಹೇಳುತ್ತೀ?" ಎಂದನು.

ರಿವೆರ ಎಲ್ಲರ ಗಮನವನ್ನೂ ಸೆಳೆದನು.

"ಗೆದ್ದವನೇ ಎಲ್ಲವನ್ನೂ ತೆಗೆದುಕೊಳ್ಳುತ್ತಾನೆ" ಎಂದು ಕೊನೆಯ ತೀರ್ಮಾನ ಹೇಳಿದನು.

ಸುತ್ತಲೂ ಗಂಭೀರ ಮೌನ ಆವರಿಸಿತು.

"ಮಗು ಮಿಠಾಯಿ ಕೇಳುವಂತಿದೆ..." ಎಂದು ಡ್ಯಾನಿಯ ವ್ಯವಸ್ಥಾಪಕ ಘೋಷಿಸಿದನು.

ಆದರೆ ಡ್ಯಾನಿ ತಲೆಯಲ್ಲಾಡಿಸಿದನು: ನಾನು ಬಹಳ ವರ್ಷಗಳಿಂದ ಪಂದ್ಯದಲ್ಲಿ ಹೋರಾಡುತಿದ್ದೇನೆ. ಈಗ ರೆಫರಿ ಅಥವಾ ಕಂಪೆನಿಯ ಬಗ್ಗೆ ಯಾವ ಟೀಕೆಯನ್ನೂ ಮಾಡುತ್ತಿಲ್ಲ. ಜೂಜು ವ್ಯಾಪಾರಿಗಳನ್ನೂ ಪಿತೂರಿಗಾರರನ್ನೂ ನೆಚ್ಚಿಕೊಂಡು ಮಾತನಾಡಿದವನಲ್ಲ. ಆದರೆ ಇಂದಿನ ಕಾದಾಟ ನನ್ನ ಮಟ್ಟಿಗೆ ಹೇಳುವುದಾದರೆ ಅತಿ ಸಣ್ಣ ವ್ಯಾಪಾರ. ಸೋಲಲಿ, ಗೆಲ್ಲಲಿ ಎಂಬತ್ತು ನನ್ನ ವಿಭಾಗ. ಎಲವೋ ಮೆಕ್ಸಿಕನ್, ಏನು ಹೇಳುತ್ತಿ?"

ರಿವೆರ ತಲೆಯಲ್ಲಾಡಿಸಿದನು.

ಡ್ಯಾನಿಗೆ ಕೋಪ ನೆತ್ತಿಗೇರಿತು. ಸ್ಪಷ್ಟೋಕ್ತಿಯಿಂದ ಹೇಳಿದನು.

"ಏನು? ಕೆಟ್ಟ ಪೋರ! ನಿನ್ನನ್ನು ಈಗಲೇ ಶಿರಚ್ಛೇದನ ಮಾಡಿ ಬಿಡುತ್ತೇನೆ."

ಅಷ್ಟು ಹೊತ್ತಿಗೆ ರಾಬರ್ಟ್ ಉರಿದು ಬೀಳುತ್ತಿರುವ ಅವರಿಬ್ಬರ ನಡುವೆ ಮಧ್ಯಸ್ಥಿಕೆ ವಹಿಸಲು ಬಂದನು.

"ಗೆದ್ದವನೇ ಎಲ್ಲವನ್ನೂ ತೆಗೆದುಕೊಳ್ಳುತ್ತಾನೆ" ಎಂದು ರಿವೆರ ದುಮ್ಮಾನದಿಂದ ಮತ್ತೆ ಹೇಳಿದನು.

"ಅದೇಕೆ ಹೀಗೆ ಹಟ ಹಿಡಿಯುತ್ತಿರುವೆ?" ಎಂದನು ಡ್ಯಾನಿ.

ನೇರವಾಗಿ ಉತ್ತರ ಬಂತು : "ಮತ್ತೇಕೆ? ನಿನ್ನನ್ನು ಸೋಲಿಸಲಿಕ್ಕೆ"

ಅಬ್ಬ! ಎಂಥ ಮಾತು. ಆಗಲೇ ಡ್ಯಾನಿ ಕೋಟು ಬಿಚ್ಚಲು ಸಿದ್ಧನಾದನು. ಸಾಧ್ಯವಾಗಲಿಲ್ಲ. ಕಡೆಗೆ ಅವನನ್ನು ಜನ ಸಂತೈಸಬೇಕಾಯಿತು. ಎಲ್ಲರಿಗೂ ಅವನ ಬಗ್ಗೆ ಕನಿಕರ. ರಿವೆರ ಮಾತ್ರ ಒಬ್ಬಂಟಿಗನಾಗಿ ನಿಂತಿದ್ದನು.

"ನೀನು ಮೂರ್ಖನೇ ಸರಿ. ನಿನ್ನನ್ನು ಪರಿಗಣಿಸುವುದೂ ಮೂರ್ಖತನ. ಹಿಂದಿನ ತಿಂಗಳುಗಳಲ್ಲಿ ನೀನು ಮಾಡುತ್ತಿದ್ದ ಸಾಧನೆ ನಮ್ಮೆಲ್ಲರಿಗೂ ಗೊತ್ತಿದೆ. ಸಣ್ಣ ಪುಟ್ಟ ಸ್ಥಳೀಯರನ್ನು ಬೀಳಿಸುವುದು ದೊಡ್ಡ ಕೆಲಸವಲ್ಲ. ಆದರೆ ಡ್ಯಾನಿಯೇ ಒಂದು ವರ್ಗ. ಈ ಹೋರಾಟದ ಅನಂತರ ಅವನು ಛಾಂಪಿಯನ್ ಶಿಪ್ಪಿಗೆ ನಿಲ್ಲುತ್ತಾನೆ. ನೀನಾದರೋ ಅಪ್ರಸಿದ್ಧ. ಲಾಸ್ ಏಂಜಲ್ಸ್ ಬಿಟ್ಟು ನಿನ್ನ ಹೆಸರನ್ನು ಯಾವ ಸ್ಥಳದವರು ಕೇಳಿದ್ದಾರೆ?...." ಎಂದು ಕೆಲ್ಲಿ ಮಾತಿಗೆ ಮಾತು ಬೆಳೆಸಿದನು.

ರಿವೆರ ತಿರಸ್ಕಾರದಿಂದ ಭುಜ ಹಾರಿಸಿ, "ಎಲ್ಲರೂ ಕೇಳಿಯೇ ಕೇಳುತ್ತಾರೆ. ಈಗಲ್ಲದಿದ್ದರೂ ಈ ಕಾದಾಟವಾದ ಮೇಲೆ!...." ಎಂದನು.

ಡ್ಯಾನಿ ಥಟ್ಟನೆ ಉಸುರಿದನು—"ಏನು ನನ್ನನ್ನು ಕ್ಷಣದಲ್ಲಿ ಸೋಲಿಸಬಹುದೆಂದು ಭಾವಿಸುವೆಯಾ?"

ರಿವೆರ ತಲೆಯಾಡಿಸಿದನು.

"ಸಕಾರಣವಾಗಿ ಯೋಚಿಸಿನೋಡು. ಪ್ರಚಾರ ಮಾಡಿದುದನ್ನು ನೆನೆದುಕೊ" ಎಂದು ಕೆಲ್ಲಿ ಕೂಗಾಡಿದನು.

ರಿವೆರನ ಉತ್ತರ; "ನನಗೆ ಬೇಕಾದುದು ಹಣ."

"ಸಾವಿರ ವರ್ಷ ಹೋರಾಡಿದರೂ ನನ್ನನ್ನು ಜಯಿಸಲಾರೆ." ಎಂದು ಡ್ಯಾನಿ ಖಡಾಖಂಡಿತವಾಗಿ ಹೇಳಿಬಿಟ್ಟನು.

ರಿವೆರ ಸರಿಯಾದ ಪ್ರತ್ಯುತ್ತರವನ್ನೇ ಕೊಟ್ಟನು : "ಹಾಗಿದ್ದರೆ ಏತಕ್ಕಾಗಿ ಸುಮ್ಮನಿರುವೆ? ದುಡ್ಡು ಅಷ್ಟು ಸುಲಭವಾಗಿ ದೊರುಕುವುದಿದ್ದರೆ ಅದರ ಹಿಂದೆಯೇ ಓಡಬಹುದಲ್ಲ?"

"ಹಾಗೋ, ನನಗೆ ಉಪಕಾರ ಮಾಡುತ್ತೀಯೋ! ಬಾ ರಂಗಸ್ಥಳಕ್ಕೆ. ಈ ರೀತಿ ಅಣಕಿಸಿದರೆ ನಿನ್ನನ್ನು ಭೂಗತಮಾಡಿಬಿಡುತ್ತೇನೆ. ತಿಳಿಯಿತೋ, ಪೋರ? ಕೆಲ್ಲಿ, ಏಕೆ ತಡಮಾಡುತ್ತೀಯೆ? ಗೆದ್ದವನು ಎಲ್ಲವನ್ನು ತೆಗೆದುಕೊಳ್ಳುವ ಎಂಬ ಕಟ್ಟಳೆಯನ್ನು ಬರಿ. ಕ್ರೀಡಾ 'ಕಾಲಂ'ಗಳಲ್ಲಿ ಪ್ರಚಾರಮಾಡು. ಇದು

ಛಲದಿಂದ ನಡೆಯುವ ಕಾದಾಟ. ಇದರ ಕೆಲವಂಶಗಳನ್ನಾದರೂ ಉತ್ಸಾಹ ದಿಂದಿರುವ ಈ ಕಿರುಗೂಸು ಕಾಣಲಿ." ಎಂದು ಡ್ಯಾನಿ ದೃಢ ನಿಶ್ಚಯ ಮಾಡಿ ಕೂಗಾಡಿದನು.

IV

ರಿವೆರ ರಂಗದೊಳಗೆ ಪ್ರವೇಶಿಸಿದನು. ಆ ಕಡೆ ಯಾರ ದೃಷ್ಟಿಯೂ ಸುಳಿಯಲಿಲ್ಲ. ಅರ್ಧ ಮನಸ್ಸಿನ ಕೈ ಚಪ್ಪಾಳೆ ಸಡಗರವಿಲ್ಲದೆ ಅವನನ್ನು ಸ್ವಾಗತಿಸಿತು. ಸಭಿಕರಿಗೆ ಅವನಲ್ಲಿ ನಂಬಿಕೆಯೇ ಇರಲಿಲ್ಲ. ಡ್ಯಾನಿಯಂಥ ದೊಡ್ಡ ವ್ಯಕ್ತಿಯ ಕೈಯಲ್ಲಿ ಕೊಲೆಗಾಗಿ ಕಳಿಸಲ್ಪಟ್ಟ ಕುರಿಮರಿಯಂತೆ ಅವನು ಕಂಡನು. ಇಡೀ ಸಭೆ ನಿರಾಶೆಗೊಳ್ಳಲು ಮತ್ತೊಂದು ಕಾರಣವಿತ್ತು. ಡ್ಯಾನಿ ವಾರ್ಡ್ ಮತ್ತು ಬಿಲ್ಲಿ ಕಾರ್ಥೆ ಇವರಿಬ್ಬರ ನಡುವೆ ನಡೆಯಬಹುದಾಗಿದ್ದ ರಭಸದ ಹೋರಾಟಕ್ಕೆ ಜನ ಹಾತೊರೆಯುತಿದ್ದರು. ಆದರೆ ಈಗ ಈ ಬಡ ಜಟ್ಟಿಯ ಪ್ರದರ್ಶನ ನೋಡಬೇಕಾಯಿತು. ಬಾಜಿ ಕಟ್ಟುವ ರೀತಿಯೇ ಬದಲಾಯಿಸಿತು. ಡ್ಯಾನಿಯ ಹೆಸರಿನಲ್ಲಿ ಒಂದಕ್ಕೆ ಎರಡರಷ್ಟು ಮೂರರಷ್ಟು ಪಣವೊಡ್ಡಿದರು.

ಮೆಕ್ಸಿಕದ ಹುಡುಗನು ತನ್ನ ಮೂಲೆಯಲ್ಲಿ ಕುಳಿತು ಕಾಯುತಿದ್ದನು. ಮೆಲ್ಲಗೆ ನಿಮಿಷಗಳು ಉರುಳುತ್ತಿದ್ದುವು. ಡ್ಯಾನಿ ಉದ್ದೇಶಪೂರ್ವಕವಾಗಿ ಅವನನ್ನು ಕಾಯುವಂತೆ ಮಾಡಿದ್ದನು. ಅದೊಂದು ಹಳೆಯ ಉಪಾಯ; ಕುಳಿತ ಕಲ್ಲೆದೆಯ ಹೊಸ ಯುವಕ ಹೋರಾಳುಗಳನ್ನು ಹೆದರಿಸುವ ಮಾರ್ಗ. ಸುತ್ತಲೂ ಹೊಗೆಬತ್ತಿ ಸೇದುತ್ತಿದ್ದ ಸಭಿಕರನ್ನು ಒಂದೇ ಸಮನೆ ನೋಡುತ್ತಿದ್ದರೆ, ತಮ್ಮಲ್ಲಿ ತಾವೇ ಭೀತರಾಗುವುದಿಲ್ಲವೇ? ಆದರೆ ಅಂಥ ಉಪಾಯ ರಿವೆರನ ವಿಷಯದಲ್ಲಿ ಯಾವ ಪರಿಣಾಮವನ್ನೂ ಮಾಡಲಿಲ್ಲ. ರಾಬರ್ಟ್ ಹೇಳಿದಂತೆ ರಿವೆರನ ನರವ್ಯೂಹ ಅಷ್ಟು ಅಭೇಧ್ಯವಾಗಿತ್ತು. ತನ್ನ ಮೂಲೆಯಲ್ಲಿ ಆಗಲೇ ಸೋಲುಗಾಳಿಯ ವಾತಾವರಣವಿದ್ದರೂ, ಅವನನ್ನು ಅಲುಗಿಸಲು ಸಾಧ್ಯವಿರ ಲಿಲ್ಲ. ಅಪರಿಚಿತ ಗ್ರಿನ್‌ಗೋಗಳು ಅವನ ಕೈಹಿಡಿದಿದ್ದರು. ಅಬ್ಬ! ಅವರು ಎಷ್ಟು ಅನಾಮಧೇಯರು? ಕಾದಾಟದ ಕ್ಲಬ್ಬುಗಳಿಂದ ಕೊಚ್ಚಿಕೊಂಡು ಬಂದ ಕೊಳಕುರಾಶಿಯಂತಿದ್ದರು. ಅವರಿಗೆ ಗೌರವ, ಯೋಗ್ಯತೆ ಒಂದೂ ಇರಲಿಲ್ಲ. ತಮ್ಮ ಮೂಲೆಯಲ್ಲಿ ಕುಳಿತಿರುವವನು ಹೇಗಾದರೂ ಸೋಲುತ್ತಾನೆ–ಎಂಬ ನಿಶ್ಚಯದಿಂದ ಅವರು ಉದಾಸೀನರಾಗಿದ್ದರು.

ಸ್ಪೈಡರ್ ಹೆಗರ್ಟಿ ಎಂಬುವನು ತನ್ನ ಕಡೆಯ ಮುಖ್ಯ ಸಹಾಯಕ ನಾಗಿದ್ದನು.

"ನೀನು ಹುಷಾರಾಗಿರಬೇಕು. ನಿನ್ನ ಕೈಲಾದಷ್ಟು ಆಟದ ಕಾಲವನ್ನು ಎಳೆಯಬೇಕೆಂದು ಕೆಲ್ಲಿ ಸೂಚಿಸಿದ್ದಾನೆ. ಹಾಗೆ ಮಾಡದಿದ್ದರೆ ಪತ್ರಿಕೆಯವ ರಂತೂ ಕಪ್ಪು ಅಕ್ಷರಗಳಲ್ಲಿ ಹೀಯಾಳಿಸದೆ ಬಿಡುವುದಿಲ್ಲ. . ." ಎಂದು ಎಚ್ಚರಿಕೆ ಯಿತ್ತನು.

ಒಟ್ಟಿನಲ್ಲಿ ಯಾವ ಮಾತುಗಳೂ ರಿವೆರನಿಗೆ ಪ್ರೋತ್ಸಾಹಕರವಾಗಿರಲಿಲ್ಲ. ಆದರೂ ರಿವೆರ ಗಮನಕೊಡದೆ ತನ್ನ ಪಾಡಿಗೆ ತಾನಿದ್ದನು. ಬಹುಮಾನ ಕ್ಕಾಗಿ ಆಡುವ ಮುಷ್ಟಿಕಾಳಗವನ್ನು ಕಡೆಗಣಿಸಿದ್ದನು. ಗ್ರಿನ್‌ಗೋಗಳನ್ನು ಎಷ್ಟರಮಟ್ಟಿಗೆ ದ್ವೇಷಿಸಬಹುದೋ, ಅಷ್ಟರಮಟ್ಟಿಗೆ ಪಂದ್ಯವನ್ನೂ ದ್ವೇಷಿಸು ತ್ತಿದ್ದನು. ತಾನು ಅಭ್ಯಾನ ರಂಗಕ್ಕೆ ಇಳಿದದ್ದು ಯಾವ ಉದ್ದೇಶದಿಂದಲೂ ಅಲ್ಲ. ಹೊಟ್ಟೆಗಿಲ್ಲದಿದ್ದ ಕಾರಣ ಮತ್ತೊಬ್ಬರ ಮೇಲೆ ಬೀಳುವ ಪ್ರವೃತ್ತಿ ತಾನಾಗಿಯೆ ಉದ್ಭವಿಸಿತು. ಅವನ ದೇಹ ಸ್ವಭಾವತಃ ಮುಷ್ಟಿಕಾಳಗಕ್ಕಾ ಗಿಯೆ ಮಾಡಲ್ಪಟ್ಟಿತ್ತು; ಆ ಅಂಶ ತಿಳಿದವನಾದರೂ ರಿವೆರ ವಿಪರೀತ ಅರ್ಥವನ್ನು ಕಲ್ಪಿಸಿಕೊಳ್ಳಲಿಲ್ಲ. ಸಂಚುಕೂಟಕ್ಕೆ ಸೇರಿದಮೇಲೆ ಹಣ ಸಂಪಾದಿ ಸುವ ಮಾರ್ಗ ಹುಡುಕಬೇಕಾಯಿತು. ಆಗಲೇ ಹಣಕ್ಕಾಗಿ ಕಾದಾಡಲು ಆರಂಭಿಸಿದ್ದು. ಅದು ಸುಲಭವಾಗಿತ್ತು. ಯಾವ ವೃತ್ತಿಯನ್ನು ಹೇಯ ವೆಂದು ಪರಿಗಣಿಸಿದ್ದನೋ, ಅದರಲ್ಲೇ ಜಯಶಾಲಿಯಾಗಿದ್ದನ್ನು ಕಂಡು ಕೊಂಡನು!. . . .

ಅವನು ವಿಶ್ಲೇಷಣೆಗೆ ಹೊರಡಲಿಲ್ಲ. ಆಟದಲ್ಲಿ ಗೆಲ್ಲಬೇಕೆಂದು ಪ್ರತಿಜ್ಞೆ ಮಾಡಿದನು. ಅದುಬಿಟ್ಟು ಬೇರೆ ಯೋಚನೆಯೇ ಇಲ್ಲ. ಇಷ್ಟರಮಟ್ಟಿಗೆ ತನ್ನನ್ನು ತಾನು ನಂಬಲು ಕಾರಣ—ತನ್ನ ನರಗಳಲ್ಲಿ ಹರಿದಾಡುತಿದ್ದ ಗಾಢ ವಾದ ಶಕ್ತಿಗಳು. ಈ ಅಸಂಖ್ಯಾತ ಜನಸಮುದಾಯ ಆ ಶಕ್ತಿಗಳನ್ನು ಕನಸಿ ನಲ್ಲೂ ಕಾಣಲು ಸಾಧ್ಯವಿಲ್ಲ. ಡ್ಯಾನಿವಾರ್ಡ್ ದುಡ್ಡಿಗಾಗಿ ಹೊಡೆದಾಡುವವನು, ದುಡ್ಡಿನಿಂದ ಪಡೆಯಬಹುದಾದ ಆರಾಮ ಜೀವನದಲ್ಲಿ ಅವನ ಮನಸ್ಸಿತ್ತು. ಆದರೆ ರಿವೆರ ಯಾವುದಕ್ಕಾಗಿ ಹೊಡೆದಾಡುತಿದ್ದನೋ, ಆ ಅಂಶಗಳು ತಲೆಯಲ್ಲಿ ಮಿಂಚಿನಂತೆ ಸುಳಿಯುತಿದ್ದುವು. ಪ್ರಜ್ವಲಿಸುವ ಭಯಂಕರ ದೃಶ್ಯಗಳು ಕಣ್ಣ ಮುಂದೆ ಹಾದುಹೋದವು. ....

ರಯೊಬ್ಲಾನ್‌ಕೋವಿನ ಬಿಳಿಗೋಡೆಯ ಜಲಶಕ್ತಿಯ ಕಾರ್ಖಾನೆಗಳು; ಅದರಂತೆಯೇ ಒಳಗೆ ಕೆಲಸಮಾಡುತಿದ್ದ ಆರು ಸಾವಿರ ಸಂಖ್ಯೆಯ ಹಸಿವಿನಿಂದ ಕಂಗಾಲಾಗಿದ್ದ ಕೂಲಿಗಾರರು, ದಿನವೊಂದಕ್ಕೆ ಹತ್ತು ಸೆಂಟುಗಳನ್ನು ಸಂಪಾದಿ

ಸಲು ಹತ್ತಾರು ಘಂಟೆಗಳ ಶಿಫ್ಟ್‌ನಲ್ಲಿ ಸಿಕ್ಕಿ ಒದ್ದಾಡುತಿದ್ದ ಏಳು ಎಂಟು ವಯಸ್ಸಿನ ಮಕ್ಕಳು ಹಾಗೂ ಬಣ್ಣ ಹಾಕುವ ಕೋಣೆಯಲ್ಲಿ ತಿರುಗಾಡುವ ಶವ ಗಳಂತೆ ಕೆಲಸಮಾಡುತಿದ್ದವರು, ತನ್ನ ಸ್ಮೃತಿಪಟದಲ್ಲಿ ಗೋಚರಿಸಿದರು. ತನ್ನ ತಂದೆ ಹೇಳುತ್ತಿರಲಿಲ್ಲವೇ? ಬಣ್ಣದ ಕೋಣೆಯೆಂದರೆ 'ಆತ್ಮಹತ್ಯದ ಬಿಲಗಳು'. ಒಂದು ವರ್ಷ ಅಲ್ಲಿ ಕೆಲಸ ಮಾಡಿದರೆ ಸಾಕು, ಸಾವನ್ನು ಸುಖವಾಗಿ ಅಪ್ಪಿಕೊಳ್ಳ ಬಹುದು. ಸಣ್ಣ ಮನೆ ಎದುರಿಗೆ ನಿಂತಂತಿದೆ. ಅಲ್ಲಿ ತನ್ನ ತಾಯಿ ಒರಟು ವಿಧಾನ ಗಳನ್ನು ಅನುಸರಿಸಿ ಮೈಮುರಿದು ಮನೆಯ ಕೆಲಸ ಮಾಡುತ್ತಿದ್ದಳು. ಆದರೂ ಅವಕಾಶಮಾಡಿಕೊಂಡು ತನ್ನನ್ನು ಮುದ್ದಾಡಿ ಪ್ರೀತಿಸುತ್ತಿದ್ದಳು. ತಂದೆಯ ನೆನಪು! ಉದ್ದವಾದ ಭರ್ಜರಿ ಮೀಸೆಯೊಂದೇ ಸಾಕು. ಆತ ಎಲ್ಲ ಮನುಷ್ಯರಿ ಗಿಂತಲೂ ಮೇಲ್ಮಟ್ಟದಲ್ಲಿದ್ದನು. ಎಲ್ಲರ ವಿಶ್ವಾಸವನ್ನೂ ದೊರಕಿಸಿಕೊಂಡಿದ್ದನು. ಹಾಗೆಯೇ ಆತನ ಉದಾರ ಹೃದಯದಲ್ಲಿ ಹೆಂಡತಿ ಮಕ್ಕಳಿಗೂ ಪ್ರೀತಿ ಸೌಹಾರ್ದದ ಸ್ಥಾನಗಳಿದ್ದುವು.... ಆ ಕಾಲದಲ್ಲಿ ತನ್ನನು ಫೆಲಿಪಿ ರಿವೆರ ಎಂದು ಕರೆಯುತ್ತಿರಲಿಲ್ಲ. ಫರ್‌ನಾಂಡಿಸ್ ಎಂಬುದು ತನ್ನ ವಂಶದ ಹೆಸರಾಗಿತ್ತು. ಬರಬರುತ್ತ ಆ ಹೆಸರು ಪೋಲೀಸು ಅಧಿಕಾರಿಗಳ ದ್ವೇಷಕ್ಕೆ ಕಾರಣವಾಯಿತು. ಆದ್ದರಿಂದಲೇ ತಾನು ಹೆಸರು ಬದಲಾಯಿಸಿಕೊಂಡದ್ದು....

ಸದಾ ಹಸನ್ಮುಖಿಯಾಗಿದ್ದ ಬಡಾ ಆಸಾಮಿಯೆಂದರೆ ಜೋಕ್ವಿನ್ ಫರ್‌ನಾಂಡಿಸ್! ರಿವೆರನ ದೃಷ್ಟಿಯಲ್ಲಿ ಅವನಿಗೆ ದೊಡ್ಡ ಸ್ಥಾನ. ಆಗ ಅವ ನನ್ನು ಅರ್ಥಮಾಡಿಕೊಳ್ಳಲು ಅಸಾಧ್ಯವಾಗಿದ್ದರೂ, ಈಗ ಎಲ್ಲವೂ ತಿಳಿಯು ತ್ತದೆ. ಜೋಕ್ವಿನ್ನನ ಕಾರ್ಯಚಟುವಟಿಕೆಗಳ ನೆನಪಾಗುತ್ತದೆ—ಸಣ್ಣ ಮುದ್ರಣಾಲಯದಲ್ಲಿ ಮೊಳೆ ಜೋಡಿಸುವುದು ಅಥವಾ ಆತುರದಲ್ಲಿ ಲೆಕ್ಕವಿಲ್ಲ ದಷ್ಟು ಕಾಗದಗಳನ್ನು ಗೀಚುವುದು, ಕೆಲವು ಸಾರಿ ಅವನ ಕೈ ನಡುಗುತಿತ್ತು; ಆತನ ಡೆಸ್ಕು ತುಂಬಿದ್ದ ವಸ್ತುಗಳು ಓರಣವಿಲ್ಲವೆ ಚೆಲ್ಲಾಪಿಲ್ಲಿಯಾಗಿದ್ದುವು.... ರಾತ್ರಿಯ ಹೊತ್ತು ಕಳ್ಳರಂತೆ ಕೂಲಿಗಾರರು ತನ್ನ ತಂದೆಯನ್ನು ಭೇಟಿಮಾಡಲು ಬರುತಿದ್ದರು. ಬಹು ಹೊತ್ತು ಮಾತನಾಡುತಿದ್ದರು. ಆಗ ಸಣ್ಣವನಾಗಿದ್ದ ತಾನು ಮಲಗದೆ ಮೂಲೆಯಲ್ಲಿ ಕುಳಿತು, ಎಷ್ಟೋ ಸಾರಿ ಸಂಭಾಷಣೆಗಳನ್ನು ಕೇಳಿಸಿಕೊಳ್ಳುತ್ತಿರಲಿಲ್ಲವೇ ? ...

ಸ್ಪೈಡರ್‌ಹೆಗರ್ಟಿಯ ಮಾತು ದೂರದಿಂದ ಬಂದಂತೆ ರಿವೆರನ ಕಿವಿಗೆ ಕೇಳಿಸಿತು: "ಪ್ರಾರಂಭದಲ್ಲೇ ನೆಲದ ಮೇಲೆ. ಕೆಳಗೆ ನುಸುಳುವುದು ಬೇಡ. ಸೂಚನೆಗಳನ್ನು ಸರಿಯಾಗಿ ಗಮನಿಸು. ಒಂದಾದರೂ ಹೊಡೆತಕ್ಕೆ ಸಿಕ್ಕಿ ನಿನ್ನ

ಪ್ಯಾದೆಯನ್ನು ಗಿಟ್ಟಿಸು...."

ಹತ್ತು ನಿಮಿಷವಾಯಿತು. ರಿವೆರ ತನ್ನ ಮೂಲೆಯಲ್ಲೇ ಕುಳಿತಿದ್ದನು. ಡ್ಯಾನಿ ರಂಗಕ್ಕೆ ಬರುವ ಸಂಭವ ಕಾಣಲಿಲ್ಲ. ಅವನು ಕಾಲ ತಳ್ಳುವಂಥ ಉಪಾಯವನ್ನು ಎಲ್ಲಿಯ ತನಕ ಸಾಧಿಸುತ್ತಾನೋ ಗೊತ್ತಿಲ್ಲ.

ಆ ಅವಕಾಶದಲ್ಲೇ ರಿವೆರನಿಗೆ ಮತ್ತಷ್ಟು ಹಿಂದಿನ ನೆನಪುಗಳು ಬರತೊಡಗಿದವು..... ಬೂದಿ ಮುಚ್ಚಿದ ಕೆಂಡ ಪುನಃ ಉರಿಯುವಂತಾಯಿತು. ತಾನು ಕಂಡ ಮುಷ್ಕರಗಳು ಭಯಂಕರವಾಗಿದ್ದವು. ಅದಕ್ಕೆ ಪ್ರತಿಯಾಗಿ ಕೂಲಿಗಾರರನ್ನೇ ಬಹಿಷ್ಕರಿಸುವ ಏರ್ಪಾಟೂ ನಡೆದಿತ್ತು; ರಯೋ ಬ್ಲಾನ್ ಕೋದ ಕೂಲಿಯಾಳುಗಳು ಪ್ಯೂಬ್ಲಾದ ಪುಂಡರೊಡನೆ ಸಹಕರಿಸಿದ್ದೇ ಮುಖ್ಯ ಕಾರಣವೆಂದು ಯಜಮಾನರು ಘೋಷಿಸಿದರು. ಹಸಿವಿನ ಬಾಧೆ ಹೇಳತೀರದು. ಬೆಟ್ಟಗಳ ಮೇಲೆಲ್ಲಾ ಹಾದು, ಕೈಗೆ ಸಿಕ್ಕಿದ್ದನ್ನು ಗಬಕ್ಕನೆ ತಿಂದಾಗ, ಹೊಟ್ಟೆಯಲ್ಲಿ ವಾಕರಿಕೆ ಬಂದು ನರಳಬೇಕಾಯಿತು. ಕಂಪನಿಯ ಹಿಂಭಾಗದಲ್ಲಿ ಬೇಕಾದಷ್ಟು ಜಾಗವಿದ್ದರೂ ಪ್ರಯೋಜನವಿರಲಿಲ್ಲ. ಜನರಲ್ ರೋಸೆಲಿಯೊ, ಮಾರ್ಟಿನೆಸ್, ಪೊರ್‌ಫಿರಿಯೋ ಮುಂತಾದ ಡಿಯಾಸನ ಸೈನಿಕರು ಸಾಮಾನ್ಯ ರಲ್ಲ. ಮೃತ್ಯುವನ್ನು ಆಹ್ವಾನಿಸುವಂತೆ ರೈಫಲ್‌ಗಳು ಒಂದೇ ಸಮನೆ ಹಾರಿ ಸಲ್ಪಟ್ಟವು. ಕೂಲಿಕಾರರ ತಪ್ಪುಗಳು ಅವರವರ ರಕ್ತದಿಂದಲೇ ಪುನಃ ಸಾರಿ ಸಲ್ಪಟ್ಟವು. ಅಬ್ಬ! ಆ ರಾತ್ರಿ! ವಿಸ್ತಾರವಾದ ಬಂಡಿಗಳ ಮೇಲೆ ಶವಗಳನ್ನು ಹೇರಿಸಿದ್ದರು; ವೆರಾಕ್ರಸ್‌ಗೆ ರವಾನಿಸಿದರು; ಅಲ್ಲಿ ಸಮುದ್ರ ಕೊಲ್ಲಿಯ ಷಾರ್ಕ್ ಮೀನುಗಳಿಗೆ ಒಳ್ಳೆಯ ಆಹಾರ ಸಿಕ್ಕಿದಂತಾಯಿತು. ತನ್ನ ತಂದೆ ತಾಯಿಗಳು ಸತ್ತ ರೀತಿಯೂ ಘೋರವಾಗಿತ್ತು. ದೊಡ್ಡ ರಾಶಿಯನ್ನು ತಡಕಿದಾಗ ನಗ್ನವಾಗಿ ವಿಕಾರಗೊಂಡಿದ್ದ ಎರಡು ಶವಗಳು ಕಂಡವು. ತನ್ನ ತಾಯಿಯಿದ್ದ ಸ್ಥಿತಿ ಚೆನ್ನಾಗಿ ಜ್ಞಾಪಕವಿದೆ—ದೇಹವನ್ನು ಆರು ಇತರ ಶರೀರಗಳು ಅದುಮಿದ್ದವು; ಮುಖ ಮಾತ್ರ ಹೊರಕ್ಕೆ ಚಾಚಿತ್ತು. ಮತ್ತೆ ಡಿಯಾಸ್ ಸೈನಿಕರ ರೈಫಲ್‌ಗಳು ಶಬ್ದ ಮಾಡಿದವು. ಆಗ ತಾನು ನೆಲಕ್ಕೆ ಕುಸಿದು, ಬೇಟೆಗೆ ಸಿಗದೆ ಓಡುವ ಪ್ರಾಣಿಯಂತೆ, ನುಸುಳಿಕೊಂಡು ಬರಲಿಲ್ಲವೇ?

ಸಮುದ್ರವು ಭೋರ್ಗರೆಯುವಂತೆ ಮೇಲೆ ಬಿದ್ದ ಜನರ ಕೂಗಾಟ ರಿವೆರನನ್ನು ಎಚ್ಚರಿಸಿತು. ಡ್ಯಾನಿ ವಾರ್ಡ್ ಬರುತ್ತಿದ್ದುದನ್ನು ಕಂಡನು; ಅವನ ಹಿಂದೆ ತರಬೇತುಗಾರರ ಮತ್ತು ಸಹಾಯಕರ ಪರಿವಾರವೇ ಇತ್ತು. ಡ್ಯಾನಿ ಮಧ್ಯ ಸ್ಥಳವನ್ನು ಪ್ರವೇಶಿಸಿದಾಗ ಇಡೀ ಜನಸಮುದಾಯ ಜನಪ್ರಿಯ ವೀರನನ್ನು ಅಟ್ಟಹಾಸದಿಂದ ಸ್ವಾಗತಿಸಿತು. ಅವನು ಗೆಲ್ಲುವುದರಲ್ಲಿ ಯಾವ

ಸಂಶಯವೂ ಇಲ್ಲವೆಂದು ಜನ ಡ್ಯಾನಿಯ ಹೆಸರನ್ನು ಮತ್ತೆ ಮತ್ತೆ ಘೋಷಿಸಿದರು. ಡ್ಯಾನಿ ಉಲ್ಲಾಸದಿಂದ ಹಗ್ಗಗಳನ್ನು ಹಾದು ಮಲ್ಲ ರಂಗಕ್ಕಿಳಿದನು. ಎಲ್ಲೆಲ್ಲಿ ನೋಡಿದರೂ ಕೊನೆ ಮೊದಲಿಲ್ಲದ ಹಸನ್ಮುಖಿಗಳು; ಅವರನ್ನು ತೃಪ್ತಿಪಡಿಸಲೋ ಎಂಬಂತೆ ಡ್ಯಾನಿ ನಾನಾ ರೀತಿಯ ಮುಖ ಭಂಗಿಗಳಿಂದ ತನ್ನ ಸಂತೋಷವನ್ನು ವ್ಯಕ್ತಪಡಿಸಿದನು. ಅವನಷ್ಟು ಸರಸಿಯಾದ ಹೋರಾಳುಗಳು ಸಿಗಲಾರರು. ಆತನ ಒಳ್ಳೆಯ ಗುಣಗಳೂ, ಸ್ನೇಹಪರ ಭಾವನೆಗಳೂ ಮುಖದಲ್ಲೇ ಸೂಚಿತವಾಗಿದ್ದುವು. ಕ್ಷಣ ಕ್ಷಣಕ್ಕೂ ಅವು ಎದ್ದು ಕಾಣುತಿದ್ದುವು. ಎಲ್ಲರೂ ಅವನ ಪರಿಚಯಸ್ಥರೇ! ಹಗ್ಗದ ಹೊರಗೆ ಕೈ ಚಾಚಿ ಸ್ನೇಹಿತರ ಕೈ ಕುಲುಕಿದನು. ಮಾತು ಮಾತಿಗೆ ಹಾಸ್ಯದ ಹೊನಲನ್ನೇ ಹರಿಸಿದನು. ದೂರವಿದ್ದ ಜನ ಸಂತೋಷವನ್ನು ತಡೆಯಲಾರದೆ, ಜೋರಾಗಿ ಅರಚುತಿದ್ದರು: "ಓ ಡ್ಯಾನಿ! ನಮ್ಮ ಡ್ಯಾನಿ!" ಆ ಜಯಘೋಷ ನಿಲ್ಲಬೇಕಾದರೆ ಐದು ನಿಮಿಷವಾಯಿತು.

ರಿವೆರನನ್ನು ಕೇಳುವವರೇ ಇಲ್ಲ. ಸಭಿಕರು ಅವನನ್ನು ಲಕ್ಷ್ಯಕ್ಕೇ ತೆಗೆದುಕೊಂಡಿರಲಿಲ್ಲ.

ಚೆನ್ನಾಗಿ ತಿಂದು ಕೊಬ್ಬಿದ್ದ ಸ್ಪೈಡರ್ ಹೆಗರ್ಟಿ, ರಿವೆರನ ಹತ್ತಿರ ಮುಖ ಚಾಚಿ ಎಚ್ಚರಿಕೆಯಿತ್ತನು; "ಹೆದರಬೇಡ. ಹಿಂದೆ ಕೊಟ್ಟ ಸೂಚನೆಗಳನ್ನು ಜ್ಞಾಪಕದಲ್ಲಿಟ್ಟುಕೊ. ಅಂತೂ ಕಡೆಯ ತನಕ ಹೋರಾಡಬೇಕು. ನೀನೇನಾದರು ಆಗಾಗ ಕೆಳಕ್ಕೆ ಬಿದ್ದರೆ, ಡ್ರೆಸಿಂಗ್ ರೂಮಿನಲ್ಲಿ ನಾವೇ ಇರುತ್ತೇವೆ! ಚುರುಕಿ ನೇಟು ಕೊಟ್ಟು ಮತ್ತೆ ಏಳಿಸಲು ನಮಗೆ ಅವಕಾಶಕೊಟ್ಟಿದ್ದಾರೆ. ಗೊತ್ತಾಯಿತೋ? ಒಟ್ಟಿನಲ್ಲಿ ನೀನು ವೀರಾವೇಶದಿಂದ ಕಾದಾಡಬೇಕು...."

ಡ್ಯಾನಿವಾರ್ಡ್ ಮಧ್ಯರೇಖೆಯನ್ನು ದಾಟಿದಾಗ, ಜನ ಒಂದೇ ಸಮನೆ ಚಪ್ಪಾಳೆ ತಟ್ಟಲು ಆರಂಭಿಸಿದರು. ಅವನು ಮುಂದಕ್ಕೆ ಬಗ್ಗಿ ರಿವೆರನ ಬಲಗೈಯನ್ನು ತನ್ನ ಎರಡು ಕೈಗಳಲ್ಲೂ ಹಿಡಿದುಕೊಂಡು, ಆವೇಗಪರ ಸೌಹಾರ್ದದಿಂದ ಕುಲುಕಿದನು. ಮುಗುಳುನಗೆ ಸೂಸುತಿದ್ದ ಡ್ಯಾನಿಯ ಮುಖ ರಿವೆರನ ಹತ್ತಿರ ಬಾಗಿತ್ತು. ಅಬ್ಬ! ಸೋದರ ಪ್ರೇಮದಿಂದ ಎದುರಾಳಿಯನ್ನು ನೋಡುತಿದ್ದಾನೆ; ಡ್ಯಾನಿಯಲ್ಲಿ ನಿಜವಾಗಿಯೂ ಆಟಗಾರನ ಸ್ಫೂರ್ತಿಯೂ ಹೊಂದಾಣಿಕೆಯೂ ಅಡಗಿವೆ—ಎಂದು ಜನ ತಿಳಿದು ಮತ್ತಷ್ಟು ಜೋರಾಗಿ ಡ್ಯಾನಿಯನ್ನು ಹೊಗಳಿದರು.

ಡ್ಯಾನಿಯ ತುಟಿಗಳು ಅಲುಗಾಡಿದವು. ಹೊರಬಂದ ಶಬ್ದ ಕೇಳಿಸಲಿಲ್ಲ;

ಆದರೂ ಅವು ದಯಾಪರ ವಾಕ್ಯಗಳೇ ಇರಬೇಕೆಂದು ಸಭಿಕರು ನಿರ್ಧರಿಸಿ ಪುನಃ ಹರ್ಷಧ್ವನಿಗೈದರು.

ಮೆಲ್ಲಗೆ ಹೇಳಿದ ಆ ಮಾತುಗಳು ರಿವೆರನಿಗೆ ಮಾತ್ರ ಸ್ಪಷ್ಟವಾಗಿ ಕೇಳಿಸಿತು; "ಎಲವೋ ಮೆಕ್ಸಿಕದ ಚಿಕ್ಕಿಲಿಯೇ! ನಿನ್ನ ಮತ್ಸರದ ಮನೋಭಾವವನ್ನು ಮನಸಾರೆ ಹೊಡೆದಟ್ಟುತ್ತೇನೆ......". ಇಂಥ ಬೆದರಿಕೆಯ ಮಾತು ಡ್ಯಾನಿಯ ಹುಸಿನಗುವಿನಲ್ಲಿ ತುಟಿಗಳ ಮಧ್ಯ ಬುಸುಗುಟ್ಟಿತು!

ರಿವೆರ ಚಲಿಸಲಿಲ್ಲ. ಎದ್ದೇಳಲೂ ಇಲ್ಲ, ಬರಿಯ ಕಣ್ಣುಗಳಿಂದಲೇ ದ್ವೇಶಕಾರಿದನು.

"ಏಳಯ್ಯಾ, ಎದ್ದೇಳೋ ಕುನ್ನಿ!" ಎಂದು ಹಗ್ಗದ ಹಿಂದೆ ಕುಳಿತಿದ್ದ ಯಾವನೋ ಒಬ್ಬ ಕೂಗಿಕೊಂಡ.

ರಿವೆರನಲ್ಲಿ ಆಟಗಾರನ ಸ್ವಭಾವವೇ ಇಲ್ಲವೆಂದು ಜನ ತಿರಸ್ಕಾರ ಸೂಚಕ ಧ್ವನಿಗಳಿಂದ ಅಪಹಾಸ್ಯ ಮಾಡಿದರು. ಆದರೂ ರಿವೆರ ನಿಶ್ಚಲನಾಗಿದ್ದನು.

ಡ್ಯಾನಿ ಕೈಕುಲಕಿದ ಮೇಲೆ, ಅಖಾಡ ರಂಗದಿಂದ ಹಿಂದಕ್ಕೆ ತೆರಳಿದನು. ಆಗಲೂ ಜನ ಹೊಗಳಿಕೆಯ ಕರತಾಡನ ಮಾಡಿದರು.

ಅವನು ಮೇಲು ಬಟ್ಟೆಯನ್ನು ಬಿಚ್ಚಿದಾಗ, ಸಭಿಕರೆಲ್ಲ ಎದ್ದು 'ಅಬ್ಬಾ!' 'ಏನಿದು!' ಮುಂತಾದ ಸಂತೋಷ ಸೂಚಕ ಶಬ್ದಗಳನ್ನು ಹೇಳಿಕೊಳ್ಳುತ್ತಾ ಕುಣಿದಾಡಿದರು. ಡ್ಯಾನಿಯ ದೇಹ ಆರೋಗ್ಯ ಬಲದಿಂದ ಪರಿಪುಷ್ಟವಾಗಿತ್ತು. ಆತನ ಚರ್ಮ ಹೆಂಗಸಿನ ಚರ್ಮದಂತೆ ಬಿಳುಪಾಗಿಯೂ ಮೃದುವಾಗಿಯೂ ಇತ್ತು. ಚಿತ್ತಾಕರ್ಷಕ ಬೆಡಗಿನ ಹಿಂದೆ ಸ್ಥಿತಿಸ್ಥಾಪಕ ಶಕ್ತಿಯೂ ಅಡಗಿತ್ತು. ಎಷ್ಟೋ ಕಾದಾಟಗಳಲ್ಲಿ ಆ ಶಕ್ತಿಯ ಸಮರ್ಥನೆಯನ್ನೂ ತೋರ್ಪಡಿಸಿದ್ದನು. ದೇಹ ವಿಕಾಸಕ್ಕಾಗಿ ಮಾಸಲಾದ ಎಲ್ಲ ಪತ್ರಿಕೆಗಳಲ್ಲೂ ಡ್ಯಾನಿಯ ಭಾವಚಿತ್ರ ಬರುತ್ತಲೇ ಇತ್ತು.

ಸ್ಪೈಡರ್ ಹೆಗರ್ಟಿ ರಿವೆರನ ಬಟ್ಟೆ ತೆಗೆಯಲು ಬಂದನು. ಸ್ವೆಟ್ಟರನ್ನು ತಲೆಯ ಮೇಲಕ್ಕೆಳೆದು ಬಿಚ್ಚಿದನು. ಜನ ಏಕೊ ಏನೊ; ಅಸಮ್ಮತಿ ಸೂಚಿಸುವಂತೆ ಮುಲುಕುತ್ತಿದ್ದರು. ರಿವೆರನ ಶ್ಯಾಮಲ ವರ್ಣದ ಶರೀರ ತುಂಬಾ ಸಣಕಲಾಗಿ ಕಂಡಿತು. ಬರಿಯ ಮಾಂಸಖಂಡಗಳಿದ್ದರೆ ಏನು ಪ್ರಯೋಜನ? ಎದುರಾಟದಂತೆ ಅವು ಆಡಂಬರದ ಪ್ರದರ್ಶನವನ್ನು ನೀಡಲಿಲ್ಲ. ಆದರೆ ಅವನ ಎದೆಗಾರಿಕೆಯ ಗೂಢ ಸ್ಥಳ ಸಭಿಕರ ಗಮನಕ್ಕೆ ಬರಲಿಲ್ಲ. ಹಾಗೆಯೆ ರಿವೆರನ ಒರಟುತನವಾಗಲೀ, ನರವ್ಯೂಹದ ಸೂಕ್ಷ್ಮರಚನೆಯಾಗಲಿ

ಯಾರಿಗೂ ತಿಳಿಯದು. ಎಷ್ಟಾದರೂ ಅವನು ಹದಿನೆಂಟು ವರ್ಷದ ಹುಡುಗ; ಅಂದಮೇಲೆ ಗೊತ್ತೇ ಇದೆ—ಎಂದು ಜನ ಉದಾಸೀನರಾಗಿದ್ದರು. ಡ್ಯಾನಿಯ ವಿಷಯವೇ ಬೇರೆ; ಅವನು ಇಪ್ಪತ್ತುನಾಲ್ಕು ವರ್ಷದವನು; ನಿಜವಾಗಿಯೂ ಡ್ಯಾನಿಯದು ಮನುಷ್ಯ ದೇಹ.

ಇಬ್ಬರೂ ರಂಗಸ್ಥಳದ ಮಧ್ಯೆ ಬಂದು ನಿಂತಾಗ, ಅವರಲ್ಲಿದ್ದ ವ್ಯತ್ಯಾಸ ಇನ್ನೂ ಚೆನ್ನಾಗಿ ಎದ್ದು ಕಾಣುತಿತ್ತು.

ರೆಫರಿ ಅವರಿಬ್ಬರಿಗೂ ಕೊನೆಯ ಸೂಚನೆಗಳನ್ನು ಕೊಟ್ಟನು.

ರಾಬರ್ಟ್ ಪತ್ರಿಕೆಯವರ ಹಿಂದೆ ಕುಳಿತಿದ್ದುದನ್ನು ರಿವೆರ ಗಮನಿಸಿದನು. ಎಂದಿಗಿಂತಲೂ ಹೆಚ್ಚಾಗಿ ರಾಬರ್ಟ್ ಕುಡಿದಿದ್ದನು. ಹಾಗೆಯೇ ತತ್ತರಿಸಿ ಮಾತನಾಡುತಿದ್ದನು.

" ಏನೂ ಹೆದರಬೇಡ, ರಿವೆರ. ಎಲ್ಲ ಸುಲಭವೆಂದು ಧೈರ್ಯ ತಂದುಕೊ. ಅವನೇನು ನಿನ್ನನ್ನು ಕೊಲ್ಲಲಾರ. ಹೊರಡುವಾಗ ನೂಕಿದರೂ ಗಾಬರಿ ಪಡಬೇಡ. ಆದಷ್ಟು ಏಟು ಬೀಳದಂತೆ ಮರೆಮಾಡಿಕೊ. ಅವನ ಗಮನವನ್ನು ಬೇರೆಯ ಕಡೆ ಸೆಳೆಯಲು ಪ್ರಯತ್ನಪಡು. ಆಗಾಗ ಗುದ್ದಲಾಗದಷ್ಟು ಹತ್ತಿರ ನುಗ್ಗಿ ತಪ್ಪಿಸಿಕೊ....ಏನೇ ಆಗಲಿ ನಿನ್ನನ್ನು ಹೆಚ್ಚಾಗಿ ಗಾಯಪಡಿಸಲಾರ. ನೀನು ಹಿಂದೆ ಬರುತಿದ್ದ ಅಭ್ಯಾಸದ ರಂಗಸ್ಥಳಗಳನ್ನು ನೆನೆಸಿಕೊ; ಅಲ್ಲಿ ನಿನ್ನ ಮೇಲೆ ಬೀಳುತಿದ್ದ ಜಟ್ಟಿಯಂತೆ ಡ್ಯಾನಿಯೂ ಒಬ್ಬ ಎಂದು ಭಾವಿಸು. ಆಗ ಎಲ್ಲ ಸರಿಹೋಗುತ್ತದೆ ..."

ರಿವೆರ ಈ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ.

"ಇವನು ಯಾವಾಗಲೂ ಮಂಕುಕವಿದ ದೆವ್ವದಂತೆ ಇರುತ್ತಾನೆ...." ಎಂದು ರಾಬರ್ಟ್, ಪಕ್ಕದಲ್ಲಿ ಕುಳಿತಿದ್ದಾತನಿಗೆ ಹೇಳಿದನು.

ಆಶ್ಚರ್ಯವೇ ಸರಿ; ರಿವೆರ ತನ್ನ ಸಾಭಾವಿಕ ದ್ವೇಷವನ್ನು ತೋರ್ಪಡಿಸದೆ ಸುಮ್ಮನಿದ್ದನು. ಎಲ್ಲೋ ಮರೆತಿರಬೇಕು! ನಿಜ; ರಿವೆರನ ಕಣ್ಣು ಕೋರೈಸು ವಂತೆ ಅಸಂಖ್ಯಾತ ಬಂದೂಕಗಳು ಎದುರಿಗೆ ಬಂದು ನಿಂತಂತಾಯಿತು! ಮೊದಲ ತರಗತಿಯ ಡಾಲರ್ ಸೀಟಿನಿಂದ ಹಿಡಿದು, ಸಭೆಯ ಎಲ್ಲ ಮುಖಗಳೂ ಬಂದೂಕಗಳಾಗಿ ಮಾರ್ಪಟ್ಟಂತಿದ್ದವು .... ಬೆಂಗಾಡಿನಂತಿರುವ ಮೆಕ್ಸಿಕೋ ವಿನ ತುದಿಭಾಗಗಳು ಕಣ್ಣಿಗೆ ಕಟ್ಟಿದಂತಿದ್ದುವು. ಅಲ್ಲಿಯೇ ಸೂರ್ಯನ ತೀಕ್ಷ್ಣತೆ ಜೋರಾಗಿರುವುದು, ಆದ್ದರಿಂದಲೇ ಜನ ನೋವಿನಿಂದ ನರಳುತಿದ್ದಾರೆ. ಹರಕು ಮುರುಕಾಗಿದ್ದರೂ ಗುಂಪು ಕಟ್ಟಿದ್ದಾರೆ; ಬಂದೂಕಗಳಿಗಾಗಿ

ಕಾಯುತ್ತಲಿದ್ದಾರೆ....

ಅವನು ತನ್ನ ಮೂಲೆಯಲ್ಲಿ ನಿಂತು ಕಾದಾಟದ ಆಹ್ವಾನಕ್ಕಾಗಿ ಕಾಯುತ್ತಲಿದ್ದನು. ಕ್ಯಾನ್ವಾಸ್ ಕುರ್ಚಿಯನ್ನು ಹಿಡಿದಿದ್ದ ಸಹಾಯಕರು ನುಸುಳಿಕೊಂಡು ಹಗ್ಗದ ಹೊರಕ್ಕೆ ಹೊರಟರು. ಚೌಕನೆಯ ರಂಗಕ್ಕೆ ಓರೆಯಾಗಿ ಡ್ಯಾನಿ ನಿಂತಿದ್ದನು. ಅವನ ದೃಷ್ಟಿ ರಿವೆರನ ಕಡೆಗಿತ್ತು. ಗಂಟೆ ಹೊಡೆಯಿತು; ಆಟ ಪ್ರಾರಂಭವಾಯಿತು. ಸಭಿಕರ ಸಂತೋಷದ ಹುಯ್ಯಲು ಹೇಳತೀರದು. ಪತ್ರಿಕೆಯವರು ಪ್ರಕಟಿಸಿದಂತೆ, ಇದು ನಿಜವಾಗಿಯೂ ಮಲ್ಲಾಮಲ್ಲಿ ಯುದ್ಧವೇ ಸರಿ. ಡ್ಯಾನಿ ಥಟ್ಟನೆ ಒಂದೇ ನೆಗೆತಕ್ಕೆ ಮುಕ್ಕಾಲು ದೂರ ಹಾರಿದನು. ಅದು ಮೆಕ್ಸಿಕನ್ ಹುಡುಗನನ್ನು ಕಬಳಿಸುವಂತಿತ್ತು. ಡ್ಯಾನಿ ಕೇವಲ ಒಂದೋ ಎರಡೊ ಗುದ್ದುಗಳಲ್ಲಿ ತೃಪ್ತಿಹೊಂದಲಿಲ್ಲ; ವಿನಾಶ ತರುವ ಸುಂಟರಗಾಳಿಯಂತೆ ಗಿರ್ರನೆ ತಿರುಗುತ್ತ ಬಿಗಿಯುತಿದ್ದನು. ದೂರದಿಂದ ನೋಡುವವರಿಗೆ ರಿವೆರನ ಆಕೃತಿಯೇ ಕಾಣಿಸುತ್ತಿರಲಿಲ್ಲ; ಡ್ಯಾನಿ ಎಷ್ಟಾದರೂ ಮುಷ್ಟಿಯುದ್ಧದಲ್ಲಿ ಪಾರಂಗತನು; ಎಲ್ಲ ದಿಕ್ಕುಗಳಿಂದಲೂ ನಾನಾ ಕೋನಗಳಲ್ಲಿ ಏಟಿನ ಸುರಿಮಳೆಗರೆದನು. ಅವುಗಳನ್ನು ತಡೆಯಲಾರದೆ ರಿವೆರ ಮಧ್ಯೆ ಮಧ್ಯೆ ಮರೆಯಾಗುತಿದ್ದನು. ಹಗ್ಗಗಳ ನೇರಕ್ಕೆ ಹೋಗಿ ಬೀಳುತಿದ್ದನು. ಆಗಾಗ ರೆಫರಿ ಬಂದು ಬಿಡಿಸಬೇಕಾಯಿತು.

ಅದನ್ನು ಕಾದಾಟವೆಂದು ಹೇಳಲಾಗದು; ಕಗ್ಗೊಲೆಯನ್ನು ನಡೆಸುವಂಥ ಏರ್ಪಾಟನಂತಿತ್ತು. ಬಿರುಸಿನ ನಿಮಿಷವೆಂದರೆ ಎಂಥ ಸಭಿಕನ ಸ್ಫೂರ್ತಿಯನ್ನಾದರೂ ಮುಗಿಸಿ ಬಿಡುವ ರಸಘಳಿಗೆಯಾಗಿತ್ತು. ಡ್ಯಾನಿ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಭವ್ಯ ಪ್ರದರ್ಶನವನ್ನೇ ನೀಡುತಿದ್ದನು. ಜನರ ಉತ್ಸಾಹ ಮತ್ತು ಡ್ಯಾನಿಯ ಬಗ್ಗೆ ವಿಶ್ವಾಸ ಎಷ್ಟರಮಟ್ಟಿಗೆ ಇತ್ತೆಂದರೆ, ಮೆಕ್ಸಿಕನ್ ಸುಸ್ತಾಗಿದ್ದರೂ, ಅವನು ಕಾಲ ಮೇಲೆಯೆ ನಿಂತಿದ್ದುದನ್ನು ಜನ ಗಮನಿಸಲೇ ಇಲ್ಲ. ಡ್ಯಾನಿಯಂಥ ನರರಾಕ್ಷಸನ ಆಶ್ರಯದಲ್ಲಿ ಅಡಗಿಹೋಗಿದ್ದ ರಿವೆರನನ್ನು ಹೇಗೆ ತಾನೆ ಕಾಣಲು ಸಾಧ್ಯ? ಎರಡು ನಿಮಿಷಗಳ ಅಂತರದಲ್ಲಿ ಒಂದು ನಾರಿ ಮಾತ್ರ ಮೆಕ್ಸಿಕನನ ಸ್ಪಷ್ಟ ಆಕೃತಿಯನ್ನು ಕಾಣಲು ಸಾಧ್ಯವಾಯಿತು. ಅವನ ತುಟಿ ಹರಿದಿತ್ತು ; ಮೂಗಿನಲ್ಲಿ ರಕ್ತ ಸುರಿಯುತಿತ್ತು. ಹಿಂದಕ್ಕೆ ತಿರುಗಿದಾಗ ಬೆನ್ನ ಮೇಲೆ ಕೆಂಪು ಪಟ್ಟೆಗಳನ್ನು ಕಟ್ಟಿದಂತಿತ್ತು; ರಕ್ತ ಹರಿಯುತಿದ್ದರೂ ಹಗ್ಗಕ್ಕೆ ಬೆನ್ನು ಮಾಡಿ ನಿಂತಿದ್ದರ ಫಲವಿರಬೇಕು. ರಿವೆರನ ಬಗ್ಗೆ ಎರಡು ಮುಖ್ಯ ಅಂಶಗಳನ್ನು ಸಭಿಕರು ಕಾಣದೆ ಹೋದರು ; ಅವನ

ಹೃದಯದ ತುಡಿತ ಹಿಂದಿನಂತೆಯೇ ಇತ್ತು ಮತ್ತು ಕಣ್ಣುಗಳಂತೂ ಕಿಡಿ ಕಾರುತ್ತಲೇ ಇದ್ದವು. ಮನುಷ್ಯನನ್ನೇ ತಿನ್ನುವಂಥ ಗುದ್ದಾಟಗಳು ರಿವೆರನಿಗೆ ಹೊಸದಲ್ಲ; ಅಭ್ಯಾಸದ ಕ್ರೂರ ಹೋರಾಟಗಳಲ್ಲಿ ಎಷ್ಟೋ ಉತ್ಸಾಹಿ ಛಾಂಪಿಯನ್ನುಗಳು ತನ್ನ ಮೇಲೆ ಬಿದ್ದಾಗಆ ಅನುಭವವಾಗಿತ್ತು.... ತನ್ನಲ್ಲಿ ಎಂಥ ಸಹನೆಯಿತ್ತು? ಅದಕ್ಕೆಲ್ಲ ಕಾರಣ ತನಗೆ ದೊರೆಯುತಿದ್ದ ಪರಿಹಾರ. ಅರ್ಧ ಡಾಲರಿನಿಂದ ಹಿಡಿದು ಹದಿನೈದು ಡಾಲರ ತನಕ ಸಿಗುತಿತ್ತು. ಜಟ್ಟಿ ಕಾಳಗ ನಿಜವಾಗಿಯೂ ಕಠಿಣ ಶಿಕ್ಷಣವಾಗಿತ್ತು. ತಾನು ಬಹಳ ಕಷ್ಟಪಟ್ಟು ಕಲಿತಿದ್ದನು.

ಇದ್ದಕ್ಕಿದ್ದಂತೆ ಆಶ್ಚರ್ಯಕರ ಘಟನೆ ನಡೆದುಹೋಯಿತು. ಗಿರ್ರನೆ ಸುತ್ತುತ್ತ ಮಸುಕುಮಾಡುತಿದ್ದ ಯಕ್ಷಿಣೀ ವಿದ್ಯೆ ನಿಂತುಹೋಯಿತು! ರಿವೆರ ಒಬ್ಬನೇ ನಿಂತಿದ್ದನು. ಎದುರಿಸಲಾಗದಂಥ ಬಲಿಷ್ಠನಾಗಿದ್ದ ಡ್ಯಾನಿ ಬೆನ್ನಿಗೆ ಒರಗಿಕೊಂಡು ಕೆಳಕ್ಕೆ ಬಿದ್ದನು. ಪ್ರಜ್ಞೆ ನಿಧಾನವಾಗಿ ಬಂದಂತೆ ಅವನ ದೇಹ ಕಂಪಿಸುತಿತ್ತು, ಆವನೇನೋ ತತ್ತರಿಸಿ ತಾನಾಗಿಯೇ ಕೆಳಕ್ಕೆ ಬೀಳಲಿಲ್ಲ. ಆದರೆ ರಿವೆರ ತನ್ನ ಬಲಗೈಯನ್ನು ಥಟ್ಟನೆ ಬೀಸಿ ಮೊಣಕೈ ಬಾಗಿನಿಂದ ಹೊಡೆದಿದ್ದನು; ಅದರಿಂದಲೇ ಡ್ಯಾನಿ ತಕ್ಷಣ ಸಾವಿನ ಸೆಳೆತಕ್ಕೆ ಸಿಕ್ಕಿದವನಂತೆ ಮಧ್ಯಮಾರ್ಗದಲ್ಲೇ ಬಿದ್ದುಹೋದನು.

ರೆಫರಿಯು ನಡಗರ ವಿಪರೀತ. ರಿವೆರನನ್ನು ಜೋರಾಗಿ ಹಿಂದಕ್ಕೆ ತಳ್ಳಿ ಮಹಾಮಲ್ಲನ ಮೇಲೆ ನಿಂತು ಸೆಕೆಂಡುಗಳನ್ನು ಎಣಿಸತೊಡಗಿದನು. ಬಹುಮಾನ ಪಂದ್ಯದಲ್ಲಿ ನೆಲಕಚ್ಚುವಂಥ ಏಟು ಬಿಗಿದ ಮಹಾವ್ಯಕ್ತಿಯನ್ನು ಪ್ರೋತ್ಸಾಹಿಸುವುದು ವಾಡಿಕೆಯಲ್ಲವೇ? ಆದರೆ ಈ ಸಭಿಕರು ಸಂತೋಷ ಧ್ವನಿಗೈಯಲಿಲ್ಲ. ರಿವೆರನು ಡ್ಯಾನಿಯನ್ನು ಹೀಗೆ ಬೀಳಿಸುವನೆಂದು ಯಾರೂ ತಿಳಿದಿರಲಿಲ್ಲ. ಇಡೀ ಸಭೆ ನಿಶ್ಶಬ್ದವಾಯಿತು. ರೆಫರಿಯಿಂದ ನಿಧಾನವಾಗಿ ಹೊರಬರುತಿದ್ದ ಸೆಕೆಂಡುಗಳನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳಲು ಸಭಿಕರು ಕಾಯುತಿದ್ದರು.

ಇಂಥ ನಿಶ್ಶಬ್ದ ವಾತಾವರಣದಲ್ಲಿ ರಾಬರ್ಟನು ಉಬ್ಬಿಹೋದನು.

“ನಾನು ಆಗಲೇ ಹೇಳಲಿಲ್ಲವೇ? ಅವನು ಎರಡೂ ಕೈಗಳಿಂದ ಕಾದಾಡುವವನು!” ಎಂದು ಜೋರಾಗಿ ಕೂಗಿದನು.

ಐದನೇ ಸೆಕೆಂಡಿಗೆ ಡ್ಯಾನಿ ಮುಖವಡಿಯಾಗಿ ಉರುಳುತಿದ್ದನು. ಏಳನೇ ಸೆಕೆಂಡ್ ಎಣಿಸಿದಾಗ ಮೊಣಕಾಲೊಂದರ ಮೇಲೆ ನಿಂತನು. ಹಾಗೆಯೆ

ಒಂಬತ್ತು ಹೇಳವ ತನಕ ಇದ್ದನು. ಇನ್ನೇನು ಹತ್ತನೆಯ ಸೆಕೆಂಡು ಹೇಳ ಬೇಕು ; ಅಷ್ಟರಲ್ಲಿ ಮೇಲೇಳಲು ಸಿದ್ಧನಾದನು....ರೆಫೆರಿ ತಂಬ ನಿಧಾನವಾಗಿ ಸೆಕೆಂಡುಗಳನ್ನು ಎಣಿಸುತಿದ್ದನು. ಇದರ ಅರ್ಥ ರಿವೆರನಿಗೆ ತಿಳಿಯಿತು. ಎಲ್ಲ ಗ್ರಿನ್‌ಗೋಗಳ ಜೊತೆಗೆ ರೆಫೆರಿಯೂ ಕೂಡ ವಿರುದ್ಧವಾಗಿರುವುದು ಗೊತ್ತಾಯಿತು.

ಒಂಬತ್ತನೆಯ ಸೆಕೆಂಡು ಎಣಿಸುವಾಗ ರೆಫೆರಿ ಮೆಲ್ಲಗೆ ರಿವೆರನನ್ನು ಚುಚ್ಚಿ ಹಿಂದಕ್ಕೆ ನೂಕಿದನು. ಇದು ನಿಯಮಕ್ಕೇನೋ ವಿರುದ್ಧ ; ಆದರೆ ಡ್ಯಾನಿಗೆ ಅವಕಾಶಮಾಡಿಕೊಡಬೇಕಲ್ಲ ! ಡ್ಯಾನಿ ನಗುತ್ತಾ ಮೇಲೆಬಿದ್ದನು. ದೇಹವನ್ನು ಸುರುಳಿ ಸುತ್ತಿ ಹಿಂದಕ್ಕೆ ಮುಗ್ಗರಿಸಿದನು. ಈ ರೀತಿ ಮಾಡಿದ್ದು ಸರಿಯಲ್ಲ ; ರೆಫೆರಿ ಮಧ್ಯೆ ಬಂದು ನಿಲ್ಲಿಸಬೇಕಾಗಿತ್ತು. ಆದರೆ ರೆಫೆರಿ ಸುಮ್ಮನಿದ್ದನು. ಒಡೆದು ಹೋದ ದೋಣಿಗೆ ಅಂಟಿಕೊಂಡವನಂತೆ ಡ್ಯಾನಿ ಕ್ಷಣಕ್ಷಣಕ್ಕೂ ಚೇತರಿಸಿ ಕೊಂಡನು. ಅಂತೂ ತನ್ನ ಮೂಲೆಯಲ್ಲೇ ಕುಳಿತು ಸಂಪೂರ್ಣ ನಿಮಿಷವನ್ನು ವಿನಿಯೋಗಿಸಿ ಮತ್ತೆ ಜೀವ ಉಳಿಸಿಕೊಂಡನು.

" ಯಾರು ಹೇಳಿದರು ? ಡ್ಯಾನಿ ನಗುತ್ತಿದ್ದಾನೆಯೇ ? ಇಲ್ಲ. ಮುಗುಳು ನಗೆ ಹೊರಕ್ಕೆ ಬರುತ್ತಲೇ ಇಲ್ಲ! ..... " ಎಂದು ಯಾರೋ ಗೇಲಿಯೆಬ್ಬಿಸಿದರು. ಅಷ್ಟು ಹೊತ್ತಿನ ತನಕ ನಿಶಬ್ದರಾಗಿದ್ದ ಸಭಿಕರು ಗೊಳ್ಳೆಂದು ನಕ್ಕರು.

" ಈ ಮೆಕ್ಸಿಕನ್ ಕುನ್ನಿ ಜೋರಾಗಿಯೆ ಒದ್ದಿದ್ದಾನೆ ; ಇರಲಿ " ಎಂದು ಡ್ಯಾನಿ ಮೂಲೆಯಲ್ಲಿದ್ದ ತನ್ನ ಹಿತಚಿಂತಕರಿಗೆ ಹೇಳಿದನು. ಮಾತು ಮಾತಿಗೆ ಮೇಲುಬ್ಬಸ ಬರುತಿತ್ತು. ಸಹಾಯಕರು ಒಂದೇ ಸಮನೆ ಮೈ ತಿಕ್ಕುತಿದ್ದರು.

ಎರಡನೆಯ ಹಾಗೂ ಮೂರನೆಯ ರೌಂಡುಗಳು ಸಪ್ಪೆಯಾಗಿದ್ದವು. ರಂಗದ ತಂತ್ರಗಳಲ್ಲಿ ಪ್ರವೀಣನೂ, ಉಪಾಯಗಾರನೂ ಎನಿಸಿಕೊಂಡಿದ್ದ ಡ್ಯಾನಿ ಸಮಯಕ್ಕೆ ತಕ್ಕ ಬುದ್ಧಿಯನ್ನು ಉಪಯೋಗಿಸಿದನು. ಮೊದಲ ರೌಂಡಿನಲ್ಲಿ ದಿಗ್ಭ್ರಮೆ ಹಿಡಿಸುವಂಥ ಏಟು ಬಿದ್ದಿತ್ತು; ಆದ್ದರಿಂದಲೇ ಈ ಬಾರಿ ಚೇತರಿಸಿ ಕೊಳ್ಳಲು ಪ್ರಯತ್ನಪಟ್ಟನು. ಬಿದ್ದುಹೋಗುವಂತೆ ನಟಿಸಿ ಏಟುಗಳನ್ನು ತಡೆ ಗಟ್ಟುವುದರಲ್ಲೇ ಕಾಲಕಳೆದನು. ನಾಲ್ಕನೆಯ ರೌಂಡಿಗೆ ಅವನು ಹಿಂದಿನ ಡ್ಯಾನಿಯಾದನು. ಆದರೆ ಮತ್ತೆ ನರಭಕ್ಷಕನಂತೆ ಮೇಲೆ ಬೀಳಲು ಹಿಂಜರಿದನು; ಏಕೆಂದರೆ ಮೆಕ್ಸಿಕನ್ ಕೂಡ ಟಾರ್ಟರನಂತೆ ಕಾಡುಮನುಷ್ಯನೇ ಆಗಿದ್ದನು. ಪ್ರತಿಯಾಗಿ ಡ್ಯಾನಿ ತನ್ನ ನಿಜಶಕ್ತಿಯನ್ನು ಪ್ರತಿಬಿಂಬಿಸುವ ಆಟದ ವರಿಸೆ ಗಳನ್ನು ಬಿಚ್ಚಿದನು. ಎಷ್ಟಾದರೂ ಅವನು ಅನುಭವಶಾಲಿಯಲ್ಲವೆ ? ಎದುರಾಳಿ

ಯನ್ನು ಸಿಕ್ಕಿಸಿ ಸವೆಸಲು, ನಿಧಾನವಾಗಿ ಲೆಕ್ಕಾಚಾರ ಮಾಡುತ್ತ ಏಟುಗಳನ್ನು ಬಿಗಿಯ ತೊಡಗಿದನು. ರಿವೆರನ ಒಂದು ಹೊಡೆತಕ್ಕೆ ಪ್ರತಿಯಾಗಿ ಡ್ಯಾನಿಯ ಮೂರು ಗುದ್ದುಗಳು ಬಿದ್ದವು. ಡ್ಯಾನಿಯ ಗುದ್ದುಗಳು ಶಿಕ್ಷಾದೃಷ್ಟಿಯಿಂದ ಉತ್ತಮವಾಗಿದ್ದರೂ, ಪರಿಣಾಮದಲ್ಲಿ ಅಂಥ ಭಯಾನಕವಾಗಿರಲಿಲ್ಲ. ಅವನು ರಿವೆರನನ್ನು ಗೌರವಿಸದೆ ಇರಲು ಸಾಧ್ಯವಿಲ್ಲ, ಏಕೆಂದರೆ ಎರಡೂ ಮುಷ್ಟಿಗಳಿಂದ ಹೊರಬರುತಿದ್ದ ಮೋಟುಕೈಗಳ ಒದೆತ ಆಶ್ಚರ್ಯಕರವಾಗಿತ್ತು.

ರಿವೆರನಿಗೆ ಆತ್ಮರಕ್ಷಣೆ ಮಾಡಿಕೊಳ್ಳಲು ಕಷ್ಟವಾಗಲಿಲ್ಲ; ಕ್ರಮಭಂಗ ಮಾಡುವಂಥ ಎಡ ಕೈ ಚಳಕವೇ ಸಾಕಾಗಿತ್ತು; ಮಧ್ಯೆ ಮಧ್ಯೆ ಡ್ಯಾನಿಯ ಬಾಯಿ ಮೂಗುಗಳಿಗೆ ಜಖಂ ಆಗುತಿತ್ತು. ಆದರೆ ಡ್ಯಾನಿಯೂ ಕೂಡ ಒಂದೇ ಭಂಗಿಯಲ್ಲಿ ಕಾದಾಡದೆ ಆಗಾಗ ಬದಲಾಯಿಸುತಿದ್ದನು; ಆದ್ದರಿಂದಲೇ ಜನ ಅವನನ್ನು ಮುಂದಿನ ಛಾಂಪಿಯನ್ ಎಂದು ಕರೆಯುತಿದ್ದರು.

ಡ್ಯಾನಿ ತನ್ನ ತೋಳಿನ ದೂರಕ್ಕಿಂತಲೂ ಹತ್ತಿರದಲ್ಲಿ ಮುಷ್ಟಿಕಾಳಗ ಮಾಡಲು ಆರಂಭಿಸಿದನು. ಈ ಕೈ ಕೈ ಕಾಳಗದಲ್ಲಿ, ಬೇಕಂತಲೆ ಕ್ರೂರವಾಗಿ ವರ್ತಿಸಿದನು. ಇದರಿಂದ ಎದುರಾಳಿಯ ಎಡ ಕೈ ಚಾಚಿನ ಹೊಡೆತ ತಪ್ಪಿಸಿ ಕೊಳ್ಳಲು ಅವಕಾಶವಾಯಿತು. ಮಧ್ಯೆ ಮಧ್ಯೆ ಸಭಿಕರು ಉತ್ಸಾಹದಿಂದ ಕುಣಿದಾಡಿದರು. ದಮ್ಮುಕಟ್ಟಿದ ಡ್ಯಾನಿ ಒಂದು ಸಾರಿಯಂತೂ ರಿವೆರನನ್ನು ಮೇಲೆ ಹಾರಿಸಿದನು. ಪುಟ ಏರಿದಂತೆ ಮೆಕ್ಸಿಕನ್ ಗಾಳಿಯಲ್ಲಿ ತೂರಾಡಿ ಚಾಪೆಯ ಮೇಲೆ ಬಿದ್ದನು. ಆದರೂ ಅವನು ಒಂದೇ ಮೊಣಕಾಲ ಮೇಲೆ ನಿಂತಿದ್ದನು. ರೆಫರಿಯು ಬಹು ಬೇಗ ಸೆಕೆಂಡುಗಳನ್ನು ಎಣಿಸುತಿದ್ದನು. ಆ ಅಂಶ ರಿವೆರನ ಅಂತರಾತ್ಮಕ್ಕೆ ಆಗಲೇ ಹೊಳೆದಿತ್ತು. ಪ್ರಪಂಚವೇ ಹೀಗೆ; ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ....ಏಳನೇ ರೌಂಡಿನಲ್ಲೂ ರೆಫರಿಯ ಮನೋಧರ್ಮ ಸ್ಪಷ್ಟವಾಯಿತು. ಡ್ಯಾನಿಯ 'ಅಪ್ಪರ್ ಕಟ್' ವಿಧಾನ ಪ್ರಭಾವಯುತವಾಗಿದ್ದರೂ, ರಿವೆರನನ್ನು ಬೀಳಿಸುವಂತಿರಲಿಲ್ಲ. ರಿವೆರ ತೂಗಾಡಿ ತತ್ತರಿಸುತಿದ್ದನು; ಅಷ್ಟೆ. ಆದರೆ ಅ ಕ್ಷಣದಲ್ಲಿ ಅವನು ಅಸಹಾಯನೂ ಅರಕ್ಷಿತನೂ ಆಗಿದ್ದನು. ಅದೇ ಸಮಯವನ್ನು ಉಪಯೋಗಿಸಿ ಕೊಂಡು ಡ್ಯಾನಿ ಅವನನ್ನು ಹಗ್ಗಗಳ ಮಧ್ಯೆ ಸೇರಿಸಿ ತೀಡತೊಡಗಿದನು. ರಿವೆರನ ದೇಹ ಥಂಗನೆ ನೆಗೆದು ಕೆಳಗೆ ಕುಳಿತಿದ್ದ ಪತ್ರಿಕೆಯವರ ತಲೆಯ ಮೇಲೆ ಬಿತ್ತು. ಆ ಪತ್ರಿಕೆಯವರು ಅದೇ ರಭಸದಲ್ಲಿ ಅವನನ್ನು ಮುಂದಕ್ಕೆ ತಳ್ಳಿದರು. ರಿವೆರ ಪುನಃ ಹಗ್ಗಗಳ ಹೊರಗಿದ್ದ ವೇದಿಕೆಯ ತುದಿಯಲ್ಲಿ

ನಿಂತನು. ಮೊಣಕಾಲ ಮೇಲೆ ನಿಂತಿದ್ದನು. ರೆಫರಿ ಯಥಾಪ್ರಕಾರ ಸೆಕೆಂಡು ಗಳನ್ನು ಬೇಗ ಬೇಗ ಎಣಿಸತೊಡಗಿದನು. ಹಗ್ಗಗಳನ್ನು ಹಾದು ರಂಗಸ್ಥಳ ವನ್ನು ಪ್ರವೇಶಿಸದಿದ್ದರೆ ರಿವೆರನ ಗತಿ ಮುಗಿಯಿತು. ಡ್ಯಾನಿಯಾದರೋ ಅದೇ ಸ್ಥಳದಲ್ಲಿ ಕಾಯುತಿದ್ದನು. ಅಂಥ ಪೂರ್ವಸಿದ್ಧತೆಗೆ ಅವಕಾಶಕೊಡುವುದು ತಪ್ಪು. ಆದರೆ ರೆಫರಿ ಏನೂ ಪ್ರಶ್ನಿಸಲಿಲ್ಲ; ಡ್ಯಾನಿಯನ್ನು ಹಿಂದಕ್ಕೆ ತಳ್ಳಲೂ ಇಲ್ಲ.

ಇಡೀ ಸಭೆ ಸಂತೋಷ ಸಾಗರದಲ್ಲಿ ಮುಳುಗಿತ್ತು.

" ಕೊಲ್ಲು, ಕೊಲ್ಲಯ್ಯಾ, ಡ್ಯಾನಿ. ಅವನನ್ನು ಬಿಡಬೇಡ " ಎಂದು ಜನ ಕೂಗಾಡಿದರು.

ಎಲ್ಲರ ಧ್ವನಿಯೂ ಒಟ್ಟಿಗೆ ಸೇರಿದಾಗ ತೋಳ ಸಮುದಾಯದ ಯುದ್ಧ ಘೋಷಣೆಯಂತಿತ್ತು.

ಡ್ಯಾನಿ ತಾಕತ್ತು ಪಡೆಯುತಿದ್ದನು. ಆದರೆ ಒಂಬತ್ತು ಸೆಕೆಂಡಿನ ತನಕ ರಿವೆರ ಕಾಯದೆ ಎಂಟನೇ ಸೆಕೆಂಡಿಗೇ ನುಗ್ಗಿದನು; ಡ್ಯಾನಿಯ ದೇಹಕ್ಕೆ ಹತ್ತಿರ ಸುಳಿದು ಸುತ್ತಿಕೊಂಡನು. ಡ್ಯಾನಿ ಹೇಗೆ ತಾನೆ ಗುದ್ದು ಕೊಟ್ಟಾನು ? ಆದರೆ ಅನ್ಯಾಯಕ್ಕೆ ಪ್ರಸಿದ್ಧನಾದ ರೆಫೆರಿ ಮಹಾಶಯ ಸಹಾಯಕ್ಕೆ ಬಂದನು ; ರಿವೆರನನ್ನು ಬಿಡಿಸಿ ಎಳೆದು, ಡ್ಯಾನಿಯಿಂದ ಏಟು ತಿನ್ನುವಂತೆ ಅವಕಾಶ ಮಾಡಿಕೊಟ್ಟನು !

ಅಷ್ಟಾದರೂ ರಿವೆರ ಜೀವದಿಂದಲೇ ಇದ್ದನು; ತಲೆಯಲ್ಲಿ ಹೊಕ್ಕಿದ್ದ ಭ್ರಮೆ ಮಾಯವಾಯಿತು. ತಾನು ದ್ವೇಷಿಸುತಿದ್ದ ಗ್ರಿನ್‌ಗೋಗಳು ಪ್ರತಿ ಯಾಗಿ ಎಂಥ ಅನೀತಿ ಮಾರ್ಗವನ್ನು ಅನುಸರಿಸಬಲ್ಲರು ಎಂದು ತಿಳಿಯಿತು. ಹಾಗೆಂದು ತಾನು ಸುಮ್ಮನಿರಲು ಸಾಧ್ಯವೇ ? ...ಮತ್ತೆ ತಾನು ನಡೆದು ಬಂದ ದಾರಿಯ ಜ್ಞಾಪಕವಾಯಿತು—ಈಗಲೂ ಮರಳುಗಾಡಿನ ರೈಲುಮಾರ್ಗದಲ್ಲಿ ಜನ ತಳಮಳಗೊಂಡಿದ್ದಾರೆ. ಅಮೇರಿಕನ್ 'ಕನಿಷ್ಟಬಿಲ್ಲೆಗಳು' ದೊಡ್ಡವರಾಗಿ ದ್ದಾರೆ; ನೀರುತೊಟ್ಟಿಗಳ ಹತ್ತಿರ ಅಲೆಮಾರಿಗಳ ತಂಡವಿದೆ; ಮಾತೆತ್ತಿದರೆ ಜೈಲಿಗೆ ಆಹ್ವಾನಗಳು ಬರುತ್ತಿವೆ....ರಯೋಬ್ಲಾನ್‌ಕೋದ ಮುಷ್ಕರವಾದ ಮೇಲೆ ತನ್ನವರ ಸ್ಥಿತಿಗತಿಗಳು ಅಸಹ್ಯಪರಂಪರೆಯಾಗಿವೆ. ಆದರೂ ಅವನಿಗೆ ಉಜ್ವಲವಾದ ದಿವ್ಯನೋಟ ಕಾಣದೆ ಇಲ್ಲ ; ರಕ್ತ ಕ್ರಾಂತಿಯ ಗಾಳಿ ಈಗಾಗಲೆ ತನ್ನ ನಾಡಿನ ಮೇಲೆ ಬೀಸತೊಡಗಿದೆ. ತನ್ನ ಮುಂದೆ ಬಂದೂಕಗಳು ನಿಂತಂತೆ ಕಾಣುತ್ತಿದೆ; ನಿಜ. ದ್ವೇಷಕಾರುತ್ತಿರುವ ಪ್ರತಿಯೊಂದು ಮುಖವೂ ಬಂದೂಕು

ತಾನೆ? ಅವರ ಮುಖಭಂಗ ಮಾಡಿದರೆ ಬಂದೂಕುಗಳು ನಮ್ಮ ವಶ! ಅದಕ್ಕಾಗಿಯೇ ತಾನು ಕಾದಾಡುತ್ತಿರುವುದು. ಅಷ್ಟೇ ಅಲ್ಲ; ತಾನು ಬೇರೆಯಲ್ಲ, ಬಂದೂಕಗಳು ಬೇರೆಯಲ್ಲ. ಕ್ರಾಂತಿಯಲ್ಲಿ ಲೀನವಾಗಿ ಹೋಗಿದ್ದೇನೆ; ಮೆಕ್ಸಿಕನರ ಸಮಷ್ಟಿ ದೃಷ್ಟಿ ತನ್ನಲ್ಲಿ ಅಡಕವಾಗಿದೆ. ಆದ್ದರಿಂದಲೇ ತಾನು ಇಡೀ ಮೆಕ್ಸಿಕೋ ದೇಶದ ಪರವಾಗಿ ಹೋರಾಡುತ್ತಿರುವುದು....

ರಿವೆರನ ಬಗ್ಗೆ ಸಭಿಕರು ತುಂಬ ಕೆರಳಿದರು. ಕೋಲು ಮುರಿಯದು, ಹಾವು ಸಾಯದು ಎಂಬಂತೆ ರಿವೆರನು ಸುಮ್ಮನೆ ಮೊಂಡಾಟ ಮಾಡಲು ಕಾರಣವೇನು? ಕೆಲವರಿಗೆ ಮಾತ್ರ ಅವನಲ್ಲಿ ಆಸಕ್ತಿಯಿತ್ತು; ಆ ಜನ ತುಂಬ ಹೊತ್ತಿನ ಆಟಗಳನ್ನು ಅಪೇಕ್ಷಿಸುವ ಜೂಜುಗಾರರಾಗಿದ್ದರು. ಡ್ಯಾನಿಯೇ ಗೆಲ್ಲುತ್ತಾನೆಂದು ನಂಬಿ ಅವರು ಒಂದಕ್ಕೆ ಮೂರರಷ್ಟು ಪಂದ್ಯ ಕಟ್ಟಿದ್ದರು. ರಿವೆರನು ಎಷ್ಟು ರೌಂಡುಗಳನ್ನು ಆಡಬಲ್ಲ ಎಂಬುದರ ಬಗ್ಗೆಯೂ ಚರ್ಚೆಯಾಗಿತ್ತು. ಏನಾದರಾಗಲಿ ರಿವೆರ ಆರು ಅಥವಾ ಹೆಚ್ಚೆಂದರೆ ಏಳು ರೌಂಡುಗಳ ಮೇಲೆ ಹೋಗಲಾರ ಎಂದು ಮುಂಭಾಗದ ಜನ ಘೋಷಿಸಿ ಹಣ ಚೆಲ್ಲಿದ್ದರು. ಇದರಲ್ಲಿ ಬಾಜಿ ಕಟ್ಟಿ ಗೆದ್ದವರು ತುಂಬ ಖುಷಿಯಾದರು; ಆಗಲೇ ಏಳು ರೌಂಡುಗಳು ಸಾಗಿದ್ದರಿಂದ ಅವರ ಹಣ ಸುರಕ್ಷಿತವಾಯಿತು. ಈಗ ತಮ್ಮ ತಮ್ಮ ಕಡೆಯವನನ್ನು ಹುರಿದುಂಬಿಸತೊಡಗಿದರು.

ರಿವೆರನು ಮೇಲಾಗದಿದ್ದರೂ ಸೋಲಿಗೆ ಮಾತ್ರ ಅವಕಾಶಕೊಡಲಿಲ್ಲ. ಎಂಟನೆಯ ರೌಂಡಿನಲ್ಲಿ ಎದುರಾಳಿಯು ಕೆಳಗಿನಿಂದ ಮೇಲಕ್ಕೆ ಗಾಳಿ ಗುದ್ದುವಂತೆ ಬೀಸತೊಡಗಿದನು. ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ; ಒಂಬತ್ತನೇ ರೌಂಡಿನಲ್ಲಿ ರಿವೆರ ಸಭಿಕರನ್ನು ಮತ್ತೆ ಆಶ್ಚರ್ಯ ಚಕಿತರನ್ನಾಗಿ ಮಾಡಿದನು. ಸುರುಳಿಯ ಮಧ್ಯೆ ಇದ್ದರೂ ಥಟ್ಟನೆ ಬಾಗುವಂತೆ ನಟಿಸುತ್ತಾ ಬಿಡಿಸಿಕೊಂಡನು. ಇಬ್ಬರ ನಡುವೆ ಅಂತರ ಸ್ವಲ್ಪವಾಗಿದ್ದರೂ, ಅವನ ಬಲಗೈ ಅಷ್ಟರಲ್ಲೇ ಜಾಗ ಮಾಡಿಕೊಂಡು ಸೊಂಟದಿಂದ ಮೇಲೆದ್ದಿತು. ಇನ್ನು ಕೇಳಬೇಕೆ? ಡ್ಯಾನಿ ನೆಲಕ್ಕೆ ಬಿದ್ದನು. ಜನರ ಗುಂಪು ಗಾಬರಿಗೊಂಡಿತು. ಡ್ಯಾನಿಯ ಬಲಗೈನ ಪ್ರಖ್ಯಾತ 'ಅಪ್ಪರ್ ಕಟ್' ಪ್ರಯೋಗ ಅವನ ಮೇಲೆಯೆ ಪ್ರಯೋಗಿಸಲ್ಪಟ್ಟಿತು. ಡ್ಯಾನಿ ಒಂಬತ್ತನೇ ಸೆಕೆಂಡಿಗೆ ಎದ್ದಾಗ, ರಿವೆರ ಅವನ ಮೇಲೆ ಬೀಳಲು ಪ್ರಯತ್ನಿಸಲಿಲ್ಲ. ಈ ಸಾರಿಯ ವ್ಯತಿರಿಕ್ತ ಸನ್ನಿವೇಶಕ್ಕೆ ತಕ್ಕಂತೆ ರೆಫರಿ ವರ್ತಿಸಿದನು. ಬಹಿರಂಗವಾಗಿಯೆ ಹೋರಾಟದ ಮಾರ್ಗಕ್ಕೆ ತಡೆಹಾಕಿ ಮಧ್ಯೆ ಮಧ್ಯೆ ಬಂದು ನಿಲ್ಲುತಿದ್ದನು.

ರಿವೆರನು ಹತ್ತನೆಯ ರೌಂಡಿನಲ್ಲೂ ಮೇಲುಗೈಯಾಗಿ ಎದುರಾಳಿಯ ಕೆನ್ನೆಗೆ ಎರಡು ಬಾರಿ ಬೀಸಿದನು. ಡ್ಯಾನಿ ಹುಚ್ಚನಂತಾದನು. ಏನೂ ತೋರ ದವನಾಗಿ ನರರಾಕ್ಷಸನ ಹಾದಿ ಪುನಃ ಹಿಡಿದನು. ಚಕ್ರಮಾರುತದಂತೆ ಗಿರ್ರನೆ ತಿರುಗಿದನು. ರಭಸದಿಂದ ಮೇಲೆ ಬೀಳಲು ಹವಣಿಸಿದರೂ, ಡ್ಯಾನಿಗಿಂತಲೂ ರಿವೆರ ಘಾಟಿಯಾಗಿದ್ದನು. ಅವನು ಡ್ಯಾನಿಯ ದೃಷ್ಟಿಪಥವನ್ನು ಮಬ್ಬು ಗೊಳಿಸಿ, ಮೂರು ಸಾರಿಯೂ ಅವನನ್ನು ಒಂದೇ ನಮುನೆ ನೆಲಕ್ಕೆ ಕೆಡವಿದನು. ಹಿಂದಿನಂತೆ ಡ್ಯಾನಿಗೆ ಬೇಗ ಚೇತರಿಸಿಕೊಳ್ಳಲೂ ಸಾಧ್ಯವಾಗಲಿಲ್ಲ, ಹನ್ನೊಂದನೆ ರೌಂಡಿಗೆ ತುಂಬ ಯೋಚಿಸಿ ಹೊರಡಬೇಕಾಯಿತು. ಅಲ್ಲಿಂದ ಹದಿನಾಲ್ಕರ ತನಕ ಡ್ಯಾನಿಯು ತನ್ನ ವ್ಯಕ್ತಿತ್ವವನ್ನು ಪ್ರದರ್ಶಿಸುವಂಥ ಪಂದ್ಯವಾಡಿದನು. ಬಿದ್ದೇಳುವಂತೆ ನಟಿಸಿದರೂ ಬಹು ಜಾಗರೂಕನಾಗಿದ್ದನು. ಮಿತವಾದ ಹೋರಾಟವನ್ನು ನಡೆಸಿದನು. ಕ್ಷಣ ಕ್ಷಣಕ್ಕೂ ಶಕ್ತಿ ಸಂಪಾದಿಸಲು ಗಮನ ವಿಟ್ಟನು. ತನಗೆ ತಿಳಿದ ಎಲ್ಲ ಉಪಾಯ ಮಾರ್ಗಗಳನ್ನೂ ಉಪಯೋಗಿಸಿದನು. ಅಪಘಾತವಾದಂತೆ ಹಿಂದಕ್ಕೆ ಸರಿಯುತಿದ್ದನು. ತೋಳಿನ ಮಧ್ಯೆ ರಿವೆರನ ಕೈಗವಸನ್ನು ಸಿಕ್ಕಿಸಿಕೊಂಡು ಹೆಣಗಾಡಿಸಿದನು. ತನ್ನ ಕೈಗವಸನ್ನು ರಿವೆರನ ಬಾಯಿಯ ನೇರಕ್ಕೆ ಹಿಡಿದು ಉಸಿರಾಡಲು ತೊಂದರೆಪಡಿಸಿದನು. ಹತ್ತಿರ ಬಂದಾಗ ರಿವೆರನ ಕಿವಿಯಲ್ಲಿ ಸಣ್ಣ ಮಾತುಗಳಾಡಿ ನಿಂದಿಸುತಿದ್ದನು. ರೆಫರಿ ಯಿಂದ ಹಿಡಿದು ಸಭೆಯಲ್ಲಿನ ಪ್ರತಿಯೊಬ್ಬರೂ ಡ್ಯಾನಿಯ ಪಕ್ಷವಹಿಸಿ ಸಹಾಯ ಮಾಡಲೂ ಸಿದ್ಧರಾಗಿದ್ದರು. ಅವನ ತಲೆಯಲ್ಲಿ ಯಾವ ಯೋಚನೆ ಇರಬಹು ದೆಂದು ಅವರಿಗೆ ತಿಳಿದಿತ್ತು ...ಈವರೆಗೂ ಅಜ್ಞಾತನಾಗಿದ್ದವನ ಕೈವಾಡದಿಂದ ತಾನು ಸೋಲುವುದೆಂದರೆ ಆಶ್ಚರ್ಯವಲ್ಲವೆ? ತನ್ನ ಶಕ್ತಿಯನ್ನೆಲ್ಲ ಕೇಂದ್ರೀಕರಿಸಿ ಒಂದೇ ಮುಷ್ಟಿ ಪ್ರಹಾರ ಕೊಡಲು ಸಿದ್ಧನಾಗಬೇಕು; ಪ್ರವಾಹವನ್ನು ಹಿಂತಿರು ಗಿಸುವಷ್ಟು ಅದು ಪ್ರಭಾವಶಾಲಿಯಾಗಿರಬೇಕು. ಹಿಂದೆ ಒಬ್ಬ ಪ್ರಖ್ಯಾತ ಜಟ್ಟಿ ಮಾಡಿದಂತೆ, ಒಂದು ಕೈಯಲ್ಲಿ ಹೊಟ್ಟೆಯ ಕುಳಿಯಲ್ಲಿಯ ನರಗಳ ಜಾಲ ವನ್ನು ಕಲಕಿ, ಮತ್ತೊಂದರಲ್ಲಿ ದವಡೆಗೆ ಬೀರಿದರೆ ತೀರಿತು. ನಾನು ಆ ಕಾರ್ಯ ಮಾಡಲು ಶಕ್ತ. ಕಾಲ ಮೇಲೆ ನಿಂತಿರುವ ತನಕ ತೋಳ ಶಕ್ತಿಗೆ ತೊಂದರೆಯಿಲ್ಲ. ಎಷ್ಟಾದರೂ ತಾನು ಮುಷ್ಟಿ ಪ್ರಹಾರಕ್ಕೆ ಹೆಸರಾದವನಲ್ಲವೇ? —ಇದೇ ಡ್ಯಾನಿಯ ಯೋಚನೆಯಾಗಿತ್ತು.

ಪ್ರತಿ ರೌಂಡುಗಳ ಮಧ್ಯ ವಿರಾಮದಲ್ಲಿ ರಿವೆರನ ಸಹಾಯಕರು ಯಾವ ಸಹಾಯವನ್ನೂ ಮಾಡಲಿಲ್ಲ; ಅವರು ಕೂಡ ರಿವೆರನನ್ನು ಕಡೆಗಣಿಸಿದ್ದರು.

ಟವಲಿನಿಂದ ಬೀಸುತ್ತಿದ್ದರು ; ನಿಜ. ಅದರಿಂದ ಹೊರಟ ಅಲ್ಪ ಗಾಳಿ ಶ್ವಾಸವೆಳೆಯುತಿದ್ದ ರಿವೆರನಿಗೆ ಆಪ್ಯಾಯಮಾನವಾಗಿರಲಿಲ್ಲ. ಸ್ಪೈಡರ್ ಹೆಗರ್ಟಿ ದೊಡ್ಡದಾಗಿ ಬುದ್ಧಿವಾದ ಹೇಳಲು ಬಂದನು ; ಅವನು ಹೇಳುತಿರುವುದೆಲ್ಲ ತನ್ನನ್ನು ದಾರಿ ತಪ್ಪಿಸಲು ಮಾಡುವ ಪ್ರಯತ್ನವೆಂದು ರಿವೆರನಿಗೆ ತಿಳಿದಿತ್ತು. ಪ್ರತಿಯೊಬ್ಬರೂ ರಿವೆರನನ್ನು ಸುತ್ತಗಟ್ಟಿ ದ್ರೋಹವೆಸಗಲು ಕಾಯುತಿದ್ದಂತೆ ಭಾಸವಾಯಿತು. ಹದಿನಾಲ್ಕನೆಯ ರೌಂಡಿನಲ್ಲಿ ಪುನಃ ಡ್ಯಾನಿ ಕೆಳಕ್ಕೆ ಬಿದ್ದನು! ಆದರೆ ರಿವೆರನಿಗೆ ಸುಸ್ತಾಗಿ ಕೈ ಜೋತುಬಿತ್ತು. ಅವನೂ ವಿಶ್ರಾಂತಿ ಪಡೆಯುತ್ತಾ ನಿಂತನು. ರೆಫರಿ ಅರ್ಧ ಮನಸ್ಸಿನಿಂದ ಎಣಿಸುತಿದ್ದನು. ಪಕ್ಕದ ಮೂಲೆಯಲ್ಲಿ ನಡೆಯುತಿದ್ದ ಅಸೂಯೆಯ ಪಿಸುಮಾತುಗಳು ರಿವೆರನ ಕಿವಿಗೆ ಬಿದ್ದುವು. ಅವನ ಕಿವಿಗಳು ಜಿಕ್ಕಿನ ಕಿವಿಗಳಂತೆ ತೀಕ್ಷ್ಣವಾಗಿದ್ದರಿಂದ ಕೆಲವನ್ನಾದರೂ ಗ್ರಹಿಸಲು ಶಕ್ಯವಾಯಿತು. ಮೈಕೇಲ್‌ಕೆಲ್ಲಿಯು ರಾಬರ್ಟನ ಹತ್ತಿರ ಬಗ್ಗಿ ಪಿಸುಗುಟ್ಟುತಿದ್ದನು....

ಮೈಕೇಲ್ ಈ ರೀತಿ ಹೇಳುತ್ತಿದ್ದುದು ಕೇಳಬಂತು; "ಆಗಲೇ ತೀರಬೇಕು; ಡ್ಯಾನಿ ಗೆಲ್ಲಲೇಬೇಕು. ಇಲ್ಲದಿದ್ದರೆ ನನಗೇ ಕ್ಷೌರ ! ಸ್ವಂತವಾಗಿ ಬಂದು ಟನ್ ಹಣ ಇದಕ್ಕಾಗಿ ತೆಗೆದಿಟ್ಟೆ! ಹದಿನೈದರಲ್ಲೂ ಅವನ ಕೈ ಮೇಲಾದರೆ ನನ್ನ ಗತಿ ಮುಗಿಯಿತು. ರಾಬರ್ಟ್, ಒಂದು ಮಾತು ಹೇಳುತ್ತೇನೆ. ಈ ಹುಡುಗ ನಿನ್ನ ಮಾತಿಗೆ ಬೆಲೆ ಕೊಡುತ್ತಾನೆ. ಏನಾದರೂ ತಡೆಮಾತು ಹಾಕಯ್ಯಾ ... "

ರಾಬರ್ಟ್ ತಲೆದೂಗುತಿದ್ದನು.

ರಿವೆರ ಇನ್ನೂ ಕೇಳಿಸಿಕೊಳ್ಳಲು ಇಷ್ಟಪಟ್ಟನು. ಅದರೆ ಅಷ್ಟರಲ್ಲಿ ಡ್ಯಾನಿ ಮೇಲೆಬಿದ್ದನು. ಮತ್ತೆ ರಿವೆರನ ಕಣ್ಣಿಗೆ ಯಾವ ದೃಶ್ಯವೂ ಬೀಳಲಿಲ್ಲ. ಒಟ್ಟನಲ್ಲಿ ಎಲ್ಲರೂ ತನ್ನನ್ನು ಚುಚ್ಚುತಿದ್ದಾರೆ; ಅಲ್ಲವೇ ? ಅದೇ ರಭಸದಲ್ಲಿ ಡ್ಯಾನಿಯನ್ನು ಮತ್ತೆ ಬೀಳಿಸಿದನು. ಅದರ ಫಲವಾಗಿ ತಾನೇ ವಿಶ್ರಾಂತಿ ಪಡೆಯಬೇಕಾಯಿತು. ಕೈಗಳು ಮತ್ತಷ್ಟು ಜೋತು ಬಿದ್ದವು.

ರಾಬರ್ಟ್ ಎದ್ದು ನಿಂತು, " ಅವನ ತೀರ್ಮಾನ ಮುಗಿಯಿತು. ನಿನ್ನ ಮೂಲೆಗೆ ನೀನು ಹೋಗು " ಎಂದನು.

ದರ್ಪದಿಂದಲೇ ಮಾತನಾಡುತಿದ್ದನು. ಹಿಂದೆ ರಿವೆರನು ಅಭ್ಯಾಸ ಮಾಡುತಿದ್ದಾಗಲೂ, ರಾಬರ್ಟ್ಸ್ ಅದೇ ರೀತಿ ಹೇಳುತಿದ್ದನು.

ಆದರೆ ರಿವೆರನ ಕಣ್ಣುಗಳಲ್ಲಿ ದ್ವೇಷ ತುಂಬಿ ಬಂತು ; ಡ್ಯಾನಿ ಯಾವಾಗ ಏಳುತ್ತಾನೋ ಎಂದು ಕಾಯುತಿದ್ದನು.

ಒಂದು ನಿಮಿಷದ ವಿರಾಮವಿತ್ತು. ಕೆಲ್ಲಿಯು ರಿವೆರನ ಹತ್ತಿರ ಓಡಿ ಬಂದು ಮೂಲೆಯಲ್ಲಿ ಕುಳಿತನು.

" ಬಿಡಯ್ಯಾ, ಇಲ್ಲದಿದ್ದರೆ ಹಾಳಾಗಿ ಹೋಗು. ರಿವೆರ, ನಾನು ಹೇಳಿದಂತೆ ಕೇಳುವೆಯಾದರೆ ನೀನು ಇವತ್ತು ಸೋಲಲೇ ಬೇಕು. ನಿನ್ನ ಅದೃಷ್ಟ ನನ್ನ ಕೈಯಲ್ಲಿದೆ. ಮುಂದಿನ ಸಾರಿ ಡ್ಯಾನಿಗಿಂತಲೂ ಮೇಲಾಗುವಂತೆ ನಿನ್ನನ್ನು ತಯಾರಿಸಬಲ್ಲೆ. ಆದರೆ ಈಗ ಮಾತ್ರ ಕೆಳಕ್ಕೆ ಬಿದ್ದು ಬಿಡಯ್ಯ!...." ಎಂದು ಕೆಲ್ಲಿ ನಿಷ್ಠುರವಾಗಿ ಕರ್ಕಶ ಧ್ವನಿಯಲ್ಲಿ ಮೆಲ್ಲಗೆ ಹೇಳಿದನು.

ಕೆಲ್ಲಿಯ ಮಾತು ಕೇಳಿಸಿತೆಂದು ರಿವೆರ ತನ್ನ ಕಣ್ಣುಗಳಿಂದಲೇ ಸೂಚಿಸಿದನು. ಆದರೆ ಒಪ್ಪಿಗೆಯನ್ನಾಗಲೀ, ನಿರಾಕರಣೆಯನ್ನಾಗಲೀ ತೋರ್ಪಡಿಸಲಿಲ್ಲ.

ಕೆಲ್ಲಿ ಕೋಪದಿಂದ ಒತ್ತಾಯ ಮಾಡಿದನು: "ಏಕಯ್ಯಾ ಮಾತಾಡು ವುದಿಲ್ಲ?"

ಸ್ಪೈಡರ್ ಹೆಗರ್ಟಿ ಕೂಡ ಕೆಲ್ಲಿಯ ಮಾತಿಗೆ ಬೆಂಬಲ ಕೊಟ್ಟನು.

" ಮಗೂ! ಈ ಬಾರಿ ಬಿಟ್ಟುಬಿಡು. ಮುಂದೆ ಛಾಂಪಿಯನ್ ಶಿಪ್ಪಿಗೆ ಅನುಕೂಲ ಮಾಡುತ್ತೇನೆ...." ಎಂದು ಕೆಲ್ಲಿ ವಾದಿಸಿದನು.

ರಿವೆರ ಉತ್ತರ ಕೊಡಲಿಲ್ಲ.

ಈ ಸಾರಿಯ ಗಂಟೆ ಸದ್ದು ಜೋರಾಗಿತ್ತು; ಸಭಿಕರಿಗೆ ಅರ್ಥವಾಗದಿದ್ದರೂ ರಿವೆರನಿಗೆ ತಿಳಿಯಿತು. ಏನೋ ಕೇಡಿನ ಸಂಭವ ಇರುವಂತೆ ಕಂಡಿತು. ಆ ಕೇಡು ರಂಗದಲ್ಲೇ ತನ್ನ ಹತ್ತಿರವಲ್ಲೇ ಆಗಲಿದೆ; ಡ್ಯಾನಿಗೆ ಮೊದಲಿದ್ದ ನಿರ್ಧಾರ ಮರುಕಳಿಸಿದಂತಿದೆ. ಅವನು ಅಷ್ಟು ದೃಢವಾಗಿ ಮುಂದುವರಿಯುತಿದ್ದುದನ್ನು ನೋಡಿ ರಿವೆರ ಹೆದರಿದನು. ಏನೋ ಉಪಾಯ ನಡೆಯಲಿದೆ! ಡ್ಯಾನಿ ಮುನ್ನುಗ್ಗಿದರೂ, ರಿವೆರ ಎದುರುಬೀಳದೆ ಪಕ್ಕಕ್ಕೆ ಸರಿಯುತ್ತಾ ರಕ್ಷಣೆಗಾಗಿ ಹವಣಿಸಿದನು. ಡ್ಯಾನಿಯು ರಿವೆರನನ್ನು ಗುದ್ದಲಾಗದಷ್ಟು ಹತ್ತಿರ ಸಿಕ್ಕಿಸಿ ಕೊಳ್ಳಲು ಪ್ರಯತ್ನಪಟ್ಟನು; ಅಂದಮೇಲೆ ಆ ರೀತಿ ಮಾಡುವುದು ಅವನ ಉಪಾಯಕ್ಕೆ ಒಂದು ರೀತಿಯಲ್ಲಿ ಅವಶ್ಯವಿರಬೇಕು. ರಿವೆರ ಹಿಂದೆ ಹಿಂದಕ್ಕೆ ಗಿರ್ರನೆ ತಿರುಗುತ್ತಿದ್ದರೂ, ಮನಸ್ಸಿನ ಅಳಕು ಹೋಗಲಿಲ್ಲ. ಆದರೂ ಈ ಬಾರಿ ಮಾತ್ರ ಮುಂದುವರಿಯಲು ಅವನಿಗೆ ಮನಸ್ಸೇ ಇಲ್ಲ. ಇನ್ನೇನು ಇಬ್ಬರ ದೇಹವೂ ಹತ್ತಿರ ಬರಬೇಕು; ಆ ಕೊನೆಯ ಕ್ಷಣದಲ್ಲಿ ರಿವೆರ ಭಗ್ಗನೆದ್ದು ಅತಿ ಚುರುಕಿನಿಂದ ಹಿಂಜರಿದನು. ಅಷ್ಟು ಹೊತ್ತಿಗೆ ಸರಿಯಾಗಿ ಡ್ಯಾನಿಯ

ಮೂಲೆಯಲ್ಲಿದ್ದವರು, 'ಫೌಲ್' 'ಫೌಲ್', ಎಂದು ಕೂಗಿದರು; ರಿವೆರ ತಮ್ಮನ್ನು ಹಾಸ್ಯಮಾಡಿ ಮೋಸಗೊಳಿಸಿದನೆಂದು ಕಿಡಿ ಕಾರಿದರು. ರೆಫರಿಯ ತುದಿ ನಾಲಗೆಯಲ್ಲಿದ್ದ ತೀರ್ಮಾನ ಹೊರಬರಲೇ ಇಲ್ಲ. ಗ್ಯಾಲರಿಯಲ್ಲಿದ್ದ ಹುಡುಗನೊಬ್ಬ ಚೀರಿದ: " ಇದೇನು ಕಚ್ಚಾ ಕೆಲಸವಯ್ಯ!.... "

ರಿವೆರ ಕುಣಿ ಕುಣಿಯುತ್ತ ಹಿಮ್ಮೆಟ್ಟುತಿದ್ದಾಗ, ಡ್ಯಾನಿಯಾದರೋ ಅವನನ್ನು ಬಹಿರಂಗವಾಗಿಯೆ ಬೈಯುತ್ತಾ ಚುಚ್ಚುತಿದ್ದನು.

ಇನ್ನು ಮೇಲೆ ಗುದ್ದಾಟ ಆಡುವುದಿಲ್ಲವೆಂದು ರಿವೆರ ನಿರ್ಧರಿಸಿದನು. ಅಂದರೆ ಗೆಲ್ಲುವ ಅರ್ಧ ಛಾನ್ಸ್ ಕೂಡ ಹೋದಂತಾಯಿತು. ಗೆಲ್ಲಲು ಉಳಿದಿರುವ ಒಂದೇ ಮಾರ್ಗ: ತೋಳಿನಷ್ಟು ದೂರವಾದರೂ ನಿಂತು ಮಾಡುವ ಮುಷ್ಟಿಯುದ್ಧ. ಅದೃಷ್ಟ ಖೋತವಾಗಿದೆ; ಜೊತೆಗೆ ತನ್ನ ಆಟವನ್ನು 'ಫೌಲ್' ಎಂದು ನಿರ್ಧರಿಸುವ ಜನ ಬೇರೆ !

ಮತ್ತೆ ಎರಡು ರೌಂಡುಗಳು ಡ್ಯಾನಿಯದೇ ಮೇಲುಕೈ. ಎಚ್ಚರಿಕೆಯ ನಿಯಮಗಳನ್ನು ಗಾಳಿಗೆ ತೂರಿಬಿಟ್ಟನು. ಹತ್ತಿರ ಬರದಿದ್ದ ಹುಡುಗನನ್ನು ಮೇಲೆ ಮೇಲೆ ಅಪ್ಪಳಿಸಿದನು. ಅಂತೂ ಅವನ ಅಪಾಯಕಾರಿ 'ಕ್ಲಿಂಚ್'ಗೆ ಸಿಗದಿದ್ದ ರಿವೆರ ಡಸನ್‌ಗಟ್ಟಳೆ ಗುದ್ದುಗಳನ್ನು ತಿನ್ನಬೇಕಾಯಿತು. ನೋಡುವವರಿಗೆ ಚೆನ್ನಾಗಿತ್ತು. ಡ್ಯಾನಿಯ ಜಯಭೇರಿಯನ್ನು ಸಭಿಕರೇ ಊದ ತೊಡಗಿದ್ದರು. ಅವರ ಉತ್ಸಾಹ ಅಷ್ಟಿಷ್ಟಲ್ಲ. ಸುತ್ತಲಿನ ಕಾಲು ಕೈಗಳಮೇಲೆ ಉತ್ಸಾಹದಿಂದ ಹುಚ್ಚರಂತೆ ನೆಗೆದಾಡಿದರು. ತಮ್ಮ ಕಡೆಯವನು ಗೆಲ್ಲುತಿದ್ದಾನೆಂದ ಮೇಲೆ, ಅವರಿಗೆ ಇನ್ಯಾವ ಕಡೆಯೂ ಗಮನವಿಲ್ಲ. ಅರ್ಥವೂ ಆಗುವುದಿಲ್ಲ.

" ಏಕಯ್ಯಾ ಕಾದಾಡುವುದಿಲ್ಲ ? " ಎಂದು ಜನ ರೊಚ್ಚಿದ್ದು ರಿವೆರನನ್ನು ಪ್ರಶ್ನಿಸಿದರು; "ನೀನೊಬ್ಬ ಹೇಡಿ!" "ಎಲವೋ ನಾಯಿ, ಬೀದೀ ನಾಯಿ ! ಆಟ ತೋರಿಸಯ್ಯಾ...." " ಡ್ಯಾನಿ, ಅವನನ್ನು ಬಿಡಬೇಡ ! ಮುಗಿಸಿಬಿಡು ! " " ನಿನಗೆ ಸಿಗುವುದು ಖಂಡಿತ ! ಅವನನ್ನು ಸಾಯಿಸು. ! "

ಇಡೀ ಸಭೆಯಲ್ಲಿ ಎಣಿಸಿದರೆ, ವಾತಾವರಣಕ್ಕೆ ಹೊಂದದ ಒಬ್ಬನೇ ಒಬ್ಬ ಶೀತಲ ಮನುಷ್ಯನಿದ್ದನು ; ಅವನೇ ರಿವೆರ. ಆದರೆ ರಕ್ತಗತ ಸ್ವಭಾವದಲ್ಲಿ ಅವನಷ್ಟು ಉರಿದುಬೀಳುವ ಉದ್ರೇಕಿಗಳು ಅಪರೂಪ. ಹಾಗಿದ್ದರೂ ಈಗೇಕೆ ಸುಮ್ಮನಿದ್ದಾನೆ ?....

ಈ ಸಭೆಯ ಹತ್ತು ಸಾವಿರ ಕರ್ಕಶ ಧ್ವನಿಗಳೂ ಯಾವ ಮಹಾ !

ಇಂಥಾದ್ದನ್ನು ಮಾರಿಸಿರುವ ಬೆಂಕಿಯನ್ನು ಅವನು ತುಳಿದಿದ್ದಾನೆ. ಅಲೆ ಅಲೆಯಾಗಿ ಬೀಳುತಿದ್ದ ಸಭಿಕರ ಕೂಗು ರಿವೆರನ ದೇಹಕ್ಕೆ ಶಾಖ ತರುವಷ್ಟು ಪ್ರಭಾವಶಾಲಿಯಾಗಿರಲಿಲ್ಲ; ಬೇಸಗೆಯ ಸಂಧ್ಯೆಯಲ್ಲಿ ಬೀಳುವ ತಂಪಿನಂತಿತ್ತು.

ಹದಿನೇಳನೆ ರೌಂಡಿನಲ್ಲಿ ರಿವೆರನಿಗೆ ಭಾರಿ ಏಟೇ ಬಿತ್ತು. ಗಿರ್ಕಿ ಹೊಡೆಯುತ್ತಾ ಹಿಂದಕ್ಕೆ ಬಿದ್ದನು. ಕೈಗಳು ಯಾವ ಆಶ್ರಯವನ್ನೂ ಹೊಂದದೆ ಇಳಿಯಬಿತ್ತು. ಡ್ಯಾನಿಯು ತನಗೆ ಅದೃಷ್ಟ ಖುಲಾಯಿಸಿತೆಂದು ಯೋಚಿಸಿದನು; ಹುಡುಗನನ್ನು ಹಿಗ್ಗಾಮುಗ್ಗ ಎಳೆಯಲು ಅವಕಾಶ ಸಿಕ್ಕಿತೆಂದು ತಿಳಿದನು. ಆ ಭಾವನೆ ಡ್ಯಾನಿಯಲ್ಲಿ ಮತ್ತಷ್ಟು ಬೆಳೆಯಲು ರಿವರನೇ ಅವಕಾಶ ಕೊಟ್ಟನು; ಅದಕ್ಕಾಗಿಯೇ ತಾನು ಅತಿ ಕಷ್ಟಪಡುತ್ತಿರುವಂತೆ ನಟಿಸಿದನು, ಡ್ಯಾನಿ ತನ್ನ ದೇಹರಕ್ಷಣೆಯ ವಿಷಯದಲ್ಲಿ ಬೇಜವಾಬ್ದಾರನಾದನು. ಅದೇ ಸಮಯದಲ್ಲಿ ಅವನನ್ನು ರಿವೆರ ಹಿಡಿಮುಬಿಟ್ಟನು; ಥಟ್ಟನೆ ಬಾಯಿಯ ನೇರಕ್ಕೆ ಜಾಡಿಸಿಬಿಟ್ಟನು. ಡ್ಯಾನಿ ಕೆಳಕ್ಕೆ ಬಿದ್ದನು. ಅವನು ಮತ್ತೆ ಎದ್ದಾಗ ರಿವೆರ ಸುಮ್ಮನೆ ನಿಂತಿರಲಿಲ್ಲ. ತಕ್ಷಣ ಬಲಗೈಯಿಂದ ಡ್ಯಾನಿಯ ಕುತ್ತಿಗೆ ಮತ್ತು ದವಡೆಯ ಭಾಗಗಳನ್ನು ಜಗ್ಗಿಸಿ, ಕೆಳ ಕೆಳಕ್ಕೆ ಮರ ಕೊಚ್ಚುವವನಂತೆ ಬಿಗಿಯುತಿದ್ದನು! ಮೂರು ಬಾರಿ ಅದೇ ಪ್ರಯೋಗ ನಡೆಸಿದನು. ಈ ಗುದ್ದುಗಳನ್ನು 'ಫೌಲ್' ಎಂದು ಯಾವ ರೆಫರಿಯೂ ಹೇಳುವಹಾಗಿಲ್ಲ.

" ಓ, ಬಿಲ್; ಅಯ್ಯಾ, ಬಿಲ್ ! " ಎಂದು ರೆಫರಿಯನ್ನು ಕೆಲ್ಲಿ ಪೀಡಿಸ ತೊಡಗಿದನು.

" ನಾನು ಮಾಡಲಾರೆ. ಅವನು ನನಗೆ ಮಾತನಾಡಲು ಸಂದರ್ಭವೇ ಕೊಡುತ್ತಿಲ್ಲ " ಎಂದು ರೆಫರಿ ಅಧಿಕಾರ ವಾಣಿಯಿಂದ ಒದರಿಬಿಟ್ಟನು.

ಜಜ್ಜಿ ಹೋಗುತಿದ್ದರೂ ಹೆದರದೆ ಡ್ಯಾನಿ ದಮ್ಮುಕಟ್ಟಿ ಮೇಲೇಳುತಿದ್ದನು. ರಂಗದ ಹತ್ತಿರವಿದ್ದ ಕೆಲ್ಲಿ ಮತ್ತು ಇತರರಿಗೆ ಭಯವಾಯಿತು; ಆಟವನು ನಿಲ್ಲಿಸಬೇಕೆಂದು ಪೋಲೀಸರಿಗೆ ಕೂಗಿಕೊಂಡರು. ಆದರೆ ಡ್ಯಾನಿಯ ಕಡೆಯವರು ಒರಸುವುದಕ್ಕೆ ಟೌಲನ್ನು ಕೂಡ ಎಸೆಯಲಿಲ್ಲ. ಬೊಜ್ಜು ಮೈಯಿನ ಪೋಲೀಸ್ ಕ್ಯಾಪ್ಟನ್ ವಕ್ರವಕ್ರವಾಗಿ ಕಾಲುಹಾಕುತ್ತಾ ಹಗ್ಗಗಳ ಮೂಲಕ ಹತ್ತಲು ಪ್ರಯತ್ನಿಸುತ್ತಿದ್ದನು. ಅದು ರಿವೆರನ ಕಣ್ಣಿಗೂ ಬಿತ್ತು; ಏತಕ್ಕಾಗಿ ಎಂದು ಅವನಿಗೆ ಸಂಪೂರ್ಣ ಅರ್ಥವಾಗಲಿಲ್ಲ....ಯಾರು ಕಂಡಿದ್ದಾರೆ? ಗ್ರಿನ್ ಗೋಗಳು ಪಂದ್ಯವಾಡುವುದರಲ್ಲಿ ನಾನಾ ಬಗೆಯ ಮೋಸಮಾರ್ಗಗಳನ್ನು ಅನುಸರಿಸಬಹುದು—ಡ್ಯಾನಿ ಸ್ವಲ್ಪ ಹೊತ್ತು ಕಾಲ ಮೇಲೆ ನಿಂತರೂ, ತಪ್ಪು

ಹೆಜ್ಜೆ ಹಾಕುತ್ತಾ ರಿವೆರನ ಕೈಯಲ್ಲಿ ತತ್ತರಿಸಿ ಹೋಗುತ್ತಿದ್ದನು. ಅಂತೂ ರಿವೆರನ ಎದುರಿಗೆ ಡ್ಯಾನಿ ಸಹಾಯವಿಲ್ಲದವನಾದನು. ಇನ್ನೇನು ರಿವೆರನಿಂದ ಕೊನೆಯ ಏಟು ಬೀಳಬೇಕು ! ಅಷ್ಟರಲ್ಲಿ ರೆಫರಿ ಮತ್ತು ಕ್ಯಾಪ್ಟನ್ ಇಬ್ಬರೂ ರಿವೆರನ ಹತ್ತಿರ ಬರುತ್ತಿದ್ದರು. ಆದರೂ ಮಿಂಚಿನಂತೆ ರಿವೆರ ಡ್ಯಾನಿಗೆ ಏಟು ಕೊಡದೆ ಬಿಡಲಿಲ್ಲ. ಕಾದಾಟ ನಿಲ್ಲಿಸುವಂತೆ ಸಂಭವವೇ ಇಲ್ಲವಾಯಿತು; ಏಕೆಂದರೆ ಡ್ಯಾನಿ ಮೇಲಕ್ಕೆ ಏಳಲೇ ಇಲ್ಲ.

" ಎಣಿಸು ! " ಎಂದು ರಿವೆರ ರೆಫರಿಗೆ ಕೇಳಿಸುವಂತೆ ಕೂಗಿ ಕೊಂಡನು. ರಿವೆರನ ಗಂಟಲು ಕಟ್ಟಿದಂತಿತ್ತು.

ಎಣಿಕೆ ಮುಗಿಯಿತು. ಡ್ಯಾನಿಯ ಸಹಾಯಕರು ಬಂದು ತಮ್ಮ ಡ್ಯಾನಿಯ ಕೈ ಕಾಲನ್ನು ಮಡಿಸಿ, ಮೂಲೆಗೆ ಎತ್ತುಕೊಂಡು ಹೋದರು.

ರಿವೆರ ಒತ್ತಾಯದಿಂದ ಕೇಳಿದನು: " ಯಾರು ಗೆದ್ದವರು ? —" ಇಷ್ಟವಿಲ್ಲದಿದ್ದರೂ ರೆಫರಿ ರಿವೆರನ ಕೈ ಹಿಡಿದು ಮೇಲೆತ್ತಬೇಕಾಯಿತು !

ಆದರೇನಂತೆ ? ರಿವೆರನಿಗೆ ಯಾರಿಂದಲೂ ಶುಭಾಶಯಗಳು ಬರಲಿಲ್ಲ. ಯಾವ ಹಿಂಬಾಲಕರೂ ಇಲ್ಲದೆ ರಿವೆರ ತನ್ನ ಮೂಲೆಗೆ ನಡೆದು ಬಂದನು. ಅಲ್ಲಿ ತನಗಾಗಿ ನಿಯಮಿಸಲ್ಪಟ್ಟ ಸಹಾಯಕರು, ಕುಳಿತು ಕೊಳ್ಳಲು ಸ್ಟೂಲನ್ನೂ ಹಾಕಿರಲಿಲ್ಲ. ಹಗ್ಗಗಳನ್ನೇ ಹಿಡಿದುಕೊಂಡು ಹಿಂದಕ್ಕೆ ವಾಲಿ ನಿಂತನು. ತಾನು ದ್ವೇಷಿಸುತ್ತಿದ್ದ ಜನರನ್ನು ನಿಧಾನವಾಗಿ ನೋಡಲು ಅವಕಾಶವಿತ್ತು. ಸಣ್ಣ ಕಿಡಿಯೊಂದು ಹತ್ತು ಸಾವಿರ ಗ್ರಿನ್‌ಗೋಗಳನ್ನೂ ವ್ಯಾಪಿಸಿ ದ್ವೇಷಕಾರುತ್ತಿದ್ದುದು ಕಂಡು ಬಂತು. ಅವನ ಮೊಣಕಾಲುಗಳು ನಡುಗಿದವು. ಅವನು ತುಂಬ ಆಯಾಸದಿಂದ ಏನೂ ತೋರದೆ ಬಿಕ್ಕಿ ಬಿಕ್ಕಿ ಅಳುತ್ತಿದ್ದನು. ಪಿತ್ತೋದ್ರೇಕದಿಂದ ತಲೆ ತಿರುಗುತಿತ್ತು. ತನ್ನ ಕಣ್ಣೆದುರಿಗೆ ವೈರಿ ಮುಖಗಳು ತೂಗಾಡುತ್ತಿರುವಂತೆ ಭಾಸವಾಯಿತು ! ಆಗ ನೆನಪಿಗೆ ಬಂತು ; ತನಗೆ ಕಾಣುತ್ತಿರುವುದು ಬಂದೂಕಗಳು ! ನಿಜ ; ಅವು ತನ್ನವು ! ಇನ್ನೇನು ತೊಂದರೆಯಿಲ್ಲ; ಕ್ರಾಂತಿ ಸುಲಲಿತವಾಗಿ ಮುನ್ನಡೆಯಲಿ.....

ಮೋಹದ ಬಲೆಯಲ್ಲಿ

ಹವಾಯಿ ಹೆಂಗಸರ ಹಾಗೆ ಧೀರ್ಘಾಯುಗಳಾಗಿ ಯಶಸ್ವೀ ಜೀವನವನ್ನು ನಡೆಸುವಂಥ ಯೋಗ ಮತಾವ ಉಷ್ಣದೇಶದ ಸ್ತ್ರೀಯರಿಗೂ

ಇಲ್ಲ. ಅಷ್ಟೇಕೆ ? 'ಹೌ' ಮರದ ಕೆಳಗೆ ಕುಳಿತಿರುವ ಹೆಂಗಸನ್ನು ನೋಡಿ; ವೇಷ ಭೂಷಣದ ಆಡಂಬರವಿಲ್ಲ ಅಥವಾ ವಯಸ್ಸು ಗೊತ್ತಾಗದಿರುವಂತೆ ಮಾಡಿಕೊಳ್ಳುವ ಮುಸುಕಿನ ತಂತ್ರವೂ ಇಲ್ಲ. ಅವಳ ವಯಸ್ಸು ಎಷ್ಟೆಂದು ಹೇಳೋಣ? ಹವಾಯಿ ದ್ವೀಪವನ್ನು ಬಿಟ್ಟು, ಪ್ರಪಂಚದ ಮತ್ತಾವ ದೇಶದಿಂದಲಾದರೂ ಸಮರ್ಥ ನ್ಯಾಯಾಧೀಶರನ್ನು ಕರೆದುಕೊಂಡು ಬನ್ನಿ; ಪರವಾಗಿಲ್ಲ. ಅವರ ತೀರ್ಮಾನದಂತೆ ಇಷ್ಟಂತೂ ನಿಶ್ಚಯ : ಆ ಹೆಂಗಸಿನ ವಯಸ್ಸು ಐವತ್ತರ ಹತ್ತಿರ ನಿಲ್ಲುತ್ತದೆ....ಆದರೆ ಅವಳ ನಿಜವಾದ ವಯಸ್ಸು, ಅವಳ ಮಕ್ಕಳಿಗೂ ಮೊಮ್ಮಕ್ಕಳಿಗೂ ಮತ್ತು ನಲವತ್ತು ವರ್ಷಗಳಿಂದಲೂ ಗಂಡನಾಗಿರುವ ರಾಸ್ಕೊಸ್ಕಾನ್‌ಡ್ವೆಲ್ಲನಿಗೂ ಗೊತ್ತಿದೆ. ಈಗ ಅವಳಿಗೆ ಅರವತ್ತು ನಾಲ್ಕು ಮತ್ತು ಮುಂದಿನ ಜೂನ್ ಇಪ್ಪತ್ತೆರಡನೆಯ ತಾರೀಖಿಗೆ ಅರುವತ್ತೈದು ವರ್ಷವಾಗುತ್ತದೆ. ಓದುವಾಗ ಮಾತ್ರ ಮೂಗಿನ ನೇರಕ್ಕೆ ಲೆನ್ಸು ಹಿಡಿಯುತ್ತಾಳೆ ; ಮಕ್ಕಳಾಟ ನೋಡುವಾಗ ಅದರ ಅಗತ್ಯ ಬೇಕಿಲ್ಲ; ಆದರೂ ಅಷ್ಟು ವಯಸ್ಸಾದವಳಂತೆ ಅವಳು ಕಾಣಿಸುವುದೇ ಇಲ್ಲ....

ಅದೊಂದು ಸೊಗಸಾದ ಸನ್ನಿವೇಶ; 'ಹೌ' ಮರದಷ್ಟೇ ಉದಾತ್ತವಾಗಿತ್ತು. ಅವಳು ಮನೆಯೊಂದರಲ್ಲಿ ಕುಳಿತಿದ್ದಂತೆ ಕಂಡಿತು ; ಏಕೆಂದರೆ ಹೌ ಮರ ಅಷ್ಟು ವಿಶಾಲವಾಗಿತ್ತು ಮತ್ತು ನೆರಳಿನ ತಂಪು ಆಪ್ಯಾಯಮಾನವಾಗಿತ್ತು. ಭೂಮಿಯ ಭಾಗ ಇರುವ ತನಕ ಅಲಂಕಾರದ ಉದ್ಯಾನ ಹರಡಿತ್ತು. ಅಲ್ಲೇ ಒಂದು ಭವ್ಯವಾದ ಬಂಗಲೆಯನ್ನು ಕಾಣಬಹುದು. ಪ್ರಕೃತಿಯ ದೃಶ್ಯವನ್ನು ಅನುಕರಿಸಿ ಕಟ್ಟಿದಂತಿತ್ತು. ಅದೊಂದು ಶ್ರೇಷ್ಠ ತರಗತಿಯ ಅತಿ ಬೆಲೆ ಬಾಳುವಂಥ ಕಟ್ಟಡ. ಅಲ್ಲಿ ನಿಂತು ಸಮುದ್ರದ ಕಡೆ ನೋಡಬೇಕು ; ನೂರು ಅಡಿಗಳಷ್ಟು ಎತ್ತರದ ತೆಂಗಿನ ತೋಟಗಳು ಒಂದೇ ಅಂಚಿನಲ್ಲಿ ಹರಡಿರುವುದು. ಅದರಾಚೆ ಇರುವುದೇ ಸಾಗರ. ನೀರಿನ ಮಟ್ಟಕ್ಕೆ ಸರಿಯಾಗಿ ಅಥವಾ ಸ್ವಲ್ಪ ಕೆಳಗಡೆ ಬಂಡೆಯ ಸಾಲುಗಳಿವೆ. ಅದಕ್ಕಿಂತಲೂ ದೂರ ಗಾಢ ನೀಲಿಯ ಬಣ್ಣವೊಂದೇ. ದಿಗಂತವನ್ನು ಮುಟ್ಟುವ ಹೊತ್ತಿಗೆ ಬಣ್ಣ ತಿಳಿಯಾಗುತ್ತದೆ. ಆ ಬಂಡೆಸಾಲುಗಳ ಮಧ್ಯದಲ್ಲೇ ಬೇಕಾದಷ್ಟು ವಿವಿಧ ಬಣ್ಣಗಳ ಪ್ರಶಸ್ತ ಶಿಲೆಗಳು ಮತ್ತು ವಿದ್ಯುದ್ಗುಣಗಳನ್ನುಳ್ಳ ಖನಿಜವಸ್ತುಗಳೂ ಇರುವುವು.

ಆ ಮನೆ ಮಾರ್ಥ ಸ್ಕಾನ್‌ಡ್ವೆಲ್ಲಳಿಗೆ ಸೇರಿದ್ದು. ಅಂಥ ಇನ್ನೂ ಐದು ಮನೆಗಳು ಅವಳ ವಶದಲ್ಲಿವೆ. 'ಹೊನಲೂಲು'ವಿನಿಂದ ಸ್ವಲ್ಪ ದೂರದಲ್ಲೇ ಪಟ್ಟಣದ ಮನೆಯಿದೆ. ನೌನು ನದಿಯ ಎರಡು ಪ್ರಪಾತಗಳ

ಮಧ್ಯೆ ಕಾಣುವ ಕಟ್ಟಡ ಸಾಮಾನ್ಯವಾದುದಲ್ಲ; ಅದೊಂದು ಅರಮನೆ. ಟ್ಯಾನ್‌ಟಲಸ್ ಮೇಲಿರುವ ಪರ್ವತ ಭವನದಲ್ಲಂತೂ ಸಾವಿರಾರು ಅತಿಥಿಗಳು ತಂಗಿ, ಅದರ ಸುಖ ಸೌಲಭ್ಯಗಳನ್ನು ಅರಿತಿದ್ದಾರೆ. ಅದೇ ರೀತಿ ಜ್ವಾಲಾಮುಖಿಯ ಮನೆ, ಪರ್ವತಾಭಿಮುಖವಾದ 'ಮೌಕ' ಭವನ ಮತ್ತು ಹವಾಯಿ ದ್ವೀಪದ ಹತ್ತಿರ ಸಮುದ್ರಕ್ಕೆ ಅಂಟಿಕೊಂಡಿರುವಂಥ 'ಮಕೈ' ಮನೆ —ಇವೆಲ್ಲವುಗಳ ಸೊಬಗನ್ನು ಸವಿಯದವರೇ ಇಲ್ಲ.

ಆದರೂ ಈ 'ವೈಕಿಕಿ' ಭವನ ಮತ್ತಾವುದಕ್ಕೂ ಕಡಿಮೆಯಿಲ್ಲ. ಸೌಂದರ್ಯದ ಅಚ್ಚುಕಟ್ಟು ಮತ್ತು ಹಣ ವ್ಯಯದ ಮೊತ್ತ ಉಳಿದ ಕಡೆಯಷ್ಟೇ ಆಗಿದೆ.... ಇಬ್ಬರು ಜಪಾನೀ ಆಳುಗಳು 'ಹಿಬಿಸ್ಕಸ್' ಗಿಡವನ್ನು ಕತ್ತರಿಸಿ ಸರಿಮಾಡುತಿದ್ದರು. ಮತ್ತೊಬ್ಬ, 'ಸಿರಿಯಸ್' ಹೂ ಸಾಲನ್ನು ವಿಶಿಷ್ಟರೀತಿಯಲ್ಲಿ ನೋಡಿಕೊಳ್ಳುತಿದ್ದನು; ಏಕೆಂದರೆ ಸಂಜೆ ಕಳೆದು ರಾತ್ರಿಯು ಕಾಲಿಡುತಿತ್ತು, ಸಿರಿಯಸ್ ತನ್ನ ಮೊಗ್ಗಿನ ದಳಗಳನ್ನು ಸಡಲಿಸಿ ಭವ್ಯವಾಗಿ ಅರಳುವುದು ರಾತ್ರಿಯ ಹೊತ್ತಿನಲ್ಲಿಯೇ. ಟೀ ಬಟ್ಟಲುಗಳನ್ನು ತರುತಿದ್ದ ಮನೆಯಾಳು ಕೂಡ ಜಪಾನಿನವನು. ಆತನು ಧರಿಸಿದ್ದ ದಪ್ಪ ಬಟ್ಟೆ ಸ್ವಚ್ಛವಾಗಿತ್ತು. ಅವನನ್ನೇ ಹಿಂಬಾಲಿಸುತ್ತಾ ಜಪಾನೀ ಹುಡುಗಿಯೊಬ್ಬಳು ಓಡಾಡುತಿದ್ದಳು. ತನ್ನ ಜನಾಂಗದ ವಿಶಿಷ್ಟ ಉಡುಪನ್ನು ಹಾಕಿದ್ದ ಆ ಹುಡುಗಿ ಬಣ್ಣದ ಚಿಟ್ಟೆಯಂತೆ ಕಂಡಳು; ಯಜಮಾನಿಯ ಹತ್ತಿರ ಅವಳು ತೋರ್ಪಡಿಸುತಿದ್ದ ಹಾವಭಾವಗಳಂತೂ, ಚಿಟ್ಟೆಯೊಂದು ರೆಕ್ಕೆಬಿಚ್ಚಿ ಮನತಣಿಸುವಂತಿತ್ತು. ಇನ್ನೊಬ್ಬಳು ಕೈ ತುಂಬ ಟರ್ಕಿ ಟವಲುಗಳನ್ನು ಹಿಡಿದು, ಉದ್ಯಾನದಲ್ಲಿ ಇದ್ದ ಸ್ನಾನಗೃಹಗಳ ಕಡೆ ಹೊರಟಿದ್ದಳು; ಈಜು ಉಡುಪನ್ನು ಹಾಕಿಕೊಂಡಿದ್ದ ಸಣ್ಣ ಸಣ್ಣ ಮಕ್ಕಳು ಕೊಳದಿಂದ ಛಂಗನೆ ನೆಗೆದು ಹೊರಬರುತ್ತಿದ್ದರು. ಮೈ ಒರಸಲ್ಪಟ್ಟ ಮಕ್ಕಳು ಸಮುದ್ರ ದಂಡೆಯ ಬಳಿ ಓಡುತ್ತಿದ್ದರು. ಅಲ್ಲಿ ತೆಂಗಿನ ಮರಗಳ ಕೆಳಗೆ ಇಬ್ಬರು ಚೀನೀ ದಾದಿಯರು ಮಕ್ಕಳನ್ನು ತಳ್ಳುಬಂಡಿಯಲ್ಲಿ ಕೂರಿಸುತಿದ್ದರು. ಅವರು ಇನ್ನೂ ಚಿಕ್ಕವಯಸ್ಸಿನ ಸುಂದರ ಹುಡಗಿಯರೆಂದೇ ಹೇಳಬೇಕು. ಚೈನಾ ದೇಶದ ಸೊಗಸಾದ ಬಿಳೀ 'ಯಿಾಶನ್' ಬಟ್ಟೆಯೇ ಅವರ ಮೇಲುಡುಪು; ಗೆರೆ ಗೆರೆಯಾಗಿದ್ದ ಷರಾಯಿಯೂ ಕೂಡ ಚೆನ್ನಾಗಿ ಒಪ್ಪುತಿತ್ತು. ಉದ್ದವಾದ ಕಪ್ಪುಕೂದಲಿನ ಜಡೆ ಬೆನ್ನ ಮೇಲೆ ನಲಿದಾಡುತಿತ್ತು.

ಇವರೆಲ್ಲರೂ—ಅಂದರೆ, ದಾದಿಯರು, ಜವಾನರು ಮತ್ತು ಮೊಮ್ಮಕ್ಕಳು ಮಾರ್ಥ ಸ್ಕಾನ್‌ಡ್ವೆಲ್ಲಳ ಸಂಸಾರಕ್ಕೇ ಸೇರಿದವರು. ಬಿಳಿಯರ ಸಂಪರ್ಕದಿಂದ

ಹುಟ್ಟಿದ್ದರೂ, ಆ ಮೊಮ್ಮಕ್ಕಳು ಶುದ್ಧ ಹವಾಯಿ ಬಣ್ಣವನ್ನು ಹೆಚ್ಚಾಗಿ ಕಳೆದುಕೊಂಡಿರಲಿಲ್ಲ. ತನ್ನದೇ ಆದ ಹವಾಯಿ ಸೂರ್ಯನ ಪ್ರಭಾವವಿರಬೇಕು. ಯಾರು ಯಾರಲ್ಲಿ ಎಷ್ಟೆಷ್ಟರ ಮಟ್ಟಿಗೆ ಬಿಳಿಯರ ರಕ್ತ ಸೇರಿದೆಯೆಂಬುದನ್ನು ಸ್ವಲ್ಪ ಕಷ್ಟಪಟ್ಟರೆ ತಿಳಿದೀತು. ಅಂತೂ ಸ್ವಲ್ಪಮಟ್ಟಿಗಾದರೂ ಪಾಲಿನೇಶಿಯದ ಕಂದು ಬಣ್ಣ ಉಳಿದಿರುವುದು ಖಂಡಿತ. ಅಜ್ಜನಾದ ರಾಸ್ಕೊ ಸ್ಕಾನ್‌ಡ್ವೆಲ್ ಶುದ್ಧವಾದ ಬಿಳಿಯ ರಕ್ತದವನು. ಮಾರ್ಥಳಲ್ಲೂ ಮುಕ್ಕಾಲು ಭಾಗ ಬಿಳಿಯ ಅಂಶ. ಅವರಿಬ್ಬರ ಸಂಪರ್ಕದಿಂದ ಬೆಳೆದ ವಂಶದಲ್ಲಿ ಸಾಕಷ್ಟು ಏರುಪೇರುಗಳು ಇದ್ದೇ ಇವೆ. ಅಂತೂ ಗಂಡು ಹೆಣ್ಣಿನ ಎರಡು ಕಡೆಯವರೂ ಒಳ್ಳೆಯ ವಂಶಕ್ಕೆ ಸೇರಿದವರೆಂದೇ ಹೇಳಬೇಕು ; ಏಕೆಂದರೆ ರಾಸ್ಕೊವಿನ ಮೂಲಪುರುಷರು ನ್ಯೂ ಇಂಗ್ಲೆಂಡಿನ ಪ್ಯೂರಿಟನರು ; ಮಾರ್ಥಳಂತೂ ಹವಾಯಿನ ರಾಜ ವಂಶದವಳು. ಅತಿ ಪ್ರಾಚೀನ ಜನಾಂಗ ಅವಳದು. ಅದರ ವಂಶಾವಳಿಯನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಹಾಡುತಿದ್ದರಂತೆ! ಬರವಣಿಗೆ ಬರುವುದಕ್ಕಿಂತ ಸಾವಿರ ವರ್ಷಗಳ ಹಿಂದೆ ಹಾಡಿದ್ದರ ಆಧಾರವಿದೆ!

ದೂರದಲ್ಲಿ ಯಂತ್ರದ ಬಂಡಿಯೊಂದು ನಿಂತು ಹೆಂಗಸೊಬ್ಬಳನ್ನು ಕೆಳಕ್ಕಿಳಿಸಿತು. ಆಕೆಯ ವಯಸ್ಸು ಹೆಚ್ಚೆಂದರೆ ಅರುವತ್ತಿರಬಹುದೆಂದು ಊಹಿಸಬಹುದು. ಆದರೆ ಪಂಚಾಂಗದ ಪ್ರಕಾರ ಅರವತ್ತೆಂಟು ! ನಲವತ್ತು ವಯಸ್ಸಿನ ಶ್ರೀಮಂತ ಸ್ತ್ರೀಯಂತೆ ಉದ್ಯಾನದಲ್ಲಿ ಹಗುರವಾಗಿ ಹೆಜ್ಜೆ ಹಾಕುತ್ತಾ ನಡೆದು ಬಂದಳು. ಅವಳನ್ನು ಸ್ವಾಗತಿಸಲು ಮಾರ್ಥ ಮೇಲೆದ್ದಳು. ಹವಾಯಿ ಜನರ ಹಾರ್ದಿಕ ಸ್ವಾಗತವೆಂದರೆ ಕೇಳಬೇಕೆ ? ಇಬ್ಬರೂ ಮಿತಿ ಮೀರಿದ ಉತ್ಸಾಹದಿಂದ ಆಲಿಂಗಿಸಿದರು. ತೋಳುಗಳು ಬಳಸಿದವು. ತುಟಿಗೆ ತುಟಿ ತಾಕಿತು. ಮುಖ ಕ್ಷಣ ಕ್ಷಣಕ್ಕೂ ಉಜ್ವಲವಾಯಿತು. ಎರಡು ದೇಹ ಗಳೂ ಅತ್ಯಾನಂದದಲ್ಲಿ ಮುಳುಗಿಹೋದವು. ಇಬ್ಬರೂ ಸೋದರಿಯರು! ಆಗತಾನೆ ಬಂದವಳ ಹೆಸರು 'ಬೆಲ್ಲ'. ತಮ್ಮನ್ನು ತಾವೇ ಹಿಡಿಯಲಾರದವ ರಂತೆ ತೂಗಾಡುತ್ತಿದ್ದರು. ಪರಸ್ಪರ ಯೋಗಕ್ಷೇಮದ ಜೊತೆಗೆ ಅಣ್ಣ, ಅತ್ತೆ, ಸೋದರಮಾವ ಎಲ್ಲರ ಸಮಾಚಾರವನ್ನೂ ವಿಚಾರಿಸಿದ್ದಾಯಿತು. ಆದರೆ ಒಂದು ಉತ್ತರವೂ ಪರಿಪೂರ್ಣವಾಗಿರದೆ ಅಸಂಬದ್ಧವಾಗಿತ್ತೆಂದೇ ಹೇಳಬೇಕು. ಅನೇಕ ವರ್ಷಗಳಿಂದ ನೋಡದೆ ಅಥವಾ ಆಲಿಂಗನ ಮಾಡಿಕೊಳ್ಳದೆ ಇದ್ದುದರ ಪರಿಣಾಮವಿರಬಹುದು. ಆದರೆ ಸತ್ಯಾಂಶ ಹಾಗಿಲ್ಲ; ಏಕೆಂದರೆ ಅವರಿಬ್ಬರೂ ಬೇರೆಯಾಗಿ ಕೇವಲ ಎರಡು ತಿಂಗಳಾಗಿತ್ತಷ್ಟೆ. ಅಂತೂ ಪ್ರಥಮ ಭೇಟಿ

ಯಂತೆಯೇ ರೋಮಾಂಚನಗೊಂಡಿದ್ದರು. ಈಗ ಸ್ವಲ್ಪ ಕಡಿಮೆಯಾಗುತ್ತ ಬಂತು. ಪ್ರೀತಿಯ ತಿಳಿನೀರು ಕಣ್ಣಲ್ಲಿ ಹರಿದು ನಿರ್ಮಲಗೊಳಿಸಿತು. ಟೀ ಕುಡಿಯಲು ಕುಳಿತಾಗ ಇಬ್ಬರೂ ಸಮಸ್ಥಿತಿಗೆ ಬಂದು, ಒಬ್ಬರನ್ನೊಬ್ಬರು ದೃಷ್ಟಿಸಿನೋಡಿದರು. ಇಬ್ಬರಲ್ಲೂ ಕಾಲು ಅಂಶದಷ್ಟು ಹವಾಯಿ ರಕ್ತದ ಒತ್ತಡವನ್ನೇ ಕಾಣಬಹುದು. ಆದ್ದರಿಂದಲೇ ಅವರ ದೇಹಗಳು ಬೆಚ್ಚಗಿದ್ದವು; ಹೃದಯದಲ್ಲಿ ಪ್ರೀತಿ ವಿಶ್ವಾಸಗಳು ಉಕ್ಕೇರುತಿದ್ದವು.

ಬೆಲ್ಲ ಎಷ್ಟು ಮಕ್ಕಳಿಗೆ ದೊಡ್ಡಮ್ಮ! ಅಬ್ಬ, ಆ ಮಕ್ಕಳೆಲ್ಲಾ ಅಲೆ ಅಲೆಯಾಗಿ ಅವಳ ಹತ್ತಿರ ಓಡಿಬಂದವು! ಅಗತಾನೆ ಈಜಿ ಬಂದ ಮಕ್ಕಳು ಕೇಳಬೇಕೆ? ಬೀಚಿನಲ್ಲಿ ಕಾಯುತಿದ್ದ ದಾದಿಯರ ಹತ್ತಿರ ಹೋಗುವುದಕ್ಕಿಂತ ಮುಂಚೆ ಅವರೆಲ್ಲರೂ ಬೆಲ್ಲಳ ಸುತ್ತ ಕುಣಿದಾಡಿದರು. ತೋಳುಗಳಿಂದ ಅವಳನ್ನು ಬಿಗಿಯಾಗಿ ಅಪ್ಪಿಕೊಂಡು ಮುತ್ತಿಟ್ಟರು.

"ಎಷ್ಟೋ ದಿನಗಳಿಂದ ಬೀಚಿಗೆ ಓಡಿಬಿಡಲೇ ಎಂದು ನನಗನ್ನಿಸಿದೆ—ವಾಣಿಜ್ಯ ಮಾರುತ ಬೀಸುವುದೇ ನಿಂತುಹೋಗಿದೆ...." ಎಂದು ಮಾರ್ಥ ವಿವರಿಸಿದಳು.

"ಇಲ್ಲಿಗೆ ನೀನು ಬಂದು ಎರಡು ವಾರವಾಯಿತು. ಅಷ್ಟು ಕಾಲವನ್ನೂ ಇಲ್ಲೇ ಕಳೆದಿರುವಾಗ ಇನ್ನೇಕೆ ಯೋಚನೆ?...." ಎಂದು ಬೆಲ್ಲ ಪ್ರೀತಿಪೂರ್ವಕವಾಗಿ ತಂಗಿಯ ಕಡೆ ನೋಡಿದಳು. ಮತ್ತೆ ಹೇಳಿದಳು: "ನೀನು ಇಲ್ಲಿರುವುದನ್ನು ಸೋದರ ಎಡ್ವರ್ಡ್ ತಿಳಿಸಿದ......ಹಡಗಿನಲ್ಲಿ ಅವನ ಭೇಟಿಯಾಗಿತ್ತು."

"ಎರಡು ವಾರಗಳು ಏನು ಮಹಾ! ಅದೇನು ನನಗೆ ಜಾಸ್ತಿಯಾಗಿ ಕಾಣುವುದಿಲ್ಲ" ಎಂದು ಮಾರ್ಥ ಆಶ್ಚರ್ಯ ಚಕಿತಳಾಗಿ ಹೇಳಿದಳು.

"ಆ್ಯನಿ ಎಲ್ಲಿ? ಮಾರ್ಗರೆಟ್ ಎಲ್ಲಿ? ಒಬ್ಬರೂ ಕಾಣುವುದಿಲ್ಲ" ಎಂದು ಬೆಲ್ಲ ಕೇಳಿದಳು.

ಭಾರಿಯಾಕಾರದ ಭುಜ ಎಗುರಿತು, ಮಾರ್ಥಳಿಗೆ ಕೋಪವಾಗಲೀ ತಿರಸ್ಕಾರವಾಗಲೀ ಇಲ್ಲವೇ ಇಲ್ಲ. ಮದುವೆಯಾಗಿದ್ದರೂ ಮನಬಂದಂತೆ ತನ್ನ ಹೆಣ್ಣುಮಕ್ಕಳು ತಿರುಗುತ್ತಿದ್ದಾರೆಂದು ಅವಳಿಗೆ ಗೊತ್ತು. ಆದರೂ ಮಾತೃ ಹೃದಯ ವಾತ್ಸಲ್ಯದಿಂದ ತುಂಬಿಹೋಗಿ ಎಲ್ಲವನ್ನೂ ಕ್ಷಮಿಸಿಬಿಡುತ್ತಿತ್ತು. ಆದ್ದರಿಂದಲೇ ಆ ದಿನ ಮಾರ್ಗರೆಟ್, ಆ್ಯನಿ ಇಬ್ಬರೂ ತಮ್ಮ ಮಕ್ಕಳನ್ನು ನೋಡಿಕೊಳ್ಳುವ ಭಾರ ಅಜ್ಜಿಗೆ ವಹಿಸಿ, ಎಲ್ಲಿಗೋ ಹೊರಟಿದ್ದರು.

"'ಔಟ್‌ಡೋರ್ ಸರ್ಕಲ್' ಎಂಬ ಸಂಸ್ಥೆ ಈ ದಿನ ಸಭೆ ಸೇರಿದೆ.

' ಕಲಕೊ ' ದಾರಿಯ ಎರಡು ಪಕ್ಕಗಳಲ್ಲೂ ಹಿಬಿಸ್ಕಸ್ ಮತ್ತು ಇತರ ಮರಗಳನ್ನು ನೆಡುತ್ತಾರಂತೆ. ಆ ಸಮಾರಂಭಕ್ಕೆ ಮಾರ್ಗರೆಟ್ ಹೋಗಿದ್ದಾಳೆ. ಇನ್ನು ಆ್ಯನಿ; ಅವಳು ' ಬ್ರಿಟೀಷ್ ರೆಡ್ ಕ್ರಾಸ್ ' ಸಂಸ್ಥೆಗೆ ಹಣ ಶೇಖರಿಸಲು ಹೊರಟಿದ್ದಾಳೆ...." ಎಂದಳು ಮಾರ್ಥ.

ಮತ್ತೆ ಮಾತಿನ ವಿಷಯ ಬೇರೆಯಾಯಿತು. ಬಂಡವಾಳ ಪತ್ರಗಳ ಪ್ರಸ್ತಾಪ ಬಂದಿತು.

"ರಾಸ್ಕೋವಿಗೆ ತುಂಬ ಜಂಭ ಬಂದಿರಬೇಕು...." ಎಂದು ಬೆಲ್ಲ ಹೇಳುತ್ತಿರುವಲ್ಲೇ, ತನ್ನ ತಂಗಿಯ ಕಣ್ಣುಗಳಲ್ಲಿ ಜಂಭದ ಕಿಡಿ ಹೊರಸೂಸಿದ್ದನ್ನು ಕಂಡಳು. "ನಾನು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿದ್ದಾಗ ಹೂಲಾ ಕಂಪೆನಿಯ ಪ್ರಥಮ ಡಿವಿಡೆಂಡಿನ ವಿಷಯ ತಿಳಿಯಿತು. ಬಡ ಅಬ್ಬೀ ಮಕ್ಕಳಿಗೋಸ್ಕರ ನಾನು ಕೂಡ ಸಾವಿರದಷ್ಟು ಪಾಲು ಹಾಕಿದ್ದು ನಿನಗೆ ಜ್ಞಾಪಕವಿರಬೇಕು. ಆಗ ಆದರ ಬೆಲೆ ಎಪ್ಪತ್ತೈದು ಸೆಂಟುಗಳು. ಹತ್ತು ಡಾಲರುಗಳು ಬಂದರೆ ಮಾರಿಬಿಡುತ್ತೇನೆಂದು ಆಗಾಗ ಹೇಳುತ್ತಿದ್ದೆನಲ್ಲವೇ ?"

"ನಿಜ; ಆಗ ಎಲ್ಲರೂ ನಿನ್ನನ್ನು ನೋಡಿ ನಕ್ಕರು. ಏಕೆ? ಪಾಲು ತೆಗೆದುಕೊಂಡ ಪ್ರತಿಯೊಬ್ಬರೂ ಅಪಹಾಸ್ಯಕ್ಕೀಡಾದರು. ಆದರೆ ರಾಸ್ಕೊ ಆಗಲೇ ತಿಳಿದಿದ್ದನು. ಇವತ್ತು ಅದೇ ಪಾಲು ಇಪ್ಪತ್ತು ನಾಲ್ಕಕ್ಕೆ ಮಾರಾಟವಾಗುತ್ತಿದೆ...." ಎಂದು ಮಾರ್ಥ ತಲೆದೂಗಿದಳು.

"ಹಡಗಿನಲ್ಲಿದ್ದಾಗಲೇ ಇಪ್ಪತ್ತರಂತೆ ನನ್ನ ಪಾಲುಗಳನ್ನು ಮಾರಿಬಿಟ್ಟೆ. ' ವೈರ್‌ಲೆಸ್ ' ಮೂಲಕ ವ್ಯವಹಾರ ನಡೆದುಹೋಯಿತು. ಅಬ್ಬಿಯ ಸಂತೋಷ ಹೇಳತೀರದು. ಈಗ ಜೋರಾಗಿ ಬಟ್ಟೆಗಳನ್ನು ತಯಾರಿಸುತ್ತಿದ್ದಾಳೆ. ಮೇ ಮತ್ತು ಟೂಟ್ಸ ಜೊತೆಗೆ ಪ್ಯಾರಿಸ್ಸಿಗೆ ಹೋಗುತ್ತಾಳಂತೆ"

"ಕಾರ್ಲ್ ಏನು ಮಾಡುತ್ತಾನೆ ?"

"ಅವನ ವಿದ್ಯಾಭ್ಯಾಸ ಮುಗಿಯಬೇಕಲ್ಲ—"

"ಹೇಗಿದ್ದರೂ ಅವನು ಈಗಿರುವಂತೆಯೇ ಆಗುತಿದ್ದ. ಅದು ನಿನಗೆ ಗೊತ್ತೇ ಇದೆ...."

ತನ್ನ ಶಾಲಾ ಗೆಳತಿಯ ಮಗನನ್ನು ಕಾಲೇಜುತನಕ ಓದಿಸುವುದರಲ್ಲಿ ಬೆಲ್ಲಳಿಗೆ ಮೊದಲಿಂದಲೂ ಇಷ್ಟವಿತ್ತು. ಅದನ್ನೇ ಮಾರ್ಥ ತಮಾಷೆಮಾಡಿದ್ದು. ಆದರೆ ಬೆಲ್ಲ ಪ್ರಸನ್ನವದನಳಾಗಿಯೇ ಹೇಳಿದಳು :-"ಅವನ ಖರ್ಚನ್ನು ಹೂಲಾ ಕಂಪೆನಿಗೆ ವಹಿಸಿರುವುದು ಚೆನ್ನಾಗಿಯೇ ಇದೆ. ಪಾಲಿನ ಬೆಲೆ ಏರಿದಂತೆ

ಅವನೂ ಏರುವುದರಲ್ಲಿ ತಪ್ಪೇನು ? ಸರಿಯಾಗಿ ಯೋಚಿಸಿದರೆ ರಾಸ್ಕೊವೇ ಇದಕ್ಕೆ ಕಾರಣ, ಏಕೆಂದರೆ ಅವನ ಮಾತಿನ ಮೇಲೆಯೆ ನಾನು ಹೂಲಾ ಪಾಲುಗಳನ್ನು ಕೊಂಡದ್ದು...."

ಲಘುಹಾಸ್ಯದ ಮಾತುಗಳು ಕೊನೆಗೊಂಡ ಮೇಲೆ, ಬೆಲ್ಲ ತನ್ನ ತಂಗಿಯನ್ನೇ ದೃಷ್ಟಿಸಿನೋಡಿದಳು. ಮತ್ತೆ ಸುತ್ತಲೂ ನೋಡಿದಳು. ತಾವು ವಿಶ್ರಾಂತಿ ಪಡೆಯುತ್ತಿದ್ದ ಸ್ಥಳಕ್ಕಿಂತಲೂ ಹೆಚ್ಚಿನ ಸೊಬಗು ದ್ವೀಪದ ಇತರ ಆವರಣಗಳಲ್ಲೂ ಹರಡಿತ್ತು. ಮರಳುಗಾಡಿನ ಓಯಸಿಸ್‌ನಷ್ಟೇ ಆನಂದ ದಾಯಕವಾಗಿತ್ತು. ಅವಳು ಸಂತೋಷದಿಂದ ಶ್ವಾಸವೆಳೆಯುತ್ತಾ, "ನಾವು ನಮ್ಮ ಗಂಡಂದರಿಗೆ ಏನೇನೂ ತಂದುಕೊಟ್ಟಿವೋ, ಅದೆಲ್ಲವನ್ನೂ ಅವರು ಸರಿಯಾಗಿಯೇ ನೋಡಿಕೊಂಡಿದ್ದಾರೆ...." ಎಂದಳು.

"ನಾವುಗಳೂ ಕೂಡ...." ಎಂದು ಮಾರ್ಥ ತಮ್ಮ ತಮ್ಮ ಸುಖ ಜೀವನದ ವ್ಯಾಖ್ಯಾನಮಾಡಲು ಹೊರಟಿದ್ದಳು. ಆದರೆ ಥಟ್ಟನೆ ಹೊಳೆದ ಸಂಶಯದಿಂದ ನಿಲ್ಲಿಸಿಬಿಟ್ಟಳು.

"ನಿಜ; ಬೆಲ್ಲ ಒಬ್ಬಳನ್ನು ಬಿಟ್ಟು...." ಎಂದು ಬೆಲ್ಲಳೇ ತನ್ನ ತಂಗಿಯ ಯೋಚನೆಯನ್ನು ಪೂರ್ಣಗೊಳಿಸಿದಳು. ಅವಳಾಡಿದ ಮಾತು ಮಾರ್ಥಳನ್ನು ಕ್ಷಮಿಸಿಬಿಡುವಂತಿತ್ತು.

ಮಾರ್ಥಳ ಹೃದಯ ಕರಗಿತು. "ನಿಜವಾಗಿಯೂ ಆ ಮದುವೆ ನಡೆದ ಘಳಿಗೆ ತುಂಬ ಕೆಟ್ಟದ್ದಿರಬೇಕು. ನೀನು ಎಷ್ಟು ಚಿಕ್ಕವಳಾಗಿದ್ದಿ. ಆಗಲೇ ನಿನಗೆ ಮದುವೆಮಾಡಿದ್ದು ರಾಬರ್ಟ್ ಮಾವನ ತಪ್ಪು...." ಎಂದು ಮಾರ್ಥ ಮೆಲ್ಲಗೆ ಗೊಣಗಿದಳು.

ಬೆಲ್ಲ ತಲೆದೂಗುತ್ತಾ, "ಆಗ ನನ್ನ ವಯಸ್ಸು ಹತ್ತೊಂಬತ್ತು. ನನಗೆ ಮದುವೆಮಾಡಿಸಿದ ರಾಬರ್ಟ್ ಮಾವ ಎಂದಿಗೂ ತಪ್ಪಿತಸ್ಥನಲ್ಲ. ಹಾಗೆಯೆ ನನ್ನ ಕೈಹಿಡಿದ ಗಂಡನಾದ ಜಾರ್ಜ್ ಕ್ಯಾಸ್ಟ್‌ನರ್ ಕೂಡ ಒಳ್ಳೆಯವನೇ ಆಗಿದ್ದನು. ನೀನೇ ನೋಡಿದ್ದಿ; ಅವನು ಗೋರಿಯಲ್ಲಿದ್ದರೂ ನನಗಾಗಿ ಎಷ್ಟು ಮಾಡಿಟ್ಟಿದ್ದಾನೆ. ರಾಬರ್ಟ್ ಮಾವ ಬುದ್ಧಿವಂತನೇ ಸರಿ; ಏಕೆಂದರೆ ಜಾರ್ಜ್‌ನ ಯೋಗ್ಯತೆಯನ್ನು ಆಗಲೇ ತಿಳಿದಿದ್ದನು. ನಿಜವಾಗಿಯೂ ಜಾರ್ಜ್ ಸಾಮಾನ್ಯನಲ್ಲ. ಅವನಲ್ಲಿ ವಿಪರೀತ ಮುಂದಾಲೋಚನೆಯೂ, ಅದಕ್ಕೆ ತಕ್ಕ ದೃಢತೆಯೂ ಇದ್ದವು. ಐವತ್ತು ವರ್ಷಗಳ ಹಿಂದೆ 'ನಹಲಾ' ನೀರಿನ ಪ್ರಯೋಜನ ಯಾರಿಗೆ ತಾನೆ ಗೊತ್ತಿತ್ತು ? ಒಬ್ಬರಾದರೂ ಆ ಕಡೆಯೇ

ಸುಳಿಯುತ್ತಿರಲಿಲ್ಲ. ಅಂಥಕಾಲದಲ್ಲಿ ಇವನು ಅದರ ಸ್ವಾಮಿತ್ವವನ್ನು ಪಡೆಯಲು ಕಷ್ಟಪಡುತ್ತಿದ್ದನು. ಅದರೂ ಜನ ಹೇಳುತ್ತಿದ್ದುದೇ ಬೇರೆ; ಅವನು ತನ್ನ ದನಕರುಗಳಿಗಾಗಿ ಸಸ್ಯ ಮೊದಲಾದುವನ್ನು ಬೆಳೆಯುವಂಥ ಪ್ರದೇಶವನ್ನು ಕೊಂಡುಕೊಳ್ಳಲು ಒದ್ದಾಡುತ್ತಿದ್ದಾನೆಂದು ತಿಳಿದಿದ್ದರು. ಆದರೆ ಅವನು ಎಣಿಸುತಿದ್ದುದು ನೀರಿನ ಭವಿಷ್ಯ—ಅದರಲ್ಲಿ ಎಷ್ಟರ ಮಟ್ಟಿಗೆ ಜಯಶಾಲಿಯಾದನೆಂದು ನಿನಗೆ ಗೊತ್ತೇ ಇದೆ. ಆಗಿನ ಸಂದರ್ಭದಲ್ಲಿ ನಮ್ಮ ಆದಾಯವನ್ನು ನೆನಸಿಕೊಂಡರೆ ನನಗೇ ನಾಚಿಕೆಯಾಗುತ್ತದೆ. ಏನೇ ಆಗಲಿ, ನನ್ನ ದುಃಖಕ್ಕೆ ಜಾರ್ಜ್ ಮಾತ್ರ ಕಾರಣನಲ್ಲ. ಇಲ್ಲಿಯ ತನಕ ಅವನು ಜೀವಿಸಿದ್ದರೂ, ಅವನ ಜೊತೆ ಸುಖಸಂಸಾರ ಮಾಡುತ್ತಿದ್ದೆ!....ವಿರಸವನ್ನು ತಂದವನು ಅವನಲ್ಲ. ನಾನಂತೂ ಅಲ್ಲ: ಮತ್ತಾರ ಹೆಸರನ್ನು ಸೂಚಿಸುವುದು ? ಒಂದು ರೀತಿಯಲ್ಲಿ ನೋಡಿದರೆ, ಜಾನ್ ಮಾವ ತಪ್ಪಿತಸ್ಥನಾಗುತ್ತಾನೆ!...." ಎಂದು ನಿಧಾನವಾಗಿ ವಿವೇಚಿಸಿದಳು.

"ಜಾನ್ ಮಾವನೇ!....ಒಂದು ಪಕ್ಷ ರಾಬರ್ಟ್ ಹೆಸರು ಹೇಳಿದರೆ ಒಪ್ಪಬಹುದು. ಎಷ್ಟಾದರೂ ಅವನು ತಾನೆ ನಿನ್ನನ್ನು ಜಾರ್ಜಿಗೆ ಗಂಟು ಹಾಕಿದವನು? ಅದರೆ ಜಾನ್ ಮಾವನಿಗೆ ಏನು ಸಂಬಂಧ ?" ಎಂದು ಮಾರ್ಥ ಆಶ್ಚರ್ಯಚಕಿತಳಾದಳು.

" ನಿಜ ; ಇದು ನನ್ನ ಗಂಡನ ಅಥವಾ ಮತ್ತೊಬ್ಬ ವ್ಯಕ್ತಿಯ ಸಮಾಚಾರವಲ್ಲ. ಎಲ್ಲಕ್ಕೂ ಮೂಲ ಆ ಕುದುರೆ! ಅಂದು ನನಗೆ ಕುದುರೆಯ ಅವಶ್ಯಕತೆ ಬಹಳವಾಗಿತ್ತು. ಜಾನ್ ಮಾವನನ್ನು ಕೇಳಿದೆ. ತಕ್ಷಣ ಅವನು ' ಆಗಲಿ ' ಎಂದು ತರಿಸಿಕೊಟ್ಟನು. ಅಲ್ಲಿಂದ ನನ್ನ ಕಥೆ ಪ್ರಾರಂಭವಾಗಿ ವಿರಸದ ಹಾದಿ ಹಿಡಿಯಿತು...." ಎಂದು ಬೆಲ್ಲ, ಜಾನ್ ವಹಿಸಿದ್ದ ಪಾತ್ರವನ್ನು ಸ್ಥಿರಪಡಿಸಿದಳು.

ಅವಳ ಮಾತಿನಲ್ಲಿ ರಹಸ್ಯಾರ್ಥಗಳು ಅಡಕವಾಗಿದ್ದವು. ಕ್ಷಣಕಾಲ ಇಬ್ಬರೂ ಮಾತನಾಡದೆ ಮೌನವಾಗಿದ್ದರು. ಎಲ್ಲೋ ಗದ್ದಲ ಕೇಳಿಸಿತು. ಬೀಚಿನಿಂದ ಮಕ್ಕಳು ಕುಣಿದಾಡುತ್ತ, ಕೂಗಾಡುತ್ತ ಬರುತಿದ್ದರು. ಮಧ್ಯೆ ಮಧ್ಯೆ ಏಶಿಯದ ಯುವತಿಯರು ಸಿಟ್ಟುಗೊಂಡವರಂತೆ ನಟಿಸುತ್ತಾ ಮಕ್ಕಳನ್ನು ಸುಧಾರಿಸುತ್ತಿದ್ದರು; ಮೃದುವಾದ ಕಂಠಗಳಿಂದ ಆಜ್ಞೆಗಳು ಹೊರಬರುತ್ತಿದ್ದವು. ಕೂಗಾಟದ ಶಬ್ದಗಳು ಹತ್ತಿರಕ್ಕೆ ಬರುತಿದ್ದಂತೆ ಮಾರ್ಥಳು ಹಿಂದು ಮುಂದೆ ನೋಡಿದಳು. ಮೈ ನಡುಗುತಿತ್ತು. ತಕ್ಷಣ ಪ್ರತಿಭಟಿಸುವವಳಂತೆ ಎಚ್ಚತ್ತಳು. ಸಾಲು ಸಾಲಾಗಿ ಬಂದುನಿಂತ ಮಕ್ಕಳನ್ನು ' ಹೊರಟು ಹೋಗಿ ' ಎಂದು ಕೈ ಬೀಸಿ ಹೇಳಿದಳು.

"ಮುದ್ದುಮಕ್ಕಳಿರಾ, ದಯವಿಟ್ಟು ಹೊರಡಿ. ದೊಡ್ಡಮ್ಮ ಅಜ್ಜಿಯೊಡನೆ ಮಾತನಾಡಬೇಕಂತೆ. ಗಲಾಟೆಮಾಡಬೇಡಿ...."

ಕಿವಿಗೆ ಆನಂದವಾಗಿದ್ದ ಕೇಚು ಧ್ವನಿಗಳು ಸರ್‍ರನೆ ಹಿಂದಕ್ಕೆ ಸರಿಯಿತು. ಉದ್ಯಾನದಲ್ಲಿ ಆಟವಾಡಲು ಮಕ್ಕಳು ಓಡಿಬಿಟ್ಟರು.

ಮಾರ್ಥಳು ಏಕಾಂತದಲ್ಲಿ ಹೃದಯಬಿಚ್ಚಿದವಳಂತೆ ಕಂಡಳು. ತನ್ನ ಸೋದರಿಯ ಮುಖವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಳು. ಐವತ್ತು ವರ್ಷ ಗಳಿಂದಲೂ ಗುಪ್ತವಾಗಿಯೆ ಇದ್ದ ಖಾಯಿಲೆಯು ತನ್ನ ಸೋದರಿಯ ಮುಖದ ಮೇಲೆ ವಿಪರೀತವಾಗಿ ದುಃಖದ ಗೆರೆಗಳನ್ನು ಗೀಚಿತ್ತು. ವರ್ಷೇ ವರ್ಷೇ ಹೆಚ್ಚುತಿದ್ದುದನ್ನು ಐವತ್ತು ವರ್ಷದಿಂದಲೂ ಮಾರ್ಥ ಗಮನಿಸಿದ್ದಳು; ಇಂದು ಅದು ಜಾಸ್ತಿಯಾಗಿತ್ತು! ಅರ್ಧ ಶತಮಾನದ ಮೌನವನ್ನು ಭೇದಿಸಲು ಮಾರ್ಥಳಿಗೆ ಸಾಕಾಗಿ ಹೋಗಿತ್ತು. ಹವಾಯಿ ಹೃದಯ ಸಂಪೂರ್ಣ ಕರಗಿ ಹೋಗಿ, ಮತ್ತೆ ಗಟ್ಟಿಯಾಗಿತ್ತು.

"ಬೆಲ್ಲ, ನಿನ್ನ ಬಗ್ಗೆ ನಾವು ಆಗಾಗ ಆಶ್ಚರ್ಯಪಟ್ಟಿದ್ದೇವೆ. ನೀನು ಮಾತ್ರ ಏನೂ ಮಾತನಾಡುತ್ತಿರಲಿಲ್ಲ. ನಮಗೆ ಹೇಗೆ ತಿಳಿಯಬೇಕು?"

"ಆದರೆ ನೀನು ಎಂದೂ ಕೇಳೇ ಇಲ್ಲ...." ಎಂದು ಬೆಲ್ಲ ಮೆಲ್ಲಗೆ ಸವಾಲು ಹಾಕಿದಳು.

"ಹೋಗಲಿ ಬಿಡು; ಈಗಲಾದರೂ ನಾನು ಕೇಳುತಿದ್ದೇನೆ. ಹುಡುಗಾಟ ದಿಂದಲೇ ಕಾಲ ಕಳೆದುಹೋಯಿತು. ಈಗ ನಮ್ಮ ಜೀವನದ ಸಂಧ್ಯಾಕಾಲ! ....ಆಡುತ್ತಿರುವ ಆ ಮಕ್ಕಳು, ನನ್ನ ಮೊಮ್ಮಕ್ಕಳೇ ಎಂದು ಜ್ಞಾಪಕಬಂದಾಗ, ಕೆಲವು ವೇಳೆ ನನಗೇ ಭಯಂಕರವಾಗಿ ತೋರುತ್ತದೆ. ಮೊನ್ನೆ ತಾನೆ ಜವಾಬ್ದಾರಿಯಿಲ್ಲದ ಹುಡುಗಿಯಾಗಿ ನಾನು ಕುದುರೆಯ ಮೇಲೆ ಓಡುತಿದ್ದಂತೆ ಭಾಸವಾಗುತ್ತದೆ—ನನ್ನನ್ನು ಹಿಡಿಯುವವರಾರು? ಕೈ, ಕಾಲು, ಹೃದಯ ಎಲ್ಲವೂ ಸ್ವತಂತ್ರವಾಗಿತ್ತು! ತೆರೆನೊರೆಯಲ್ಲೇ ಈಜುತಿದ್ದೆ. ಕಡಲ ಇಳಿತ ದಲ್ಲೇ 'ಒಪಿಹಿಸ್' ಶೇಖರಿಸುತಿದ್ದೆ. ಡಸನ್‌ಗಟ್ಟಲೆ ಪ್ರಣಯಿಗಳನ್ನು ಒಟ್ಟಿಗೆ ಸೇರಿಸಿ ನಗುತಿದ್ದೆ....ಅದೆಲ್ಲವೂ ಮುಗಿಯಿತು. ನಮ್ಮ ಜೀವನದ ಸಂಧ್ಯಾಕಾಲದಲ್ಲಿಯಾದರೂ ಅವುಗಳನ್ನು ಮರೆತುಬಿಡೋಣ. ಆದರೆ ಒಂದು ಮಾತ್ರ ಜ್ಞಾಪಕವಿರಲಿ. ನಮ್ಮಿಬ್ಬರಲ್ಲೂ ಸೋದರೀ ವಾತ್ಸಲ್ಯ ಒಂದು ನಮನೆ ಹರಿಯುತ್ತಿದೆ. ನೀನು ನಾನು ಎಂದೆಂದಿಗೂ ಪ್ರೀತಿಯ ಸೋದರಿಯರು!...."

ಇಬ್ಬರ ಕಣ್ಣುಗಳೂ ತೇವವಾದುವು. ಮಾತನಾಡಲು ಹೊರಟ ಬೆಲ್ಲ ನಡುಗುತ್ತಾ ಇದ್ದಳು.

ಮಾರ್ಥಳೇ ಮುಂದುವರಿದು, "ಇದಕ್ಕೆಲ್ಲ ಮೂಲ ಜಾರ್ಜ್ ಕ್ಯಾಸ್ಟ್ನರ್ ಎಂದೇ ನಾವು ಯೋಚಿಸಿದ್ದೆವು. ಆ ಊಹೆಗೆ ಸೂಕ್ತ ಸಮರ್ಥನೆಯೂ ಇತ್ತು. ಎಷ್ಟಾದರೂ ಅವನು ಶೀತಲ ಮನುಷ್ಯ. ನೀನಾದರೋ ಬಿಸಿರಕ್ತದ ಹವಾಯಿ ಯವಳು. ಅವನು ಕ್ರೂರವಾಗಿ ವರ್ತಿಸಿರಬೇಕು. ಸೋದರ ವಾಲ್ ಕಾಟ್ ಹೇಳುತ್ತಲೇ ಇದ್ದ: ಅವನಿಂದ ನಿನಗೆ ಏಟುಗಳೇ ಬಿದ್ದಿರಬಹುದೆಂದು...."

ಬೆಲ್ಲ ಮಧ್ಯೆ ಬಾಯಿಹಾಕಿದಳು: "ಇಲ್ಲ! ಇಲ್ಲ! ಜಾರ್ಜ್ ಕ್ಯಾಸ್ಟ್ನರ್ ಎಂದಿಗೂ ಪಶುಪ್ರಾಯನಾಗಿರಲಿಲ್ಲ. ಅವನು ಸ್ವಲ್ಪ ಮಟ್ಟಿಗಾದರೂ ಮೃಗ ಸದೃಶನಾಗಿದ್ದರೆ ಚೆನ್ನಾಗಿತ್ತು! ಎಂದು ನಾನು ಅನೇಕ ವೇಳೆ ಇಚ್ಛಿಸಿದ್ದೆ. ಒಂದು ದಿನವೂ ಕೈ ಮುಟ್ಟಲಿಲ್ಲ ಅಥವಾ ತನ್ನ ಕೈ ಎತ್ತಿ ಹೊಡೆಯಲೂ ಇಲ್ಲ. ನನ್ನ ವಿಷಯದಲ್ಲಿ ಜೋರಾಗಿ ಮಾತನಾಡಿದ್ದೇ ಅಪರೂಪ....ನೀನು ನಂಬು ತ್ತೀಯೋ ಇಲ್ಲವೋ? ಈಗ ದಯವಿಟ್ಟು ನನ್ನ ಮಾತನ್ನಾದರೂ ನಂಬು.... ಜಾರ್ಜ್ ಮತ್ತು ನಾನು ಒಟ್ಟಿಗೆ ಸೇರಿ ದೊಡ್ಡ ದೊಡ್ಡ ಮಾತುಗಳನ್ನು ಆಡಿ ಕೊಂಡ ಪ್ರಸಂಗವೇ ಇಲ್ಲ. ಇನ್ನು ಪರಸ್ಪರ ವಿರೋಧಕ್ಕೆ ಅವಕಾಶ ಹೇಗೆ ತಾನೆ ಉಂಟಾದೀತು? ಆದರೆ ಒಂದು ಮಾತ್ರ ನಿಜ; ಅವನ ಮನೆ—ಅಂದರೆ ನಹಾಲದಲ್ಲಿದ್ದ ನಮ್ಮ ಮನೆ—ಸದಾ ಮೋಡ ಕವಿದಂತೆ ನಿರುತ್ಸಾಹಕರ ವಾಗಿತ್ತು. ಸುತ್ತಲಿನ ಆವರಣವೆಲ್ಲ ತಣ್ಣಗಿತ್ತು; ಸ್ಫೂರ್ತಿಯೇ ಇಲ್ಲ. ಆದರೆ ನನ್ನ ರಕ್ತಗತ ಸ್ವಭಾವ ಅದಕ್ಕೆ ತೀರ ವಿರುದ್ಧವಾಗಿತ್ತು. ಭೂಮಿ ಮತ್ತು ಸೂರ್ಯನ ನೇರ ಸಂಪರ್ಕದಿಂದ ಹುಟ್ಟಿದವರಂತೆ ನನ್ನ ದೇಹ ಉಜ್ವಲ ವಾಗಿತ್ತು....ಸನ್ನಿವೇಶಕ್ಕೆ ತಕ್ಕಂತೆ ನನ್ನ ಗಂಡನೂ ಹೊಂದಿಕೊಂಡಿದ್ದನು. ಅವನಲ್ಲಿ ಉಲ್ಲಾಸದ ಸಣ್ಣ ಕಣವೂ ಇರಲಿಲ್ಲ....ಮಾರ್ಥ, ನೀನೇ ಅವನನ್ನು ನೋಡಿದ್ದಿ; ಎಷ್ಟು ಮಂಕು ಕವಿದಿತ್ತು. ನಾವು ಶಾಲೆಯಲ್ಲಿ ನೋಡುತಿದ್ದ ಮಾಸಲು ಬಣ್ಣದ ಎಮರ್ಸನ್ ಭಾವ ಚಿತ್ರದಂತೆ ಇದ್ದನಲ್ಲವೇ? ನಿಜ ವಾಗಿಯೂ ಅವನ ಚರ್ಮ ಬೂದುಬಣ್ಣಕ್ಕೆ ತಿರುಗಿತ್ತು. ಸದಾಕಾಲ ಕುದುರೆಯ ಮೇಲೇರಿ, ಬಿಸಿಲ ತಾಪವನ್ನು ಲಕ್ಷಿಸದೆ, ವಿವಿಧ ಹವಾಮಾನದ ಪ್ರದೇಶ ಗಳಲ್ಲಿ ಪ್ರಯಾಣ ಮಾಡುತಿದ್ದರೂ, ಅವನ ಬಣ್ಣ ಮಾತ್ರ ಹದವಾಗಲಿಲ್ಲ! ಅವನ ಬಹಿರಂಗ, ಅಂತರಂಗ ಎರಡೂ ಒಂದೇ ಆಗಿತ್ತು....

"ರಾಬರ್ಟ್ ಮಾವ ನನಗೆ ಮದುವೆ ನಿಶ್ಚಯ ಮಾಡಿದಾಗ, ನನ್ನ ವಯಸ್ಸು ಹತ್ತೊಂಬತ್ತು. ಆಗ ಏನು ತಾನೆ ಗೊತ್ತಿತ್ತು? ಹವಾಯಿ ದ್ವೀಪದ ಆಸ್ತಿ ಪಾಸ್ತಿಗಳು ಬಿಳಿಯರ ವಶವಾಗಲು ಆಗಲೆ ಪ್ರಾರಂಭವಾಗಿದ್ದನ್ನು

ರಾಬರ್ಟ್ ಸೂಚಿಸಿ ಹೇಳಿದನು: ನೋಡು, ಹವಾಯಿ ಮುಖಂಡರು ತಾವಾಗಿಯೆ ತಮ್ಮ ಪ್ರದೇಶಗಳನ್ನು ಬಿಟ್ಟುಕೊಡುತ್ತಿದ್ದಾರೆ. ಹವಾಯಿಯ ನಾಯಕಿಯರೇ ಬಿಳಿಯರನ್ನು ಮದುವೆ ಮಾಡಿಕೊಂಡಿದ್ದಾರೆ; ಅಂದಮೇಲೆ ಅವರ ಗಂಡಂದಿರ ಕೈಗಳಿಗೆ ಈ ನಾಡಿನ ಅಧಿಕಾರ ಕ್ರಮ ಕ್ರಮವಾಗಿ ಸೇರುತ್ತದೆ. ಬಿಳಿಯರ ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿ ಕಾರ್ಯಗಳು ಬೇಕಾದಷ್ಟು ನಡೆದು, ಉತ್ಪತ್ತಿ ವಿಪರೀತವಾಗಿ ಹೆಚ್ಚತೊಡಗಿವೆ. ಅಜ್ಜ ರೋಜರ್ ವಿಲ್ಸನ್ ಅಜ್ಜಿಯ ಭೂಮಿಯಷ್ಟು ಬಡ ಪ್ರದೇಶಗಳನ್ನೇ ವಿಸ್ತರಿಸಿ, ಅಲ್ಲೇ ದೊಡ್ಡದಾದ ಕಿಲೋಹನ ದನಗಾವಲನ್ನು ಕಟ್ಟಿಲ್ಲವೇ ?—"

"ಆದರೂ ಅದು ಪಾರ್ಕರ್ ಕ್ಷೇತ್ರಕ್ಕಿಂತ ಎರಡನೆಯದೇ," ಎಂದು ಮಾರ್ಥ ಜಂಭದಿಂದ ಮಾತಿನ ಓಟವನ್ನು ನಿಲ್ಲಿಸಿದಳು.

ಬೆಲ್ಲ ಮತ್ತೆ ಪ್ರಾರಂಭಿಸಿದಳು: "ರಾಬರ್ಟ್ ಹೇಳುತ್ತಿದ್ದಂತೆ—ನಮ್ಮ ತಂದೆಗೆ ಅಜ್ಜನಷ್ಟು ಮುಂದಾಲೋಚನೆಯಿರಲಿಲ್ಲ; ಏಕೆಂದರೆ ಪಾರ್ಕರ್ ಕ್ಷೇತ್ರದ ಅರ್ಧ ಭಾಗವನ್ನು ಕಿಲೋಹನಕ್ಕೆ ಸೇರಿಸಲು ಒಳ್ಳೆಯ ಅವಕಾಶವಿತ್ತು; ಆಗ ಕಿಲೋಹನವೇ ಎಲ್ಲಕ್ಕಿಂತಲೂ ದೊಡ್ಡದಾಗುತ್ತಿತ್ತು....ಐವತ್ತು ವರ್ಷಗಳ ಹಿಂದೆ ಹವಾಯಿಯ ಭವಿಷ್ಯ ಸಕ್ಕರೆಯಲ್ಲೇ ಅಡಗಿದೆ ಎಂದು ನಾನು ಹೇಳಿದ್ದೆ. ಈಗ ಎಲ್ಲವೂ ಸತ್ಯವಾಗಿದೆ. ನೋಡು ಬೆಲ್ಲ, ಜಾರ್ಜ್ ಕ್ಯಾಸ್ಟನರ್ ಎಂಬ ಯುವಕ ಬಿಳಿಯನಿದ್ದಾನೆ. ಅವನ ದೃಷ್ಟಿ ಬಹು ವರ್ಷಗಳ ಆಚೋತ್ತರಗಳನ್ನು ನೋಡಬಲ್ಲುದು. ಈಗ ನೀನೆ ಯೋಚಿಸು; ನಮ್ಮಲ್ಲಿ ಹುಡುಗಿಯರ ಸಂಖ್ಯೆಯೇ ಜಾಸ್ತಿ. ಕಿಲೋಹನ ಪ್ರದೇಶಗಳು ಹುಡುಗರ ಹಕ್ಕಿಗೆ ಸೇರತಕ್ಕವು. ಆದ್ದರಿಂದ ನೀನು ಜಾರ್ಜ್‌ನನ್ನು ಮದುವೆಯಾದರೆ, ನಿನ್ನ ಭವಿಷ್ಯ ಉಜ್ವಲವಾಗಿದೆ....

"ರಾಬರ್ಟ್ ಆ ರೀತಿ ಉಪದೇಶಿಸಿದನು. ನನಗೆ ಆಗ ಕೇವಲ ಹತ್ತೊಂಬತ್ತು ವರ್ಷ. ಆಗತಾನೆ 'ರಾಯಲ್ ಛೀಫ್ ಸ್ಕೂಲಿ'ನಿಂದ ಬಂದಿದ್ದೆ. ಈಗಿನ ಹುಡುಗಿಯರಂತೆ ನಾವುಗಳು 'ಸ್ಟೇಟ್ಸ್‌ಗೆ' ವಿಧ್ಯಾಭ್ಯಾಸಕ್ಕಾಗಿ ಹೋದವರಲ್ಲ. 'ಮೇನ್ ಲ್ಯಾಂಡ್'ನಲ್ಲಿ ಪ್ರಪ್ರಥಮವಾಗಿ ವಿದ್ಯೆ ಕಲಿತವರಲ್ಲಿ ನೀನೂ ಒಬ್ಬಳಲ್ಲವೇ, ಮಾರ್ಥ? ಆದರೆ ನಾನು ಮಾತ್ರ ಇದ್ದಲ್ಲಿಯೇ ಎಲ್ಲ ಮುಗಿಸಿದವಳು. ಹಾಗಿರುವಲ್ಲಿ ಪ್ರೇಮದ ವಿಷಯವಾಗಲೀ, ಪ್ರೇಮಿಗಳ ವರ್ತನೆಯಾಗಲಿ ಹೇಗೆ ತಾನೆ ನನಗೆ ತಿಳಿದೀತು? ಇನ್ನು ಮದುವೆಯೆಂದರೆ ಸ್ಪಷ್ಟವಾಗಿ ಏನೂ ಗೊತ್ತಾಗುತ್ತಿರಲಿಲ್ಲ. ಇಷ್ಟು ನನ್ನ ಮನಸ್ಸಿಗೆ ಹೊಳೆದಿತ್ತು: ಎಲ್ಲ

ಹೆಂಗಸರೂ ಒಂದಲ್ಲ ಒಂದು ದಿನ ಮದುವೆಯಾಗಿದ್ದಾರೆ. ಅಂದ ಮೇಲೆ ಅದೊಂದು ಅವರ ಜೀವನದ ಹವ್ಯಾಸವಿರಬೇಕು. ಹಾಗೆಯೇ ಜಾರ್ಜ್‌ನನ್ನು ಮದುವೆಯಾಗುವುದು ನನ್ನ ಜೀವನದ ಹವ್ಯಾಸ. ರಾಬರ್ಟ್ ಮಾವ ಬುದ್ಧಿಯಿಲ್ಲದೆ ಉಪದೇಶಮಾಡುವುದಿಲ್ಲ. ಅದೂ ಅಲ್ಲದೆ ರಾಬರ್ಟ್ ದೊಡ್ಡ ಬುದ್ಧಿವಂತನೆಂದು ನನಗೆ ಗೊತ್ತಿದೆ.........ಅಂತೂ ನನ್ನ ಗಂಡನನ್ನೇ ಹಿಂಬಾಲಿಸಿ, ನಹಾಲದ ಬೇಸರದ ಹಾದಿಯನ್ನು ಹಿಡಿದೆ.

"ನಿನಗೆ ಜ್ಞಾಪಕವಿದೆ. ಅಲ್ಲಿ ಮರಗಳೇ ಇರಲಿಲ್ಲ; ಅಲ್ಲವೇ? ಬರಿಯ ಹುಲ್ಲುಗಾವಲು; ಹುಲ್ಲು ಸುರಳಿ ಸುರುಳಿಯಾಗಿ ಹಬ್ಬಿತ್ತು. ಹಿಂದೆ ನೋಡಿದರೆ, ಎತ್ತರದ ಪರ್ವತಗಳು. ಕೆಳಗಡೆ ಸಮುದ್ರ. ಗಾಳಿಯಂತೂ ಜೋರಾಗಿ ಬೀಸುತ್ತಿತ್ತು. ವೈಮಿಯ, ನಹಾಲ ಗಾಳಿಗಳ ಜೊತೆಗೆ ಕೊನಾ ಗಾಳಿಯೂ ಬೀಸುತಿತ್ತು. ಅದರಿಂದ ನನಗೇನೂ ತೊಂದರೆಯಿರಲಿಲ್ಲ. ನಾನು ಆ ಕಡೆ ಲಕ್ಷ್ಯವನ್ನೇ ಬೀರಲಿಲ್ಲ. ಕಿಲೋಹನ ಸ್ಥಳದಲ್ಲಿ ಎಷ್ಟೋ ಬಾರಿ ಅಂಥ ಗಾಳಿಗಳು ಬೀಸಿದ್ದವು. ಆಗ ನಾನೇನು ಬೇಸರಗೊಂಡಿರಲಿಲ್ಲ. ಆದರೆ ನಹಾಲ ಏಕೊ ಮಂಕುಕವಿದಿತ್ತು. ಅಲ್ಲಿದ್ದುದು ನನ್ನ ಜಾಯಮಾನಕ್ಕೇ ಒಗ್ಗದ ವಾತಾವರಣ. ಅದಕ್ಕೆ ತಕ್ಕಂತೆ ಗಂಡನಾದ ಜಾರ್ಜ್ ಕೂಡ ವಿಪರೀತ ನಿಸ್ಪೃಹನಾಗಿದ್ದನು. ಇನ್ನು ಯಾರ ಬಳಿ ಹೋಗಲಿ? ಆನಂದದ ಬುಗ್ಗೆ ಎಲ್ಲೂ ಕಾಣಲಿಲ್ಲ. ನಮ್ಮಿಬ್ಬರನ್ನು ಬಿಟ್ಟರೆ ಯಾರ ಸುಳಿವೂ ಇಲ್ಲ. ಅವನಿಗೇನೋ ಕೈ ತುಂಬ ಕೆಲಸವಿತ್ತು. ನ್ಯಾಟ್ಲೆಂಡಿಗೆ ಹೊರಟಿದ್ದ ಗ್ಲೆನ್ಸ್ ಅವರಿಗಾಗಿ ನಹಾಲದ ಆಡಳಿತವನ್ನು ಜಾರ್ಜ್ ನೋಡಿಕೊಳ್ಳುತ್ತಿದ್ದನು. ವರ್ಷಕ್ಕೆ ಸಾವಿರದ ಎಂಟುನೂರು ಬರುತ್ತಿತ್ತು. ಜೊತೆಗೆ ಬೀಫ್ ಮಾಂಸ ಅಷ್ಟಿಷ್ಟು ಸಿಗುತಿತ್ತು. ಓಡಾಡಲು ಕುದುರೆಗಳಿದ್ದುವು. ದೊಡ್ಡ ದನಗಾವಲು ಮತ್ತು ಅದಕ್ಕೆ ತಕ್ಕ ವ್ಯವಸ್ಥೆಯೂ ಇವನ ವಶದಲ್ಲೇ ಇದ್ದವು—"

"ಆಗಿನ ಕಾಲಕ್ಕೆ ಜಾರ್ಜ್ ಪಡೆಯುತಿದ್ದ ಸಂಬಳ ಜಾಸ್ತಿಯೆಂದೇ ಹೇಳಬೇಕು...." ಎಂದಳು ಮಾರ್ಥ.

"ಆದರೆ ಜಾರ್ಜ್ ಕ್ಯಾಸ್ಟನರ್‌ನಂಥ ಮನುಷ್ಯನಿಗೆ ಮತ್ತು ಆತನ ಸೇವಾ ಧುರೀಣತೆಗೆ ಆ ಸಂಬಳ ಬಹಳ ಕಡಿಮೆ ..." ಎಂದು ಬೆಲ್ಲ ತನ್ನ ಗಂಡನ ಪರ ವಾದಿಸುತ್ತಾ ಮುಂದುವರಿದಳು. "ಅವನೊಡನೆ ನಾನು ಮೂರು ವರ್ಷಗಳು ಜೀವನ ಮಾಡಿದ್ದೇನೆ. ಏನೇ ಅಗಲಿ ಪ್ರತಿದಿನವೂ ಬೆಳಗಿನ ಝಾವ ನಾಲ್ಕೂವರೆ ಘಂಟೆಗೆ ಎದ್ದುಬಿಡುತಿದ್ದನು. ತನ್ನ ಮಾಲೀ

ಕರಿಗೆ ಅವನು ತುಂಬ ವಿಧೇಯನಾಗಿದ್ದನು. ಲೆಕ್ಕಾಚಾರದಲ್ಲಂತೂ ಒಂದು ಪೆನ್ನಿಯೂ ವ್ಯತ್ಯಾಸಬರುತ್ತಿರಲಿಲ್ಲ. ತನ್ನದಾಗಿದ್ದ ಕಾಲ, ಶಕ್ತಿ ಎಲ್ಲವನ್ನೂ ಮಾಲೀಕರಲ್ಲಿ ಅರ್ಪಿಸಿದಂತಿತ್ತು. ಬಹುಶಃ ಅದರಿಂದಲೇ ನಮ್ಮ ಜೀವನದಲ್ಲಿ ನಿರಾಶೆ ಹುಟ್ಟಿರಬೇಕು. ಆದರೆ ಮಾರ್ಥ, ಅವನೇನೂ ದುಂದುವೆಚ್ಚ ಮಾಡಿದವನಲ್ಲ; ಇಲ್ಲಿ ಕೇಳು. ತನಗೆ ಬರುತಿದ್ದ ಸಾವಿರದ ಏಂಟುನೂರಿನಲ್ಲಿ ಪ್ರತಿ ವರ್ಷವೂ ಸಾವಿರದ ಆರುನೂರನ್ನು ಬೇರೆಯ ಕಡೆ ತೆಗೆದಿಡುತ್ತಿದ್ದನು. ನೀನೇ ಯೋಚನೆಮಾಡು! ವರ್ಷಕ್ಕೆ ಇನ್ನೂರು; ಅಷ್ಟರಲ್ಲೇ ನಾವಿಬ್ಬರೂ ಜೀವಿಸಿದ್ದು. ಅದೃಷ್ಟವಷಾತ್ ಅವನು ಕುಡಿಯುವ ಅಥವಾ ಸಿಗರೇಟು ಸೇದುವ ಹವ್ಯಾಸಕ್ಕೆ ಬೀಳಲಿಲ್ಲ.. ಉಡುಪುಗಳನ್ನು ಕೊಳ್ಳಲು ಸಾಧ್ಯವೇ? ನಾನೇ ಹೊಲಿಯುತ್ತಿದ್ದೆ.....ನಿನಗೆ ಊಹಿಸುವುದೂ ಅಸಾಧ್ಯವೆ? ಇರಲಿ. ದನಕಾಯುವ ಹುಡುಗರು ನೌದೆ ಒಡೆಯುತ್ತಿದ್ದಾಗ ಅವರಿಗೆ ಕಾಣದಂತೆ ನನ್ನ ಕೆಲಸ ಮಾಡಿಕೊಳ್ಳುತಿದ್ದೆ; ಬೇಯಿಸಿ ಅಡಿಗೆಮಾಡುವುದು, ನೆಲ ತಿಕ್ಕುವುದು—"

"ಸಾಕು, ಸಾಕು. ಹುಟ್ಟಿದಾಗಿನಿಂದ ಕೆಲಸವೆಂದರೇ ತಿಳಿಯದ ನಿನಗೆ ಇದೆಲ್ಲಿ ಗಂಟುಬಿತ್ತು! ಮಾತೆತ್ತಿದರೆ ಜವಾನರು ಓಡಿಬರುತಿದ್ದುದು ಮಾತ್ರ ನಿನಗೆ ಗೊತ್ತಿತ್ತು! ಅಷ್ಟೇಕೆ? ಕಿಲೋಹನದಲ್ಲಿ ದೊಡ್ಡ ಸೈನ್ಯವೇ ಕೈ ಕೆಳಗೆ ಇದ್ದಂತಿತ್ತು ..." ಎಂದು ಮಾರ್ಥ ಕನಿಕರಪಟ್ಟಳು.

"ಅಯ್ಯೊ, ನಾನು ನರಳಿದ್ದರಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಹೇಳಿದ್ದೇನೆ! ಅಷ್ಟರಲ್ಲೇ ನಿನಗೆ ಬೇಸರವಾಯಿತು. ಇನ್ನೂ ಸ್ವಲ್ಪ ಕೇಳು. ಒಂದು ಪೌಂಡು ಕಾಫಿಯನ್ನು ಎಷ್ಟು ದಿನಗಳ ಮಟ್ಟಿಗೆ ಉಪಯೋಗಿಸಬೇಕಾಗಿತ್ತು; ಅದೂ ಬಲಾತ್ಕಾರವಾಗಿ! ಹಳೆಯ ಪೊರಕೆ ಸಂಪೂರ್ಣ ನಾಶವಾಗುವ ತನಕ ಹೊಸದು ಬರುತ್ತಿರಲಿಲ್ಲ! ಆ ಫ್ರೆಂಚ್ ಬೀಫ್! ಕೆಡದಂತೆ ಇಡುವುದಕ್ಕಾಗಿ ಉದ್ದುದ್ದವಾಗಿ ಸೀಳಿ ಬಿಸಿಲಲ್ಲಿ ಒಣಗಿಸುತಿದ್ದೆ; ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಯಾವಾಗಲೂ ಅದೇ! ಮೊದಲೂಟದ ಸಂಭ್ರಮವೇ ಇಲ್ಲ; ಅಂಬಲಿಯೂ ದುರ್ಲಭವಾಗಿತ್ತು...."

ಅವಳು ಥಟ್ಟನೆದ್ದು ಹತ್ತಾರು ಹೆಜ್ಜೆ ಮುಂದಕ್ಕೆ ಹೊರಟಳು. ಬಣ್ಣಬಣ್ಣದ ಕಲ್ಲುಗಳನ್ನು ನೋಡುತ್ತಾ ಸುಮ್ಮನೆ ನಿಂತು ಬಿಟ್ಟಳು. ಮನಸ್ಸಿನ ಉದ್ವೇಗ ಕಡಿಮೆಯಾಗಲು ಸ್ವಲ್ಪಕಾಲ ಹಿಡಿಯಿತು. ಹಿಂತಿರುಗಿ ಬಂದು ಆಸನದಲ್ಲಿ ಕುಳಿತಾಗ ಸೊಗಸಾಗಿ ಕಂಡಳು. ಎದೆಯ ಭಾಗವನ್ನು ಎತ್ತಿಕಟ್ಟಿದ್ದಳು. ಎಷ್ಟೇ ಕಷ್ಟಪಟ್ಟಿದ್ದರೂ ಹವಾಯಿ ಹೆಂಗಸುತನ ಮಾತ್ರ ಅವಳನ್ನು

ಬಿಗಿಹಿಡಿದಿತ್ತು. ಆದರೂ ಅವಳಲ್ಲಿ ಬಿಳಿಯರ ಅಂಶವನ್ನು ಪ್ರತಿಬಿಂಬಿಸಲು ಅವಳ ಚರ್ಮವೇ ಸಾಕ್ಷಿ; ನೆಯ್ದ ಬಟ್ಟೆಯಂತೆ ರಂಗು ರಂಗಾಗಿತ್ತು. ಸಣ್ಣ ಬಾಯಿಯ ಸುತ್ತಲೂ ಮೃದುವಾಗಿ ನೇವರಿಸಿದ್ದ ಗೆರೆಗಳು ಏನನ್ನೋ ಸೂಚಿಸು ವಂತಿದ್ದುವು; ಅರುವತ್ತೆಂಟು ವರ್ಷಗಳಾದ ಮೇಲೆ ಮುತ್ತಿನ ಸವಿಯನ್ನು ನೆನಸಿಕೊಂಡು ಹಾಡುತ್ತಿರಬಹುದು. ಒಟ್ಟಿನಲ್ಲಿ ಆ ಭಂಗಿ ಮನಮೋಹಕ ವಾಗಿತ್ತು. ಬಿಳಿಯರ ಉತ್ಸಾಹೀ ರಕ್ತವನ್ನು ಚಿಮ್ಮುತ್ತಾ ಬರುವ ಹಳೆಯ ಕಾಲದ ಹವಾಯಿ ನಾಯಕಿಯಂತೆ ಕಂಡಳು. ಸೋದರಿ ಮಾರ್ಥಳಿಗಿಂತ ಇವಳು ಎತ್ತರವಾಗಿದ್ದಳು; ರಾಣಿಯಲ್ಲಿರುವಂಥ ಠೀವಿಯಿತ್ತು.

"ನಿನಗೆ ತಿಳಿದಿರಬಹುದು, ನಾವು ಬಡತನದ ಉಣಿಸಿನವರೆಂದು ಪ್ರಸಿದ್ಧ ರಾಗಿದ್ದೆವು...." ಬೆಲ್ಲ ಸಾಕಷ್ಟು ಹಗುರವಾಗಿ ನಕ್ಕಳು. "ನಹಾಲದ ಅಕ್ಕ ಪಕ್ಕದಲ್ಲಿ ಮತ್ತೊಂದು ಮನೆಯಿರಲಿಲ್ಲ; ಎಷ್ಟೋ ಮೈಲಿಗಳು ಹೋಗಬೇಕಾ ಗಿತ್ತು. ಪ್ರಯಾಣದಲ್ಲಿ ತಡವಾದ ಅಥವಾ ಬಿರುಗಾಳಿ ಮಳೆಯ ದೆಸೆಯಿಂದ ಪ್ರಯಾಣವನ್ನು ಮುಂದುವರಿಸಲಾಗದ ಜನ ಇದ್ದಕ್ಕಿದ್ದಂತೆ ನಮ್ಮಲ್ಲಿ ಇಳಿದುಬಿಡುತ್ತಿದ್ದರು. ಎಷ್ಟೋ ರಾತ್ರಿಗಳು ನಮ್ಮ ಪಾಡುಬೇಡ. ಆಗಿನ ಕಾಲದ ವನಗಾವಲುಗಳಲ್ಲಿ ಲೆಕ್ಕವಿಲ್ಲದ ಹಾಗೆ ನಡೆಯುತ್ತಿದ್ದ ಖರ್ಚು ನಿನಗೆ ಗೊತ್ತಿದೆ. ಆದರೆ ನಾವು ಆ ರೀತಿ ಮಾಡಲು ಸಾಧ್ಯವೇ? ಸರಿ; ನಾವು ಎಲ್ಲರಿಗೂ ಹಗೆಪಾಟಲು! 'ಅವರು ನಕ್ಕರೆ ನಮಗೇನಂತೆ?' ಎನ್ನುತ್ತಿದ್ದ ಜಾರ್ಜ್; 'ಅವರು ಇವತ್ತು ಈ ಘಳಿಗೆಯಲ್ಲಿ ಮಾತ್ರ ಜೀವಿಸುವವರು. ಈಗಿನಿಂದ ಇಪ್ಪತ್ತು ವರ್ಷಗಳ ಲೆಕ್ಕ ಹಾಕು; ಆಗ ನಮ್ಮ ಸರದಿ. ಬೆಲ್ಲ, ಹೆದರಬೇಡ. ಅವರು ಎಲ್ಲಿದ್ದಾರೋ ಅಲ್ಲಿಯೇ ಇರುತ್ತಾರೆ; ನಮ್ಮ ಕೈಯಿಂದ ಹೊಟ್ಟೆತುಂಬಿಸಿಕೊಳ್ಳುವ ಕಾಲ ಬರುತ್ತದೆ. ಅವರ ಅವಶ್ಯಕತೆ ಯನ್ನು ಪೂರೈಸಲು, ನಾವು ಆಹಾರವನ್ನು ನೀಡಲೇಬೇಕಾಗುತ್ತದೆ. ಆಗ ಅವರಿಗೆ ಚೆನ್ನಾಗಿಯೆ ಸತ್ಕಾರ ಮಾಡೋಣ! ಬೆಲ್ಲ, ಹೇಗಿದ್ದರೂ ನಾವು ಶ್ರೀಮಂತರಾಗಿರುತ್ತೇವೆ; ಎಷ್ಟರ ಮಟ್ಟಿಗೆ ಎಂದು ಹೇಳಲು ನನಗೇ ಹೆದರಿಕೆಯಾಗುತ್ತದೆ. ಆದರೆ ನನ್ನ ಕಾರ್ಯದಲ್ಲಿ ನನಗೆ ಸಂಪೂರ್ಣ ಭರವಸೆ ಯಿದೆ; ಹಾಗೆಯೆ ನೀನು ಕೂಡ ನನ್ನಲ್ಲಿ ನಂಬಿಕೆಯಿಡಬೇಕು....' ಹೀಗೆಲ್ಲಾ ಹೇಳುತ್ತಿದ್ದನು, ಮಾರ್ಥ........

"ಜಾರ್ಜ್ ಹೇಳಿದ್ದು ನಿಜ. ಇಪ್ಪತ್ತು ವರ್ಷಗಳ ನಂತರ—ಪಾಪ; ಅಲ್ಲಿಯತನಕ ಅವನು ಬದುಕಲೇ ಇಲ್ಲ—ನನ್ನ ವರಮಾನ ತಿಂಗಳಿಗೆ ಒಂದು

ಸಾವಿರವಾಗಿತ್ತು. ಅಬ್ಬ! ಈಗ ಎಷ್ಟಾಗಿದೆಯೋ ನನಗೇ ಗೊತ್ತಿಲ್ಲ. ಆದರೆ ಆಗಿನ ವಯಸ್ಸು ಹತ್ತೊಂಬತ್ತು. ನನ್ನ ಮನಸ್ಸು ಸ್ಥಿಮಿತಕ್ಕೇ ಬರುತ್ತಿರಲಿಲ್ಲ. ಸುಮ್ಮನೆ ಜಾರ್ಜ್‌ನನ್ನು ಪೀಡಿಸುತಿದ್ದೆ: 'ಈಗ! ಈಗ! ಈಗ ಜೀವಿಸೋಣ. ಇಪ್ಪತ್ತು ವರ್ಷಗಳಾದ ಮೇಲೆ ನಾವು ಇರುತ್ತೇವೆಯೋ ಇಲ್ಲವೋ!.... ಕಸಗುಡಿಸುವ ಹೊಸ ಪೊರಕೆ ಈಗಲೇ ಬೇಕಾಗಿದೆ. ಮೂರನೆ ದರ್ಜೆಯ ಕಾಫಿ ಪುಡಿಯನ್ನಾದರೂ ತನ್ನಿ; ಪೌಂಡಿಗೆ ಎರಡು ಸೆಂಟು ಜಾಸ್ತಿಯಷ್ಟೆ. ಉಪಯೋಗಿಸುತ್ತಿರುವ ಹಿಟ್ಟು ವಾಕರಿಕೆ ಬರಿಸುವಂತಿದೆ! ಇದಕ್ಕಿಂತಲಾದರೂ ಅದು ಮೇಲಲ್ಲವೇ? ಈಗಲಾದರೂ ಮೊಟ್ಟೆಯನ್ನು ತುಪ್ಪದಲ್ಲೇಕೆ ಕರಿಯಬಾರದು? ಕಡೆಯಪಕ್ಷ ಒಂದಾದರೂ ಒಳ್ಳೆಯ ಟೇಬಲ್ ಕ್ಲಾತ್ ಬೇಡವೇ? ನಮ್ಮ ಬಟ್ಟೆಯೋ! ಚಾಪೆಯೋ! ಹರಿದುಹೋದ ಚಾಪೆಯ ಮೇಲೆ ಅತಿಥಿಯನ್ನು ಕೂಡಿಸಲು ನನಗೇ ನಾಚಿಕೆಯಾಗುತ್ತದೆ; ಅಪರೂಪವಾಗಿ ಬರುವವರಿಗೆ ಎಂಥ ಮರ್ಯಾದೆ!'

"'ಸ್ವಲ್ಪ ಸಮಾಧಾನ ತಂದುಕೊ, ಬೆಲ್ಲ' ಎಂದು ಅವನು ಉತ್ತರ ಹೇಳುತ್ತಿದ್ದನು. 'ಇಷ್ಟರಲ್ಲೇ, ಕೆಲವು ವರ್ಷಗಳಲ್ಲೇ, ನೀನೇ ನೋಡುತ್ತೀಯೆ. ಇಂದು ನಮ್ಮ ಟೇಬಲ್ಲಿನ ಹತ್ತಿರ ಕುಳಿತುಕೊಳ್ಳಲು ಅಥವಾ ಚಾಪೆಯ ಮೇಲೆ ಮಲಗಲು ಹಾಸ್ಯಮಾಡುವವರಲ್ಲಿ ಕೆಲವರಾದರೂ ಅಂದು ಇರುತ್ತಾರೆ; ನಮ್ಮ ಆಹ್ವಾನವೇ ದೊಡ್ಡದೆಂದು ಬಾಯಿಬಿಡುತ್ತಾರೆ. ಹೋದ ವರ್ಷ ಸತ್ತುಹೋದ ಸ್ಟೀವನ್ಸ್ ಜ್ಞಾಪಕವಿದೆಯೇ?—ಇರುವ ತನಕ ಚನ್ನಾಗಿ ಉಡಾಯಿಸಿಬಿಟ್ಟ; ಎಲ್ಲರಿಗೂ ಅವನು ಸ್ನೇಹಿತನೇ! ಆದರೆ ತನಗೆ ತಾನೆ ಕೈಕೊಟ್ಟ! ಕೊಹಾಲದ ಜನ ಅವನನ್ನು ಗೋರಿಮಾಡಬೇಕಾಯಿತು; ಏಕೆಂದರೆ ಸಾಯುವಾಗ ಅವನಲ್ಲಿ ಒಂದು ಕಾಸೂ ಇರಲಿಲ್ಲ; ಸುತ್ತಲೂ ಸಾಲ. ಇತರರೂ ಅದೇ ದಾರಿಯನ್ನು ಹಿಡಿಯುವುದು ಕಾದುನೋಡಬೇಕು. ನಿನ್ನ ಸೋದರ ಹಾಲ್ ಕೂಡ ಅಷ್ಟೆ; ಈಗಿರುವಂತೆ ಇನ್ನು ಐದುವರ್ಷಗಳೂ ನಡೆಯುವುದಿಲ್ಲ. ಈಗಲೇ ಸೋದರ ಮಾವಂದಿರ ಎದೆಯನ್ನು ಕೆರೆಯುತ್ತಿದ್ದಾನೆ .... ಮತ್ತೆ ಲಿಲೋಲಿಲೊ ರಾಜಕುಮಾರ. ನನ್ನ ಎದುರಿಗೆ ಥಳಕುಮಾಡುತಿದ್ದಾನೆ. ಅವನ ಹಿಂದೆ ಐವತ್ತು ಜೋರಾದ ಕುದುರೆ ಸವಾರರಿದ್ದಾರೆ. ಅವರೆಲ್ಲರೂ ಕಂಠಪೂರ್ತಿ ಕುಡಿಯುವ 'ಕನಕ' ಜನಾಂಗದವರು. ಕಷ್ಟಪಟ್ಟು ದುಡಿಯುವುದನ್ನು ಬಿಟ್ಟು, ತಮ್ಮ ಭವಿಷ್ಯತ್ತನ್ನು ಹಾಳುಮಾಡಿಕೊಳ್ಳುತಿದ್ದಾರೆ; ಏಕೆಂದರೆ, ಅವರು ತಿಳಿದಿರುವಂತೆ ಲೀಲೋಲಿಲೊ ಎಂದಿಗೂ ಹವಾಯಿ ರಾಜನಾಗುವುದಿಲ್ಲ. ಅಷ್ಟೇಕೆ, ಅವನು

ಅಲ್ಲಿಯ ತನಕ ಬದುಕಲಿ, ನೋಡೋಣ.'

"ಜಾರ್ಜ್ ಸತ್ಯದ ಮಾತನ್ನೇ ಆಡಿದನು. ಸೋದರ ಹಾಲ್ ಸತ್ತು ಹೋದ. ಲಿಲೋಲಿಲೊ ರಾಜಕುಮಾರನೂ ಅದೇ ಹಾದಿ ಹಿಡಿದ. ಆದರೆ ಜಾಜ್ ಹೇಳಿದ್ದು ಸಂಪೂರ್ಣ ಸತ್ಯವಾಗಲಿಲ್ಲ—ಅವನೇನೊ ಒಂದು ದಿನವೂ ಕುಡಿಯಲಿಲ್ಲ ಅಥವಾ ಸಿಗರೇಟು ಸೇದಲಿಲ್ಲ; ತೋಳ ಶಕ್ತಿಗೆ ಎಲ್ಲಿ ಕುಂದು ಬರುವುದೋ ಎಂಬ ಭಯದಿಂದ ಒಂದು ಸಾರಿಯೂ ಆಲಿಂಗನ ಮಾಡಿಕೊಳ್ಳ ಲಿಲ್ಲ; ತುಟಿಗೆ ತುಟಿ ತಾಗಿಸುವುದೂ ಕೂಡ ಒಂದು ಸೆಕೆಂಡು ಮಾತ್ರ! ಮುತ್ತಾಡುವುದೆಂದರೆ ಅವನಿಗೆ ಮನಸ್ಸೇ ಬಾರದು; ಸೀಮೆಎಣ್ಣೆ ಬುಡ್ಡಿ ಮಂಕಾಗುವ ತನಕ ಮಲಗಿರುವುದು ಮತ್ತು ಕೋಳಿ ಕೂಗುವ ಮುನ್ನ ಎದ್ದು ಬಿಡುವುದು ಅವನ ಸ್ವಭಾವ; ಎಂದಿಗೂ ಸಾವಿನ ಯೋಚನೆಯನ್ನೇ ಮಾಡಿ ದವನಲ್ಲ! ಅಂಥವನು ಹಾಲ್, ಲಿಲೋಲಿಲೊ ಇವರಿಗಿಂತಲೂ ಬಹು ಬೇಗ ಸತ್ತುಹೋದನು!...

"ಇಷ್ಟು ಬೇಗ ಕಥೆ ಮುಗಿಯಲಿಲ್ಲ.... ಜಾರ್ಜ್ ಇದ್ದಾಗ, ನಾನು ಬೇಸರ ದಿಂದಲೇ ಕಾಲ ತಳ್ಳುತಿದ್ದೆ. 'ಆತುರ ಬೇಡ ಬೆಲ್ಲ' ಎಂದು ರಾಬರ್ಟ್ ಮಾವ ಹೇಳುತ್ತಲೇ ಇದ್ದನು. 'ಜಾರ್ಜ್ ಕ್ಯಾಸ್ಟನರ್ ಮುಂದೆ ಬರುವ ಮನುಷ್ಯ. ನಿನಗೆ ಒಳ್ಳೆಯವನನ್ನೇ ಗಂಟು ಹಾಕಿದ್ದೇನೆ. ಇಂದು ನೀನು ಕಷ್ಟಪಡುವುದ ರಿಂದಲೇ ಮುಂದೆ ಸೊಗಸಾದ ನಾಡೊಂದು ಕಾದಿದೆ. ಹವಾಯಿಯನ್ನು ಹವಾಯಿಗಳೇ ಆಳಬೇಕೆಂದು ನಿಯಮವಿಲ್ಲ. ಅದರ ಆಸ್ತಿಪಾಸ್ತಿಗಳು ಏನೇನೊ ಆಗಿ ಕೈಜಾರಿ ಬೀಳುತ್ತಿವೆ. ಹಾಗೆಯೇ ಆಡಳಿತ ಸೂತ್ರವೂ ಕಡಿಮಹೋಗುವುದರಲ್ಲಿ ಸಂಶಯವಿಲ್ಲ. ರಾಜಕೀಯದಲ್ಲಿ ಪ್ರಭಾವ ಬೀರುವ ಜನ ನಾಡನ್ನು ಆಕ್ರಮಿಸಬಲ್ಲರು. ಈಗ ಸಂದಿಗ್ಧ ಪರಿಸ್ಥಿತಿ; ಎಷ್ಟೋ ಬದಲಾ ವಣೆಗಳೂ ಕ್ರಾಂತಿಗಳೂ ನಡೆಯಬಹುದು. ಎಂಥ ಸ್ವರೂಪವನ್ನು ತಾಳ ಬಹುದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಇಷ್ಟು ಮಾತ್ರ ಹೇಳ ಬಹುದು: ಕಡೆಗೆ ನಾಡು ಮತ್ತು ಅದರ ಅಧಿಕಾರ ಬಿಳಿಯ ಜನಕ್ಕೆ ಸೇರ ತಕ್ಕದ್ದು. ಆ ದಿವಸ ನೀನು ತಾನೆ ಹವಾಯಿಯ 'ಮೊದಲ ಹೆಂಗಸು?' ಏಕೆಂದರೆ ಜಾರ್ಜ್ ಆಗ ಹವಾಯಿಯ ಆಡಳಿತವನ್ನು ನಡೆಸುವ ಪ್ರಥಮ ಪ್ರಜೆ ಯಾಗಿರುತ್ತಾನೆ! ಈ ಭವಿಷ್ಯ ಸುಳ್ಳಾಗುವುದಿಲ್ಲ; ಪುಸ್ತಕದಲ್ಲಿ ಬರೆದಿಡ ಬಹುದು. ಸಾಮಾನ್ಯ ಜನಾಂಗದೊಡನೆ ತಿಕ್ಕಾಟಮಾಡುವ ಬಿಳಿಯರು ಏನಾಗಬಲ್ಲರು ಎಂಬ ಅಂಶ ಚರಿತ್ರೆಯಿಂದಲೇ ಸ್ಪಷ್ಟವಿದೆ. ಈ ವಿಷಯದಲ್ಲಿ

ನಾನು ಅಧಿಕಾರಿಯುತವಾಗಿ ಮಾತನಾಡಬಲ್ಲೆ ; ಏಕೆಂದರೆ ನನ್ನಲ್ಲಿ ಹವಾಯಿ ಮತ್ತು ಬಿಳಿಯ ರಕ್ತ ಎರಡೂ ಒಂದೇ ಪ್ರಮಾಣದಲ್ಲಿ ಸೇರಿವೆ. ಬೆಲ್ಲ, ಎಷ್ಟಾದರೂ ನಾನು ನಿನ್ನ ಮಾವ ರಾಬರ್ಟ್. ಸಮಾಧಾನವಿರಲಿ, ಬೆಲ್ಲ, ಸಮಾಧಾನವಿರಲಿ.'

"'ಪ್ರಿಯ ಬೆಲ್ಲ,' ಎಂದು ಜಾನ್ ಮಾವ ನನ್ನನ್ನು ಕರೆಯುತ್ತಿದ್ದ. ನನ್ನ ಬಗ್ಗೆ ಅವನ ಹೃದಯದಲ್ಲಿ ಕನಿಕರವಿತ್ತು. ಅದೃಷ್ಟವಶಾತ್, ಅವನು ಮಾತ್ರ ಎಂದಿಗೂ ನನ್ನನ್ನು ಸಮಾಧಾನವಾಗಿರು ಎಂದು ಹೇಳಿದವನೇ ಅಲ್ಲ. ಅತಿ ಬುದ್ಧಿವಂತನಾದ ಅವನಿಗೆ ಗೊತ್ತಿತ್ತು. ಅವನು ರಾಬರ್ಟ್ ಮಾವ, ಜಾರ್ಜ್ ಕ್ಯಾಸ್ಟನರ್ ಇಬ್ಬರಿಗಿಂತಲೂ ಬುದ್ಧಿವಂತ! ಏಕೆಂದರೆ ಅವನಿಗೆ ಮನಸ್ಸಿನ 'ಬಿಸಿ' ತಿಳಿದಿತ್ತು, ಎಷ್ಟಾದರೂ ಮನುಷ್ಯನಲ್ಲವೇ? ರಾಬರ್ಟ್ ಮತ್ತು ಜಾರ್ಜ್‌ರಂತೆ ಹೃದಯಾಂತರಾಳದ ಭಾವಗಳನ್ನು ಬದಿಗೊತ್ತಿ ಹಣಕ್ಕಾಗಿ ಹೊಡೆದಾಡುವವನಲ್ಲ ; ಎದೆ ಹಾರುವಂತೆ ತೀಡುತಿದ್ದ ಹೃದಯದ ಬಡಿತವನ್ನು ಲೆಕ್ಕಹಾಕುವುದು ಬಿಟ್ಟು ಒಣ ಲೆಡ್ಜರುಗಳನ್ನು ಬರೆಯುತ್ತಿರಲಿಲ್ಲ ; ಆಲಿಂಗನ, ಕಣ್ಣಿನ ಮೋಹ, ಮಾತಿನ ಮಾಧುರ್ಯ, ಸ್ಪರ್ಶದ ದಿವ್ಯಾನುಭವ—ಇವುಗಳನ್ನೊಳಗೊಂಡ ಮುದ್ದಾಟಗಳನ್ನು ನೆನಸಿಕೊಳ್ಳುವುದು ಬಿಟ್ಟು ಬರಿಯ ಅಂಕಿಗಳನ್ನು ಕೂಡಿ ಕೂಡಿ ನಾಕಾಗುತ್ತಿರಲಿಲ್ಲ....

"'ಪ್ರಿಯ ಬೆಲ್ಲ,' ಎಂದು ಜಾನ್ ಮಾವ ಕರೆಯುತ್ತಲೇ ಇದ್ದ. ಪಾಪ ; ಅವನು ನಯೊಮಿ ರಾಜಕುಮಾರಿಯನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಿದ್ದ ಎಂಬುದನ್ನು ನೀನು ಕೇಳಿರಬೇಕು. ಅವನು ನಿಜವಾದ ಪ್ರೇಮಿ. ಇಡೀ ಜೀವಮಾನದಲ್ಲಿ ಅವನು ಪ್ರೇಮಿಸಿರುವುದು ಒಂದು ಸಾರಿ ಮಾತ್ರ. ಅವಳು ಸತ್ತಮೇಲೆ ಜನ ಅವನನ್ನು ವಿಚಿತ್ರವಾಗಿ ಕಂಡರು. ನಿಜ ; ಅವನು ಹುಚ್ಚನಂತಿದ್ದನು. ಕಾರಣ, ಪ್ರೇಮಿಸಿದ್ದ ಒಬ್ಬಳನ್ನೇ, ಇರಲಿ ಇಲ್ಲದಿರಲಿ ಯಾವಾಗಲೂ ಒಬ್ಬಳನ್ನೇ. ಅವನು ಸತ್ತಾಗಲೇ ನಾವು ಕಿಲೋಹನದ ಕೊಠಡಿಯನ್ನು ಪ್ರವೇಶಿಸಿದ್ದು ; ತನ್ನ ಪ್ರೇಯಸಿಯನ್ನು ಪವಿತ್ರ ಭಾವದಿಂದ ಪೂಜಿಸುತ್ತಿದ್ದ ಬಗೆ ಆಶ್ಚರ್ಯಕರವಾಗಿತ್ತು. ಅವಳಿಗಾಗಿ ಅವನು ಮಾಡಿಟ್ಟ ಸ್ಮಾರಕ ನಿನಗೆ ಜ್ಞಾಪಕವಿರಬೇಕು. 'ಪ್ರಿಯ ಬೆಲ್ಲ'—ಎಂದು ಮಾತ್ರ ನನ್ನನ್ನು ಕರೆಯುತ್ತಿದ್ದನು. ಆ ಎರಡು ಪದಗಳಲ್ಲಿ ಅವನ ಅವ್ಯಕ್ತ ನೋವು ಹೊರಬರುತ್ತಿದ್ದುದು ನನಗೊಬ್ಬಳಿಗೆ ಗೊತ್ತಿತ್ತು.

"ಸರಿ ; ಆಗ ಹತ್ತೊಂಬತ್ತು ವರ್ಷ. ಮುಕ್ಕಾಲು ಭಾಗದಷ್ಟು ಬಿಳಿಯರ

ರಕ್ತ ಓಡಾಡುತಿದ್ದರೂ, ಹವಾಯಿಯ ಅಂಶ ಮಾತ್ರ ಬಿಸಿಯಾಗಿತ್ತು. ನನಗೆ ಏನು ತಾನೆ ಗೊತ್ತಿತು? ಕಿಲೋಹನದಲ್ಲಿ ಬಾಲ್ಯದ ವೈಭವ; ಇಲ್ಲವೇ 'ರಾಯಲ್ ಚೀಫ್ ಸ್ಕೂಲ್'ನಲ್ಲಿ ಓದಿದ ಹೊನಲೂಲು ವಿದ್ಯಾಭ್ಯಾಸ; ಅಷ್ಟೇ ಹಿಂದಿನ ನೆನಪು. ಮತ್ತೆ ಎದುರಿಗೆ ಕಾಣುತಿದ್ದವರು ನನ್ನ ಗಂಡ ಮತ್ತು ಮಕ್ಕಳಿಲ್ಲದ ಇಬ್ಬರು ಮಾವಂದಿರು. ಅನುದ್ವೇಗದಿಂದ ಮಿತಜೀವನ ನಡೆಸುತಿದ್ದ ನನ್ನ ಗಂಡ ಸುಮ್ಮನಿರದೆ ಬೋಧನೆ ಮಾಡುತಿದ್ದನು. ಅದು ಎಷ್ಟು ಉತ್ಸಾಹಭಂಗವಾಗಿತ್ತು! ಮಾವಂದಿರಲ್ಲಿ ಒಬ್ಬನದಂತೂ ಪ್ರೀತಿಶೂನ್ಯ ದೃಷ್ಟಿ; ಮತ್ತೊಬ್ಬನ ಹೃದಯ ಒಡೆದಿತ್ತು! ಸತ್ತುಹೋದ ರಾಜಕುಮಾರಿಯ ಕನಸನ್ನೇ ಯಾವಾಗಲೂ ಕಾಣುತಿದ್ದನು.

"ಆ ಮನೆಯ ಬಗ್ಗೆ ಯೋಚಿಸುವುದಕ್ಕೂ ಭಯವಾಗುತ್ತದೆ! ಸದಾ ನಗುತ್ತಾ ಆರಾಮ ಜೀವನ ನಡೆಸಿದವಳಿಗೆ ಎಂಥ ಗತಿ? ಕಿಲೋಹನ, ಪಾರ್ಕರ್ ಅಥವಾ ಪೂವಾದಲ್ಲಿದ್ದ ಮನೆಗಳಿಗೆ, ನಹಾಲದ ಮಂಕು ಮನೆಗೂ ಎಲ್ಲಿಯ ಸಂಬಂಧ? ಆಗಿನ ಕಾಲದಲ್ಲಿ ನಾವು ವಾಸಿಸುತ್ತಿದ್ದ ಜಹಗೀರು ಎಷ್ಟು ವಿಶಾಲವಾಗಿತ್ತೆಂದು ನಿನಗೆ ನೆನಪಿರಬೇಕು....ನನ್ನಲ್ಲಿದ್ದ ಒಂದೇ ಒಂದು ಹೊಲಿಗೆ ಯಂತ್ರದ ಅವಸ್ಥೆಯನ್ನು ನೋಡಿದ್ದರೆ ನೀನು ಏನನ್ನುತ್ತಿದ್ದೆಯೋ? ಅದನ್ನು ಓಬೀರಾಯನ ಕಾಲದ ಪಾದ್ರಿಗಳು ತಂದಿರಬೇಕು. ಅದು ಎಷ್ಟು ಸಣ್ಣಗೆ ಹಗುರವಾಗಿ ಇತ್ತೆಂದರೆ ಮುಟ್ಟಿದರೆ ಅಲ್ಲಾಡುತಿತ್ತು!

"ರಾಬರ್ಟ್ ಮತ್ತು ಜಾನ್ ಇಬ್ಬರೂ ಪ್ರತ್ಯೇಕವಾಗಿ ನನ್ನ ಗಂಡನಿಗೆ ಮದುವೆಯ ಸಮಯದಲ್ಲಿ ಐದು ಸಾವಿರ ಡಾಲರುಗಳನ್ನು ಕೊಟ್ಟಿದ್ದರು. ಅದು ಗುಟ್ಟಾಗಿಯೆ ಇರಬೇಕೆಂದು ಅವನು ಕೇಳಿಕೊಂಡಿದ್ದನು. ನಮ್ಮ ನಾಲ್ವರಿಗೆ ಮಾತ್ರ ಗೊತ್ತಿತ್ತು. ಹೆಚ್ಚು ಖರ್ಚಾಗದಂತೆ 'ಹೊಲಕು' ಬಟ್ಟೆಗಳನ್ನೇ ಆ ಕಚಡ ಯಂತ್ರದಲ್ಲಿ ನಾನು ಹೊಲಿಯಬೇಕಾಗಿತ್ತು; ಆದರೆ ಅವನು ಮಾತ್ರ ದುಡ್ಡು ತೆಗೆದುಕೊಂಡು ಹೊರಟಿದ್ದನು. ಅವನೇನೂ ಷೋಕಿ ಮಾಡಲಿಲ್ಲ, ಆ ದುಡ್ಡಿನಲ್ಲಿ ಭೂಮಿಯನ್ನು—ನಹಾಲದ ಮೇಲ್ಭಾಗ ನಿನಗೆ ಗೊತ್ತುಂಟು—ಸ್ವಲ್ಪ ಸ್ವಲ್ಪವಾಗಿ ಕೊಳ್ಳುತ್ತಾಬಂದನು. ಪ್ರತಿನಾರಿಯೂ ಕಷ್ಟಬಿದ್ದು ಚೌಕಾಶಿಮಾಡುತಿದ್ದನು. ಅವನ ಮುಖವಂತೂ ದಾರಿದ್ರ್ಯದ ಪ್ರತಿಬಿಂಬವಾಗಿತ್ತು. ಇವತ್ತು ನಹಾಲದ ನೀರುಹಳ್ಳವೊಂದರಿಂದಲೇ ನನಗೆ ವರ್ಷಕ್ಕೆ ನಲವತ್ತು ಸಾವಿರ ಬರುತ್ತಿದೆ!

"ಆದರೆ ಆಗ ಏನು ಬೆಲೆಯಿತ್ತು? ನಾನಂತೂ ಉಪವಾಸ ಮಾಡಿ

ದ್ದೇನೆ.....ಹುಚ್ಚನಂತಾದರೂ ಒಂದು ಸಾರಿ ಅವನು ತನ್ನ ತೋಳುಗಳ ಮಧ್ಯ ದಲ್ಲಿ ನನ್ನನ್ನು ಸೇರಿಸಿಕೊಂಡು ಅಪ್ಪಳಿಸಿದ್ದರೆ! ಒಂದು ಸಮಯದಲ್ಲಾದರೂ ವ್ಯಾಪಾರದ ಭರಾಟೆಯನ್ನು ಬಿಟ್ಟು, ಅಥವಾ, ತನ್ನ ಸಾಹುಕಾರರಲ್ಲಿ ನೆಟ್ಟಿದ್ದ ನಿಷ್ಠೆಯನ್ನ ಸಡಿಲಿಸಿ, ಐದು ನಿಮಿಷಗಳ ಮಟ್ಟಿಗೆ ನನ್ನೊಡನೆ ಕಾಲಕಳೆ ದಿದ್ದರೆ!—ಎಲ್ಲವೂ ಕನಸಾಗಿತ್ತು. ಕೆಲವು ವೇಳೆ ಅರಚಿಬಿಡುವಷ್ಟು ಯಾತನೆ ಯಾಗುತಿತ್ತು. ಬಿಸಿ ಬಿಸಿ ಅಂಬಲಿಯನ್ನು ಅವನ ಮುಖಕ್ಕೆ ಎರಚಿಬಿಡಲೇ ಎಂದು ಎಷ್ಟೋ ಬಾರಿ ಯೋಚಿಸಿದ್ದೆ. ಹೊಲಿಗೆಯ ಯಂತ್ರವನ್ನು ನೆಲಕ್ಕೆ ಜಾಡಿಸಿ ಪುಡಿಪುಡಿಮಾಡಿ, ಅದರ ಮೇಲೆಯೆ ಕುಣಿಕುಣಿದಾಡುವಷ್ಟು ರೋಷ ವೇರಿತ್ತು. ಹೇಗಾದರೂ ಮಾಡಿ ಅವನು ನನ್ನ ಮೇಲೆ ಬೀಳುವಂತೆ ಮಾಡ ಬೇಕು! ಕೋಪಗೊಂಡರೂ ಚಿಂತೆಯಿಲ್ಲ; ಮನುಷ್ಯನಾದರೆ ಸಾಕು! ಅದೂ ಬೇಡ; ಪ್ರಾಣಿಯಂತಾದರೂ ನನ್ನ ಕಡೆ ನೋಡಲಿ! ಮಂಕು ಕವಿದಂತೆ ಜಡವಾಗಿ ಬಿದ್ದಿರುವ ಈ ಅರ್ಥಂಬರ್ಥ ದೇವಾಂಶನಲ್ಲಿ ಏನನ್ನಾದರೂ ತುಂಬ ಬೇಕು!.... ಹೀಗೆ ಓಡಿತ್ತು ನನ್ನ ಮನಸ್ಸು...."

ಹಿಂದಿನ ನೆನಪುಗಳನ್ನು ಮೆಲಕುಹಾಕುವುದರಲ್ಲಿ ಅವಳಿಗೆ ಸಂತೋಷ ವಾಗಿರಬೇಕು. ತಕ್ಷಣ ನಕ್ಕಳು. ಜೋಲುಮುಖಿಯಾಗಿದ್ದವಳು ಹಸನ್ಮುಖಿ ಯಾದಳು.

"ನನ್ನ ಮನಸ್ಸು ಆ ರೀತಿ ಓಡುತಿದ್ದಾಗ, ಅವನು ನನ್ನನ್ನೇ ದಿಟ್ಟಿಸಿ ನೋಡುತಿದ್ದ. ಆತುರದಿಂದ ನಾಡಿ ಹಿಡಿದು ಪರೀಕ್ಷಿಸುತ್ತಿದ್ದ. ನಾಲಿಗೆ ಯನ್ನು ಚಾಚಿಸುತ್ತಿದ್ದ. ತೀವ್ರವಾಗಿ ಆಲೋಚಿಸುತ್ತಾ ಇದ್ದರೂ, ಎಣ್ಣೆಯ ಔಷಧಿಯನ್ನು ನನ್ನ ಬಾಯಿಗೆ ಸುರಿಯುತಿದ್ದನು. ಸ್ಟೌವ್ ಹತ್ತಿರವಿಟ್ಟು ವೈಬೆಚ್ಚಗೆ ಮಾಡಿಕೊಳ್ಳುವಂತೆ ಹೇಳಿ, ಮಲಗಿಸಿಬಿಡುತ್ತಿದ್ದನು. ಬೆಳಗಾಗು ವುದರೊಳಗೆ ಸರಿಹೋಗುವೆಯೆಂಬ ಆಶ್ವಾಸನೆಯನ್ನು ಬೇರೆ ನೀಡುತಿದ್ದ. ಆದಷ್ಟು ಬೇಗ ಮಲಗಬೇಕು! ಎಂಟು ಘಂಟೆ ಆಯಿತೆಂದರೆ ತೀರಿತು; ಸೀಮೆ. ಯೆಣ್ಣೆ ಉಳಿಸಬೇಕಲ್ಲ! ಒಂದು ದಿನವಾದರೂ ನಹಾಲದ ದೊಡ್ಡ ಮೇಜದ ಮೇಲೆ ಎಷ್ಟು ಸಾರಿ ಸಂತರ್ಪಣೆ ನಡೆದಿಲ್ಲ? ಅವೆಲ್ಲವೂ ಜ್ಞಾಪಕಕ್ಕೆ ಬರುತಿತ್ತು ನಾನು ಜಾರ್ಜ್‌ನನ್ನು ಕಾಣುತಿದ್ದುದು ರಾತ್ರಿಊಟದ ಹೊತ್ತಿಗೆ. ಊಟ ವಾದ ಮೇಲೆ ದೀಪದ ಹತ್ತಿರ ಕುಳಿತು, ಸಾಲತಂದಿದ್ದ ಹಳೆಯ ಪತ್ರಿಕೆ ಗಳನ್ನು ಅವನು ಓದುತಿದ್ದನು. ಸುಮಾರು ಒಂದು ಘಂಟೆಯ ಕಾಲ ಏನು ಓದುತ್ತಿದ್ದನೊ ದೇವರಿಗೇ ಗೊತ್ತು: ಆ ಸಮಯದಲ್ಲೇ ನಾನು ದೀಪದ ಹಿಂದೆ

ಕುಳಿತು, ಅವನ ಕಾಲುಚೀಲ ಮತ್ತು ಇತರ ಒಳಉಡುಪುಗಳನ್ನು ರಫ್ ಮಾಡುತಿದ್ದೆ. ಹಿಂಜುಹೋಗುವ ಕಡಿಮೆ ಬೆಲೆಯ ಬಟ್ಟೆಗಳನ್ನೇ ಅವನು ಧರಿಸುತಿದನು. ಅವನು ಮಲಗಿದನೆಂದರೆ ನಾನು ಹಾಸಿಗೆ ಹಿಡಿಯುತಿದ್ದೆ; ಏಕೆಂದರೆ ದೀಪ ಆರಿಸಿಬಿಡುತ್ತಿದ್ದನು. ಪ್ರತಿದಿನವೂ ಮಲಗುವ ಮುಂಚೆ ಅವನ ಅಭ್ಯಾಸ ಒಂದೇ ರೀತಿಯಾಗಿತ್ತು : ಗಡಿಯಾರಕ್ಕೆ ಕೀಲುಕೊಡುವುದು, ದಿನದ ಹವಾಮಾನವನ್ನು ಡೈರಿಯಲ್ಲಿ ಬರೆದು ಕೊಳ್ಳುವುದು ಮತ್ತು ಬಲ ಗಾಲಿನ ಷೂ ತೆಗೆಯುವುದು, ಆಮೇಲೆ ಎಡಗಾಲಿನ ಷೂ ; ಎರಡನ್ನೂ ಪಕ್ಕ ಪಕ್ಕದಲ್ಲಿ ಹಾಸಿಗೆಯ ತುದಿಯಲ್ಲೇ ಇಟ್ಟುಕೊಳ್ಳುವುದು.

"ಅವನಂಥ ಶುಧ್ಧ ಮನುಷ್ಯನನ್ನು ನೋಡಿಲ್ಲ. ಒಂದೇ ಒಳಉಡುಪನ್ನು ಎರಡು ಬಾರಿ ಎಂದಿಗೂ ಧರಿಸಿದವನಲ್ಲ. ನಾನೇ ಒಗೆಯುತಿದ್ದೆ. ಅವನ ಅತಿ ಚೊಕ್ಕಟತನ ನನಗೆ ಹಿಡಿಸುತ್ತಿರಲಿಲ್ಲ. ದಿನಕ್ಕೆ ಎರಡಾವರ್ತಿ ಮುಖಕ್ಷೌರಮಾಡಿಕೊಳ್ಳುತಿದ್ದ. ಕನಕ ಜನಾಂಗದವರನ್ನೂ ಮೀರಿಸುವಂತೆ ಮೈಮೇಲೆ ನೀರು ಸುರಿದುಕೊಳ್ಳುತಿದ್ದ. ಇಬ್ಬರ ಕೆಲಸ ಒಬ್ಬನೇ ಮಾಡುತಿದ್ದ. ಎಲ್ಲಕ್ಕಿಂತಲೂ ಹೆಚ್ಚಾಗಿ ನಹಾಲ ನೀರಿನ ಭವಿಷ್ಯತ್ತನ್ನು ಕಾಣುತಿದ್ದ...."

"ಅಂದರೆ ನನಗೆ ತೋರುವಂತೆ, ಅವನು ನಿನ್ನನ್ನು ಐಶ್ವರ್ಯವಂತಳನ್ನಾಗಿ ಮಾಡಿದ; ಆದರೆ ಸಂತೋಷಭರಿತಳನ್ನಾಗಿ ಮಾಡಲಿಲ್ಲ...." ಎಂದು ಮಾರ್ಥ ಸೂಚಿಸಿದಳು.

ಬೆಲ್ಲ ನಿಟ್ಟುಸಿರುಬಿಟ್ಟು ತಲೆದೂಗಿದಳು.

"ಸೋದರಿ ಮಾರ್ಥ, ಬರಿಯ ಐಶ್ವರ್ಯವಿದ್ದರೆ ಏನು ಪ್ರಯೋಜನ ? ಎಷ್ಟಿದ್ದರೂ ಅದು ಒಬ್ಬ ಪ್ರೇಮಿಗೆ ಸಮವಾಗದು....ನಿಜ; ಪ್ರೇಮಿಯೆಂದರೆ ಒಬ್ಬನೇ; ಅವನೇ ಮದುವೆಯಾಗುವವನು; ಸುಖದುಃಖಗಳಲ್ಲಿ ಒಂದಾಗುವವನು; ಅಂಥ ಪ್ರಣಯಿ, ಅಂಥ ಗಂಡ ಸಿಕ್ಕಬೇಕಾದರೆ—"

ಅವಳ ಉದ್ಗಾರ ನಿಂತಿತು. ಇಬ್ಬರು ಸೋದರಿಯರೂ ಕನಸಿನಲ್ಲಿದ್ದಂತೆ ಮೌನತಾಳಿದರು. ಆಗ ಒಬ್ಬ ಹಣ್ಣುಹಣ್ಣು ಮುದುಕಿ ಉದ್ಯಾನದ ಆಕಡೆಯಿಂದ ಕುಂಟುತ್ತಾ ಬಂದಳು. ಕೈಯಲ್ಲಿ ಊರುಗೋಲು ಹಿಡಿದಿದ್ದಳು. ನೂರುವರ್ಷ ಬಾಳಿದವಳು; ಅದರ ಹೊರೆಯಿಂದಲೇ ಬಗ್ಗಿಹೋಗಿದ್ದಳು. ಕಣ್ಣುಗಳಂತೂ ಕಳೆಗುಂದಿ ಇಣಿಕುಗಂಡಿಗಳಂತೆ ತೋರುತಿದ್ದುವು. ಆದರೂ ಮುಂಗುಸಿಯ ನೋಟದಂತೆ ತೀಕ್ಷ್ಣವಾಗಿತ್ತು. ಅವಳು ಬಂದವಳೇ ಬೆಲ್ಲನ

ಪಾದದ ಹತ್ತಿರ ಕುಸಿದಳು. ಚೊಕ್ಕ ಬಾಯಿಂದ ಹವಾಯಿ ಗೀತವನ್ನು ಒದರುತಿದ್ದಳು. ಬೆಲ್ಲ ಮತ್ತು ಅವಳ ವಂಶಾವಳಿಯನ್ನು ಹಾಡುತ್ತಾ ಥಟ್ಟನೆ ಸ್ಫೂರ್ತಿಯಿಂದ ಸ್ವಾಗತ ಬಯಸಿದಳು; ದೊಡ್ಡ ಸಮುದ್ರವನ್ನು ದಾಟಿ ಕ್ಯಾಲಿಫೋರ್ನಿಯಕ್ಕೆ ಹೋದವಳು ಮತ್ತೆ ಹವಾಯಿಗೆ ಬಂದಳಲ್ಲಾ ಎಂದು ಕುಣಿದಾಡಿದಳು. ರೇಷ್ಮೆಯ ಕಾಲುಮುಚ್ಚಿಗೆಯನ್ನು ಸವರಿದಳು. ತನ್ನ ಸೂಕ್ಷ್ಮ ಬೆರಳುಗಳಿಂದ ಬೆಲ್ಲಳ ಪಾದದ ಮುಂಭಾಗ, ಹಿಂಭಾಗ, ಮೊಣಕಾಲು, ತೊಡೆ ಎಲ್ಲವನ್ನೂ ನೀವಿದಳು.

ಆ ಮುದುಕಿಯು ಬಹುಕಾಲದಿಂದ ಮಾರ್ಥಳ ವಂಶಸ್ಥರಲ್ಲಿ ಆಶ್ರಿತೆಯಾಗಿ ಕೆಲಸಮಾಡಿದವಳು. ಅವಳ ಹಾಡನ್ನು ಕೇಳಿದೊಡನೆ ಬೆಲ್ಲ ಮಾರ್ಥ ಇಬ್ಬರೂ ಆನಂದಭಾಷ್ಪವನ್ನು ಸುರಿಸಿದರು. ಹಳೇ ಕಾಲದ ಶೈಲಿಯಲ್ಲೇ ಮಾತನಾಡಿಸಿದರು. ಎಷ್ಟೋ ಪುರಾತನ ಪ್ರಶ್ನೆಗಳನ್ನು ಕೇಳಿದರು. ಅವಳ ವಯಸ್ಸು, ಆರೋಗ್ಯ, ಮೊಮ್ಮಕ್ಕಳು, ಮರಿಮಕ್ಕಳ ಸಮಾಚಾರ—ಎಲ್ಲವನ್ನೂ ವಿಚಾರಿಸಿದ್ದಾಯಿತು. ತಾವು ಮಗುವಾಗಿದ್ದಾಗಿನಿಂದ ಆ ಮುದುಕಿಯು ತಮ್ಮನ್ನು ಕಿಲೊಹನದ ಭವ್ಯಭವನದಲ್ಲಿ ಎತ್ತಿ ಆಡಿಸಿದ್ದು ಜ್ಞಾಪಕಕ್ಕೆ ಬಂತು. ಮುದುಕಿಯ ವಂಶಸ್ಥರೆಲ್ಲರೂ ಎಷ್ಟೋ ಕಾಲದಿಂದ ತಮ್ಮ ಮನೆತನದವರ ಸೇವೆಗಾಗಿಯೆ ಹುಟ್ಟಿದಂತಿದ್ದರು.

ಮಾರ್ಥ ಮೇಲೆದ್ದು ಮುದುಕಿಯನ್ನು ಬಂಗಲೆಯ ತನಕ ಹಿಂಬಾಲಿಸಿದಳು. ಅವಳ ಕೈಗೆ ಥಳಥಳ ನಾಣ್ಯವನ್ನು ಹಾಕಿದಳು. ಜಂಭದಿಂದ ಸೌಂದರ್ಯ ಬೀರುತ್ತಾ ನಲಿದಾಡುತಿದ್ದ ಹೆಣ್ಣಾಳುಗಳನ್ನು ಕರೆದು, ಅತಿ ವೃದ್ಧೆಯಾದ ಮೂಲನಿವಾಸಿಗೆ 'ಪಾಯ್' ಆಹಾರವನ್ನು ಸಿದ್ಧಪಡಿಸಲು ಆಜ್ಞೆಮಾಡಿದಳು. 'ಪಾಯ್' ತಯಾರಿಸುವುದು ಸುಲಭದ ಕೆಲಸವಲ್ಲ. ನೀರಿನಲ್ಲಿ ಬೆಳೆಯುವ ನೈದಿಲೆಯ ಗೆಡ್ಡೆಗಳನ್ನು ಆರಿಸಬೇಕು; ಸಮುದ್ರದಿಂದ ಆಗತಾನೆ ತೇಲಿಬರುವ 'ಅಯಮಾಕ' ಮೀನನ್ನು ಹಿಡಿಯಬೇಕು; 'ಕುಕುಯಿ,' 'ಲಿಮು' ಮುಂತಾದ ಪುದೀನ ಜಾತಿಯ ಸಮುದ್ರದ ಜೊಂಡುಗಳನ್ನು ಚೆನ್ನಾಗಿ ಕುಟ್ಟಿ ಹಲ್ಲಿಲ್ಲದವರಿಗೂ ಸರಾಗವಾಗಿ ಜೀರ್ಣಿಸುವಂತೆ ಮಾಡಬೇಕು. ಈ ಮೂರುಭಾಗಗಳನ್ನೂ ಸರಿಯಾದ ಪ್ರಮಾಣದಲ್ಲಿ ಬೆರಸಿದರೆ 'ಪಾಯ್' ತಯಾರಾಗುತ್ತದೆ. ಅದನ್ನು ಸಾಮಾನ್ಯರಿಗೆ ಹಂಚುವುದು ನಾಯಕರ ಜವಾಬ್ದಾರಿ; ಅದರಲ್ಲಿ ಸಾಮಾನ್ಯರು ನಾಯಕರಲ್ಲಿಡುವ ನಿಷ್ಠಾ ಭಕ್ತಿಯೂ ಪ್ರತಿಬಿಂಬಿತವಾಗಿವೆ.

ಮಾರ್ಥಳಲ್ಲಿ ಮುಕ್ಕಾಲುಭಾಗದಷ್ಟು ನ್ಯೂ ಇಂಗ್ಲೆಂಡಿನ ಆಂಗ್ಲೋ

ಸ್ಯಾಕ್ಸನ್ ರಕ್ತವಿದ್ದರೂ, ಅವಳು ಹಳೆಯ ಕಾಲದ ಪದ್ಧತಿಗಳನ್ನೇ ಅನುಸರಿಸುವ ಅಚ್ಚಾ ಹವಾಯಿಯವಳೇ ಆಗಿದ್ದಳು.

ಅವಳು ಪುನಃ ಹೌ ಮರದ ಕಡೆ ಬರುತಿದ್ದಾಗ, ಬೆಲ್ಲ ಅವಳನ್ನೇ ನೋಡುತಿದ್ದಳು. ತನ್ನ ತಂಗಿಯ ವಿಶ್ವಾಸಾರ್ಹತೆಯನ್ನು ಕಂಡು ಮೆಚ್ಚಿದಳು; ಅವಳ ರಕ್ತಗತ ಸ್ವಭಾವದಲ್ಲೇ ಪ್ರೀತಿಯನ್ನು ಉಕ್ಕಿಸುವಂಥ ಚಮತ್ಕಾರವಿದೆ ಯೆಂದು ಭಾವಿಸಿದಳು. ಅತ್ಯಂತ ಪ್ರೀತಿಯಿಂದ ಅವಳನ್ನು ಮತ್ತೊಮ್ಮೆ ಆಲಿಂಗಿಸಿದಳು. ಬೆಲ್ಲಳಿಗಿಂತ ಮಾರ್ಥ ಕುಳ್ಳಾಗಿದ್ದರೂ, ರಾಣಿಯ ಠೀವಿ ಕಡಿಮೆಯಿದ್ದರೂ, ಅವಳ ರೀತಿಯೇ ಬೇರೆ. ಅವಳ ಅಂಗವಿನ್ಯಾಸ, ಸೌಂದರ್ಯ ವನ್ನು ಮತ್ತಷ್ಟು ಹೆಚ್ಚಿಸಿತ್ತು. ದೇಹಾದ್ಯಂತ ಧಾರಾಳತನ ಎದ್ದುಕಾಣುತಿತ್ತು. ವಯಸ್ಸಾಗಿದ್ದರೂ ಅವಳು ಕುಗ್ಗಿರಲಿಲ್ಲ. ಆದರೆ ವಯಸ್ಸು ಬರುತ್ತಿದ್ದಂತೆ ಅವಳ ಶೀಲಸ್ವಭಾವಗಳು ಒಂದು ಹದಕ್ಕೆ ಸೇರಿದ್ದವು. ಪಾಲಿನೀಶಿಯನ್ ನಾಯಕಿಗೆ ಒಪ್ಪುವಂಥ ಉಡುಪನ್ನೇ ಧರಿಸಿದ್ದಳು. ನಡುವಿನಿಂದ ನೆರಿಗೆ ನೆರಿಗೆಯಾಗಿ ಇಳಿಬಿಟ್ಟ ಕಪ್ಪು ಜರಿ ಅಂಚಿನ ಸಿಲ್ಕ್ ಗೌನ್ ಭವ್ಯವಾಗಿತ್ತು. ಅದರ ಬೆಲೆಯಂತೂ ಪ್ಯಾರಿಸ್ ಗೌನಿಗಿಂತಲೂ ದುಬಾರಿ.

ಸೋದರಿಯರು ಪುನಃ ಮಾತಿಗೆ ಪ್ರಾರಂಭಿಸಿದರು. ಪಾರ್ಶ್ವದಿಂದ ನೋಡುವವರಿಗೆ ಇಬ್ಬರೂ ಒಂದೇ ತರಹ, ರೇಖಾಚಿತ್ರದಲ್ಲಿ ಬರೆದವರಂತೆ ಕಾಣುತಿದ್ದರು. ಇಬ್ಬರ ಕೆನ್ನೆಯೆಲುಬೂ ತುಂಬಿಕೊಂಡಿತ್ತು; ಹಣೆ ಎತ್ತರ ವಾಗಿಯೂ ವಿಶಾಲವಾಗಿಯೂ ಇತ್ತು; ಕಬ್ಬಿಣದ ಬೂದುಬಣ್ಣದಂತೆ, ಸೊಂಪಾಗಿ ಹರಡಿದ್ದ ಕೂದಲು ಹೊಳೆಯುತಿತ್ತು; ಬಾಯಿ ತುಂಬ ಸವಿ; ಹುಬ್ಬಿನ ಸಾಲು ಸಣ್ಣಗೆ ಕಾಮನ ಬಿಲ್ಲಿನಂತೆ ಬಗ್ಗಿತ್ತು; ವಿಶಾಲ ಕಣ್ಣು ಪ್ರೇಮಮಯವಾಗಿತ್ತು. ಇಬ್ಬರ ಕೈಗಳೂ ವಯಸ್ಸಿನಿಂದ ಸ್ವಲ್ಪಮಟ್ಟಿಗೆ ಬದ ಲಾಯಿಸಿದ್ದರೂ, ಬೆರಳ ತುದಿ ಮಾತ್ರ ಹಿಂದಿನಂತೆಯೆ ಪ್ರೇಮರಸವನ್ನು ಹೊರಚಿಮ್ಮಿಸುವಂತಿತ್ತು.

ಬೆಲ್ಲ ಪ್ರಾರಂಭಿಸಿದಳು: "ಒಂದು ವರ್ಷ ಹಾಗೆ ಕಳೆದೆ, ಆಮೇಲೆ ಏನಾಯಿತು ಗೊತ್ತೆ? ಎಲ್ಲವೂ ಒಂದೊಂದಾಗಿ ಸ್ಥಿಮಿತಕ್ಕೆ ಬಂದವು. ನನ್ನ ಮನಸ್ಸು ಜಾರ್ಜ್‌ನ ಹತ್ತಿರ ಹತ್ತಿರ ಸರಿಯುತಿತ್ತು. ಹೆಂಗಸರೇ ಹಾಗೆಂದು ಕಾಣುತ್ತೆ; ವಿರಸವಿದ್ದರೂ ಸಮರಸಗೊಳ್ಳುವ ಸ್ವಭಾವ. ನಾನಂತೂ ಅಂಥವಳೇ ಆಗಿದ್ದೆ; ಏಕೆಂದರೆ ಅವನು ಒಳ್ಳೆಯವನಾಗಿದ್ದನು! ನ್ಯಾಯಕ್ಕೆ ತಲೆಬಾಗುವವನು! ಹಳೇ ಕಾಲದ ಪ್ರಾಮಾಣಿಕ ಪ್ಯೂರಿಟನರ ಗುಣಗಳೆಲ್ಲವೂ

ಅವನಲ್ಲಿತ್ತು. ಮನಸ್ಸು ಆ ಕಡೆ ಎಳೆದಂತೆ ವ್ಯಕ್ತಿಯಲ್ಲಿ ವಿಶ್ವಾಸ ಬೆಳೆಯಿತು. ಕಡೆಗೆ ಅವನನ್ನು ಪ್ರೇಮಿಸುವ ಮಟ್ಟಕ್ಕೂ ಹೋಗಿದ್ದೆ! ಆದರೆ?....ಜಾನ್ ಮಾವ ನನಗೆ ಕುದುರೆಯನ್ನು ಸಾಲವಾಗಿ ಕೊಡದೆ ಇದ್ದಿದ್ದರೆ, ಖಂಡಿತ ವಾಗಿಯೂ ಜಾರ್ಜ್‌ನನ್ನು ಪ್ರೇಮಿಸಿ, ಸುಖವಾಗಿ ಶಾಂತವಾಗಿ ಜೀವಿಸು ತ್ತಿದ್ದೆ....

"ಮನುಷ್ಯನು ವ್ಯಾಪಾರದಲ್ಲಿ ಮುಂದಿದ್ದನೊ ಹಿಂದಿದ್ದನೋ ಯಾವುದೂ ನನಗೆ ತಿಳಿಯುತ್ತಿರಲಿಲ್ಲ. ಊಟಮಾಡಿ ಮಲಗುವುದಕ್ಕಿಂತ ಮುಂಚೆ ಸ್ವಲ್ಪಹೊತ್ತು ಅವನಿಗೆ ಓದುವ ಅಭ್ಯಾಸವಿತ್ತು; ಆ ಸಮಯದಲ್ಲಿ ಅವನನ್ನು ನೋಡಲು ನನಗೆ ಸಂತೋಷವಾಗುತಿತ್ತು. ಅದಕ್ಕಾಗಿಯೇ ಕಾದು ಮೇಜಿನ ಎದುರು ಭಾಗದಲ್ಲಿ ಕುಳಿತುಕೊಳ್ಳುತಿದ್ದೆ. ಅಷ್ಟು ಹೊತ್ತಿಗೆ ಸರಿ ಯಾಗಿ ಬಹುದೂರದ ಪ್ರಯಾಣ ಮುಗಿಸಿಕೊಂಡು, ನೆಗೆಯುತ್ತಾ ಓಡಿಬರು ತಿದ್ದ ಕುದುರೆಯ ಸಪ್ಪಳ ಕೇಳಲು ನನಗೆ ಕರ್ಣಾನಂದ....ಹೆಚ್ಚು ಮಾತಿಲ್ಲದೆ ನನ್ನ ಕಾರ್ಯಗಳನ್ನು ಮೆಚ್ಚಿ ಹೊಗಳುತಿದ್ದನು. ಅದನ್ನು ಕೇಳಿದೊಡನೆಯೆ ನನ್ನ ಮುಖ ನಾಚಿಕೆಯಿಂದ ಕೆಂಪೇರುತಿತ್ತು; ಆನಂದದಿಂದ ಮೈಪುಲಕಿತ ವಾಗುತಿತ್ತು....

"ಯಾವ ಏರುಪೇರೂ ಇಲ್ಲದೆ ಹಾಗೆಯೆ ಮುಂದುವರಿದಿದ್ದರೆ, ನಮ್ಮಿಬ್ಬರ ಜೀವನ ಸುಖಮಯವಾಗುತಿತ್ತೋ ಏನೊ! ಆದರೆ ಅವನು ಹೊನಲೂಲುವಿಗೆ ಹೋಗಬೇಕಾಯಿತು. ಹಡಗನ್ನು ಹತ್ತಲು ಸಿದ್ಧನಾದನು. ವ್ಯಾಪಾರದ ನಿಮಿತ್ತ ಎರಡು ವಾರಗಳಿಗೂ ಜಾಸ್ತಿ ಹೋಗಲೇಬೇಕಿತ್ತು. ದನಗಾವಲಿನ ವಿಷಯದಲ್ಲಿ, ಗ್ಲೆನ್ಸ್ ಅವರ ಪರವಾಗಿ, ವ್ಯವಹಾರ ನಡೆಸಬೇಕಾಗಿತ್ತು. ಎರಡನೆಯದಾಗಿ ಸ್ವಂತ ಕೆಲಸ ಬೇರೆ; ಅಂದರೆ ನಹಾಲದ ಮೇಲುಭೂಮಿ ಯನ್ನು ಮತ್ತಷ್ಟು ಕೊಂಡುಕೊಳ್ಳಲು ಏರ್ಪಾಟುಮಾಡುವುದು....ಅವನು ತೆಗೆದುಕೊಳ್ಳುತಿದ್ದ ಭೂಭಾಗಗಳನ್ನು ನೋಡಿ ನೋಡಿ ನನಗೆ ಆಶ್ಚರ್ಯವಾಗು ತಿತ್ತು; ನಡೆಯಲೂ ಅಸಾಧ್ಯವಾದ ಕೆಲಸಕ್ಕೆ ಬಾರದ ನೆಲ; ನೀರೊಂದನ್ನು ಬಿಟ್ಟರೆ ಮತ್ತೇನೂ ಇಲ್ಲ. ನೀರಿನಿಂದ ಸುತ್ತಲ್ಪಟ್ಟ ಮಧ್ಯಭೂಮಿಗಳನ್ನೂ ಕೊಂಡನು. ಆಗ ಅದರ ಬೆಲೆ ಎಷ್ಟು ಕಡಿಮೆ! ಎಕರೆಗೆ ಐದೋ ಅಥವಾ ಹತ್ತು ಸೆಂಟುಗಳು....ಊರು ಬಿಡುವುದಕ್ಕಿಂತ ಮುಂಚೆ ನನ್ನನ್ನು ಕಿಲೋಹನ ದಲ್ಲಿ ಬಿಡಲು ನಿಶ್ಚಯಿಸಿದನು. ಅವನಿಗೆ ಅದರಲ್ಲಿ ಎರಡು ರೀತಿಯ ಲಾಭ ವಿತ್ತು; ನನ್ನ ಹಳೆಯ ಮನೆಗೇ ಹೋಗುವುದರಲ್ಲಿ ಖರ್ಚಿಲ್ಲವಲ್ಲ! ನಹಾಲ

ದಲ್ಲೇ ಇದ್ದಿದ್ದರೆ, ನಾನು ಒಣ ಆಹಾರ ತಿನ್ನುತಿದ್ದರೂ, ಸ್ವಲ್ಪವಮಟ್ಟಿಗಾದರೂ ಹಣ ಕೊಡಬೇಕಿತ್ತು; ಕಿಲೋಹನವಾದರೆ ತೊಂದರೆಯಿಲ್ಲ, ಅಷ್ಟನ್ನು ಮಿಗಿಸ ಬಹುದು ಅವನ ದೃಷ್ಟಿಯಲ್ಲಿ! ಉಳಿದ ಹಣದಲ್ಲಿ ನಹಾಲದ ಒಂದೋ ಎರಡೋ ಎಕರೆಗಳನ್ನಾದರೂ ಕೊಳ್ಳಲು ಆಗಲೆ ಎಣಿಕೆಹಾಕಿದ್ದನು.....

"ಕಿಲೋಹನದಲ್ಲಿ ನನ್ನನ್ನು ಬರಮಾಡಿಕೊಳ್ಳಲು ಜಾನ್ ಮಾವ ಸಂಪೂರ್ಣ ಒಪ್ಪಿಗೆಯಿತ್ತನು. ಕುದುರೆಯನ್ನೂ ಒದಗಿಸಿಕೊಟ್ಟನು;

"ಅಲ್ಲಿದ್ದ ಕೆಲವೇ ದಿನಗಳಲ್ಲಿ ಸ್ವರ್ಗವನ್ನು ಕಂಡಂತೆ ಭಾಸವಾಯಿತು. ಪ್ರಪಂಚದ ಇತರ ಸ್ಥಳಗಳಲ್ಲಿ ಅಷ್ಟೊಂದು ಆಹಾರವಿದೆಯೆಂದು ನಂಬಲೂ ಕಷ್ಟ ವಾಯಿತು. ಅಡಿಗೆ ಮನೆಯಲ್ಲಿ ಕಸವಾಗಿ ಎಣಿಸುತಿದ್ದ ಬೇಕಾದಷ್ಟು ಪದಾರ್ಥಗಳನ್ನು ನೋಡಿ ನನಗೆ ಗಾಬರಿಯಾಯಿತು. ಎಲ್ಲೆಲ್ಲಿ ನೋಡಿದರೂ ವ್ಯರ್ಥ ಪದಾರ್ಥಗಳು; ಜಾರ್ಜ್‌ನಿಂದ ತಯಾರಾದ ನನಗೆ ಎಲ್ಲವೂ ಹೊಸ ನೋಟವಾಗಿತ್ತು. ಅಷ್ಟೇಕೆ? ಜವಾನರ ಮನೆಗಳಲ್ಲಿ ವಾಸಿಸುತಿದ್ದ ವೃದ್ಧ ಸಂಬಂಧಿಕರೂ ಮತ್ತು ಜವಾನರನ್ನೇ ನಂಬಿಬಂದಿದ್ದ ಆಶ್ರಿತರೂ ಕೂಡ ಎಷ್ಟು ಜೋರಾಗಿ ತಿಂದು ತೇಗುತಿದ್ದರು? ಅವರ ಹಾಗೆ ನಾನು, ಜಾರ್ಜ್ ಒಂದು ದಿನವೂ ಊಟಮಾಡಿರಲಿಲ್ಲ! ಕಿಲೋಹನದಲ್ಲಿ ನಡೆಯುತಿದ್ದ ಸಮಾರಾಧನೆ ನಿನಗೆ ನೆನಪಿರಬೇಕು; ಪಾರ್ಕರ್‌ನಲ್ಲಿ ಇದ್ದಹಾಗೆಯೆ. ಪ್ರತಿಹೊತ್ತಿನ ಊಟಕ್ಕೂ ಒಂದೊಂದು ಹೊಸ ಮಾಂಸ ಬರುತ್ತಿತ್ತು. ವೈಪಿಯೊ ಮತ್ತು ಕೆಹೊಲೊ ಕೊಳಗಳಿಂದ ಆಗತಾನೆ ಮೀನುಗಳನ್ನು ಹಿಡಿದು ತರುತ್ತಿದ್ದರು. ಆಯಾಯ ಸಂದರ್ಭಕ್ಕೆ ತಕ್ಕಂಥ ಅತ್ಯುತ್ತಮವಾದ ಅಪರೂಪವಾದ ವಸ್ತು ಗಳೇ ಕಾಣಿಸುತ್ತಿದ್ದವು.....

"ಇನ್ನು ನಮ್ಮ ವಂಶದ್ದೇ ಆದ ವಿಶಿಷ್ಟ ಪ್ರೀತಿಯಾಟಗಳನ್ನು ವರ್ಣಿಸ ಬೇಕಾದ್ದು ಅನವಶ್ಯಕ; ನಿನಗೆ ಗೊತ್ತೇ ಇದೆ. ಜಾನ್ ಮಾವನ ಏರ್ಪಾಟು ಕೇಳಬೇಕೆ? ಸೋದರ ವಾಲ್‌ಕಾಟ್, ಎಡ್ವರ್ಡ್ ಮತ್ತು ನಿನ್ನನ್ನು ಬಿಟ್ಟು ಉಳಿದ ತಂಗಿಯರೂ ಅಲ್ಲಿದ್ದರು. ಸ್ಟಾಲಿ ಇರಲಿಲ್ಲ; ಅವಳಿಗೆ ಶಾಲೆಯಿತ್ತು. ಚಿಕ್ಕಮ್ಮಂದಿರಾದ ಎಲಿಸಬತ್, ಜ್ಯಾನೆಟ್ ಇಬ್ಬರೂ ತಮ್ಮ ತಮ್ಮ ಗಂಡಂದಿರು ಮಕ್ಕಳೊಡನೆ ಪ್ರವಾಸ ಹೊರಟಿದ್ದರು....ಎಲ್ಲೆಲ್ಲಿ ನೋಡಿದರೂ ತೋಳುಗಳ ಮಧ್ಯೆ ತೋಳುಗಳು ಸೇರಿಕೊಂಡಿದ್ದವು. ಮುತ್ತಿನ ಸುರಿಮಳೆಗೆ ಕೊನೆ ಮೊದಲಿಲ್ಲ. ನನ್ನ ಹನ್ನೆರಡು ತಿಂಗಳ ಬೇಸರ ಒಂದೇ ಕ್ಷಣದಲ್ಲಿ ಪರಿಹಾರ ವಾಯಿತು.

"ಆಗಲೇ 'ಅವರು' ಬಂದದ್ದು. 'ಕವೈಹೆ' ತನಕ ರಾಜವಂಶಕ್ಕೆ ಸೇರಿದ ಕ್ರೀಡಾ ನೌಕೆಯಲ್ಲಿ ಪ್ರಯಾಣಮಾಡಿದ್ದರು; ಅಲ್ಲಿಂದ ಕುದುರೆ ಸವಾರಿ. ಸೊಗಸಾದ ಪಾರ್ಕರ್ ಕುದುರೆಗಳು. ಒಟ್ಟು ಮೂವತ್ತು ಸವಾರರು ಜತೆ ಜತೆಯಾಗಿ ಹೊರಟಿದ್ದರು. ಯೌವನದ ಮದವೇರಿ ಸಂತೋಷ ಭರಿತರಾಗಿದ್ದರು. ಹೂವಿನ ಹಾರಗಳನ್ನು ಹಾಕಿಕೊಂಡಿದ್ದರು. ಪಾರ್ಕರ್ ಕ್ಷೇತ್ರದ ನೂರು ಹುಡುಗರೂ ಮತ್ತು ಇತರ ಆಶ್ರಿತ ಜನರೂ ಹಿಂಬಾಲಿಸಿದ್ದರು. ಒಟ್ಟಿನಲ್ಲಿ ಹೇಳುವುದಾದರೆ, ಅದು ರಾಜಕುಮಾರಿ ಲಿಹೂಳ ಮೆರವಣಿಗೆ.

"ವಿಹಾರ ಸ್ಥಳಗಳನ್ನೇ ಹುಡುಕಿಬರುತಿದ್ದ ಲಿಹೂಳ ಆರೋಗ್ಯ ಸರಿಯಾಗಿರಲಿಲ್ಲ; ಅವಳ ಮುಖ ಪ್ರಜ್ವಲಿಸುತ್ತಿದ್ದರೂ ಭೀಕರ ಕ್ಷಯ ರೋಗದಿಂದ ಪೀಡಿತಳಾಗಿದ್ದಳು. ಅದರ ಶಮನಾರ್ಥವಾಗಿಯೆ ಪ್ರವಾಸಹೊರಟಂತೆ ಕಂಡಿತು. ಅವಳ ಸೋದರ ಮಾವಂದಿರೂ ಜೊತೆಯಲ್ಲಿ ಬಂದಿದ್ದರು; ಮೊದಲನೆಯವನೇ ಲಿಲೋಲಿಲೊ ರಾಜಕುಮಾರ. ಅವನೇ ಮುಂದೆ ರಾಜನಾಗುತ್ತಾನೆಂದು ಎಲ್ಲ ಕಡೆಯೂ ಸುದ್ದಿ ಹರಡಿತ್ತು. ರಾಜಕುಮಾರಿಯ ಜೊತೆ 'ಎಲ್ಲಹಿಗಿನ್ಸ್‌ವರ್ತ್' ಎಂಬಾಕೆಯೂ ಇದ್ದಳು; ಆಳುತ್ತಿದ್ದ ರಾಜವಂಶಕ್ಕಿಂತಲೂ ತನ್ನ ಕವೈ ಮನೆತನವೇ ಉನ್ನತ ಮಟ್ಟದ್ದೆಂದು ಅವಳು ಸರಿಯಾದ ರೀತಿಯಲ್ಲೇ ಹಕ್ಕನ್ನು ಚಲಾಯಿಸುತಿದ್ದಳು. ಡೊರಾ ನೈಲ್ಸ್, ಎಮಿಲಿ ಲೌಕ್ರಾಫ್ಟ್ ಇತ್ಯಾದಿ ಎಷ್ಟೋ ಪ್ರಮುಖರು ಇದ್ದರು!

"ಆ ಗುಂಪಿನಲ್ಲಿ ನನಗೆ ಪರಿಚಯವಿದ್ದವಳು, ಎಲ್ಲಹಿಗಿನ್ಸ್‌ವರ್ತ್. ಅವಳೂ, ನಾನೂ ಇಬ್ಬರೂ 'ರಾಯಲ್ ಛೀಫ್ ಸ್ಕೂಲ್'ನಲ್ಲಿ ಓದುತಿದ್ದಾಗ, ಒಂದೇ ರೂಮಿನಲ್ಲಿದ್ದು ವ್ಯಾಸಂಗ ಮಾಡಿದವರು.

"ರಾಜಕುಮಾರಿಯ ಗುಂಪಿಗೆ ವಿಶ್ರಾಂತಿ ಪಡೆಯಲು ಅವಕಾಶವಿರಲಿಲ್ಲ. ಕೇವಲ ಒಂದು ಘಂಟೆಯ ಹೊತ್ತು ನಮ್ಮಲ್ಲಿದ್ದರು. ಬೀರ್ ಮತ್ತು ಇತರ ಮದ್ಯಸಾರವುಳ್ಳ ಪಾನೀಯಗಳನ್ನು ಗಂಡಸರಿಗೆ ಹಂಚಲಾಯಿತು. ಗಜನಿಂಬೆಹಣ್ಣಿನ ಪಾನಕ, ಕಿತ್ತಲೇ ರಸ, ಆಯಾಸಪರಿಹಾರಕವಾದ ಕಲ್ಲಂಗಡಿ ಹಣ್ಣು—ಇವುಗಳನ್ನು ಹೆಂಗಸರಿಗೆ ನೀಡಲಾಯಿತು.

"ಎಲ್ಲಹಿಗಿನ್ಸ್‌ವರ್ತ್ ನನ್ನನ್ನು ಆಲಿಂಗಿಸಿದಳು. ರಾಜಕುಮಾರಿಗೆ ನನ್ನ ಗುರುತು ಗೊತ್ತಾಯಿತು; ಅಷ್ಟರಲ್ಲೇ ನಾನಿದ್ದ ಸಮಾಚಾರವನ್ನು ಹಿಗಿನ್ಸ್‌ವರ್ತ್ ತಿಳಿಸಿದ್ದಳು. ತಕ್ಷಣ ಚಿಕ್ಕ ದೊಡ್ಡ ಹುಡುಗಿಯರ ತಂಡ

ನನ್ನನ್ನು ಸುತ್ತುಗಟ್ಟಿತು. ರಾಜಕುಮಾರಿಯೇ ಸ್ವತಃ ನನಗೆ ಆಹ್ವಾನ ವಿತ್ತಳು; 'ಮಾನ'ದಲ್ಲಿ ಗುಂಪು ಎರಡು ದಿನಗಳ ತನಕ ಇರುವುದರಿಂದ, ಅಲ್ಲಿಗೇ ನಾನು ಬರುವಂತೆ ಸೂಚಿಸಿದಳು. 'ಮಾನ'ದಿಂದಲೇ ಮುಂದಿನ ಪ್ರಯಾಣವೆಂದು ಗೊತ್ತಾಗಿತ್ತು....

"ರಾಜಕುಮಾರಿಯ ಮಾತುಗಳು ನನ್ನನ್ನು ಹುಚ್ಚಳನ್ನಾಗಿ ಮಾಡಿದವು. ದರಿದ್ರ ನಹಾಲದಲ್ಲಿ ಹನ್ನೆರಡು ತಿಂಗಳ ಜೈಲುವಾಸ ಮಾಡಿದವಳ ಬೇಸರವೆಲ್ಲ ಬಿಟ್ಟುಹೋಯಿತು. ಆಗ ನನಗೆ ಹತ್ತೊಂಬತ್ತು ವಯಸ್ಸು; ಇಪ್ಪತ್ತು ವರ್ಷವಾಗಲು ಇನ್ನೊಂದೇವಾರವಿತ್ತು.

"ಅಯ್ಯೋ, ಮುಂದೇನಾಗಬಹುದೆಂಬ ಯೋಚನೆಯೂ ನನಗೆ ಇರಲಿಲ್ಲ. ಹೆಂಗಸರ ಮಧ್ಯೆ ಸೇರಿಹೋಗಿದ್ದೆ; ಲಿಲೋಲಿಲೊ ಕಡೆ ದೃಷ್ಟಿ ಬೀರಲೂ ಅವಕಾಶವಿಲ್ಲ. ಎಲ್ಲೋ ಅವನನ್ನು ದೂರದಲ್ಲಿ ನೋಡಿದ ಜ್ಞಾಪಕ; ಎಲ್ಲರಿಗಿಂತಲೂ ಎತ್ತರವಾಗಿಯೂ ದಪ್ಪವಾಗಿಯೂ ಕಂಡನು....

"ಎಂದೂ ನಾನು ಪ್ರವಾಸ ಹೊರಟವಳಲ್ಲ. ಕಿಲೋಹನ ಮತ್ತು ಮಾನ ಸ್ಥಳಗಳಲ್ಲಿ ಅನೇಕರ ಗೌರವಾರ್ಥ ನಡೆಸುತ್ತಿದ್ದ ಸಂತೋಷ ಸಮಾರಂಭಗಳನ್ನು ಮಾತ್ರ ನೋಡಿದ್ದೆ. ಅವರೊಡನೆಯೆ ಮುಂದೆ ಮುಂದೆ ಪ್ರಯಾಣ ಮಾಡಲು ಯಾವತ್ತೂ ನನಗೆ ಆಹ್ವಾನ ಬಂದಿರಲಿಲ್ಲ; ಬಹುಶಃ ನನ್ನ ಚಿಕ್ಕ ವಯಸ್ಸೇ ಕಾರಣವಿರಬೇಕು....ಸರಿ; ವಿದ್ಯಾಭ್ಯಾಸ ಮುಗಿದ ತಕ್ಷಣ ಮದುವೆಯೂ ಆಗಿಹೋಯಿತು....

"ವಿಹಾರಿಗಳ ಸ್ಥಳವೆಂದರೆ ಸ್ವರ್ಗಲೋಕದಂತೆಯೆ—ಎಂದು ತಿಳಿದಿದ್ದೆ. ಎರಡುವಾರಗಳ ಮಟ್ಟಿಗಾದರೂ ಜಗತ್ತನ್ನೇ ಮರೆಸಿಬಿಡುವಂಥ ಸುಖ ಸಾಮ್ರಾಜ್ಯ! ಮುಂದೆ ಯಥಾಪ್ರಕಾರ ನಹಾಲದ ಜೀವನ ಇದ್ದೇಯಿದೆ; ಅದಕ್ಕೆ ಮುಂಚೆಯಾದರೂ ಸ್ವರ್ಗಲೋಕವನ್ನು ನೋಡಿಬಿಡೋಣವೆಂದು ಮನಸ್ಸುಮಾಡಿದೆ.

"ಮುಂದಿನ ಕಾರ್ಯ—ಒಂದು ಕುದುರೆಬೇಕೆಂದು ಜಾನ್ ಮಾವನನ್ನು ಕೇಳಿದೆ. ಅಂದರೆ, ಮೂರು ಕುದುರೆಗಳನ್ನು ಕೇಳಿದಂತೆಯೇ ಆಯಿತು; ಒಂದು, ಗೊಲ್ಲರ ಹುಡುಗನಿಗೆ ಮತ್ತು ಇನ್ನೊಂದು, ಹೊರೆ ಹೊತ್ತು ನನ್ನನ್ನೇ ಹಿಂಬಾಲಿಸಿ ಬರಲು ಬೇಕಾಗುತ್ತದೆಯಲ್ಲವೇ ?

"ಆಗ ಸರಿಯಾದ ಮಾರ್ಗಗಳೇ ಇರಲಿಲ್ಲ. ವಾಹನಗಳೂ ಸಿಗುತ್ತಿರಲಿಲ್ಲ. ಆದರೂ ನನ್ನ ಸ್ವಂತ ಪ್ರವಾಸಕ್ಕೆ ಕುದುರೆ ಸಿಕ್ಕಿತು! ಅದರ ಹೆಸರು

ಹಿಲ್ಲೋ. ನಿನಗೆ ಜ್ಞಾಪಕವಿರಲಾರದು; ಏಕೆಂದರೆ ಆಗ ನೀನು ವಿದ್ಯಾಭ್ಯಾಸ ನಿಮಿತ್ತ ದೂರದಲ್ಲಿದ್ದಿ. ಮಾರನೆಯ ವರ್ಷ ಮನೆಗೆ ಬಂದಾಗ, ಆ ಕುದುರೆಯ ಸ್ಥಿತಿಯನ್ನು ನೋಡಿದ್ದರೂ ಇರಬಹುದು; ದುಷ್ಟಮೃಗಗಳನ್ನು ಹಿಡಿಯಲು ಹೊರಟಾಗ ಕುದುರೆಯ ಬೆನ್ನು ಮುರಿದಿತ್ತು ಮತ್ತು ಸವಾರನ ಕುತ್ತಿಗೆಗೂ ಗಾಯವಾಗಿತ್ತು. 'ಮೌನ ಕೀ' ನಲ್ಲಿ ಅಪಾಯ ಸಂಭವಿಸಿದ್ದು. ಅದರ ಬಗ್ಗೆ ಕೇಳಿದ್ದೀಯೆ—ಏಕೆಂದರೆ ಆ ಯುವಕ ಸವಾರನೇ ಅಮೇರಿಕನ್ ನೌಕಾಧಿಕಾರಿಯಾಗಿದ್ದವನು.... "

"ಹೌದು, ಹೌದು; ಅವನೇ ಲೆಫ್ಟಿನೆಂಟ್ ಬೌಸ್ ಫೀಲ್ಡ್" ಎಂದು ಮಾರ್ಥ ತಲೆದೂಗಿದಳು.

"ಅದಿರಲಿ; ಹಿಲ್ಲೋ ಕುದುರೆಯೆಂದರೆ ಸಾಮಾನ್ಯವೇ? ಅದರ ಮೇಲೆ ಹತ್ತಿದ ಪ್ರಥಮ ಹೆಂಗಸು ನಾನೇ. ಹಿಲ್ಲೋಗೆ ಮೂರು ಅಥವಾ ನಾಲ್ಕು ವರ್ಷವಿರಬಹುದು. ಚರ್ಮದ ಬಣ್ಣ ಸುತ್ತಲ ಬೆಳಕಿನಿಂದ ಮಿನುಗುತಿತ್ತು. ಜಾನ್ ಅದನ್ನು ಕೆಲವೇ ವಾರಗಳ ಹಿಂದೆ ತಂದಿದ್ದನು. ನಮ್ಮ ಕ್ಷೇತ್ರದ ಸವಾರಿ ಪ್ರಾಣಿಗಳೆಲ್ಲವನ್ನೂ ಮೀರಿಸಿತ್ತು, ಆ ಕುದುರೆ. ಅಂಥ ಸುಂದರ ಕುದುರೆಯನ್ನು ನಾನು ನೋಡಿಯೇ ಇರಲಿಲ್ಲ. ಅದರ ಮೈಕಟ್ಟನ್ನು ಗಮನಿಸಿದರೆ, ಪರ್ವತ ಪ್ರದೇಶದ ಸಣ್ಣ ತಳಿಯ ಕುದುರೆಗಳ ಜ್ಞಾಪಕ ಬರುತಿತ್ತು. ಹಿಲ್ಲೋದ ವಂಶ ಸಾಮಾನ್ಯವಲ್ಲ; ರಾಜನ ಹತ್ತಿರವಿರುವ 'ಸ್ಟಾರ್ಕ್‌ಲಿಂಗ್‌ಡ್ಯೂ'ವಿನ ಸಂಪರ್ಕದಿಂದ ಹುಟ್ಟಿದ್ದು—ಎಂದ ಮೇಲೆ ಕೇಳಬೇಕೆ? ತೆಳ್ಳಗಿದ್ದರೂ ಮೈ ತುಂಬಿಕೊಂಡಂತೆ ಕಾಣುತಿತ್ತು. ಚುರುಕಾದ ಕಿವಿಗಳು ಮುದ್ದಾಡುವಂತಿತ್ತು; ಮೋಸವನ್ನು ಸೂಚಿಸುವಷ್ಟು ಸಣ್ಣದಾಗಿರಲಿಲ್ಲ. ಅಥವಾ ಮೊಂಡುತನದ ಹೇಸರಗತ್ತೆಯ ಕಿವಿಯಂತೆ ದೊಡ್ಡದಾಗಿಯೂ ಇರಲಿಲ್ಲ. ಜೀನು ಹಾಕಿದ ತಕ್ಷಣ ಕುದುರೆಯ ಉತ್ಸಾಹ ಹೇಳತೀರದು. ಚುಂಚುಕಾಲಿಗೂ, ಗೊರಸಿಗೂ ಮಧ್ಯೆ ಇರುವ ಭಾಗ ಮೇಲ ಮೇಲಕ್ಕೆ ಜಿಗಿಯುತಿತ್ತು. ಸರಾಗವಾಗಿ ಓಡುತಿತ್ತು.... "

ಮಾರ್ಥ, ಮಧ್ಯೆ ಬಾಯಿ ಹಾಕಿ, "ಹೌದು; ಲಿಲ್ಲೋಲಿಲೊ ರಾಜಕುಮಾರ ಜಾನ್ ಮಾವನಿಗೆ ಹೇಳುತ್ತಿದ್ದ ಮಾತುಗಳನ್ನು ನಾನು ಯಾರಿಂದಲೋ ಕೇಳಿದ ಜ್ಞಾಪಕವಿದೆ. ನಿನ್ನಂಥ ಸ್ತ್ರೀ ಸವಾರರು ಹವಾಯಿಯಲ್ಲಿಯೇ ಇಲ್ಲ—ಎಂದು ಹೇಳುತಿದ್ದನಂತೆ! ಯಾವಾಗೆಂದರೆ, ನಾನು ಶಾಲೆಯನ್ನು ಬಿಟ್ಟು ಎರಡು ವರ್ಷವಾಗಿತ್ತು; ಆಗ ನೀನು ನಹಾಲದಲ್ಲೇ ಇದ್ದಿ...."

ಎಂದಳು.

" ಲಿಲೋಲಿಲೊ ಹಾಗೆ ಹೇಳಿದ್ದನೇನು ! " ಎಂದು ಬೆಲ್ಲ ಆಶ್ಚರ್ಯ ಚಕಿತಳಾದಳು.

ಐವತ್ತು ವರ್ಷಗಳ ಹಿಂದೆ ಸತ್ತು ಬೂದಿಯಾಗಿಹೋಗಿದ್ದ ಪ್ರೇಮಿಯ ಮಾತುಗಳನ್ನು, ಈಗ ನೆನೆಸಿಕೊಳ್ಳುವುದೆಂದರೆ ಅವಳ ಮೈ ರೋಮಾಂಚನಗೊಂಡಿತು. ನಾಚಿಕೆಯಿಂದ ಮುಖ ಕೆಂಪೇರಿತು. ಕಂದು ಬಣ್ಣದ ವಿಶಾಲ ಕಣ್ಣುಗಳು ಮಿಂಚಿದವು.

ಸಾಮಾನ್ಯವಾಗಿ ಎಲ್ಲ ಹವಾಯಿ ಹೆಂಗಸರಲ್ಲೂ ಸಹಜ ಗಾಂಭೀರ್ಯವಿತ್ತು. ಹಾಗೆಯೆ ಬೆಲ್ಲಳೂ ಕೂಡ ಅಕಸ್ಮಾತ್ ಹೃದಯ ಬಿಚ್ಚಿಹೋದುದನ್ನು ಮುಚ್ಚಿಕೊಳ್ಳಲು ಪ್ರಯತ್ನಪಟ್ಟಳು. ಮಾತು ಬದಲಾಯಿಸಲು ಮತ್ತೆ ಹಿಲೋ ಕುದುರೆಯ ಗುಣಗಾನಕ್ಕೆ ಆರಂಭಿಸಿದಳು.

" ಓ, ಹೇಗೆ ತಾನೆ ವರ್ಣಿಸಲಿ ? ಉದ್ದುದ್ದನೆಯ ಹುಲ್ಲು ಸೋಪಾನಗಳ ಮೇಲೆ, ಕೆಳಗೆ, ಓಡುತಿದ್ದಾಗ, ಕನಸಿನಲ್ಲಿ ಕುದುರೆ ಪಂದ್ಯವನ್ನು ಆಡಿದಂತಿತ್ತು. ಒಂದೊಂದು ನೆಗೆತವೂ ವಿಚಿತ್ರವಾಗಿತ್ತು. ಒಂದು ಸಾರಿ ಜಿಂಕೆಯಂತೆಯೂ, ಮತ್ತೊಂದು ವೇಳೆ ಮೊಲದಂತೆಯೂ, ಇನ್ನೊಂದು ಸಾರಿ ಟೆರಿಯರ್ ನರಿಯಂತೆಯೂ ಕಾಣುತಿತ್ತು. ಕುದುರೆ ವಿಷಯ ನಿನಗೆ ಗೊತ್ತಿದೆ. ಅದರಲ್ಲೂ ಹಿಲೋ ಕುದುರೆಯ ಬಗ್ಗೆ ನೀನೇ ಊಹಿಸಬಲ್ಲೆ. ಎಷ್ಟು ಚೆನ್ನಾಗಿ ಹಿಂಗಾಲುಗಳಿಂದ ಕುಪ್ಪಳಿಸಿ ಮೇಲೇಳುತಿತ್ತು ! ನೆಪೋಲಿಯನ್ ಅಥವಾ ಕೆಶ್‌ನರ್‌ನಂಥ ಮಹಾನಾಯಕರ ಸವಾರಿಗೆ ಯೋಗ್ಯವಾಗಿತ್ತು. ಅದರ ದೃಷ್ಟಿಯಂತೂ ನಮ್ಮನ್ನು ಗೇಲಿಯೆಬ್ಬಿಸುವಂತಿತ್ತು.

" ಅಂಥ ಹಿಲೋ ಕುದುರೆ ಬೇಕೆಂದು ಜಾನ್ ಮಾವನನ್ನು ಕೇಳಿಕೊಂಡೆ..... ಜಾನ್ ಮಾವ ನನ್ನ ಕಡೆ ನೋಡಿದನು ; ನಾನೂ ಅವನ ಕಡೆ ನೋಡಿದೆ. ಅವನು ಮಾತನಾಡದಿದ್ದರೂ ಮುಖಭಾವ ಗೊತ್ತಾಯಿತು. ನನ್ನನ್ನು ನೋಡುತಿದ್ದಹಾಗೆಯೆ ನಯೊಮಿ ರಾಜಕುಮಾರಿಯ ದೃಶ್ಯ ಕಣ್ಣಿಗೆ ಕಟ್ಟಿರಬೇಕು ! ' ಪ್ರಿಯ ಬೆಲ್ಲ ' ಎಂದು ಕರೆಯದಿದ್ದರೂ, ಅಂತರಂಗದಲ್ಲಿ ಅನುಭವಿಸುತಿದ್ದನು ...

" ಕಡೆಗೆ ಅವನು ಹೂಗುಟ್ಟಿದ. ಅಂತೂ ಪ್ರಸಂಗ ಹೀಗೆ ನಡೆಯಿತು....

" ಹಿಲೋ ಕುದುರೆಯ ಮೇಲೆ ಪ್ರಯಾಣ ಮಾಡುವುದಕ್ಕಿಂತ ಮುಂಚೆ ಸ್ವಲ್ಪ ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯದೆಂದು ಜಾನ್ ಒತ್ತಾಯಪಡಿಸಿ

ದನು. ಪ್ರಾರಂಭದಲ್ಲಿ ತೊಂದರೆಯಾದರೂ ಸುಧಾರಿಸಿಕೊಂಡೆ. ಕುದುರೆಯ ಮುನ್ನೋಟಕ್ಕೆ ಹೆದರಲಿಲ್ಲ. ಆದ್ದರಿಂದಲೇ ಅದು ತಹಬಂದಿಗೆ ಸಿಕ್ಕಿತು.

"ಮುಂದೇನಾಗಬಹುದೆಂದು ಜಾನ್ ಮಾವ ಮೊದಲೇ ಕನಸುಕಂಡಿದ್ದನೋ ಏನೊ ಎಂದು ನನಗೇ ಅನೇಕ ವೇಳೆ ಆಶ್ಚರ್ಯವಾಗುತ್ತಿತ್ತು. ಅಂತೂ 'ಮಾನಾ'ಕ್ಕೆ ಹೋಗುತ್ತೇನೆಂದು ಆ ಬೆಳಗಿನ ತನಕವೂ ಗೊತ್ತಿರಲಿಲ್ಲ; ಎಲ್ಲವೂ ವಿಚಿತ್ರ ಕಾರ್ಯಕ್ರಮವೇ ಆಗಿತ್ತು. ಹಿಲೋ ಕುದುರೆಯ ಮೇಲೆ ಹತ್ತಿ, ಜೋಕಾಗಿ ಸವಾರಿಮಾಡಿದೆ. 'ಮಾನಾ'ದಲ್ಲಿದ್ದ ರಾಣಿಯ ಗುಂಪಿಗೆ ಬಂದುಸೇರಿದೆ.

"ಅಂಥ ಹರ್ಷದ ಹಬ್ಬವನ್ನು ಹಿಂದೆಂದೂ ನೋಡಿರಲಿಲ್ಲ. ವೃದ್ಧಪಾರ್ಕರುಗಳ ಸತ್ಕಾರ ಅಪ್ಪೂರ್ವವಾಗಿತ್ತು. ಈಟಿಯಿಂದ ತಿವಿಯುತ್ತಾ ಕಾಡು ಹಂದಿಯ ಬೇಟೆಯಾಡುತಿದ್ದರು. ದುಷ್ಟ ಜಾನುವಾರುಗಳ ಮೇಲೆ ಗುಂಡು ಹಾರಿಸುತಿದ್ದರು. ಥಂಗನೆ ಕುಣಿದಾಡುತಿದ್ದ ಕುದುರೆಗೆ ಬರೆ ಹಾಕಿ ಪಳಗಿಸುತಿದ್ದರು. ಜವಾನರ ಅಂಗಳ ತುಂಬಿಹೋಗಿ ಕಾಲಿಡಲೂ ಜಾಗವಿರಲಿಲ್ಲ. ಎಲ್ಲೆಲ್ಲಿ ನೋಡಿದರೂ ಪಾರ್ಕರ್ ಕ್ಷೇತ್ರದ ಗೊಲ್ಲ ಹುಡುಗರೇ ಕಣ್ಣಿಗೆ ಬೀಳುತಿದ್ದರು. ವೈಮಿಯ, ವೈಸಿಯೊ, ಹೊನಾಕ ಇತ್ಯಾದಿ ಸ್ಥಳಗಳ ಹುಡುಗಿಯರೆಲ್ಲ ಸೇರಿಬಿಟ್ಟಿದ್ದರು; ದೊಡ್ಡಿಯ ಸುತ್ತಲೂ ಹಾಕಿದ್ದ ಕಲ್ಲುಗೋಡೆಗಳ ಮೇಲೆ ಸಾಲಾಗಿ ಕುಳಿತಿದ್ದರು. ಗೊಲ್ಲರ ಗುಂಪಿನಲ್ಲಿದ್ದ ಎಷ್ಟೋ ಹುಡುಗರನ್ನು ಆಗಲೇ ಬುಟ್ಟಿಗೆ ಹಾಕಿದ್ದರು! ತಮ್ಮ ತಮ್ಮ ಪ್ರೇಮಿಗಳ ನೇರಕ್ಕೆ ಸರಿಯಾಗಿ ಹೂವಿನ ಬಾಣಗಳನ್ನು ಎಸೆಯುತಿದ್ದರು!........

"ಆ ರಾತ್ರಿ; ಸುವಾಸನೆಯಿಂದ ತುಂಬಿಹೋಗಿತ್ತು. ಸುತ್ತಲೂ ನೃತ್ಯ ಸಂಗೀತ ನಡೆಯುತಿತ್ತು. 'ಮಾನಾ'ದ ನೆಲ ಎಷ್ಟು ಪುಣ್ಯಮಾಡಿತ್ತೊ! ಮರಗಳ ಕೆಳಗೆ ಪ್ರೇಮಿಗಳು ಜೊತೆ ಜೊತೆಯಾಗಿ ಆಡ್ಡಾಡುತಿದ್ದರು.... ಎಲ್ಲೆಲ್ಲಿ ನೋಡಿದರೂ ಪ್ರೇಮಮಯ ವಾತಾವರಣ.

"ಮತ್ತು ರಾಜಕುಮಾರ........" ಬೆಲ್ಲ ಮಾತನ್ನು ಅರ್ಧಕ್ಕೇ ನಿಲ್ಲಿಸಿದಳು. ಫಳ ಫಳ ಹೊಳೆಯುತಿದ್ದ ಸಾಲು ಹಲ್ಲು ಕೆಳತುಟಿಯನ್ನು ಕಚ್ಚಿತು. ದೂರದ ನೀಲಿಯ ದಿಗಂತದ ಕಡೆ ದೃಷ್ಟಿ ಬೀರಿದಳು. ಅವಳ ಕಣ್ಣು ಪುನಃ ಸೋದರಿಯ ಕಡೆ ತಿರುಗಬೇಕಾದರೆ ಒಂದು ನಿಮಿಷ ಹಿಡಿಯಿತು.

"ಮಾರ್ಥ, ನಿಜವಾಗಿಯೂ ಅವನೊಬ್ಬ ರಾಜಕುಮಾರ.

"ಇದಕ್ಕಿಂತಲೂ ಮುಂಚೆ—ಅಂದರೆ, ನೀನು ಶಾಲೆಯನ್ನು ಬಿಟ್ಟು

ಮನೆ ಸೇರಿದಾಗ——ವನನ್ನು ಕಿಲೋಹನದಲ್ಲಿ ನೋಡಿದ್ದಿ. ಎಂಥ ಹೆಂಗಸೇ ಆಗಲಿ ಅವನನ್ನು ಒಂದು ಕ್ಷಣ ಕಂಡರೆ ಸಾಕು; ಮರುಕ್ಷಣ ಮತ್ತಾವುದೂ ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಅಷ್ಟರಮಟ್ಟಿಗೆ ಅವನು ಎಲ್ಲರ ಕಣ್ಮಣಿಯಾಗಿದ್ದನು. ಅವನಿಗೆ ಆಗ ಇಪ್ಪತ್ತೈದರ ಪ್ರಾಯ; ಶಕ್ತಿ ಸಾಮರ್ಥ್ಯದಲ್ಲಿ ಪ್ರಬುದ್ಧ ಮಾನವನಾಗಿದ್ದನು. ಮನಸ್ಸಿನ ಹಿರಿತನಕ್ಕೆ ಸರಿಯಾದ ಸುಕುಮಾರ ದೇಹವನ್ನು ಹೊಂದಿದ್ದನು. ಹಾಸ್ಯಮಾಡುವಾಗ ಎಷ್ಟೇ ಹುಡುಗನಾಗಿದ್ದರೂ, ಆಟಪಾಟಗಳಲ್ಲಿ ಎಡೆಬಿಡದೆ ಕುಣಿದಾಡುತಿದ್ದರೂ, ತಾನು ರಾಜವಂಶಕ್ಕೆ ಸೇರಿದ ಅಂಶವನ್ನು ಮಾತ್ರ ಮರೆಯುತ್ತಿರಲಿಲ್ಲ. ತನ್ನ ವಂಶಾವಳಿಯಲ್ಲಿ ಹಾಡಲ್ಪಡುತಿದ್ದ ಪೂರ್ವಿಕರೆಲ್ಲರೂ ಸಾಹಸಿಗಳು ಎಂಬ ನಂಬಿಕೆ ಅವನಲ್ಲಿತ್ತು.

“ ಮಧುರ ಮನೋವೃತ್ತಿಯ, ದಯಾಪರ ಸ್ವಭಾವದ, ತುಂಬುಸ್ನೇಹದ ರಾಜಕುಮಾರ ಸರ್ವರಿಗೂ ಸಂತೋಷದಾಯಕನಾಗಿದ್ದನು. ಆದರೆ ತನ್ನನ್ನು ಮೀರಿಸಬೇಕೆನ್ನುವ ಹಟವಾದಿಗಳನ್ನು ಕಂಡರೆ ತಲೆಬಾಗುತ್ತಿರಲಿಲ್ಲ; ಅವರ ದೃಷ್ಟಿಯಲ್ಲಿ ಅವನು ನಿರ್ದಾಕ್ಷಿಣ್ಯ ಪ್ರಕೃತಿಯವನೂ, ನಿರ್ದಯನೂ ಆಗಿದ್ದನು. ಅವನ ಸೂಕ್ಷ್ಮ ಸ್ವಭಾವವನ್ನು ಬಾಯಿಮಾತುಗಳಿಂದ ತಿಳಿಸುವುದು ತುಂಬ ಕಷ್ಟ. ಅವನ ನರ ನಾಡಿಗಳಲ್ಲಿಯೂ ಗಂಡಸುತನ ಎದ್ದುಕಾಣುತಿತ್ತು. ಹುಡುಗಾಟದ ಉತ್ಸಾಹದಿಂದ ಕುಪ್ಪಳಿಸುತಿದ್ದ ಅವನು ಅಕ್ಷರಶಃ ರಾಜಕುಮಾರನೇ ಆಗಿದ್ದನು. ಅವನೇನಾದರೂ ಸಿಂಹಾಸನವನ್ನೇರಿದ್ದರೆ, ಹವಾಯಿಯ ಬಲಿಷ್ಠ ರಾಜನೆಂದು ಹೆಸರುಪಡೆಯುತಿದ್ದನು.

“ಮೊದಲ ದಿನ ಅವನು ಕೈ ಮುಟ್ಟಿ ಮಾತನಾಡಿಸಿದಾಗ, ಎಷ್ಟು ಚೆನ್ನಾಗಿತ್ತು! ಇಂದಿಗೂ ಅದೇ ಆಕೃತಿ ಎದುರಿಗೆ ನಿಂತಂತಿದೆ........ನಹಾಲದ ಗೂಡಿನಲ್ಲಿ ಆಗತಾನೆ ಒಂದು ವರ್ಷ ತಳ್ಳಿದ್ದೆ; ಜೊತೆಗೆ ಮದುವೆಯಾದ ಹೆಂಗಸು. ಮಾತನಾಡಲು ವಿಷಯವಾದರೂ ಏನಿದೆ? ಸಂಕೋಚದಿಂದ ಕೆಲವೇ ಮಾತುಗಳನ್ನಾಡಿದೆ....ಅರ್ಧ ಶತಮಾನದ ಹಿಂದೆ ನಮ್ಮಿಬ್ಬರ ಸಮಾಗಮ—ಆಗಿನ ಕಾಲದ ಯುವಕರ ಉಡುಪೇ ಸಾಕು; ಬಲು ಮೋಜಿನದು. ಕಾಲಿಗೆ ಮೆಟ್ಟುತಿದ್ದ ಶೂನಿಂದ ಹಿಡಿದು, ಷರಾಯಿ, ಸಿಲ್ಕ್ ಷರಟು ಎಲ್ಲವೂ ಬಿಳಿಯದು. ನಡುವಿನ ಸುತ್ತ ಧರಿಸಿದ್ದ ಸ್ಪ್ಯಾನಿಷ್ ಅಲಂಕಾರಪಟ್ಟಿ ಪ್ರಭಾಮಯವಾಗಿತ್ತು.

“ ಐವತ್ತು ವರ್ಷಗಳಿಂದಲೂ ಅವನ ಚಿತ್ರ ನನ್ನ ಹೃದಯದಲ್ಲೇ ಮನೆ ಮಾಡಿದಂತಿದೆ....ಉದ್ಯಾನದ ಗುಂಪಿಗೆ ಅವನೇ ಸ್ಫೂರ್ತಿಯ ಕೇಂದ್ರವಾಗಿ

ದ್ದನು. ಹಿಗಿನ್ಸ್‌ವರ್ತ್ ನನ್ನನ್ನು ಎಳೆದುತಂದು ಅವನಿಗೆ ಭೇಟಿಮಾಡಿಸಿದಳು. ಅಷ್ಟುಹೊತ್ತಿಗೆ ಲಿಹೂ ರಾಜಕುಮಾರಿ ಹಿಗಿನ್ಸ್‌ವರ್ತ್‌ಳನ್ನು ಕ್ಯೂಗಿ ಕರೆದಳು. ಜೇಸಲ್ ಹೊಟ್ಟನ್ನು ತರಬೇಕಿತ್ತು. ಸರಿ; ಅಲ್ಲಿಂದ ಕಾರ್ಯಾರ್ಥಿಯಾಗಿ ಹಿಂದಕ್ಕೋಡಿಬಿಟ್ಟಳು!

"ನಾನು ಮಾತ್ರ ಸರಕ್ಕನೆ ಸರಿದರೂ ಅಲ್ಲೇ ನಿಲ್ಲಬೇಕಾಯಿತು. ಅವನ ದೃಷ್ಟಿ ನನ್ನ ಮೇಲೆ ಬೆಳಗಿತು. ಮನಃಕ್ಷೋಭೆಯಿಂದ ಹಿಗ್ಗಾಮುಗ್ಗ ಎಳೆಯಲ್ಪಟ್ಟೆ. ಆದರೂ ಅವನನ್ನು ನೋಡಿದಾಗ........ ಅವನ ತಲೆ ಸ್ವಲ್ಪ ಹಿಂದಕ್ಕೆ ಬಾಗಿತ್ತು. ಎಂಥ ವರ್ಚಸ್ಸು! ಎಂಥ ಎದೆಗಾರಿಕೆ! ಎಂಥ ದರ್ಪ! ಅವನ ಸ್ವಭಾವಕ್ಕನುಗುಣವಾದ, ಯಾರನ್ನೂ ಲಕ್ಷಿಸದ, ನಿಲುವು! ನಮ್ಮ ಕಣ್ಣುಗಳು ಮಿಳಿತವಾದುವು. ಅವನ ತಲೆ ಮುಂದಕ್ಕೆ ಬಾಗಿ ನನ್ನ ಕಡೆ ಬರತೊಡಗಿತು. ಏನಾಯಿತೋ ನನಗೆ ಗೊತ್ತಿಲ್ಲ. ಅವನು ಏನನ್ನಾದರೂ ಆಜ್ಞೆಮಾಡಿದನೇ? ಅದರಂತೆ ನಾನು ವರ್ತಿಸಿದೆನೇ?—ಯಾವುದೂ ನನಗೆ ತಿಳಿಯದು.

"ಇಷ್ಟು ಮಾತ್ರ ಹೇಳಬಲ್ಲೆ: ನಾನು ಆಗ ಚೆನ್ನಾಗಿದ್ದೆ. ತಲೆಯ ತುಂಬ ಸುಗಂಧಪೂರಿತ 'ಮೈಲೆ' ಪುಷ್ಪಗಳನ್ನು ಮುಡಿದಿದ್ದೆ. ಜಾನ್ ಮಾವ ತನ್ನ ಪ್ರೇಯಸಿಗೆ—ಅಂದರೆ, ಸತ್ತುಹೋಗಿದ್ದ ನಯೊಮಿ ರಾಜಕುಮಾರಿಗೆ—ಇಟ್ಟಿದ್ದ ಸೊಗಸಾದ ಗೌನನ್ನು ನನಗೆ ಕೊಟ್ಟಿರಲಿಲ್ಲವೇ? ಅದನ್ನೇ ನಾನು ಧರಿಸಿದ್ದೆ.

"ಮಾನಾ ಉದ್ಯಾನದಲ್ಲಿ ಒಬ್ಬಳೇ ತಿರುಗಾಡುತ್ತಾ ಅವನ ಕಡೆಯೇ ಸೆಳೆಯಲ್ಪಟ್ಟೆ. ಅವನೂ ಅಷ್ಟೇ; ಹೂಗಿಡಗಳನ್ನು ಹಾರುತ್ತ ಅರ್ಧ ದಾರಿಯಲ್ಲೇ ನನ್ನನ್ನು ಭೇಟಿಮಾಡಿದನು. ಹುಲ್ಲುಪೊದೆಯ ಹತ್ತಿರ ಇಬ್ಬರೂ ಸೇರಿದೆವು. ನಮ್ಮನ್ನು ಕೇಳುವವರೇ ಇಲ್ಲ, ಒಳ್ಳೆಯದೇ ಆಯಿತು. ಎರಡು ಜೀವಗಳೂ ಪರಸ್ಪರ ವಿನಿಮಯವಾದಂತಿತ್ತು.

"ಸೋದರಿ ಮಾರ್ಥ, ನಾನು ಯುವತಿಯಾಗಿದ್ದಾಗ ನನ್ನ ರೂಪ ತುಂಬ ಸುಂದರವಾಗಿತ್ತೆ? ಮತ್ತೊಬ್ಬರು ಹೇಳಬೇಕೇ ಹೊರತು ನನಗೆ ತಿಳಿಯದು....ಅದರೆ, ಆ ಕ್ಷಣದಲ್ಲಿ ಅವನ ಸರ್ವಾಂಗ ಸೌಂದರ್ಯವೂ ರಾಜ ಪೌರುಷವೂ ನನ್ನ ಹೃದಯವನ್ನು ಹೊಕ್ಕಿದವು. ತಕ್ಷಣ ನನ್ನಲ್ಲಿಯೂ ಸೌಂದರ್ಯದ ಸುತ್ತಾಟ ಆರಂಭವಾಯಿತು! ಆ ಅನುಭವವನ್ನು ಏನೆಂದು ಹೇಳಲಿ? ಅವನಲ್ಲಿದ್ದುದು ಹೊರಬಂದು ನನ್ನಲ್ಲಿ ಸೇರಿತ್ತು! ಕಾಣದ ಹಾಗೆ

ಅದು ಇಂದ್ರಜಾಲ ವಿದ್ಯೆ ನಡೆಸಿ ನನ್ನನ್ನು ಸಂಪೂರ್ಣತೆಗೆ ಒಯ್ಯುತಿತ್ತು!....

"ಯಾರೂ ಯಾವ ಮಾತನ್ನೂ ಆಡಲಿಲ್ಲ. ನನ್ನ ಮುಖವನ್ನು ಮೇಲೆತ್ತಿ ಹಿಡಿದಂತಿತ್ತು. ಮುಚ್ಚುಮರೆಯಿಲ್ಲದೆ ಉತ್ತರ ಹೇಳುತಿದ್ದೆ! ನಿಜ; ಯಾವುದೋ ಸಂದೇಶ ನಿಶ್ಶಬ್ದದಲ್ಲೇ ಅಡಗಿತ್ತು! ಅದರ ಗುಡುಗಾಟ ಜೋರಾಗಿತ್ತು! ಅದಕ್ಕಾಗಿಯೆ ನಾನು ಅಂತರಾತ್ಮನಿಗೆ ಮರೆಹೋಗಿದ್ದೆ. ಆ ರಸನಿಮಿಷಕ್ಕಾಗಿ ಪ್ರಾಣವನ್ನೇ ಬಿಡಲು ಸಿದ್ಧನಿದ್ದೆ. ದೇಹಾದ್ಯಂತ ನನಗೆ ಎಂಥ ಬಹುಮಾನ ಸಿಕ್ಕಿತ್ತು; ಉಸಿರಾಡಲೂ ಪುರುಸೊತ್ತಿಲ್ಲ.

"ಮಾರ್ಥ, ನಿಜ ಹೇಳು. ನಾನು ಇಪ್ಪತ್ತರ ಹೊಸ್ತಿಲಲ್ಲಿ ಹೇಗಿದ್ದೆ? ಚೆನ್ನಾಗಿ, ತುಂಬ ಚೆನ್ನಾಗಿ?...."

ಅರುವತ್ತೆಂಟು ವರ್ಷದ ಬೆಲ್ಲಳನ್ನು ಅರುವತ್ತುನಾಲ್ಕು ವಯಸ್ಸಿನ ಮಾರ್ಥ ದಿಟ್ಟಿಸಿನೋಡಿದಳು. ಬೆಲ್ಲ ಸಾಮಾನ್ಯ ಹವಾಯಿ ಹೆಂಗಸರಂತಲ್ಲ; ಅವಳದೆಲ್ಲವೂ ವಿಶಿಷ್ಟವಾಗಿತ್ತು. ಅವಳ ಪ್ರಶ್ನೆಗೆ ತಲೆದೂಗಿ ಸಂಪೂರ್ಣ ಒಪ್ಪಿಗೆಯನ್ನು ಮಾರ್ಥ ಸೂಚಿಸಿದಳು.

ಬೆಲ್ಲ ನಗುತ್ತಾ ಹೇಳಿದಳು: "ಪ್ರಾಯದ ಕಾಲ ಯಾರಿಗೆ ತಾನೆ ಬೇಡ? ಆದರೆ ಬರುವುದು ಒಂದೇ ಸಾರಿ!....ಲಿಲೋಲಿಲೊ ರಾಜಕುಮಾರನಿಗೆ ಆಗ ಆ ಕಾಲ; ಕೇಳಬೇಕೆ? ಅವನ ಮುಖದ ನಾನಾ ಭಾವಗಳನ್ನು ಗ್ರಹಿಸಲು ನನಗೆ ಅವಕಾಶ ಸಿಕ್ಕಿತು....ಆದ್ದರಿಂದಲೇ ನಮ್ಮ ಹಗಲು ರಾತ್ರಿ ಆಶ್ಚರ್ಯಕರವಾಗಿತ್ತು. ಸರಾಗವಾಗಿ ಹಾಡುತ್ತ ಹರಿಯುತಿದ್ದ ನೀರಮೇಲೆ ಕಾಲಕಳೆದೆವು. ಅಲೆಗಳು ಬಂಡೆಯನ್ನು ನಿಧಾನವಾಗಿ ಬಡಿಯುತಿದ್ದುವು. ಪರ್ವತಕ್ಕೆ ಹೋಗುವ ಹಾದಿಯನ್ನೂ ನೋಡಿದೆವು. ಅವನ ಅಂದವಾದ ಸಾಹಸೀ ಕಣ್ಣುಗಳಲ್ಲಿ ಎಷ್ಟೋ ಅರ್ಥವಿತ್ತು. ಸ್ವಚ್ಛವಾದ ಬಾಯಿ ಪ್ರೀತಿಯೋಗ್ಯವಾಗಿತ್ತು.

"ಅವನ ದೇಹಸೌಷ್ಟವವನ್ನು ಹೇಗೆ ವರ್ಣಿಸಲಿ? ವಿಪರೀತ ಅಂಗ ಸಾಧನೆ ಮಾಡಿದವನೆಂದು ತಕ್ಷಣ ಹೇಳಬಹುದು. ಮಲ್ಲರಾಜನಂತೆ ಕಂಗೊಳಿಸುತಿದ್ದನು. ಮಾಟಗಾರಿ ಕೂದಲು, ಉಕ್ಕಿನಂಥ ಕಾಲುಗಳೇ ಸಾಕ್ಷಿ. ಪೈಲ್‌ಡರ್ ಮಹಾಶಯನ ಮೊಮ್ಮಕ್ಕಳಲ್ಲಿ ಒಬ್ಬನನ್ನು 'ಪ್ರಿನ್ಸ್ ಆಫ್ ಹಾರ್ವರ್ಡ್' ಎಂದು ಕರೆಯುತ್ತಿದ್ದರು; ಅವನು ತನ್ನ ಪಂಗಡದವರನ್ನೆಲ್ಲ ಕರೆದುಕೊಂಡು ಬಂದು ಸ್ಪರ್ಧಿಸಿದರೂ, ಲಿಲೋವಿನ ಎದುರಿಗೆ ತೃಣಸಮಾನ! ಅಂದಮೇಲೆ ಲಿಲೋವಿಗೆ ಯಾವ ಬಿರುದು ಕೊಡುತ್ತಾರೊ ನನಗೆತಿಳಿಯದು!...."

ಬೆಲ್ಲ ಮಾತು ನಿಲ್ಲಿಸಿ, ಆಳವಾಗಿ ಉಸಿರೆಳೆದುಕೊಂಡಳು. ತನ್ನ ಅಂದ

ವಾದ ಸಣ್ಣ ಕೈಗಳನ್ನು ಸಿಲ್ಕ್ ನೆರಿಗೆಗಳ ಮಧ್ಯೆ ಮುಚ್ಚಿಕೊಂಡಳು. ಆದರೂ ಅವಳ ಚರ್ಮ ಅವ್ಯಕ್ತ ನೋವಿನಿಂದ ನಸುಗೆಂಪಾಗಿತ್ತು. ಮತ್ತೆ ಯೌವನದ ವೈಭವವನ್ನು ನೆನೆಸಿಕೊಳ್ಳಲು ಪ್ರಾರಂಭಿಸಿದಳು. ಕಣ್ಣುಗಳಲ್ಲಿ ಕಾವೇರಿತು.

" ಸರಿ—ನೀನು ಊಹಿಸಿದ್ದಿ, ಮುಂದಿನ ಕಥೆಯನ್ನು ? ...ಇರಲಿ; ನಾನೇ ಹೇಳುತ್ತೇನೆ. ಸುಂದರ 'ಮಾನಾ' ಪ್ರದೇಶವನ್ನು ಬಿಟ್ಟು ನಮ್ಮ ಸವಾರಿ ಹೊರಟಿತು. ದಾರಿಯುದ್ದಕ್ಕೂ ಉಲ್ಲಾಸ, ಗೆಲವು, ನಗುಮುಖ—ಜ್ವಾಲಾಮುಖಿಯ ತಗ್ಗುಗಳಲ್ಲಿ ಇಳಿಯುತ್ತಿದ್ದೆವು. 'ಕಿಹೊಲೊ'ದಲ್ಲಿ ಮನತಣಿಯುವಂತೆ ಈಜಿದೆವು. ಬೇಕಾದಷ್ಟು ಮೀನುಗಳನ್ನು ಹಿಡಿದೆವು. ಹಬ್ಬದೂಟವಾಯಿತು. ತೆಂಗಿನ ಮರದ ಕೆಳಗೆ ಬೆಚ್ಚಗಿದ್ದ ಮರಳುರಾಶಿಯ ಮೇಲೆ ಮಲಗುತಿದ್ದೆವು. ಅಲ್ಲಿಂದ 'ಪುವಾವ' ಹತ್ತಿದೆವು; ಕುದುರೆಯ ಲಗಾಮನ್ನು ಭದ್ರವಾಗಿ ಹಿಡಿದೆಳೆದು ಪ್ರಾಣಿಗಳ ಬೇಟೆಯಾಡಿದೆವು. ಮೇಲ್ಭಾಗದ ಹುಲ್ಲುಗಾವಲಲ್ಲಿ ಕುರಿಮಾಂಸ ಧಾರಾಳವಾಗಿ ಸಿಕ್ಕಿತು. ಇನ್ನೂ ಎಷ್ಟೋ ಸ್ಥಳಗಳಲ್ಲಿ ಪ್ರವಾಸ ಬೆಳೆಸಿದೆವು. ಎಲ್ಲೆಲ್ಲಿ ಹೋದರೂ ಜನ ನಮ್ಮನ್ನು ನೋಡಲು ಗುಂಪುಗುಂಪಾಗಿ ಬರುತ್ತಿದ್ದರು; ಕೈಯಲ್ಲಿ ಹೂ ಗೊಂಚಲು, ರಸಪೂರಿತ ಫಲಗಳು ಮುಂತಾದುವನ್ನು ಹಿಡಿದಿದ್ದರು. ಪ್ರೇಮಪೂರಿತ ಹೃದಯ ಗೀತವನ್ನು ಹಾಡುತಿದ್ದರು. ರಾಜಮನೆತನದವರಿಗೆ ಗೌರವ ಸೂಚಿಸಲು ಬಗ್ಗಿ ನಮಸ್ಕರಿಸುತಿದ್ದರು. ನಮ್ಮ ವೇಷಭೂಷಣಗಳನ್ನು ನೋಡಿ ಆಶ್ಚರ್ಯದಿಂದ ತುಟಿ ಕಚ್ಚುತಿದ್ದರು. ಅವರ ಹಾಡುಗಳಲ್ಲಿ ಹಳೆಯ ಕಾಲದ ಮರೆತುಹೋದ ದಿನಗಳು ಜ್ಞಾಪಕಕ್ಕೆ ಬರುತಿದ್ದವು.

" ಸೋದರಿ ಮಾರ್ಥ, ಏನು ತಾನೆ ಮಾಡುವುದು ? ಹವಾಯಿಯವರ ರೀತಿನೀತಿಗಳು ನಿನಗೆ ಗೊತ್ತಿದೆ. ಐವತ್ತು ವರ್ಷಗಳ ಹಿಂದೆ ಹೇಗಿದ್ದರೆಂದು ಊಹಿಸಬಹುದು. ಲಿಲೋಲಿಲೊ ನಿಜವಾಗಿಯೂ ದೃಷ್ಟಿ ಬಡಿಯುವಂತಿದ್ದನು. ಅವನ ಪ್ರಭಾವದಿಂದ ನನಗೆ ಎಚ್ಚರಿಕೆಯೇ ತಪ್ಪಿಹೋಗಿತ್ತು. ಯಾವ ಹೆಂಗಸಾದರೂ ಅಷ್ಟೆ; ಆದರೆ ನಾನು ಇಮ್ಮಡಿಯಾಗಿ ತಲೆಕೆಡಿಸಿಕೊಂಡಿದ್ದೆ—ಏಕೆಂದರೆ, ಮಂಕುಕವಿದ ನಹಾಲದ ನೆನಪು ಬಂದೊಡನೆ ತಲೆ ಗಿರ್ರನೆ ತಿರುಗುತಿತ್ತು; ಆಗ ಎದುರಿಗಿದ್ದ ಲಿಲೋಲಿಲೊ ರಾಜಕುಮಾರನೇ ಸರ್ವಸ್ವವಾಗಿ ಕಾಣುತಿದ್ದನು. ಆದರೆ ಕಾಲಸ್ಥಿತಿ ಬೇರೆಯಾಗಿತ್ತು. ನಾನು ಯಾವ ಭರವಸೆಯನ್ನು ಹೊಂದಲೂ ಸಾಧ್ಯವಾಗುತ್ತಿರಲಿಲ್ಲ. ಆಗಿನ ಕಾಲದಲ್ಲಿ ವಿವಾಹ ವಿಚ್ಛೇದನ ಕನಸಿನಲ್ಲೂ ಭಾವಿಸಲು ಅಸಾಧ್ಯವಾಗಿತ್ತು. ರಾಬರ್ಟ್ ಮಾವನ

ಕ್ರಾಂತಿ ಭವಿಷ್ಯ ನಿಧಾನವಾದರೂ, ಜಾರ್ಜ್‌ಕ್ಯಾಸ್ಟಂ್‌ನ ಹೆಂಡತಿ ಎಂದಿಗೂ ಹವಾಯಿಯ ರಾಣಿಯಾಗಲಾರಳು! ಅಂದರೆ, ಲಿಲೋಲಿಲೋ ರಾಜಕುಮಾರ ರಾಜನ ಪಟ್ಟಕ್ಕೇರಿದರೂ, ನಾನು ಮಾತ್ರ ರಾಣಿಯಾಗಲು ಅವಕಾಶವಿಲ್ಲ.... ಹಾಳಾಗಿ ಹೋಗಲಿ; ನಾನು ಎಂದಿಗೂ ಸಿಂಹಾಸನಕ್ಕೆ ಹಾತೊರೆದವಳಲ್ಲ. ನನಗೆ ಬೇಕಾಗಿದ್ದುದು ಇಷ್ಟೆ: ಅವನ ಸಂಗಾತಿಯಾಗಿ ಬಾಳಬೇಕೆಂದು. ಅದರಲ್ಲಿ ತಪ್ಪೇನು? ನಾನೇನೂ ಗಾಳಿಗೋಪುರ ಕಟ್ಟಲಿಲ್ಲ. ಯಾವುದು ಅಸಾಧ್ಯವೋ ಅದನ್ನು ಅಸಾಧ್ಯವೆಂದೇ ಅರಿತು ಸುಮ್ಮನಿದ್ದೆ. ಸುಳ್ಳು ಕನಸನ್ನು ಕಾಣಲು ಪ್ರಯತ್ನಪಡಲಿಲ್ಲ.

" ಪ್ರೇಮದ ವಿಶಿಷ್ಟ ವಾತಾವರಣವದು. ಲಿಲೋಲಿಲೊ ಮುಖ್ಯಪಾತ್ರ ವಹಿಸಿದ್ದನು. ಅವನ ದೂತರು ನನಗೋಸ್ಕರ 'ಮಾನ' ಉದ್ಯಾನದಿಂದ ಹೂವುಗಳನ್ನು ತರುತಿದ್ದರು. ಎಲ್ಲಿಂದ ಎಲ್ಲಿಗೆ? ಐವತ್ತು ಮೈಲಿಗಳ ವಿವಿಧ ಕ್ಷೇತ್ರಗಳನ್ನು ಹಾದು ಬರಬೇಕು. ಇಬ್ಬನಿಗೂಡಿದ ಹೂವುಗಳು ಆಗತಾನೆ ಕೊಯ್ದಂತಿದ್ದವು. ಅಂದರೆ, ಅವರು ಎಷ್ಟು ಜೋರಾಗಿ ಓಡಿಬಂದಿರಬೇಕು! ಎಲ್ಲವೂ ಲಿಲೋಲಿಲೋವಿನ ಆಜ್ಞೆ. ಆಭರಣವನ್ನು ತರುವಷ್ಟು ಜಾಗರೂಕತೆ ವಹಿಸಿದ್ದರು. ಸೊಗಸಾದ ಬನಾನ ಪಟ್ಟೆಯಲ್ಲಿ ಗುಲಾಬಿ ಹೂವನ್ನು ಸುತ್ತಿದ್ದರು. ಕೆಂಪು ಮೊಗ್ಗುಗಳು ಹವಳದಂತೆ ಹೊಳೆಯುತಿದ್ದವು. ಅಂಥ ಹೂವುಗಳಿಂದಲೇ ನನ್ನ ತಲೆಯನ್ನು ತುಂಬಿಸಿಬಿಡುತಿದ್ದನು.....

" ಎಲ್ಲಕ್ಕಿಂತಲೂ ಹೆಚ್ಚಾಗಿ ಅವನ ಸ್ವಂತ 'ಮಕಲೊ' ಚಾಪೆಯ ಮೇಲೆ ನನ್ನನ್ನು ಎಳೆದುತಂದು ಕೂಡಿಸಿದನು! ರಾಜ ಕುಮಾರನಿಗೇ ಮಿಾಸಲಾದ ಚಾಪೆಯ ಮೇಲೆ ನಾನು ಕೂಡುವುದೆಂದರೆ ಅರ್ಥವೇನು? ಅವನ ವಿಪರೀತ ಅನುಗ್ರಹಕ್ಕೆ ಪಾತ್ರರಾದವರಿಗೂ ಆ ಯೋಗ ಸಿಕ್ಕಿರಲಾರದು. ಅದು ಸಾಮಾನ್ಯ ಚಾಪೆಯಲ್ಲ; ಮೋಹದ ಬಲೆ! ಮೋಹದ ಬಲೆಯಲ್ಲಿ ಸಿಕ್ಕಿಕೊಂಡ ಮೇಲೆ ಅವನು ಹೇಳಿದ ಹಾಗೆ ಕೇಳಬೇಕು—ರಾಜಕುಮಾರನ ಬೋಗುಣಿಯಲ್ಲೇ ನನ್ನ ಕೈಯನ್ನೂ ಆಡಿಸಿದೆ; ನೀರು ಬಿಸಿಯಾಗಿತ್ತು; ಸುಗಂಧ ಪುಷ್ಪದ ದಳಗಳು ತೇಲಾಡುತಿದ್ದವು. ಒಂದಾದ ಮೇಲೊಂದು ಉಲ್ಲಾಸದ ಕಾರ್ಯಗಳನ್ನು ಮಾಡಿಸಿದನು. ಯಾವುದನ್ನೂ ಲಕ್ಷ್ಯಮಾಡದ ರಾಜಕುಮಾರನ ಪ್ರವಾಸ ವೈಭವವನ್ನು ಕೇಳಬೇಕೆ? ಅವನಿಗೂ, ಲಿಹೂ ರಾಜಕುಮಾರಿಗೂ ಒಂದೇ ರೀತಿಯ ಸಂಭ್ರಮದೂಟ ನಡೆಯುತಿತ್ತು. ಮೂರನೆಯವಳಾಗಿ ನಾನೂ ಅದರಲ್ಲಿ ಭಾಗಿಯಾಗಿದ್ದೆ. ಅವನ ಚಾಮರದ ಗಾಳಿ ನನಗೂ ಬೀಸಿತು.

ಅವನ ಸೇವಕರೇ ನನ್ನ ಸೇವಕರೂ ಆಗಿದ್ದರು. ಅಷ್ಟೇಕೆ, ಅವನೇ ನನ್ನವನಾಗಿದ್ದನು! ಹೂವಿನ ಕಿರೀಟದಿಂದ ಹಿಡಿದು ಕಾಲತುದಿಯತನಕ ಸಂತಸದ ಸಮುದ್ರದಲ್ಲಿ ಮುಳುಗಿಹೋಗಿದ್ದೆ. ನಾನು ಪ್ರೀತಿ ಯೋಗ್ಯ ಹೆಂಗಸಾಗಿದ್ದೆ...."

ಮತ್ತೊಮ್ಮೆ ಅವಳು ತುಟಿ ಕಚ್ಚಿದಳು. ನಿರ್ದಿಷ್ಟ ಗುರಿಯಿಲ್ಲದೆ ವಿಶಾಲ ಸಮುದ್ರದ ಕಡೆ ನೋಡಿದಳು. ಹಳೆಯ ನೆನಪುಗಳನ್ನು ಹೇಳಿಕೊಳ್ಳಲು ತನ್ನನ್ನು ತಾನೆ ಜಯಿಸಬೇಕಾಯಿತು.

"ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹೋಗಿಬಂದೆವು. ಬಹುಬೇಗ ಕಳೆದುಹೋಗುತಿದ್ದ ಎರಡು ವಾರಗಳಲ್ಲಿ ನಮ್ಮ ರಸಜೀವನ ಅಡಕವಾಗಿತ್ತು. ಹೂವು ಅರಳುವುದು ಒಂದೇ ಸಾರಿ. ಆಗ ನಾನು ಹೂವಾಗಿದ್ದೆ. ಭವ್ಯವಾದ ಹಿಲೋ ಕುದುರೆಯ ಮೇಲೆ ಕುಳಿತಿದ್ದೆ. ಪಕ್ಕದಲ್ಲಿ ಲಿಲೋಲಿಲೊ ಇದ್ದನು. ನಾನು ಹವಾಯಿಯ ರಾಣಿಯಾಗದಿದ್ದರೂ, ಲಿಲೋಲಿಲೋವಿನ ಪ್ರೇಯಸಿಯಾಗಿದ್ದೆ. ಅವನು ಹೇಳಿದ: ನೀನು, ವಿಶಾಲ ಸಮುದ್ರದ ಕಪ್ಪು ಹಿನ್ನೆಲೆಯಲ್ಲಿ ಬಣ್ಣಬಣ್ಣವಾಗಿ ಹೊಳೆಯುವ ನೀರ್ಗುಳ್ಳೆ; ಜ್ವಾಲಾಮುಖಿಯ ಹೊಗೆ ತಿಟ್ಟನ ಮೇಲೆ ನಾಜೂಕಾಗಿ ಬೀಳುವ ಮಂಜುಹನಿ; ಗುಡುಗುಡಿಸುವ ಮೋಡವನ್ನು ಹೊಡೆದಟ್ಟುವ ಕಾಮನಬಿಲ್ಲು...."

ಜೆಲ್ಲ ಒಂದು ಕ್ಷಣ ಕಾಲ ಸುಮ್ಮನಿದ್ದಳು.

ತುಂಬು ಯೋಚನೆಯಿಂದ ಹೇಳಿದಳು : "ಅವನು ನನ್ನನ್ನು ವರ್ಣಿಸಿದ ಪದಗಳು ಎಷ್ಟೋ ಇವೆ. ಹೆಚ್ಚು ಹೇಳಲಾರೆ. ಒಟ್ಟಿನಲ್ಲಿ ಅವನ ಪ್ರತಿಯೊಂದು ಮಾತೂ ಪ್ರೇಮದ ಕಿಡಿಯನ್ನು ಹೊತ್ತಿಸುತಿತ್ತು; ಸೌಂದರ್ಯದ ಸಾರವೆಲ್ಲಾ ಅದರಲ್ಲಿ ಅಡಗಿತ್ತು. ಪ್ರಣಯ ಗೀತಗಳನ್ನು ಕಟ್ಟಿ ನನ್ನೆದುರಿಗೆ ಹಾಡಿದನು....ರಾತ್ರಿಯ ಹೊತ್ತು ನಕ್ಷತ್ರಗಳನ್ನೇ ನೋಡುತ್ತ ಗುಂಪಿನವರು ತಮ್ಮ ತಮ್ಮ ಚಾಪೆಗಳ ಮೇಲೆ ಮಲಗಿ ಹಬ್ಬವನ್ನಾಚರಿಸಿದರು. ನಾನು ಲಿಲೋಲಿಲೊವಿನ 'ಮಕಲೊ' ಚಾಪೆಯ ಮೇಲೆ ಮೈ ಚಾಚಿ ಮಲಗಿದ್ದೆ; ಆಗಲೂ ಅವನ ಪ್ರಣಯ ಗೀತೆ ಕೇಳಿಸುತಿತ್ತು.

"'ಕಿಲಾ' ತಲಪುವ ವೇಳೆಗೆ ಕನಸು ಮುಕ್ತಾಯವಾಗುತ್ತ ಬಂತು. ಸಮುದ್ರ ಚಾಚಿನ ಜ್ವಾಲಾಮುಖಿಯ ಕಂದರಗಳಲ್ಲಿ ಅಡಗಿದ್ದ ಅಗ್ನಿದೇವತೆಗೆ ಕಾಣಿಕೆಯನ್ನರ್ಪಿಸಿದೆವು. ಮುಂದೆ ಮುಂದೆ ಪ್ರಯಾಣಮಾಡುತ್ತ 'ಕಾಲಪನ'ದ ತಿಳಿಯಾದ ಸಿಹಿ ನೀರಿನ ಕೊಳಗಳಲ್ಲಿ ಈಜಿದೆವು. ಕೊನೆಯದಾಗಿ ಸಮುದ್ರ ಮಾರ್ಗದಲ್ಲಿ ಹಿಲೋ ಕುದುರೆಯನ್ನು ಹಿಡಿದುಕೊಂಡು ನಿಂತೆನು.

" ಅಲ್ಲಿಗೆ ಕೊನೆ. ನಾವಿಬ್ಬರೂ ಏನೂ ಮಾತನಾಡಲಿಲ್ಲ. ಗೊತ್ತೇ ಇತ್ತು; ಹೇಳದಿದ್ದರೂ ತಾನಾಗಿಯೆ ತಿಳಿಯುವಂಥ ಪ್ರಸಂಗ. ರಾಜನೌಕೆ ಕಾದಿತ್ತು. ನಿರ್ದಿಷ್ಟ ದಿನಗಳಿಗಿಂತಲೂ ಹೆಚ್ಚು ಕಳೆದಿದ್ದೆವು. 'ಹೊನಲೂಲು'ವಿನಿಂದ ಕರೆ ಬಂತು. ಅಲ್ಲಿನ ಸುದ್ದಿಯ ಪ್ರಕಾರ, ರಾಜನು ಹುಚ್ಚನಂತೆ ವರ್ತಿಸುತಿದ್ದಾನೆಂದು ತಿಳಿಯಿತು; ಕಾರಣ, ಕ್ಯಾಥೊಲಿಕ್ ಮತ್ತು ಪ್ರಾಟೆಸ್ಟೆಂಟ್ ಮಿಷನರಿಗಳು ಸಂಚುಹೂಡಿದ್ದರು; ಫ್ರಾನ್ಸ್ ಪ್ರಭುತ್ವ ದೇಶದ ಒಳವ್ಯವಹಾರಕ್ಕೆ ಕೈಹಾಕಿ ಗಲಾಟೆಯೆಬ್ಬಿಸಿತ್ತು....ಎರಡು ವಾರಗಳ ಹಿಂದೆ 'ಕವೈಹೆ'ನಲ್ಲಿ ಇಳಿದಾಗ, ಎಷ್ಟು ಚೆನ್ನಾಗಿತ್ತು; ಹೂವೆರಚುವುದು, ಹಾಡುವುದು, ನಗುವುದು ... ಇವುಗಳಲ್ಲೇ ಕಾಲ ಕಳೆದುಹೋಗಿತ್ತು. ಅಂಥವರನ್ನು ಈಗ ಬಿಟ್ಟುಕೊಡಬೇಕು. ಆದರೂ ಬೀಳ್ಕೊಡುವ ಸಮಾರಂಭ ಸಂತೋಷದಿಂದ ನಡೆಯಿತು. ಹಾಸ್ಯ ಕುಚೇಷ್ಟೆಗಳು ತುಂಬಿದ್ದವು. ಸಾವಿರಾರು ಕಡೆಯ ಸಂದೇಶಗಳು ಹೊರಬಿದ್ದವು....ನೌಕೆಯ ಲಂಗರನ್ನು ಬಿಚ್ಚಿದರು. ಹಡಗಿನ ಮೇಲಟ್ಟವಲ್ಲಿ ಹಾಡಿನ ಹುಡುಗರು ಬೀಳ್ಕೊಡುಗೆ ಪದವನ್ನು ಹಾಡುತಿದ್ದರು. ಅವರೆಲ್ಲರೂ ಲಿಲೋಲಿಲೋವಿನ ಆಶ್ರಿತರು. ನಾವೆಲ್ಲರೂ ದೊಡ್ಡದೊಡ್ಡ ದೋಣಿಗಳಲ್ಲಿ, ನಿಂತು ನೋಡುತ್ತಿದ್ದೆವು. ಮೊದಲ ಬೀಸುಗಾಳಿಗೆ ಹಡಗಿನ ಪಟ ಏರಿತು. ದೂರದೂರ ಸರಿಯತೊಡಗಿತು....

" ಗಲಿಬಿಲಿಯ ಸಂಭ್ರಮದಲ್ಲಿ ಲಿಲೋಲಿಲೊ ಎಷ್ಟೋ ಹಾಸ್ಯ ಚಟಾಕಿಗಳನ್ನು ಹಾರಿಸಬೇಕಿತ್ತು! ಹತ್ತಾರು ಜನರಲ್ಲಿ ಕಡೇ ಮಾತುಗಳನ್ನು ಆಡಬೇಕಿತ್ತು! ಆದರೆ ಒಂದೂ ಇಲ್ಲ; ಸುಮ್ಮನೆ ನನ್ನನ್ನು ನೋಡುತ್ತ ನಿಂತುಬಿಟ್ಟನು. ನಾನು ಅವನ ತಲೆಯ ಮೇಲೆ ಹಾಕಿದ್ದ 'ಇಲಿಮ' ಹೂ ಗೊಂಚಲು ಹಾಗೆಯೆ ಇತ್ತು ... ರಾಜನೌಕೆಯಲ್ಲಿದ್ದ ಇತರರು ದೋಣಿಯಲ್ಲಿ ನಿಂತಿದ್ದ ತಮ್ಮ ತಮ್ಮ ವಿಶ್ವಾಸಿಗಳಿಗೆ ಹೂಗೊಂಚಲನ್ನು ಎಸೆಯುತಿದ್ದರು. ನನಗೆ ಮಾತ್ರ ಯಾವ ಭರವಸೆಯೂ ಇದ್ದಿಲ್ಲ ... ಆದರೂ ನಂಬಿಕೆ ಕೆಡಲಿಲ್ಲ. ಸ್ವಲ್ಪ ಮಟ್ಟಿಗೆ ಚಾಪಲ್ಯವೂ ಇತ್ತು. ಇತರರಂತೆ ನಾನೂ ಜಂಭದಿಂದ ಉತ್ಸಾಹಗೊಂಡವಳಂತೆ ನಟಿಸಿದೆ. ಆದರೆ ನನ್ನ ಮನಸ್ಸಿನ ಅಳುಕು ನಿಜವಾಯಿತು. ಇನ್ನೂ ಹೆಚ್ಚಿನ ಪ್ರಾಮಾಣಿಕತೆಯನ್ನು ಸೂಸುವಂತೆ ನನ್ನನ್ನೇ ಅವನು ದಿಟ್ಟಿಸಿ ನೋಡಿದನು; ನಾನು ಕೊಟ್ಟಿದ್ದ ಸೊಗಸಾದ 'ಇಲಿಮ' ಹೂ ಗೊಂಚಲನ್ನು ತಲೆಯಿಂದ ತೆಗೆದು ಕಡಿದುಹಾಕಿದನು!....ತುಟಿ ಅಲುಗಿತು; ಮೆಲ್ಲಗೆ, 'ಮುಗಿಯಿತು!' ಎಂಬ ಒಂದೇ ಪದ ಹೊರಗೆ ಬಿತ್ತು. ಎರಡು ಭಾಗವಾಗಿದ್ದ

ಹೂ ಗೊಂಚಲನ್ನು ಮತ್ತೆರಡು ಭಾಗ ಮಾಡಿದನು. ಪುನಃ ಚೂರುಚೂರಾಗಿ ಕತ್ತರಿಸಿದನು. ಅವುಗಳನ್ನು ನನ್ನಮೇಲಕ್ಕೆ ಎಸೆಯದೆ ವಿಶಾಲವಾದ ಕೆಳಗಿದ್ದ ಸಾಗರಕ್ಕೆ ಎಸೆದುಬಿಟ್ಟನು! ನಿಜ; ಅವನು ಹೇಳಿದಂತೆ ಎಲ್ಲ ಮುಗಿಯಿತು ..."

ಬಹಳ ಹೊತ್ತು ಬೆಲ್ಲಳ ಶೂನ್ಯದೃಷ್ಟಿ ಸಮುದ್ರದಾಚೆಯ ದಿಗಂತವನ್ನು ನೋಡುತಿತ್ತು. ಮಾರ್ಥಳು ಸಮಾಧಾನ ಮಾಡುವ ಧೈರ್ಯವನ್ನು ತೋರಲಿಲ್ಲ; ಅವಳ ಕಣ್ಣುಗಳೇ ತೇವವಾಗಿದ್ದವು.

ಬೆಲ್ಲಳೇ ಚೇತರಿಸಿಕೊಂಡು ಮಾತು ಮುಂದುವರಿಸಿದಳು. ಪ್ರಾರಂಭ ದಲ್ಲಿ ಅವಳ ಗಂಟಲು ಒಣಗಿ ಗಡಸಾಗಿತ್ತು.

"ಮತ್ತಲ್ಲಿ ನಿಲ್ಲದೆ ದಿನವಿಡೀ ಹಮುಕುವಾ ಕರಾವಳಿಯಲ್ಲಿ ಸವಾರಿ ಮಾಡಿದೆ. ಮೊದಲನೆಯ ದಿನ ಅಷ್ಟು ಕಷ್ಟವಾಗಿ ತೋರಲಿಲ್ಲ. ಜೋವು ಹಿಡಿದವಳಂತೆ ಸುಮ್ಮನಿದ್ದೆ. ತಲೆಯ ತುಂಬ ಆಶ್ಚರ್ಯಭಾವಗಳು ಸುಳಿದಾಡಿ, ಯಾವುದು ಮರೆಯಬೇಕೋ ಅದನ್ನು ಮರೆಯಲು ಅಸಾಧ್ಯವಾಯಿತು. ಆ ರಾತ್ರಿಯನ್ನು 'ಲಾಪಾಹೊಹೊ'ದಲ್ಲಿ ಕಳೆದೆ. ರಾತ್ರಿಯೆಲ್ಲಾ ನಿದ್ದೆಕೆಡ ಬೇಕೆಂದು ಹೆದರಿದೆ. ಆದರೆ ಹಾಗಾಗಲಿಲ್ಲ. ಕುದುರೆ ಸವಾರಿಯಿಂದ ಬಳಲಿದ್ದ ನಾನು ಸತ್ತವಳಂತೆ ಗಾಢನಿದ್ರೆ ಮಾಡಿದೆ.

"ಆದರೆ ಮರುದಿನ ನೂಕುವ ಗಾಳಿ, ತೋಯಿಸುವ ಮಳೆ! ಎಷ್ಟು ಜೋರಾಗಿ ಗಾಳಿ ಬೀಸಿತೋ, ಅಷ್ಟೇ ವೇಗವಾಗಿ ಮಳೆ ಸುರಿಯಿತು! ಮಾರ್ಗ ದುರ್ಗಮವಾಯಿತು. ಪುನಃ ಪುನಃ ನಮ್ಮ ಕುದುರೆಗಳು ಇಳಿಮುಖವಾದವು. ಜಾನ್‌ಮಾವನಿಂದ ಕಳಿಸಲ್ಪಟ್ಟ ಗೊಲ್ಲರ ಹುಡುಗ ಮೊದಲು ಪ್ರತಿಭಟಿಸಿದನು. ತಲೆಯಲ್ಲಾಡಿಸಿ ಗೊಣಗುತ್ತಾ ನನ್ನನ್ನೇ ಮುಂದುಮಾಡಿ ತಾನು ಹಿಂಬಾಲಿಸಿ ದನು. 'ಕುಕುಹಾಲೆ'ಯಲ್ಲಿ ಹೊರೆಹೊತ್ತ ಕುದುರೆಯನ್ನು ಬಿಟ್ಟುಬಿಡಬೇಕಾ ಯಿತು. ಕೆಸರಿನ ನದಿಯನ್ನು ಈಜಿಕೊಂಡು ಮೇಲೆ ಹತ್ತಿದೆವು. ಗೊಲ್ಲರ ಹುಡುಗ 'ಮೈಮಿಯ'ದಲ್ಲಿ ಅದನ್ನು ಹೊಸ ಕುದುರೆಗೆ ವಿನಿಮಯಮಾಡಿ ಕೊಂಡನು. ಆದರೆ ಹಿಲೋ ಕಡೆಯ ತನಕ ಒಂದೇ ಸಮನಾಗಿತ್ತು. ಬೆಳಗಿನ ಜಾವದಿಂದ ಹಿಡಿದು ಮಧ್ಯರಾತ್ರಿಯ ತನಕ ಜೀನಿನ ಮೇಲೆಯೇ ಕುಳಿತಿದ್ದೆ. ಆದ್ದರಿಂದಲೇ ಅಷ್ಟು ಬೇಗ ಕಿಲೋಹನ ತಲುಪಲು ಸಾಧ್ಯವಾಯಿತು. ಕುದು ರೆಯ ಮೇಲಿದ್ದ ನನ್ನನ್ನು ಜಾನ್‌ಮಾವ ಎತ್ತಿ ಒಳಕ್ಕೆ ಕರೆದುತಂದನು. ಹಾಸಿಗೆ ಯಲ್ಲಿ ಮಲಗಿದ್ದ ಸೇವಕಿಯರನ್ನು ಎಬ್ಬಿಸಿದನು. ತಕ್ಷಣ ನನ್ನ ಒದ್ದೆಬಟ್ಟೆ ಗಳನ್ನು ಬಿಚ್ಚಿಸಿದನು. ಹೊಸ ಉಡುಪನ್ನು ಹಾಕಿಸಿದನು. ಶಾಖ ಕೊಡು

ವಂಥ ಮದ್ಯ ಪಾನೀಯವನ್ನು ಅವನೇ ತಂದುಕೊಟ್ಟನು. ಯಾವುದನ್ನೂ ತಲೆಗೆ ಹಚ್ಚಿಕೊಳ್ಳದೆ ತಕ್ಷಣ ಮಲಗಿಬಿಡುವಂತೆ ಏರ್ಪಾಟು ಮಾಡಿದನು. ನನಗೆ ಅಷ್ಟಾಗಿ ಜ್ಞಾಪಕವಿಲ್ಲ; ಆದರೂ ಅಂದು ಹುಚ್ಚುಹುಚ್ಚಾಗಿ ತೊದಲು ಮಾತಾಡಿರಬಹುದು. ಜಾನ್ ಮಾವ ಎಲ್ಲವನ್ನೂ ಜೋಡಿಸಿ ನಡೆದದ್ದೆಲ್ಲವನ್ನೂ ಊಹಿಸಿರಬೇಕು! ಆದರೆ ಆ ವಿಷಯದ ಬಗ್ಗೆ ಜಾನ್ ನನ್ನೊಡನಾಗಲಿ, ಇತರರಲ್ಲಾಗಲೀ ಒಂದು ಪಿಸುಮಾತನ್ನೂ ಆಡಲಿಲ್ಲ; ತಾನು ಹೆಣೆದ ಕಥೆಯನ್ನು ನಯೊಮಿ ರಾಜಕುಮಾರಿಯ ಕೊಠಡಿಯಲ್ಲಿ ಬೀಗಹಾಕಿ ಬಚ್ಚಿಟ್ಟನೆಂದು ಕಾಣುತ್ತೆ!

"ಅಂದು ನನ್ನ ತಲೆಯಲ್ಲಿ ನುಸುಳಿಹೋದ ಕೆಲವು ನೆನಪುಗಳು ಇನ್ನೂ ಜ್ಞಾಪಕದಲ್ಲಿವೆ. ಹೃದಯ ಒಡೆದಿತ್ತು; ವಿಧಿಯನ್ನೇ ದೂಷಿಸುವಷ್ಟು ಹುಚ್ಚುಕೋಪ ಉದ್ಭವಿಸಿತು. ಮೇಲೆತ್ತಿ ಕಟ್ಟಿದ್ದ ಕೂದಲು ಮಳೆಯ ಹೊಡೆತದಿಂದ ಸಡಿಲಗೊಂಡು ಚುಚ್ಚುತಿತ್ತು. ಒಂದೇ ಸಮನೆ ಅತ್ತು ಅತ್ತು ಮನೋವಿಪ್ಲವಕ್ಕೆ ಕಾರಣವಾಯಿತು. ಅಸತ್ಯದಿಂದ ತುಂಬಿಹೋಗಿದ್ದ ವಕ್ರ ಪ್ರಪಂಚಕ್ಕೆ ಸವಾಲು ಹಾಕಿದೆ. ಅಸಮಾಧಾನಗೊಂಡು ರೋಷಾವಿಷ್ಟಳಾದೆ. ಜೀನಿನ ಮುಂಭಾಗದಲ್ಲಿ ಮೇಲಕ್ಕೆತ್ತಿಕೊಂಡಿರುವ ಭಾಗವನ್ನು ನನ್ನ ಕೈಯಿಂದ ಹೊಡೆಯುತ್ತಿದ್ದೆ. ಕಿಲೋಹನವ ಗೊಲ್ಲರ ಹುಡುಗನ ಒರಟುತನ ನನ್ನನ್ನು ಮತ್ತಷ್ಟು ರೇಗಿಸಿತ್ತು. ಪಾಪ; ಮಹಾ ವೈಭವದಿಂದ ಕೂಡಿದ್ದ ಹಿಲೋ ಚುಚ್ಚುಗಾಲಿಯಿಂದ ತಿವಿಸಿಕೊಳ್ಳಬೇಕಾಯಿತು. ಕುದುರೆಗಾದರೂ ಹುಚ್ಚು ಹಿಡಿದು ನನ್ನನ್ನು ಬೀಳಿಸಿ ಅಪ್ಪಳಿಸಿಬಿಟ್ಟರೆ ಎಷ್ಟೋ ಉತ್ತಮವೆಂದು ಪ್ರಾರ್ಥಿಸಿದೆ. ಆಗ ಮನುಷ್ಯನ ಮೋಹ ತಪ್ಪುತ್ತದೆ! ಇಲಿಮ ಹೂಗಳನ್ನು ಸಮುದ್ರಕ್ಕೆ ಎಸೆದಾಗ ಲಿಲೋಲಿಲೋ ಹೇಳಿದಂತೆ, ನನ್ನ ಹೆಸರಿನ ತುದಿಯಲ್ಲೂ 'ಮುಗಿಯಿತು' ಎಂಬ ಪದವನ್ನು ಸೇರಿಸಿಕೊಳ್ಳಬಹುದು.........

"ನನ್ನ ಗಂಡ ಜಾರ್ಜ್ ಹೊನಲೂಲುವಿನಿಂದ ಬರುವುದು ನಿಧಾನವಾಯಿತು. ಅವನಿಗಾಗಿ ಕಾದಿದ್ದೆ. ಒಂದು ದಿನ ನಹಾಲಕ್ಕೆ ಮರಳಿ ಬಂದನು. ಅತಿ ಗಾಂಭೀರ್ಯದಿಂದ ನನ್ನನ್ನು ಆಲಿಂಗನ ಮಾಡಿಕೊಂಡನು. ಆದಷ್ಟು ಬೇಗ ಮುಗಿದರೆ ಸಾಕೆಂದು ಆತುರವಾಗಿ ತುಟಿಗೆ ಮುತ್ತಿಟ್ಟನು. ನನ್ನ ನಾಲಿಗೆಯನ್ನೇ ದಿಟ್ಟಿಸಿ ನೋಡಿ ಪರೀಕ್ಷಿಸಿದನು. ನನ್ನ ಮುಖಲಕ್ಷಣಗಳನ್ನು ಅಲ್ಲಗಳೆದನು. ಆರೋಗ್ಯ ಸರಿಯಾಗಿಲ್ಲವೆಂದು ಹಾಸಿಗೆಯ ಮೇಲೆ ಮಲಗಿಸಿದನು. ಹರಳೆಣ್ಣೆಯನ್ನು ಸ್ವಲ್ಪ ಕುಡಿಸಿ, ಪಕ್ಕದಲ್ಲಿ ಶಾಖವಾದ

ಸ್ಟೌವ್ ಇಟ್ಟನು.

"ಗಡಿಯಾರದ ಯಂತ್ರ ಮತ್ತೆ ಆರಂಭವಾಯಿತು. ಚಲನೆಯುಂಟು ಮಾಡಲು ನನ್ನ ಕಾಲಚಕ್ರ ತಿರುಗಿತು. ಎಲ್ಲೆಲ್ಲೋ ಸುತ್ತಾಡಿ ಕಡೆಗೆ ನಹಾಲ ಜೀವನದ ಜಾಡನ್ನೇ ಹಿಡಿಯಬೇಕಾಯಿತು. ಪ್ರತಿದಿನ ಬೆಳಿಗ್ಗೆ ನಾಲ್ಕೂವರೆ ಘಂಟೆಗೆ ಜಾರ್ಜ್ ಹಾಸಿಗೆಯಿಂದೆದ್ದು ಬಿಡುತ್ತಿದ್ದನು. ಮನೆಯ ಹೊರಕ್ಕೆ ಹೊರಟು, ಐದು ಘಂಟೆಯ ಹೊತ್ತಿಗೆ ಕುದುರೆಯ ಕಾಲುಗಳನ್ನು ಹಿಗ್ಗಲಿಸು ತಿದ್ದನು....ಯಥಾಪ್ರಕಾರ ನನ್ನ ಮಟ್ಟಿಗೆ ನೀರುನೀರಾದ ಅಂಬಲಿ, ಭಯ ಹುಟ್ಟಿಸುವಂಥ ಕಚ್ಚಾ ಕಾಫಿ, ಉದ್ದುದ್ದವಾಗಿ ಸೀಳುಸೀಳಾದ ಬೀಫ್....ಅಡಿಗೆ ಮಾಡಿದೆ; ಬೇಯಿಸಿದೆ; ಕೊಳಕು ನೆಲ ತಿಕ್ಕಿದೆ. ಕಸೂತಿಗೆ ಸರಿಯಾದ ಆಧಾರ ತಲ ಏರ್ಪಡಿಸಿ, ಅಗ್ಗದ ಹೊಲಕುಗಳನ್ನು ಹೊಲಿದುಕೊಂಡೆ. ರಾತ್ರಿಗಳು ಉರುಳಿದವು. ಎರಡು ವರ್ಷ ಕಳೆಯುವುದು ಎಷ್ಟೋ ಶತಮಾನ ಗಳನ್ನು ದಾಟಿದಂತಿತ್ತು. ಹಿಂದಿನಂತೆಯೆ ಅವನು ಮಿತವ್ಯಯಿಯಾಗಿದ್ದನು. ಹಿಂದಿನ ವರ್ಷದ ಮಾಸಪತ್ರಿಕೆಗಳನ್ನು ಸಾಲ ತಂದು ಓದುತಿದ್ದನು! ಹರಿದು ಹಿಂಜಿಹೋಗಿದ್ದ ಕಾಲುಚೀಲವನ್ನೂ ಒಳಉಡುಪುಗಳನ್ನೂ ಎಂಟು ಘಂಟೆಯ ತನಕ—ಅವನ ಓದು ಮುಗಿಯುವವರೆಗೂ—ಹೊಲಿದು ಸರಿ ಮಾಡುತಿದ್ದೆ. ಸರಿ; ಮಲಗುವ ಹೊತ್ತು ಬರುತಿತ್ತು; ಸೀಮೆ ಎಣ್ಣೆಯನ್ನು ಉಳಿಸಬೇಕಲ್ಲ! ತಕ್ಷಣ ಅವನು ಗಡಿಯಾರಕ್ಕೆ ಕೀಲುಕೊಡುತಿದ್ದನು. ಡೈರಿಯಲ್ಲಿ ಹವಾಮಾನ ವನ್ನು ಬರೆಯುತಿದ್ದನು. ಮೊದಲು ಬಲಗಾಲಿನ ಶೂ ತೆಗೆಯುತಿದ್ದನು; ಎರಡನ್ನೂ ಹಾಸಿಗೆಯ ತುದಿಯಲ್ಲೇ ಪಕ್ಕಪಕ್ಕದಲ್ಲಿ ಇಡುತಿದ್ದನು....

"ಆದರೆ ಮುಂದೆ ನನ್ನ ಮನಸ್ಸು ಜಾರ್ಜ್‌ನ ಕಡೆ ಸ್ವಲ್ಪವೂ ಎಳೆಯ ಲಿಲ್ಲ. ಲಿಹೂ ರಾಜಕುಮಾರಿ ನನ್ನನ್ನು ಆಹ್ವಾನಿಸುವುದಕ್ಕಿಂತ ಮುಂಚೆ, ಜಾನ್ ಮಾವ ತನ್ನ ಕುದುರೆಯ ನೆರವನ್ನು ಕೊಡುವುದಕ್ಕಿಂತ ಮುಂಚೆ, ನಾನು ಜಾರ್ಜ್‌ನನ್ನು ಪ್ರೀತಿಸಲು ಪ್ರಯತ್ನಪಟ್ಟಿದ್ದೆ. ಈಗ ಅದೆಲ್ಲವೂ ಹಾರಿಹೋಯಿತು....

"ಸೋದರಿ ಮಾರ್ಥ, ನೀನೇ ಯೋಚಿಸು. ಜಾನ್ ಮಾವ ಕುದುರೆ ಕೊಟ್ಟ; ಅದ್ದರಿಂದಲೇ ನನಗೆ 'ಪ್ರೇಮ'ದ ಅರಿವಾಯಿತು; ಪ್ರೇಮಪೂರಿತ ಲಿಲೋಲಿಲೊ ನನ್ನ ಕಣ್ಣಿಗೆ ಬಿದ್ದ. ಜಾನ್ ನನ್ನ ಕೇಳಿಕೆಗೆ ನಕಾರ ಸೂಚಿಸಿದ್ದರೆ, ನಾನು ಇದ್ದಹಾಗೆಯೆ ಇರುತಿದ್ದೆ! ಆದರೆ ಏನು ಮಾಡುವುದು? ಎಲ್ಲ ನಡೆದುಹೋಯಿತು. ಅದಾದ ಮೇಲೆ ಜಾರ್ಜ್ ನನ್ನ ಹೃದಯವನ್ನು

ಗೆಲ್ಲಲು ಹೇಗೆ ತಾನೆ ಸಾಧ್ಯ? ಆ ಎರಡು ವರ್ಷದ ನಹಾಲದ ಜೀವನ ಸಪ್ಪೆಯಾಗಿತ್ತು. ನಾನು ಸಜೀವ ಶವದಂತೆ ದಿನಗೆಲಸಗಳನ್ನು ಮಾಡುತಿದ್ದೆ.... ಡಾಕ್ಟರು ಏನೊ ಸಮಾಧಾನ ಹೇಳಿದರು—ಎತ್ತರದ ಪರ್ವತದಿಂದ ಹರಿದು ಬರುತಿದ್ದ ನಹಾಲ ನೀರಿನಲ್ಲೇ ಜಾರ್ಜ್ ಪ್ರತಿದಿನವೂ ಒದ್ದಾಡುತ್ತಿದ್ದನು. ಚಳಿಗಾಲದ ಮಧ್ಯಕಾಲದಲ್ಲಿ ಪ್ರವಾಹಕ್ಕೆ ಸಿಕ್ಕಿ ಮೈ, ಬಟ್ಟೆ ಎಲ್ಲವನ್ನೂ ತೋಯಿಸಿಕೊಂಡನು; ಅಷ್ಟಾದರೂ ಒಳಉಡುಪನ್ನು ಬದಲಾಯಿಸಲಿಲ್ಲ; ಹರಿದು ಹಿಂಜುಹೋಗಿತ್ತು. ಅದೇ ಕಾರಣವಾಯಿತು.

"ಅವನು ಸತ್ತಾಗ ನಾನು ದುಃಖ ಪಡಲಿಲ್ಲ. ದುಃಖಿಯ ಜೀವನ ಆರಂಭವಾಗಿ ಎಷ್ಟೋ ವರ್ಷಗಳಾಗಿದ್ದುವು. ಆದರೆ ಅವನು ಸತ್ತನೆಂದು ಸಂತೋಷವೂ ಆಗಲಿಲ್ಲ. ಎಂದು ಲಿಲೋಲಿಲೊ ಇಲಿಮ ಹೂವನ್ನು ಸಮುದ್ರಕ್ಕೆ ಬಿಸುಟನೋ, ಅಂದೇ ನನ್ನ ಸಂತೋಷದ ಕಳೆ ಸತ್ತುಹೋಯಿತು. ಅದಾದ ಮೇಲೆ ನನ್ನ ಕಾಲುಗಳಲ್ಲಿ ಉಲ್ಲಾಸದ ರಕ್ತ ಹರಿಯಲಿಲ್ಲ. ಜಾರ್ಜ್ ಹೋಗಿ ಒಂದು ತಿಂಗಳೂ ಇಲ್ಲ; ಅಷ್ಟರಲ್ಲೇ ಲಿಲೋಲಿಲೊ ಕೂಡ ಮೃತನಾದನು. ಎಷ್ಟೋ ಗಂಡಸರನ್ನು ನೋಡಿದ್ದ; ಆದರೆ ಅವನಂಥ ನರಿನಮಾನರನ್ನು ಎಲ್ಲಿ ತಾನೆ ಹುಡುಕಲಿ? ಮನಸ್ಸು ಹಿಂಜರಿಯಿತು. ಏಕೆಂದರೆ ನಾನು ಜಾನ್ ಮಾವನಂತೆಯೆ ಸೂಕ್ಷ್ಮ ಪ್ರಕೃತಿಯವಳು. ಜಾನ್ ತನ್ನ ಪ್ರೇಯಸಿ ನಯೋಮಿ ರಾಜಕುಮಾರಿಯ ಕೊಠಡಿಯನ್ನು ಬಿಟ್ಟುಬರಲು ಹೇಗೆ ಅಸಾಧ್ಯವೋ, ಹಾಗೆಯೆ ನನ್ನ ಹೃದಯದಲ್ಲಿ ಲಿಲೋಲಿಲೊ ಸ್ಥಾಪಿತನಾಗಿದ್ದನು. ಪ್ರೇಮಿಸುವುದು ಯಾವಾಗಲೂ ಒಬ್ಬನನ್ನೇ. ನಾನಂತೂ ಹಾಗೆ ವರ್ತಿಸಿದವಳು. ಐವತ್ತು ವರ್ಷಗಳಿಂದಲೂ ಯಾರೂ ಕಾಣದಿದ್ದ ನನ್ನ ಹೃದಯ ಮಂದಿರವನ್ನು, ಸೋದರಿ ಮಾರ್ಥ, ನೀನು ಇಂದು ಪ್ರವೇಶಮಾಡಿದೆ. ಆ ಅವಕಾಶವನ್ನು ನಾನೇ ಮಾಡಿಕೊಟ್ಟಿದ್ದೇನೆ ...."

ಯಾರದೋ ಸವಾರಿ ಭರ್ರನೆ ಬಂದಿಳಿಯಿತು. ಉದ್ಯಾನವನ್ನು ದಾಟುತ್ತಾ ಬಂದವನು ಮಾರ್ಥಳ ಗಂಡ. ತೆಳ್ಳಗಿದ್ದನು; ತಲೆ ಕೂದಲು ನರೆತಿತ್ತು; ಆದರೂ ಮೇಲ್ಮುಖವಾಗಿ ನಡೆಯುತಿದ್ದನು. ಭವ್ಯವಾದ ಮನಮೋಹಕ ಮಿಲಿಟರಿ ಮೈಕಟ್ಟು ಅವನದು. ರಾಸ್ಕೊ ಸ್ಕಾನ್‌ಡ್ವೆಲ್ 'ಬಿಗ್ ಫೈವ್'ನ ಸದಸ್ಯ. 'ಬಿಗ್ ಫೈವ್' ಇಡೀ ಹವಾಯಿ ನಾಡಿನ ಪ್ರಗತಿಗಾಗಿ ದುಡಿಯುತಿದ್ದ ಸಂಸ್ಥೆ. ಸರ್ವತೋಮುಖವಾಗಿ ಎಲ್ಲ ಭಾಗಗಳ ಸಂಪರ್ಕವನ್ನೂ ಬೆಳೆಸಿತ್ತು. ರಾಸ್ಕೊ ಸ್ಕಾನ್‌ಡ್ವೆಲ್ ಹುಟ್ಟಿನಲ್ಲಿ ಶುದ್ಧ ಬಿಳಿಯ. ನ್ಯೂ

ಇಂಗ್ಲೆಂಡ್ ಅವನ ಜನ್ಮಸ್ಥಳ. ಆದರೆ ಹವಾಯಿಯ ರೀತಿನೀತಿಗಳನ್ನು ಚೆನ್ನಾಗಿ ಅಭ್ಯಾಸಮಾಡಿದ್ದನು. ಬಂದವನೇ ಮೊಟ್ಟಮೊದಲು ತೋಳು ಗಳನ್ನು ಬಳಸಿ, ಬೆಲ್ಲಳಿಗೆ ಮುತ್ತಿಟ್ಟನು. ಹವಾಯಿಯವರಂತೆಯೆ ಅವನ ಹೃದಯ ವಿಶ್ವಾಸದಿಂದ ತುಂಬಿಹೋಗಿತ್ತು. ಏನೊ ಹೆಂಗಸರ ಮಾತುಕಥೆ ನಡೆದಿರಬೇಕೆಂದು ಅವನ ಚುರುಕು ಕಣ್ಣುಗಳು ಆಗಲೇ ಗ್ರಹಿಸಿದವು. ನಕ್ಷತ್ರದ ಬೆಳಕಿನಂತಿದ್ದ ಅವರ ಬುದ್ಧಿವಂತಿಕೆಯಿಂದ ಎಲ್ಲವೂ ಪ್ರಶಾಂತ ವಾಗಿಯೆ ಕೊನೆಗೊಂಡಿರಬೇಕೆಂದು ಊಹಿಸಿ, ಆ ಗೋಜಿಗೆ ಹೋಗಲಿಲ್ಲ.

ರಾಸ್ಕೊ ಸ್ಕಾನ್ ಡ್ವೆಲ್ ತನ್ನ ಹೆಂಡತಿಗೆ ಮುತ್ತಿಟ್ಟು, "ಎಲ್ಸಿ ಮತ್ತು ಮಕ್ಕಳು ಬರುತ್ತಾರಂತೆ. ಈಗತಾನೆ ಹಡಗಿನಿಂದ ನಿಸ್ತಂತು ವಾರ್ತೆ ಬಂತು. 'ಮಾಯ್'ಗೆ ಹೋಗುವುದಕ್ಕಿಂತ ಮುಂಚೆ ನಮ್ಮಲ್ಲಿ ಕೆಲವು ದಿನ ಗಳು ಕಾಲಕಳೆಯುತ್ತಾರಂತೆ...." ಎಂದು ಸಂತಸದ ಸುದ್ದಿಯನ್ನು ಹೊರ ಗೆಡಹಿದನು.

ಮುಂದಿನ ಏರ್ಪಾಟನ್ನು ಮಾರ್ಥ ಸ್ಕಾನ್‌ಡ್ವೆಲ್ ಯೋಚಿಸಿ ಹೇಳಿದಳು: "ಸೋದರಿ ಬೆಲ್ಲ, ನಿನ್ನನ್ನು ಗುಲಾಬಿ ಕೋಣೆಯಲ್ಲಿ ಇಳಿಸಲು ಯೋಚಿಸಿದ್ದೆ. ಅದು ವಿಶಾಲವಾಗಿದೆ. ಎಲ್ಸಿ, ಅವಳ ಮಕ್ಕಳು, ನರ್ಸುಗಳು ಮತ್ತು ಅವಳ ಎಲ್ಲ ವಸ್ತುಗಳಿಗೂ ಆ ರೂಮು ಸರಿಯಾಗಿದೆ. ಆದ್ದರಿಂದ ನೀನು 'ಎಮ್ಮ' ರಾಣಿಯ ಕೋಣೆಯಲ್ಲಿ ಇರಬೇಕಾಗುತ್ತೆ...."

"ಅದಕ್ಕೇನಂತೆ? ಹೋದಸಾರಿಯೂ ನಾನು ಅಲ್ಲೇ ಇದ್ದೆ; ಪರವಾಗಿಲ್ಲ. ನನಗೆ ಅದೇ ಇಷ್ಟ" ಎಂದಳು ಬೆಲ್ಲ.

ಇಬ್ಬರೂ ಸೊಗಸಾದ ಮೈಕಟ್ಟಿನ ಶ್ರೇಷ್ಠ ಹೆಂಗಸರು; ಅವರ ಮಧ್ಯೆ ಎತ್ತರವಾಗಿಯೂ, ತೆಳ್ಳಗೂ, ಗಂಭೀರವಾಗಿಯೂ ನಿಂತ ರಾಸ್ಕೊ ಸ್ಕಾನ್‌ಡ್ವೆಲ್ಲ ನನ್ನು ನೋಡಬೇಕು! ಹವಾಯಿಯವರ ಪ್ರೇಮದಾಟಗಳನ್ನು ಅವನು ಚೆನ್ನಾಗಿ ಅರಿತಿದ್ದಾನೆ. ದಿವ್ಯವಾಗಿದ್ದ ಇಬ್ಬರ ನಡುವನ್ನೂ ತನ್ನ ತೋಳುಗಳಿಂದ ಬಳಸಿ ಬಂಗಲೆಯ ಕಡೆಗೆ ಮುಂದುವರಿದನು.

ನಮ್ಮ ಪ್ರಕಟನೆಗಳು

ಮ್ಯಾಕ್ಸಿಂಗಾರ್ಕಿ (ಅನು: ನಿರಂಜನ) ....

ತಾಯಿ	೨—೮—೦
ನನ್ನಬಾಲ್ಯ	೧—೧೨—೦

ನಿರಂಜನ

ಚಿರಸ್ಮರಣೆ	೧—೮—೦

ತ್ರಿವೇಣಿ

ಸೋತುಗೆದ್ದವಳು	೧—೪—೦
ಬೆಕ್ಕಿನ ಕಣ್ಣು	೧—೮—೦
ಕೀಲುಗೊಂಬೆ	೧—೪—೦

ರುದ್ರಮುನಿ

ಮುಳ್ಳಿನ ಹಾಸಿಗೆ	೧—೮—೦

ಅನುಪಮಾ

ಸಂಕೋಲೆಯೊಳಗಿಂದ	೧—೮—೦

ರಾಮಚಂದ್ರಶರ್ಮ

ಋಷಿನೀಡಿದ ಸ್ಫೂರ್ತಿ (ಕವನ ಸಂಕಲನ)	೧—೦—೦

ಭಾರತೀ ಪ್ರಕಾಶನ : ಕೃಷ್ಣಮೂರ್ತಿಪುರಂ : ಮೈಸೂರು.